ಸಂಪುಟ ೯
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ

೧೯೭೭

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦೦೦೩** ಇವರಿಗೆ ಕಳುಹಿಸಬೇಕು, ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈ ಮಾ ಸಿ ಕ ಪ ತ್ರಿ ಕೆ

ಸಂಪುಟ : ೯   ಸಂಚಿಕೆ : ೪

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೯ ಸಂಚಿಕೆ : ೪

ಮೇ, ೧೯೭೭

ಅಕ್ಷಯತೃತೀಯಾ ಸಂಚಿಕೆ

ಪ್ರಕಾಶಕರು
ಸಿ. ಎಸ್. ಕಣವಿ
ನಿರ್ದೇಶಕರು
ವ್ಯಾಸಂಗ ವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು
ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ, ಧಾರವಾಡ

ಪ ರಿ ವಿ ಡಿ

—

ಬಸವಣ್ಣನವರ ವಂಶಜರ ಕವಿಳಾಸಪುರ

● ಎಂ. ಎಂ. ಕಲಬುರ್ಗಿ

೧

ಶ್ರೀ ನಾ. ಶ್ರೀ. ರಾಜಪುರೋಹಿತ, ಡಾ. ಫ. ಗು. ಹಳಕಟ್ಟಿ, ಶ್ರೀ ಮಧುರಚೆನ್ನ ಮತ್ತು ಡಾ. ಎಸ್. ಸಿ. ನಂದಿಮಠ ಅವರ ಸಂಯುಕ್ತಪ್ರಯತ್ನದ ಫಲವಾಗಿ ೧೯೨೮ ರಲ್ಲಿ ಬೆಳಕಿಗೆ ಬಂದ ಅರ್ಜುನವಾಡ ಶಾಸನವು, ಬಸವಣ್ಣನವರ ವಂಶಜರು ಕವಿಳಾಸ ಪುರದಲ್ಲಿ ನೆಲೆನಿಂತಿದ್ದರೆಂಬ ಅಪೂರ್ವಸಂಗತಿಯನ್ನು ತಿಳಿಸಿಕೊಟ್ಟಿತು. ಈ ೫೦ ವರ್ಷಗಳ ಅವಧಿಯಲ್ಲಿ ಅನೇಕಜನ ವಿದ್ವಾಂಸರಿಂದ ಕವಿಳಾಸಪುರವನ್ನು ಕಂಡುಹಿಡಿಯುವ, ಈ ಶಾಸನವನ್ನು ಸರಿಯಾಗಿ ಅರ್ಥೈಸುವ ಪ್ರಯತ್ನಗಳು ನಡೆದಿವೆ.

ಕವಿಳಾಸಪುರವೆಂದರೆ ಧಾರವಾಡ ಜಿಲ್ಲೆಯ ಚೌಡದಾನಪುರವೆಂಬ ಡಾ. ಎಸ್. ಸಿ. ನಂದಿಮಠ ಅವರ ಹೇಳಿಕೆ ಮತ್ತು ವಿಜಾಪುರ ಜಿಲ್ಲೆಯ ಮನಗೂಳಿ ಎಂಬ ಶ್ರೀ ಚೆನ್ನಮಲ್ಲಿಕಾರ್ಜುನ ಅವರ ಹೇಳಿಕೆಗಳು ಬಿದ್ದುಹೋಗಿ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಅರ್ಜುನವಾಡ ಗ್ರಾಮದ ನೆರೆಯಲ್ಲಿ ಅಂದರೆ ಪ್ರಸ್ತುತ ಶಾಸನ ಲಭಿಸಿರುವ ಸ್ಥಳದಲ್ಲಿದ್ದು, ಈಗ ಸಂಪೂರ್ಣ ನಾಶವಾಗಿರುವ ಗ್ರಾಮವೆಂಬ ಸತ್ಯ ಸಂಗತಿ ೧೯೬೮ರಲ್ಲಿ ಸ್ಥಾಪಿತವಾಯಿತು.[೧] ಈ ಸೂಚನೆಯ ಜಾಡನ್ನು ಹಿಡಿದು ಶ್ರೀ ಆರ್. ಆರ್. ಮುತಾಲಿಕ ಅವರು ಶಾಸನೋಕ್ತ ದೇವತೆ, ಗ್ರಾಮ ಮತ್ತು ಭೌಗೋಲಿಕ ಪರಿಸರಗಳನ್ನು ವಿವರಿಸುವ ಲೇಖನವೊಂದನ್ನು ಕವಿಳಾಸಪುರದ ಭೂನಕ್ಷೆಯೊಂದಿಗೆ ಪ್ರಕಟಿಸಿದರು.[೨] ನಾನು, ಇತ್ತೀಚೆ ಕವಿಳಾಸಪುರದಲ್ಲಿ ಕೈಕೊಂಡ ಸಂಶೋಧನೆಯ ಆಧಾರದಿಂದ, ಶ್ರೀ ಮುತಾಲಿಕ ಅವರ ಲೇಖನದಲ್ಲಿ ನುಸುಳಿಬಂದ ಕೆಲವು ದೋಷಗಳನ್ನು ನಿವಾರಿಸುವುದರೊಂದಿಗೆ ಬೇರೆ ಕೆಲವು ಹೊಸ ಸಂಗತಿಗಳನ್ನೂ ಇಲ್ಲಿ ವ್ಯಕ್ತಪಡಿಸಬಯಸುತ್ತೇನೆ.

ಶ್ರೀ ಮುತಾಲಿಕ ಅವರು ಕವಿಳಾಸಪುರ ಭೂಪ್ರದೇಶವನ್ನು ವರ್ಣಿಸುತ್ತ "ಈ ಭಾಗ ವಿಸ್ತಾರವಾದುದಾಗಿದೆ. ಇದರ ಮಧ್ಯದಲ್ಲಿಯೇ ಹಾಳಾದ ಆದರೂ

---

೧ ಡಾ. ಎಂ. ಎಂ. ಕಲಬುರ್ಗಿ: ಬಸವಣ್ಣನವರನ್ನು ಕುರಿತ ಶಾಸನಗಳು (ದ್ವಿ. ಆ.) ಪುಟ : ೪೫–೪೬.

೨ ಶ್ರೀ ಆರ್. ಆರ್. ಮುತಾಲಿಕ: ಅರ್ಜುನವಾಡ ಶಾಸನದ ಕವಿಳಾಸಪುರ – ಕರ್ನಾಟಕ ಭಾರತಿ: ೨–೧.

ಇಂದಿನ ರೀತಿಯಲ್ಲಿ ನವೀಕರಿಸಿದ "ಮಲ್ಲಿಕಾರ್ಜುನ ದೇವಾಲಯು" ಕಾಣಸಿಗುತ್ತದೆ. ಈ ಗುಡಿಯ ಬಲಬದಿಯಲ್ಲಿ ಹಾಗೂ ಮುಂಭಾಗದಲ್ಲಿ ಭಗ್ನವಾದ ಮತ್ತೆರಡು ಲಿಂಗಗಳು ಕಾಣಸಿಗುತ್ತವೆ. ಇವುಗಳೇ ನಾಗೇಶ್ವರ ಹಾಗೂ ಸಂಗಮೇಶ್ವರಲಿಂಗಗಳೆಂದು ಅಲ್ಲಿಯ ಜನ ಹೇಳುತ್ತಾರೆ. ಮಲ್ಲಿಕಾರ್ಜುನ ಗುಡಿಯ ಪೂರ್ವಭಾಗದಲ್ಲಿ ಕೆಲವೇ ಹೆಜ್ಜೆಗಳ ಅಂತರದಲ್ಲಿ ಹಾಲಬಸವಿದೇವಮುನಿಪನ ಮಂದಿರವಿದೆ" ಎಂದು ಹೇಳುತ್ತಾರೆ. ಆದರೆ ನನಗೆ ತಿಳಿದುಬಂದುದು ಇಷ್ಟು: ಈ ಪ್ರದೇಶದ ಮುಖ್ಯಗುಡಿಯನ್ನು ಹಾಲಶಂಕರ ದೇವಾಲಯುವೆಂದೂ ಅದರ ಮುಂದಿನ ಮಂಟಪರೂಪದ ಗುಡಿಯನ್ನು ಮೊಸರಶಂಕರ ದೇವಾಲಯುವೆಂದೂ ಅಲ್ಲಿಯ ಜನರು ಕರೆಯುತ್ತಾರೆ. ಇಂದಿಗೂ ಇವುಗಳಲ್ಲಿ ಒಂದು ಪ್ರಧಾನವಾಗಿ ಇನ್ನೊಂದು ಗೌಣವಾಗಿ ಪೂಜೆಗೊಳ್ಳುತ್ತಲಿವೆ. ಶಾಸನದಲ್ಲಿ ಮೂರು ಲಿಂಗಗಳ ಪ್ರಸ್ತಾಪವಿರುವುದರಿಂದ ಬಹುಶಃ ಮೊಸರಶಂಕರ ದೇವಾಲಯುದ ಮುಂದೆ ಬಯಲಿನಲ್ಲಿರುವ ಭಗ್ನಲಿಂಗವೇ ಮೂರನೆಯದಾಗಿರಬೇಕು. ಈ ಮೂರೂ ಲಿಂಗಗಳು ಕ್ರಮವಾಗಿ ಪೂರ್ವದಿಂದ ಪಶ್ಚಿಮಕ್ಕೆ ಒಂದೇ ರೇಖೆಯಲ್ಲಿವೆ. ಹಾಲಶಂಕರ, ಮೊಸರಶಂಕರ, (ಇನ್ನೊಂದಕ್ಕೆ ಈಗ ಹೆಸರಿಲ್ಲ) ಎಂಬಿವು ಇತ್ತೀಚಿನ ಹೆಸರುಗಳಾಗಿರುವುದರಿಂದ ಇವು ಮೂಲತಃ ಶಾಸನದಲ್ಲಿ ಹೇಳಿರುವ ಮಲ್ಲಿಕಾರ್ಜುನ, ಸಂಗಮೇಶ್ವರ ಮತ್ತು ನಾಗೇಶ್ವರಲಿಂಗಗಳೇ ಆಗಿರಬೇಕು. ಯಾವುದನ್ನೂ 'ಹಾಲಬಸವಿದೇವ ಮುನಿಪನ ಮಂದಿರ'ವೆಂದು ಆ ಗ್ರಾಮದ ಜನರು ಕರೆಯುವುದಿಲ್ಲ.

ಶಾಸನಸ್ಥ ಬಸವನಕೋಡಿ, ಕಲುಕುಟಿಗಗೆರೆ, ಜಂಚಕಲ್ಲಕಣಿ, ಕುಚ್ಚಗೋಡಿ ಎಂಬ ಸ್ಥಳನಾಮಗಳನ್ನು ಆ ಹೆಸರಿನಿಂದ ಕರೆಯುವುದಿಲ್ಲವಾದುದರಿಂದ ಅವುಗಳನ್ನು ಈಗ ಅಂದಾಜಿನ ಮೇಲೆ ಗುರುತಿಸಬೇಕಾಗುತ್ತದೆ. ಇಲ್ಲಿ 'ತೊರೆ' ಎಂಬ ಪದ ಹರಣಕಾಶಿ ನದಿಯನ್ನು ಸೂಚಿಸುವುದೇ ಹೊರತು ಎರಡೂ ಹಳ್ಳಗಳನ್ನಲ್ಲ. ಕಾರಣ "ಪುರದಿಂ, ಪಡುವಲು ತೊರೆಯ ಕೂಡಿದ ಹಳ್ಳ" ಎಂಬ ವಾಕ್ಯವನ್ನು "ಪುರದಿಂ ಪಡುವಲು, ತೊರೆಯ ಕೂಡಿದ ಹಳ್ಳ" ಎಂದೂ "ತೆಂಕಲು ತೊರೆಯ, ಕೂಡಲು" ಎಂಬ ವಾಕ್ಯವನ್ನು "ತೆಂಕಲು, ತೊರೆಯ ಕೂಡಲು" ಎಂದೂ ಓದಿದಷ್ಟು ಅರ್ಥ ಸುರಕ್ಷಿತ. 'ತೀರ್ಥ' ಎಂಬ ಪದಕ್ಕೆ ಜಲಸಂಚಯ ಅಥವಾ ಜಲಪ್ರವಾಹ ಎಂಬ ಅರ್ಥವಿರಬೇಕೆಂದೇನಿಲ್ಲ; ಕ್ಷೇತ್ರವೆಂಬ ಅರ್ಥವೂ ಇದೆ. ಕಾರಣ ಶಾಸನಸ್ಥ 'ಕವಿಳಲಸ ತೀರ್ಥ'ವು ಹರಣಕಾಶಿ ನದಿ ಅಲ್ಲ, ಕವಿಳಲಸ ಗ್ರಾಮ. 'ತಳವೃತ್ತಿ' ಮತ್ತು 'ಅಂಕವಲ' ಎಂದರೆ ಕ್ರಮವಾಗಿ ಅಲ್ಲಿಯ 'ತಳದದೇವರು' ಮತ್ತು 'ಅರ್ಜುನವಾಡ' ಗ್ರಾಮಗಳಲ್ಲ; ತೆರಿಗೆಗೆ ಸಂಬಂಧಿಸಿದ ದಾನವಿಶೇಷಗಳು.

೨


ಕವಿಳಾಸಪುರದ ಕ್ಷೇತ್ರಮಹಿಮೆಯನ್ನು "ಕೃತಯುಗದಲ್ಲಿ ಕವಿಳಾಸಮುನಿ ಕವಿಳಾಸನಾಥ, ತ್ರೇತೆಯಲಿ ಅಂಕರಾಜಮುನಿ ಅಂಕನಾಥ, ದ್ವಾಪರದಲ್ಲಿ ಮಹಾರಾಜ





ಕವಿಳಾಸಪುರ ಪ್ರದೇಶದ ಒಂದು ನೋಟ



ಸಂಶೋಧನೆಗೆ ನೆರವನಿತ್ತ ಶ್ರೀ ಸಿಡಸೋಸಿ ಜಗದ್ಗುರುಗಳ ಸನ್ನಿಧಿಯಲ್ಲಿ
ಕವಿಳಾಸಪುರ ಸಂಶೋಧಕರು







೧. ಹಾಲಶಂಕರ (ಮಲ್ಲಿಕಾರ್ಜುನ ?) ಲಿಂಗ ೨. ಮೊಸರಶಂಕರ (ಸಂಗಮೇಶ್ವರ ?) ಲಿಂಗ
೩. ನಾಗೇಶ್ವರಲಿಂಗ ?

ಮುನಿ ಮಹಲಿಂಗದೇವ, ಕಲಿಯುಗದಲ್ಲಿ ಕಲಿರಾಜಮುನಿ ಕಲಿದೇವನಾಮ–ಇ (ಈ) ಮುನಿಗಳು ಮುಕ(ಖ್ಯ) ಸಮಸ್ತಗಣೇಶ್ವರರು ಆರಾಧಿಸಿ ಸಾಲೋಕ್ಯ ಸಾರೂಪ್ಯ ಸಾಮಿೂಪ್ಯ ಸಾಯುಜ್ಜ(ಜ್ಯ)ಮಂ ಪಡೆದರು" ಎಂದು ಶಾಸನದಲ್ಲಿ ಹೇಳಲಾಗಿದೆ. ಕೃತಯುಗ, ತ್ರೇತಾಯುಗ, ದ್ವಾಪರಯುಗಗಳ ಸಂಗತಿ ಪೌರಾಣಿಕವಾದುದು. ಕಲಿಯುಗದ ಕಲಿರಾಜಮುನಿ ಐತಿಹಾಸಿಕ ವ್ಯಕ್ತಿಯಾಗಿರುವ ಸಾಧ್ಯತೆಯಿದ್ದು, ಈತನ ಕಾಲದಲ್ಲಿ ಕವಿಳಾಸಪುರಕ್ಕೆ ಪುಣ್ಯಕ್ಷೇತ್ರಮರ್ಯಾದೆ ಪ್ರಾಪ್ತವಾಗಿರಬೇಕು. ಈ ಕಲಿರಾಜಮುನಿಯು ಹಾಲಬಸವಿದೇವನ ತಂದೆಯಾಗಿರುವ 'ಕಲಿದೇವಮುನಿಪ' ನಾಗಿದ್ದ ಪಕ್ಷದಲ್ಲಿ ಈತನ ತಲೆಮಾರಿನಲ್ಲಿ ಅಥವಾ ಈತನು ಈ ಗ್ರಾಮಕ್ಕೆ ಹೊರಗಿನಿಂದ ಆಗಮಿಸಿದ ಕಾಲದಲ್ಲಿ ಕವಿಳಾಸಪುರವು ಪುಣ್ಯಕ್ಷೇತ್ರವಾಗಿ ಪರಿಣಮಿಸಿತೆಂದು ಊಹಿಸಬಹುದು.

೩

ದೇವರಿಗೆ ಅಂಕವಲ, ತಳವೃತ್ತಿಯಾಗಿ ಕೊತ್ತಸಿ ಮತ್ತು ಕುರವನಿಗೆ ಗ್ರಾಮಗಳನ್ನು ಈ ಮೊದಲು (ಪುರಾಣಪುರುಷ) ಮಾಂಧಾತಚಕ್ರವರ್ತಿ ನೀಡಿದ್ದನೆಂದೂ ಆ ವಿಷಯ "ಶಾಸನಸ್ಥ" ವಾಗಿದೆಯೆಂದೂ ಚೌಡಿಸೆಟ್ಟಿಗೆ ಹಾಲಬಸವಿದೇವ ನಿರೂಪಿಸುತ್ತಾನೆ. ದಾನ ನೀಡಿದ ಅರಸನ ಹೆಸರು ಮರೆತುಹೋಗಲು ಪೌರಾಣಿಕ ಅರಸನ ಹೆಸರನ್ನು ಎಳೆದುತಂದು ಹಚ್ಚುವುದು ಶಾಸನಗಳಲ್ಲಿ ತೀರ ಸ್ವಾಭಾವಿಕ. ಉದಾ: ಹರಿಶ್ಚಂದ್ರ ಅಗ್ರಹಾರ, ಜನಮೇಜಯ ಅಗ್ರಹಾರ ಇತ್ಯಾದಿ. ಹಾಗೆಯೇ ಇಲ್ಲಿ ಮಾಂಧಾತನಲ್ಲದ ಯಾವನೋ ಒಬ್ಬ ಅರಸನು ಈ ಪೂರ್ವದಲ್ಲಿ ಕೊತ್ತಸಿ, ಕುರವನಿಗೆ ಗ್ರಾಮಗಳನ್ನು ದಾನ ನೀಡಿರುವ ಸಾಧ್ಯತೆಯಿದ್ದು, "ಶಾಸನಸ್ಥಂ" ಎಂಬ ಪದದಿಂದ ಆ ಬಗ್ಗೆ ಒಂದು ಶಾಸನವನ್ನೂ ಬರೆಯಲಾಗಿದ್ದಿತೆಂದು ತಿಳಿದುಬರುತ್ತದೆ. ಕವಿಳಾಸಪುರ ಪ್ರದೇಶದಲ್ಲಿ ಸಂಶೋಧನೆ ನಡೆದರೆ, ಈಗ ಕಳೆದುಹೋಗಿರುವ ಆ ಪ್ರಾಚೀನ ಶಾಸನವೂ ಸಿಗಬಹುದಾಗಿದೆ.

ಕ್ಷೇತ್ರಮಹಿಮೆಯನ್ನೂ ಪ್ರಾಚೀನ ದತ್ತಿವಿಷಯವನ್ನೂ ಹಾಲಬಸವಿದೇವನ ಬಾಯಿಯಿಂದ ಕೇಳಿದ ಚೌಡಿಸೆಟ್ಟಿಯವರು ಕೊತ್ತಸಿ, ಕುರವನಿಗೆಗಳನ್ನು 'ಪುನರ್ದತ್ತಿ' ಯಾಗಿ ನೀಡುತ್ತಾರೆ. ಇಲ್ಲಿಯ "ನಾಗೇಶ್ವರಕೆ ಮಲ್ಲೇಶ್ವರಕೆ ಕುರವನಿಗೆ, ಸಂಗಮೇಶ್ವರಕೆ ಪಾರಣೆಯ ಜಂಗಮಾರಾಧನೆಗೆ ಕೊತ್ತಸಿಗೆ – ಇ (=ಈ) ಧರ್ಮಕೆ [ಇ]ದು ವಿವರ" ಎಂಬ ವಾಕ್ಯವು ನಾಗೇಶ್ವರದೇವರು ಮತ್ತು ಮಲ್ಲೇಶ್ವರದೇವರುಗಳಿಗೆ ಇಂದಿನ ಕುರಣಿ ಗ್ರಾಮವನ್ನೂ ಸಂಗಮೇಶ್ವರದೇವರು ಮತ್ತು ಪಾರಣೆಯ ಜಂಗಮರಿಗೆ ಇಂದಿನ ಕೋಚರಿಗ್ರಾಮವನ್ನೂ ಚೌಡಿಸೆಟ್ಟಿಯು ದಾನವಾಗಿ ಕೊಟ್ಟನೆಂದು ಸ್ಪಷ್ಟಪಡಿಸುತ್ತದೆ.

೪

ಕವಿಳಾಸಪುರದಲ್ಲಿ ನಡೆಸಿದ ಪರಿವೀಕ್ಷಣೆಯ ಫಲವಾಗಿ ನನಗೆ ಇನ್ನೊಂದು ಶಾಸನ ಲಭಿಸಿತು. ಹಾಲಶಂಕರದೇವಾಲಯದ ಬದಿಯಲ್ಲಿ ಮಣ್ಣಾಗಾಗಿ ನೆಲವನ್ನು

ಅಗಿಯುವಾಗ ಕೆಲವು ವರ್ಷಗಳ ಹಿಂದೆ ಲಭಿಸಿದ್ದ ಈ ಶಾಸನವನ್ನು ದೇವಾಲಯದಲ್ಲಿ ಇಡಲಾಗಿದ್ದಿತು.[೩] ಇದು ಒಂದು ಸೀಮೆಯ ಕಲ್ಲು. ಮೇಲ್ಭಾಗದಲ್ಲಿ ಶಿವಲಿಂಗ, ಎಡಬಲಕ್ಕೆ ಸೂರ್ಯ-ಚಂದ್ರರ ಚಿತ್ರಗಳಿವೆ. ಕೆಳಭಾಗದಲ್ಲಿ

೧ ಶ್ರೀ ಬಸವಣದಂ-
೨ ಣ್ಣಾಯಕರ ಕೆ-
೩ ಯ್ ॥

ಎಂಬ ಬರವಣಿಗೆ ಇದೆ. ಇದು ಸುಮಾರು ೧೩ನೆಯ ಶತಮಾನಕ್ಕೆ ಸಂಬಂಧಿಸಿದ ಸೀಮೆಯಕಲ್ಲು. ಬಸವಣ್ಣನವರ ವಂಶಜರ ಗ್ರಾಮದಲ್ಲಿಯೇ ಸಿಕ್ಕ ಅಪೂರ್ವತೆಯಿಂದ ಕೂಡಿದ ಇದು, ಅವರನ್ನು 'ದಣ್ಣಾಯಕ' ಎಂದು ಕರೆದ ಪ್ರಥಮ ಶಾಸನವಾಗಿದೆ.

ಅರ್ಜುನವಾಡ ಶಾಸನದಲ್ಲಿ ಪಡವಲು, ಬಡಗಲು, ಮೂಡಲು, ತೆಂಕಲು ಎಂಬ ಸೂಚನೆಯೊಂದಿಗೆ "ಈ ಚತುಸ್ಸೀಮಾಭ್ಯಂತರ ಕವಿಳಾಸಪುರ" ಎಂಬ ಉಲ್ಲೇಖ ಬರುತ್ತದೆ. ಅಲ್ಲಿಯ "ಸುಂಕ, ಸಾದ, ತಳಸಾರಿಗೆ, ಬಟ್ಟೆಯ ಬಾಧೆ, ಗ್ರಾಮಬ್ರಯ, ನಿಧಿ ನಿಕ್ಷೇಪ, ಅಂಕ, ಟಂಕ, ಆಣೆ, ಗೋಸಣೆ, ಮುದ್ರೆ" ಎಂಬ ವಾಕ್ಯದಲ್ಲಿರುವ 'ಮುದ್ರೆ' ಎಂಬುದು ಆ ಊರಿಗೆ ಸೀಮೆಯಕಲ್ಲು (ಮುದ್ರೆಯ ಕಲ್ಲು) ನಿಲ್ಲಿಸಿದುದನ್ನು ಸೂಚಿಸುತ್ತಿರಬೇಕು. ಹೀಗಾಗಿ ಅರ್ಜುನವಾಡಶಾಸನ ಬರೆಯಿಸಿದ ಸಮಯದಲ್ಲಿ ಕವಿಳಾಸ ಪುರಗ್ರಾಮದ "ಚತುಸ್ಸೀಮೆ"ಯನ್ನು ಸೂಚಿಸಲು ನಿಲ್ಲಿಸಿರಬಹುದಾದ ನಾಲ್ಕು ಸೀಮೆಯ ಕಲ್ಲುಗಳಲ್ಲಿ ಇದೂ ಒಂದು ಎನ್ನಬೇಕಾಗುತ್ತದೆ. ಆದರೆ "ಕೆಯ್" ಎಂಬುದಕ್ಕೆ 'ಹೊಲ' ಎಂದೇ ಅರ್ಥವಿರುವುದರಿಂದ ಇದು ಹೊಲವನ್ನು ಸೂಚಿಸುವ ಸೀಮೆಯಕಲ್ಲು ಎಂದು ಹೇಳಲು ಮನಸ್ಸಾಗುತ್ತದೆ, ಆದರೆ ಇದು ಸ್ವತಃ ಬಸವಣ್ಣನವರ ಹೊಲ ವನ್ನು ಸೂಚಿಸುತ್ತಿದೆಯೋ, ಅವರ ವಂಶಜರ ಹೊಲವನ್ನು ಸೂಚಿಸುತ್ತಿದೆಯೋ ಅನುಮಾನ. ಈ ಹೊಲವನ್ನು ವಂಶಜರು ದಾನವಾಗಿ ಪಡೆದಿದ್ದಲ್ಲಿ ಆ ಸಂಗತಿಯನ್ನು ಕಥಿಸುವ ಬೇರೊಂದು ಶಾಸನವೂ ಇರುವ ಸಾಧ್ಯತೆಯಿದೆ. ಅದೇನೇ ಇದ್ದರೂ ಇರಬಹುದಾದ ನಾಲ್ಕು ಸೀಮೆಕಲ್ಲುಗಳಲ್ಲಿ ಈಗ ಒಂದು ಮಾತ್ರ ಲಭಿಸಿದೆ.

ಕವಿಳಾಸಪುರ ಪ್ರದೇಶದ ಜನತೆಗೆ ಇಲ್ಲಿ ಬಸವಣ್ಣನವರ ವಂಶಜರು ವಾಸ ವಾಗಿದ್ದ ವಿಷಯ ಗೊತ್ತೇ ಇರಲಿಲ್ಲ. ೧೯೨೮ರಲ್ಲಿ ಅರ್ಜುನವಾಡಶಾಸನ ಸಿಕ್ಕ ಮೇಲೆ ಈ ಸಂಗತಿ ಅವರ ಗಮನಕ್ಕೆ ಬಂದಿತು. ದೇವರಾಜ, ಕಲಿದೇವ, ಹಾಲ ಬಸವಿದೇವ ಹೆಸರುಗಳನ್ನು ತಲೆತಲಾಂತರವಾಗಿ ವ್ಯಕ್ತಿಗಳಿಗೆ ಇಡುವ ಪರಂಪರೆಯೂ ಆ ಭಾಗದಲ್ಲಿ ಬೆಳೆದು ಬಂದಿಲ್ಲ. ಹೀಗೆ ಬಸವಣ್ಣನವರ ವಂಶಜರ ಬಗ್ಗೆ ಏನೂ

---

೩ ಈಗ ಈ ಶಾಸನ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿದೆ.



"ಶ್ರೀ ಬಸವಣ ದಂಣಾಯಕರ ಕೆಯ್" ಎಂಬ ಬರಹವನ್ನೊಳಗೊಂಡ ಹೊಲದ ಸೀಮೆಯ ಕಲ್ಲು

ವದಂತಿ ಕೇಳಿಬರದಿರುವಂತೆ ಈ ವಿಷಯಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳಾಗಲೀ, ಬೇರೆ ಶಾಸನಗಳಾಗಲೀ ಈಗ ಲಭಿಸುವುದಿಲ್ಲ.

ಅರ್ಜುನವಾಡಶಾಸನವನ್ನು ಇನ್ನೂ ಸರಿಯಾಗಿ ಅರ್ಥೈಸುವ, ಕವಿಳಾಸಪುರ ಪ್ರದೇಶದಲ್ಲಿ ಉತ್ಖನನ ನಡೆಸುವ ಕಾರ್ಯವನ್ನು ಕೈಕೊಂಡಲ್ಲಿ ಬಸವಣ್ಣನವರ ಮತ್ತು ಅವರ ವಂಶಜರ ಇತಿಹಾಸದ ಮೇಲೆ ಇನ್ನೂ ಹೊಸಬೆಳಕು ಬೀಳುವ ಸಂಭವವಿದೆ.

• •

ಗೋರಿಗಳು

• ಮಹಾದೇವ ಕಣವಿ

ಗಿಡಗಂಟೆಗಳು ಮುಳ್ಳುಪೊದೆ ಬೆಳೆದ
ಊರ ಹೊರಬಯಲಿನಲಿ, ಬಿರುಬಿಸಿಲಿನಲಿ
ಗೋರಿಗಳ ಮಧ್ಯೆ ನಡೆಯುತ್ತಿದ್ದೇನೆ.
ಅಹ್ ! ಇದು ಸುಡುಗಾಡು !

ಇಲ್ಲಿ ಮಲಗಿರುವ ಚಿರಂತನನಿದ್ರೆಯಲಿ
ಮುಳುಗಿರುವ ಜೀವಿಗಳ ಎದೆಯ
ಮೇಲೆ ಕಾಲಿಟ್ಟ ಪಾಪ ನನ್ನದು !
ಸಾವು ಎಂತಹ ಸಮಾಜವಾದಿ !
ಸಮಾಜದ ಕೃತ್ರಿಮಗೋಡೆಗಳನು
ಕಿತ್ತೆಸೆದು ಸರ್ವರಿಗೂ ಸಮಬಾಳು
ಎಂದೊರೆದಿದೆ.

ಇಲ್ಲಿ ಪವಡಿಸಿದವ ಬಹು ದೊಡ್ಡ ಪುಢಾರಿ
ಅಲ್ಲೊಬ್ಬ ಕಪಟಧರ್ಮಗುರುವಿನ ಸಮಾಧಿ
ಅಗೋ ಅಲ್ಲಿ ಕುಕೃತ್ಯವನೆಸಗಿದ ಜೀವಿ
ಕವಿಹೃದಯದಿ ಆಶ್ರಯಹೊಂದಿರುವ !
ನೂರು ಆಶೆಗಳಿಗೆಲ್ಲ ಪರದಾಡಿದ ಜೀವಿಗಳು
ಕಣ್ಣೆದುರು ಕುಣಿಯುತಿವೆ.

ಈ ನೆಲ ನಮ್ಮ ಸುಖದುಃಖಗಳ ಸಂತೆಯು
ಕಂತೆಯುನು, ನಾವ್ ಗೈದಪರಾಧಗಳ
ಅಸಂತೋಷಗಳನೆಲ್ಲ ನುಂಗಿ ನಿಂತಿದೆ
ಜಗವೆಂಬ ವರ್ತಮಾನ ಪೇಪರಿನಲಿ
ನನ್ನದೊಂದು ಚಿಕ್ಕ ಕಾಲಮ್ಮು, ನಂತರ
ಪೇಪರು ಬದಲು ಎಲ್ಲಿಯೋ ಮಾಯ !

ಸುಡುಗಾಡು ನನ್ನನು ಹೆದರಿಸಲಿಲ್ಲ.
ಪಲಾಯನವನೂ ಬೋಧಿಸಲಿಲ್ಲ.
ಕಟುಸತ್ಯ ಕಂಡು ಬೆರಗಾಗಿ ಸಾಗುತ್ತಿದ್ದೇನೆ
ಎಲ್ಲಿಗೆ......?

ಕನ್ನಡ ವರ್ಣಮಾಲೆಯಲ್ಲಿ ಬಿಂದು

• ಪಿ. ಶ್ರೀಕೃಷ್ಣ ಭಟ್

ಕನ್ನಡ ವರ್ಣಮಾಲೆಯಲ್ಲಿ ಪ್ರವೇಶ ಪಡೆದು ಅಲ್ಲೇ ಬೇರೂರಿದ ಬಿಂದು ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆಗೆ ದಾರಿಮಾಡಿದೆ. ಕನ್ನಡಭಾಷೆಯಲ್ಲಿ ಬಿಂದುವೇ ಇಲ್ಲವೆಂಬುದು ಹಲವರ ಮತ. ಬಿಂದು ಇರುವುದು ಮಾತ್ರವಲ್ಲ, ಅದು ಪ್ರಥಮಾ ವಿಭಕ್ತಿಯೂ ಹೌದು ಎನ್ನುವುದು ಕೆಲವರ ಅಭಿಪ್ರಾಯ. ಎರಡನೆಯ ವರ್ಗದವರು ಸಂಸ್ಕೃತ-ಕನ್ನಡ ವೈಯಾಕರಣರ ಹೇಳಿಕೆಗಳ ಆಧಾರದಿಂದ ತಮ್ಮ ವಾದವನ್ನು ಪುಷ್ಟೀಕರಿಸುತ್ತಾರೆ. ಆದರೆ ಕನ್ನಡ ವೈಯಾಕರಣರ ಹೇಳಿಕೆಯಲ್ಲಿರುವ ಅಸಾಂಗತ್ಯಗಳನ್ನು ನೋಡಿದರೆ ಕನ್ನಡದಲ್ಲಿ ಬಿಂದುವಿನ ಅಸ್ತಿತ್ವದ ಬಗ್ಗೆ ಪ್ರಶ್ನಿಸುವಂತಾಗುತ್ತದೆ.

ಕನ್ನಡದಲ್ಲಿ ಮೂಲಭೂತವಾಗಿ ಬಿಂದುವಿದೆಯೇ, ಅದು ಬರವಣಿಗೆಯ ಸೌಲಭ್ಯಕ್ಕಾಗಿ ಕನ್ನಡಲಿಪಿಯಲ್ಲಿ ಬಂದು ಸೇರಿಕೊಂಡುದೇ ಎಂಬುದು ಮೊದಲ ಪ್ರಶ್ನೆ. ಇದಕ್ಕೆ ಸಾಕಷ್ಟು ಜನ ವಿದ್ವಾಂಸರು ಆಧುನಿಕಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಉತ್ತರಿಸುವ ಪ್ರಯತ್ನ ಮಾಡಿರುವರು. ಬಿಂದು ಕನ್ನಡ ಉಚ್ಚಾರದಲ್ಲಿ ಸ್ಥಾನಗಳಿಸದೆ ಕೇವಲ ಲಿಪಿಯಲ್ಲಿ ಮಾತ್ರ ಸೇರಿಕೊಂಡುದಾದರೆ ಹಾಗಾಗಲು ಒದಗಿಬಂದ ಸನ್ನಿವೇಶವನ್ನು ವಿಚಾರಿಸಿ ತಿಳಿಯಬೇಕಾದುದು ಉಚಿತ. ಆ ಕುರಿತು ಕನ್ನಡ ವ್ಯಾಕರಣಗ್ರಂಥಗಳ ಹೇಳಿಕೆಗಳಲ್ಲಿ ಧ್ವನಿತವಾಗುವ ಅಂಶವನ್ನು ಗಮನಿಸಿ ಬಿಂದು ಕನ್ನಡಬರವಣಿಗೆಯಲ್ಲಿ ಪ್ರವೇಶ ಪಡೆದಿರಬಹುದಾದ ವಿಧಾನವನ್ನು ಊಹಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ನಾಗವರ್ಮಾದಿ ಕನ್ನಡವೈಯಾಕರಣರ ಅಭಿಮತದಂತೆ ಅನುಸ್ವಾರ ಅಥವಾ ಬಿಂದು ಇಲ್ಲವೆ ಸೊನ್ನೆ ಕನ್ನಡ ವರ್ಣಮಾಲೆಯಲ್ಲಿ ಸ್ಥಾನವನ್ನು ಹೊಂದಿದೆ. ಭಾಷೆಯ ಗ್ರಾಂಥಿಕರೂಪವೇ ಅವರಿಗೆ ಪ್ರಮಾಣ. ಅವರ ದೃಷ್ಟಿಗನುಸರಿಸಿ ಅವರ ನಿರೂಪಣೆಯೂ ಸರಿ. ಆದರೆ ಇಂದು ವಿಸ್ತಾರವಾಗಿ ಬೆಳೆದುಬರುತ್ತಿರುವ ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಅವರ ಹೇಳಿಕೆಯನ್ನು ಹಿಂಜಿದಾಗ ಹೊರಡುವ ತಥ್ಯವನ್ನು ಅಲ್ಲಗಳೆಯುವಂತಿಲ್ಲ. ಯಾವುದೇ ಒಂದು ವರ್ಣ(ಆಧುನಿಕ ಮತದಂತೆ ಧ್ವನಿಮಾ)ದ ಅಸ್ತಿತ್ವವನ್ನು ಭಾಷೆಯಲ್ಲಿ ಒಪ್ಪಿಕೊಳ್ಳಬೇಕಾದರೆ ಅದು ಆ ಭಾಷೆಯ ಯಾವುದಾದರೂ ಉಚ್ಚಾರದ ಆದಿ, ಮಧ್ಯ ಅಥವಾ ಅಂತ್ಯ ಎಲ್ಲಾದರೂ ಸರಿ ಪರಿಸರದ ನಿರ್ದಿಷ್ಟತೆಯಿಲ್ಲದೆ

ಬರುವಂತಿರಬೇಕು. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಬಿಂದುವಿನ ಅಸ್ತಿತ್ವದ ಕುರಿತು ವಿಚಾರಿಸಬಹುದು.

ಕನ್ನಡದಲ್ಲಿ ಬಿಂದುವಿನಿಂದ ಶಬ್ದದ ಆರಂಭವಿಲ್ಲ. ಶಬ್ದ ಮಧ್ಯದಲ್ಲಿ ಬರವಣಿಗೆಯಲ್ಲಿ ಬಿಂದು ಬರುವುದು ನಿಜ. ಆದರೆ ಅಲ್ಲಿ ಬಿಂದು ಉಚ್ಚಾರದಲ್ಲಿ ಪರಿಸರಕ್ಕೆ ಹೊಂದಿಕೊಂಡು ವರ್ಗಪಂಚಮಾಕ್ಷರವಾಗುವುದು ಗಮನಾರ್ಹ. ಕೇಶಿರಾಜನು ಕೊಟ್ಟಿರುವ ೬೪ 'ಸಬಿಂದುಕ' ಪದಗಳಲ್ಲಿ ಮತ್ತು ೧೮ 'ವಿಕಲ್ಪದಿಂ ಸಬಿಂದುಕ' ಪದಗಳಲ್ಲಿ ವರ್ಗಪ್ರಥಮ ಮತ್ತು ವರ್ಗತೃತೀಯಾಕ್ಷರಗಳ ಹಿಂದೆ ಮಾತ್ರ ಬಿಂದು ಬಂದಿರುವುದನ್ನು ಕಾಣಬಹುದು. ಅಲ್ಲಿ ಬಿಂದುವಿನ ಉಚ್ಚಾರ ಮುಂದಿರುವ ವರ್ಗೀಯ ವ್ಯಂಜನಕ್ಕನುಸರಿಸಿ ಆಯಾ ವರ್ಗ ಪಂಚಮಾಕ್ಷರವಾಗಿದೆ. ಕೇಶಿರಾಜನ ಹೇಳಿಕೆಯೂ ಇದಕ್ಕೆ ಆಧಾರವಾಗಿದೆ.

..................ವರ್ಗಮಿದಿರಿರೆ
ತನಗೆ ವಿಕಲ್ಪದೆ ತದೀಯ ಪಂಚಮಮಕ್ಕುಂ[೧]

ಅಲ್ಲೆಲ್ಲ ಬಿಂದುವಿಗೆ ನಿಶ್ಚಿತ ಉಚ್ಚಾರವಿರದೆ, ಅದು ಸ್ವರರಹಿತ ಅನುನಾಸಿಕದ ಬರವಣಿಗೆಯ ಸಂಕೇತವೆಂಬುದು ಸ್ಪಷ್ಟ. ಅವರ್ಗೀಯ ವ್ಯಂಜನಗಳ ಹಿಂದೆ ಬಿಂದು ಬರುವ ಶಬ್ದಗಳು ಕನ್ನಡದಲ್ಲಿ ಮಾತ್ರವಲ್ಲ, ದ್ರಾವಿಡಭಾಷೆಗಳಲ್ಲಿಯೇ ಇಲ್ಲವೆಂದು ಆಧುನಿಕ ವಿದ್ವಾಂಸರ ಅಭಿಪ್ರಾಯ.[೨] ಪದದ ಕೊನೆಯಲ್ಲಿ ಬಿಂದು ಬರುವ ಪದಗಳು ಹೊಸಗನ್ನಡದಲ್ಲಿ ಅಪೂರ್ವವಾದರೂ ಹಳಗನ್ನಡದಲ್ಲಿ ವಿಪುಲವಾಗಿ ದೊರಕುತ್ತವೆ. ಆದರೆ ಅಲ್ಲಿಯೂ ಬಿಂದುವಿಗೆ ಸ್ವತಂತ್ರವಾದ ಅಸ್ತಿತ್ವವಿಲ್ಲ. ಈ ವಿಚಾರ ವೈಯಾಕರಣರ ಹೇಳಿಕೆಯು ಹಿಂದೆ ತಲೆಮರೆಸಿಕೊಂಡಿರುವುದನ್ನು ಕಾಣಬಹುದು.

ಹಳಗನ್ನಡ ವೈಯಾಕರಣರ ಹೇಳಿಕೆಯಂತೆ ಪದಾಂತದ ಬಿಂದುವಿಗೆ ಆದೇಶವಾಗಿ ಬರುವುದು 'ಮ್' ಇಲ್ಲವೆ 'ನ್'.

೧ ಶಬ್ದಮಣಿದರ್ಪಣ : ಸಂ. ಡಿ. ಎಲ್. ಎನ್. ಸೂತ್ರ. ೧೩೨.

೨ 'ವಿಕಲ್ಪ ಬಿಂದುಕ'ಗಳ ಸಾಲಿನಲ್ಲಿ ಕೇಶಿರಾಜನು ಕೊಟ್ಟಿರುವ 'ದುಘುಂಮಿಜೀದಂ' ಎಂಬ ಪ್ರಯೋಗ ಬಿಂದುವಿನ ಪರಿಸರಕ್ಕೆ ಅಪವಾದದಂತೆ ಕಂಡುಬಂದರೂ ಅದರ ಸರಿಯಾದ ಬರವಣಿಗೆಯ ರೂಪ 'ದುಘುಮ್ಮಿಜೀದಂ' ಎಂದಾಗಬೇಕೆಂಬ ವಿಚಾರ ಸಕೃದ್ದರ್ಶನಕ್ಕೆ ಗೋಚರಿಸದಿರದು. ಇಲ್ಲವಾದರೆ ನಂನ (ನನ್ನ) ಅಂಣ (ಅಣ್ಣ) ಎಂದು ಬರೆಯುವಂತೆಯೇ ಅದೂ ಬರೆಯಲ್ಪಟ್ಟಿದೆ ಎಂದು ತಿಳಿಯಬೇಕು. ಅನುನಾಸಿಕಗಳ ಹಿಂದೆಯೂ ಕನ್ನಡದಲ್ಲಿ ಬಿಂದು ಬರುವುದಿಲ್ಲ.

ಪದದೊಳ್ ಸ್ವರಮಿರೆ ಬಿಂದುಗೆ
ದೊರೆಕೊಳ್ಗುಂ ನತ್ವಮತ್ವಂ..............[೩]

ಶಬ್ದಸ್ಮೃತಿ[೪] ಭಾಷಾಭೂಷಣ[೫]ಗಳಲ್ಲೂ ಈ ಅಭಿಪ್ರಾಯವಿದೆ. ಬಿಂದುವಿಗೆ 'ಮ್' ಇಲ್ಲವೆ 'ನ್' ಆದೇಶವಾಗುತ್ತದೆ ಎಂಬ ಹೇಳಿಕೆ ಹಳೆಯ ವ್ಯಾಕರಣಮಾರ್ಗವೆಂದು ಒಪ್ಪಿಕೊಳ್ಳಬಹುದಾದರೂ ಯಾವುದೇ ಧ್ವನಿವ್ಯತ್ಯಾಸ ಉಚ್ಚಾರವನ್ನವಲಂಬಿಸಿರುತ್ತದೆ ಎಂಬ ಆಧುನಿಕರ ಅಭಿಪ್ರಾಯವನ್ನು ಅಲ್ಲಗಳೆಯುವಂತಿಲ್ಲ. ಆದೇಶ, ಆಗಮ ಅಥವಾ ಲೋಪ ಯಾವುದಾದರೂ ಉಚ್ಚಾರಕ್ಕೆ ಹೊಂದಿಕೊಂಡೇ ಇರಬೇಕಷ್ಟೆ. ಎಲ್ಲಾದರೂ ಒಂದೊಂದೆಡೆ ವಿಕಲ್ಪವನ್ನು ಹೇಳಿದರೆ ಸರಿ [ಏಕೆಂದರೆ ಕೆಲವೊಂದು ನಿಯಮಗಳಿಗೆ ಅಪವಾದಗಳೂ (Exceptions) ಇರುತ್ತವೆ]. ಆದರೆ ಇಲ್ಲಿ ಸರ್ವತ್ರ 'ಮ್' ಇಲ್ಲವೆ 'ನ್' ಎಂಬ ತುಮುಲವೇಕೆ ? ಕನ್ನಡದಲ್ಲಿ 'ಮ್' ಮತ್ತು 'ನ್' ಸ್ವಚ್ಛಂದ ಪರಿವರ್ತನೆಯಲ್ಲಿರುವ ಧ್ವನಿಗಳೂ ಅಲ್ಲವಷ್ಟೆ. ಇರಲಿ.

ಪದಾಂತದ ಬಿಂದುವಿಗೆ ಮಕಾರಗಳನ್ನು ಆದೇಶಿಸಿದ ವೈಯಾಕರಣರ ಅಭಿಪ್ರಾಯದಂತೆ ಪದಾಂತದ ಮಕಾರಗಳಿಗೆ ಆದೇಶವಾಗಿ ಬರುವುದಾದರೂ ಬಿಂದುವೆ.

ಮಕಾರದ ಪರದೊಳ್
ವ್ಯಂಜನಮಿರ್ದೊಡಮಿಲ್ಲದೊಡಮನುಸ್ವಾರಂ ಸಂ
ಜನಿಯಿಪ್ಪುದು.[೬]

ಶಬ್ದಸ್ಮೃತಿ[೭] ಭಾಷಾಭೂಷಣ[೮]ಗಳೂ ಇದೇ ಅಭಿಪ್ರಾಯವನ್ನು ತಾಳಿವೆ ('ವ್ಯಂಜನಮಿಲ್ಲದೊಡಂ' ಎನ್ನುವ ವಿಚಾರ ಮಾತ್ರ ಶಬ್ದಮಣಿದರ್ಪಣದಲ್ಲಿ ಹೆಚ್ಚಿನದು). ಕೇಶಿರಾಜನು ಇದಕ್ಕೆ ಕೊಟ್ಟಿರುವ ಪ್ರಯೋಗಗಳು ಇನ್ನಷ್ಟು ಸ್ವಾರಸ್ಯಕರವಾಗಿವೆ. ಅವನ್ನು ಸಂಕ್ಷೇಪಿಸಿದಾಗ ಕೆಳಗಿನಂತೆ ಅರ್ಥವಾಗುತ್ತದೆ :

ಆಂ ಎಂಬುದು ಸಂದರ್ಭಕ್ಕೆ ತಕ್ಕಂತೆ ಆನ್ ಇಲ್ಲವೆ ಆಮ್
ನೀಂ ಎಂಬುದು ಸಂದರ್ಭಕ್ಕೆ ತಕ್ಕಂತೆ ನೀನ್ ಇಲ್ಲವೆ ನೀಮ್
ತಾಂ ಎಂಬುದು ಸಂದರ್ಭಕ್ಕೆ ತಕ್ಕಂತೆ ತಾನ್ ಇಲ್ಲವೆ ತಾಮ್.

---

೩ ಶ. ಮ. ದ : ಸಂ. ಡಿ. ಎಲ್. ಎಸ್. ಸೂತ್ರ. ೧೧೪.
೪ ಶಬ್ದಸ್ಮೃತಿ, ಸೂತ್ರ. ೨೦.
೫ ಕ. ಭಾ. ಭೂ. ಸೂತ್ರ. ೫೪.
೬ ಶ. ಮ. ದ: ಸಂ. ಡಿ. ಎಲ್. ಎನ್. ಸೂತ್ರ. ೧೬೨.
೭ ಶ. ಸ್ಮೃ. ಸೂತ್ರ. ೪೪.
೮ ಕ. ಭಾ. ಭೂ. ಸೂತ್ರ. ೧೨೦.

ಕನ್ನಡ ಆಖ್ಯಾತವಿಭಕ್ತಿಗಳ ಅವಲೋಕನದಿಂದ ಹಾಗೂ ಇತರ ದ್ರಾವಿಡ ಭಾಷೆಗಳ ಅಭ್ಯಾಸದಿಂದ ಈ ಸರ್ವನಾಮಗಳು ಕನ್ನಡದಲ್ಲಿ ನಾಂತವಾಗಿರಲು ಏಕವಚನ ವೆಂದೂ ಮಾಂತವಾಗಿರಲು ಬಹುವಚನವೆಂದೂ ಸ್ಪಷ್ಟವಾಗುತ್ತದೆ. ಅಂದರೆ ಅವು ಉಚ್ಚಾರದಲ್ಲೂ ಅಂತೆಯೇ ಇರಬೇಕಾಗುತ್ತದೆ ಎಂದಂತಾಯಿತು. ಭಾಷೆಯ ಚಾಕ್ಷುಷ ರೂಪವನ್ನೇ ಪ್ರಮಾಣವಾಗಿ ಎತ್ತಿಕೊಂಡ ಕೇಶಿರಾಜಾದಿ ವೈಯಾಕರಣರ ದೃಷ್ಟಿಯಲ್ಲಿ ಬಿಂದು ಅಂತವಾಗಿರುವ ಈ ಸರ್ವನಾಮಗಳ ವಚನದ ನಿರ್ಣಯವನ್ನು ಸಂದರ್ಭಕ್ಕೆ ತಕ್ಕಂತೆ ಮಾಡಿಕೊಳ್ಳಬೇಕೆಂದಿತ್ತು. ಶಬ್ದಮಣಿದರ್ಪಣದಲ್ಲಿ ಉತ್ತಮಪುರುಷ ಕ್ರಿಯಾಪದವು ಎರಡೂ ವಚನಗಳಲ್ಲಿ ಒಂದೇ ರೂಪದಲ್ಲಿರುವುದರ ಬಗ್ಗೆ ಬರುವ ವಿವರಣೆ ಈ ಅಭಿಪ್ರಾಯಕ್ಕೆ ಉಪಷ್ಟಂಭಕವಾಗಿದೆ.

"ಉತ್ತಮಪುರುಷದೇಕವಚನದೆನ್‌ಗಾದ ಬಿಂದುವುಂ ಆ ಬಹುವಚನದೆವ್‌ಗಾದ ಬಿಂದುವುಂ ತಮ್ಮೊಳೇಕರೂಪಮಾಗಿರ್ಪುವು; ಅವಂ ಪ್ರಕರಣವಶದಿಂದಱಿವುದು; ಕೋಟೆಯುಂ ಪತ್ತುವೆಂ, ವ್ಯಾಕರಣಮನೆಲ್ಲರುಂ ಕೇಳ್ವೆಂ ತಿಳಿವಿನವೆಂಬಂತೆ."[೧೦]

ಇಲ್ಲಿ ನಿಜವಾಗಿ ಎನ್ ಏಕವಚನ, ಎವ್/ಎವು ಬಹುವಚನ. ಉಚ್ಚಾರದಲ್ಲಿ ಸ್ಪಷ್ಟ ವ್ಯತ್ಯಾಸವಿದೆ. ಹೀಗಿರಲು 'ಎಂ' ಎಂಬುದನ್ನು ಪ್ರಕರಣ ವಶದಿಂದ ಅರಿವುದು ಹೇಗೆ ? ಉಚ್ಚಾರದಲ್ಲಿ ವ್ಯತ್ಯಾಸ ಸ್ಫುಟವಾಗಬೇಡವೆ ?

ಆಧುನಿಕರ ಮತದಂತೆ ಎರಡು ಉಚ್ಚಾರಗಳಲ್ಲಿ ಅರ್ಥವ್ಯತ್ಯಾಸ ತೋರ ಬೇಕಾದರೆ ಆ ಎರಡು ಉಚ್ಚಾರಗಳಲ್ಲೂ ಧ್ವನಿಗೆ ಸಂಬಂಧಿಸಿದಂತೆ ವ್ಯತ್ಯಾಸವಿರಲೇ ಬೇಕು. ಎರಡು ಧ್ವನಿಗಳಲ್ಲಿರುವ ಅಂತರವನ್ನು ಅರ್ಥವ್ಯತ್ಯಾಸವನ್ನು ಕಾಣಿಸುವು ದಕ್ಕಾಗಿಯೇ ಬಳಸಿಕೊಳ್ಳಲಾಗುತ್ತದೆ. ಧ್ವನಿಮಾ ವ್ಯಾಖ್ಯೆಯಲ್ಲಿ ಭಾಷಾವಿಜ್ಞಾನಿಗಳು ಇದನ್ನೇ ಹೇಳುತ್ತಾರೆ. "ಎರಡು ಧ್ವನಿಗಳು ಪರಸ್ಪರ ಸಮಾನ ಪರಿಸರದಲ್ಲಿ, ಆದರೆ ಭಿನ್ನಕಾರ್ಯ ಅಥವಾ ಅರ್ಥದಲ್ಲಿ ಬರುತ್ತಿದ್ದರೆ ಅವು ಪರಸ್ಪರ ವೈದೃಶ್ಯದಲ್ಲಿ ಬಂದಿವೆ ಯೆಂದರ್ಥ. ಈ ರೀತಿ ಎರಡು ಧ್ವನಿಗಳು ಪರಸ್ಪರ ವೈದೃಶ್ಯ ಪರಿಸರದಲ್ಲಿ ಬಂದರೆ, ಅವು ವೈದೃಶ್ಯಪ್ರಸಾರ (Contrastive distribution)ದಲ್ಲಿವೆ ಎಂದರ್ಥ. ಅಂದರೆ ಇಲ್ಲಿ ಆ ಉಚ್ಚಾರಗಳಲ್ಲಿ ಎಲ್ಲ ಧ್ವನಿಗಳೂ ಒಂದೇ ಇದ್ದು ಕೇವಲ ಎರಡು ಧ್ವನಿಗಳು ಮಾತ್ರ ಭಿನ್ನವಾಗಿರುತ್ತವೆ..................ಈ ಕನಿಷ್ಠಯುಗ್ಮದಲ್ಲಿಯ ಎರಡು ಭಿನ್ನಧ್ವನಿಗಳೆಂದರೆ ಎರಡು ಸ್ವತಂತ್ರ ಧ್ವನಿಮಾಗಳು."[೧೧] ಹೀಗಿರಲು ವಚನದ

---

೯ ಕರ್ಣಾಟಕ ಭಾಷಾಭೂಷಣದ "ದ್ವಿಬಹ್ವೋರ್ನಸ್ಯಮಃ" (ಸೂತ್ರ ಸಂ. ೧೦೧) ಎಂಬ ಸೂತ್ರವೂ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ.

೧೦ ಶ. ಮ. ದ : ಸಂ. ಡಿ. ಎಲ್. ಎನ್. ಸೂತ್ರ ೨೬೧ರ ಪ್ರಯೋಗ ವಿವರಣೆ.

೧೧ ವರ್ಣನಾತ್ಮಕ ಭಾಷಾವಿಜ್ಞಾನ : ಡಾ. ಜೆ. ಎಸ್. ಕುಳ್ಳಿ. ಪುಟ. ೫೯.

ದೃಷ್ಟಿಯಿಂದ ಒಂದಕ್ಕೊಂದು ಭಿನ್ನವಾದ ಈ ಎರಡು ಗುಂಪುಗಳ ಸರ್ವನಾಮಗಳ ಕೊನೆಯಲ್ಲಿ (ಮತ್ತೆಲ್ಲೂ ವ್ಯತ್ಯಾಸವಿರದೆ) ಒಂದೇ ಉಚ್ಚಾರವಿರಲು ಸಾಧ್ಯವೇ?[೧೨] ಅವರ ಹೇಳಿಕೆಗಳಲ್ಲಿರುವ ಈ ಅಸಾಂಗತ್ಯಗಳು ಕನ್ನಡ ಉಚ್ಚಾರದಲ್ಲಿ ಬಿಂದು ಪ್ರವೇಶ ಪಡೆಯದಿರುವುದನ್ನೇ ಸೂಚಿಸುತ್ತವೆ ಎನ್ನಬಹುದು. ಆಳಕ್ಕಿಳಿದು ನೋಡಿದಾಗ ಕಂಡುಬರುವದಿಷ್ಟು : ಪದಮಧ್ಯದಲ್ಲಿ ಸ್ವರರಹಿತವಾಗಿ ಬಂದ ಅನುನಾಸಿಕಗಳ ಮತ್ತು ಪದಾಂತದಲ್ಲಿ ಬಂದ ಸ್ವರರಹಿತ ಮಕಾರಗಳ ಬರವಣಿಗೆಯ ಸೌಲಭ್ಯಕ್ಕಾಗಿ ಕನ್ನಡಿಗರು ಬಳಸಿಕೊಂಡ ಬರವಣಿಗೆಯ ಸಂಕೇತ ಬಿಂದು. ಆದುದರಿಂದ ಬಿಂದು ಬರೆಹದ ಸಂಕೇತಗಳ ಸಂಕೇತ[೧೩] ಎಂಬ ಅಭಿಪ್ರಾಯ ಸಮರ್ಪಕವಾಗಿದೆ.

ಗ್ರಾಂಥಿಕರೂಪವಿರುವ ಅರ್ಥಾತ್ ತನ್ನದೇ ಲಿಪಿಯಿರುವ ಇತರ ದ್ರಾವಿಡ ಭಾಷೆಗಳಲ್ಲೂ ಬಿಂದುವಿನ ಸ್ಥಿತಿಗತಿಯನ್ನು ಅವಲೋಕಿಸಿ ಕನ್ನಡದಲ್ಲಿ ಬಿಂದುವಿನ ಪ್ರಾಬಲ್ಯಕ್ಕೆ ಕಾರಣವಾದ ಹಿನ್ನೆಲೆಯನ್ನು ಊಹಿಸಬಹುದು. ತಮಿಳುಲಿಪಿಯಲ್ಲಿ ಬಿಂದುವಿಗೆ ಪ್ರವೇಶ ದೊರಕಿಲ್ಲ. ಅಲ್ಲಿ ಸ್ವರರಹಿತ ಅನುನಾಸಿಕಗಳು ಸ್ವರರಹಿತವಾಗಿ ಬರೆಯಲ್ಪಡುತ್ತವೆ. ಸಂಸ್ಕೃತ ವರ್ಣಮಾಲೆಯ ಎಲ್ಲ ಧ್ವನಿಗಳಿಗೂ ತನ್ನದೇ ಆದ ಸಂಕೇತಗಳನ್ನು ಬಳಸಿಕೊಂಡಿರುವ ಮಲೆಯಾಳ ಲಿಪಿಯಲ್ಲಿ ಬಿಂದುವಿದೆ. ಪದಾಂತದ 'ಮ್' ಮಾತ್ರ ಅಲ್ಲಿ ಬಿಂದುವಾಗಿ ಬರೆಯಲ್ಪಡುತ್ತದೆ.[೧೪] ಅಚ್ಚಮಲೆಯಾಳ ಶಬ್ದಗಳ ಹಾಗೂ ಸ್ವೀಕೃತ ಶಬ್ದಗಳ ಮಧ್ಯದಲ್ಲಿ ಬರುವ ಸ್ವರರಹಿತ ಅನುನಾಸಿಕಗಳು (ವರ್ಗಪಂಚಮಾಕ್ಷರಗಳು) ಬಿಂದುವಾಗಿಲ್ಲ. ಪದಮಧ್ಯದ ಸ್ವರರಹಿತ ಅನುನಾಸಿಕಗಳ ವಿಚಾರದಲ್ಲಿ ತೆಲುಗು ಕನ್ನಡವನ್ನೇ ಹೋಲುತ್ತದೆ. ಶಬ್ದಗಳೆಲ್ಲವೂ ಸ್ವರಾಂತವಾಗಿಯೇ ನಿಲ್ಲುವುದರಿಂದ ತೆಲುಗಿನಲ್ಲಿ ಪದಾಂತದಲ್ಲಿ ಅನುನಾಸಿಕಗಳು ಬಿಂದುವಾಗಲೆಡೆಯಿಲ್ಲ. ಕನ್ನಡದಂತೆ ತೆಲುಗು, ಮಲೆಯಾಳಗಳೂ ಅಂತಸ್ಥ ಮತ್ತು ಊಷ್ಮ ವರ್ಣಗಳ ಹಿಂದೆ

---

೧೨ ತುಳುಭಾಷೆಯಲ್ಲಿ ನಪುಂಸಕಲಿಂಗದ ಪ್ರಥಮಪುರುಷ ಸರ್ವನಾಮ 'ಅವು' ಎರಡು ವಚನಗಳಲ್ಲೂ ಒಂದೇ ವಿಧವಾಗಿ ವ್ಯವಹರಿಸುತ್ತದೆ. ತೆಲುಗಿನಲ್ಲಿ 'ಅದಿ' ಮತ್ತು ಹವ್ಯಕ ಕನ್ನಡದಲ್ಲಿ 'ಅದು'– ಇವೆರಡೂ ಅದು ಮತ್ತು ಅವಳು ಎಂಬ ಎರಡೆರಡು ಅರ್ಥವನ್ನು ಕೊಡುತ್ತವೆ. ಹೀಗಿದ್ದರೂ ಇದು ದ್ರಾವಿಡಭಾಷೆಯ ವಚನ ಮತ್ತು ಲಿಂಗ ವ್ಯವಸ್ಥೆಗೆ ಅನುಗುಣವಾಗಿಯೇ ಇರುವುದರಿಂದ ಇಲ್ಲಿ ಅಸಾಂಗತ್ಯಕ್ಕೆಡೆಯಿಲ್ಲ. ಆದರೆ ಉತ್ತಮಪುರುಷ ಮತ್ತು ಮಧ್ಯಮಪುರುಷಗಳಲ್ಲಿ ಸರ್ವನಾಮದ ಒಂದೇ ರೂಪ ಎರಡು ವಚನಗಳಲ್ಲಿ ಬರಲೆಡೆಯಿಲ್ಲ.

೧೩ ಕನ್ನಡಭಾಷೆಯಲ್ಲಿ ಬಿಂದು. ಡಾ. ಜೆ. ಎಸ್. ಕುಳ್ಳಿ. ಕರ್ನಾಟಕ ಭಾರತಿ. ೨-೧. ಪುಟ. ೭೦.

೧೪ 'ನಪುಂಸಕೇ ಮೋದಂತೇ'– ಲೀಲಾತಿಲಕಂ. ಸೂತ್ರ. ೩೧.
ಅಕಾರಾಂತ ನಪುಂಸಕ ಶಬ್ದದ ಮುಂದೆ 'ಮ್' ಎನ್ನುವ ಪ್ರತ್ಯಯ ಬರುತ್ತದೆ ಎಂದು ಈ ಸೂತ್ರದ ಅರ್ಥ. ಇದಕ್ಕೆ ಮರಂ. ಪಾಲಂ ಎಂದು ಬಿಂದು ಅಂತ್ಯವಾದ ಉದಾಹರಣೆಗಳನ್ನು ಕೊಡಲಾಗಿದೆ.

ಬಿಂದುವನ್ನು ಬಳಸುತ್ತವೆ. ಅಂತಹ ಶಬ್ದಗಳೆಲ್ಲ ಈ ಮೂರು ಭಾಷೆಗಳಲ್ಲೂ ಸಂಸ್ಕೃತದ ಸ್ವೀಕರಣಗಳಷ್ಟೆ (ಸ್ವಯಂವರ, ಸಿಂಹ, ಹಂಸ, ಇತ್ಯಾದಿ). ಹೀಗಿರಲು ಅಚ್ಚದ್ರಾವಿಡ ಶಬ್ದಗಳ ಮಧ್ಯದ ಸ್ವರರಹಿತ ಅನುನಾಸಿಕಗಳನ್ನು ಬರೆಯುವಲ್ಲಿ ತಮಿಳು ಮಲೆಯಾಳಗಳದ್ದು ಒಂದು ದಾರಿ, ಕನ್ನಡ ತೆಲುಗು ಭಾಷೆಗಳದ್ದು ಇನ್ನೊಂದು ದಾರಿ. ಪದಾಂತದ 'ಮ್'ಕಾರವನ್ನು ಬಿಂದುವಾಗಿ ಬರೆಯುವಲ್ಲಿ ಕನ್ನಡಭಾಷೆಯದು ತನ್ನದೇ ಪ್ರತ್ಯೇಕ ರೀತಿ. ಕನ್ನಡ ಬರವಣಿಗೆಯಲ್ಲಿರುವ ಬೇರೆ ಕೆಲವು ವೈಶಿಷ್ಟ್ಯಗಳಂತೆ[೧೫] ಇದೂ ಒಂದು ವೈಶಿಷ್ಟ್ಯವೆಂದಿಟ್ಟುಕೊಂಡರೂ ಇದು ಮೂಡಿಬರಲು ಯಾವ ಹಿನ್ನೆಲೆಯಿರಬಹುದೆಂದು ಊಹಿಸುವುದು ವಿಹಿತವಾಗಿದೆ.

ಸಂಸ್ಕೃತದಲ್ಲಿನ ಪದಾಂತದ ಮ್‌ಕಾರವು ಪ್ರಾಕೃತದಲ್ಲಿ ಹೆಚ್ಚಾಗಿ ಬಿಂದುವಾದುದು ಕಂಡುಬರುತ್ತದೆ.

ಉದಾ :	**ಸಂಸ್ಕೃತ**	**ಪ್ರಾಕೃತ**
	ಮಿತ್ರಮ್	ಮಿತ್ತಂ
	ಕಲತ್ರಂ	ಕಲತ್ತಂ
	ವಲ್ಕಲಮ್	ವಕ್ಕಲಂ
	ಯೌವನಮ್	ಜೊವ್ವಣಂ

ಪ್ರಾಕೃತದಲ್ಲಿ ಪದಾಂತದಲ್ಲಿ 'ಮ್' ಬಹಳ ಅಪೂರ್ವವಾಗಿ ಕಂಡುಬರುವುದು. ಸಂಸ್ಕೃತ ದಲ್ಲೂ ಪರಿಸರಕ್ಕೆ ಹೊಂದಿಕೊಂಡು ಪದಾಂತದ ಮ್ ಬಿಂದುವಾಗುತ್ತಿದ್ದುದನ್ನು ನೋಡಬಹುದು.

ಸಂಸ್ಕೃತಮ್	ಸಂಸ್ಕೃತಂ
ಪ್ರಾಕೃತಮ್	ಪ್ರಾಕೃತಂ
ಪ್ರಮಾಣಮ್	ಪ್ರಮಾಣಂ
ಏವಮ್	ಏವಂ
ಅಯಮ್	ಅಯಂ

ಹೀಗೆ ಸಂಸ್ಕೃತ – ಪ್ರಾಕೃತ ಭಾಷೆಗಳ ಬರವಣಿಗೆಯನ್ನನುಸರಿಸಿ ಬಹುಶಃ ಕನ್ನಡ ಮಲೆಯಾಳಗಳಲ್ಲಿ ಪದಾಂತದ 'ಮ್'ಬಿಂದುವಾಗಿರಬೇಕು. ಅಲ್ಲಿ ಉಚ್ಚಾರಕ್ಕೆ ಹೊಂದಿಕೊಂಡು ಬರವಣಿಗೆಯಲ್ಲಿ ಮಾತ್ರ ಕಂಡುಬಂದಿತು.

---

೧೫ ಕನ್ನಡ ಬರವಣಿಗೆಯಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳನ್ನು ಬರೆಯುವಲ್ಲಿ ಉಚ್ಚಾರದಲ್ಲಿ ಸ್ವರರಹಿತವಾಗಿರುವ ವ್ಯಂಜನ ಮತ್ತು ಸ್ವರಸಹಿತವಾಗಿರುವ ವ್ಯಂಜನ – ಇವೆರಡನ್ನೂ ಪರಸ್ಪರ ವಿರುದ್ಧವಾಗಿ ಬರೆಯುವುದು ರೂಢಿಯಷ್ಟೆ. ಉದಾ: ಕಿಟ್ಕಿರೆ, ಕಳ್ದೋನ್, ಗಟ್ದಿ.

ಕನ್ನಡ ಪದಾಂತದ 'ನ್'ಕಾರ ಬಿಂದುವಾಗುವಲ್ಲಿಯೂ ಪ್ರಾಕೃತ ಬರವಣಿಗೆಯ ಪ್ರಭಾವವಿದ್ದಿರಬೇಕೆಂದು ತೋರುತ್ತದೆ. ಸಂಸ್ಕೃತದಿಂದ ಪ್ರಾಕೃತಕ್ಕೆ ಬರುವಾಗ (ಅಲ್ಪಪ್ರಮಾಣದಲ್ಲಾದರೂ) ಕಂಡುಬರುವ ಪದಾಂತದ ನ್ಕಾರ ಬಿಂದು(೦)ವಾಗುವ ಪ್ರವೃತ್ತಿಯನ್ನು ಗಮನಿಸಬಹುದು.[೧೬]

ಸಂಸ್ಕೃತ	ಪ್ರಾಕೃತ
ಅಸ್ಮಿನ್	ಅಸ್ಸಿಂ
ಕಸ್ಮಿನ್	ಕಸಿಂ, ಕಹಿಂ
ಇತರಸ್ಮಿನ್	ಇಅರಸ್ಸಿಂ
ಭವಾನ್	ಭವಂ
ಭಗವಾನ್	ಭಗವಂ

ಕನ್ನಡ ಮತ್ತು ತೆಲುಗಿನಲ್ಲಿ ಮಾತ್ರ ಕಂಡುಬರುವ, ಶಬ್ದಮಧ್ಯದ ಸ್ವರರಹಿತ ಅನುನಾಸಿಕಗಳು ಬಿಂದುವಾಗುವುದಕ್ಕೂ ಪ್ರಾಕೃತವೇ ಕಾರಣವಾಗಿರಬೇಕು. ಅಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಇಂತಹ ಪರಿಸರದಲ್ಲಿ ಬಿಂದುವನ್ನೇ ಬಳಸಲಾಗುತ್ತದೆ.

ಸಂಸ್ಕೃತ	ಪ್ರಾಕೃತ
ಸೈನ್ಧವ	ಸಿಂಧವಂ
ಕಬನ್ಧ	ಕಮಂಧೋ
ಕುಮ್ಭಕಾರಃ	ಕುಂಭಾರೋ
ಶಙ್ಕರಃ	ಸಂಕರೋ

ಕನ್ನಡ ಮತ್ತು ತೆಲುಗು ಭಾಷಾಪ್ರದೇಶಗಳಲ್ಲಿ ಕ್ರಿ. ಶ. ಮೊದಲ ಶತಮಾನಗಳಲ್ಲಿ ಪ್ರಾಕೃತವು ರಾಜಭಾಷೆಯಾಗಿದ್ದುದನ್ನೂ ಜೈನ ಪಂಡಿತರು ಪ್ರಾಕೃತಭಾಷೆಯಲ್ಲಿ ಅಸಾಮಾನ್ಯ ವಿದಗ್ಧರಾಗಿದ್ದುದನ್ನೂ ನೆನೆದರೆ ಕನ್ನಡಾಭಷೆಯ ಉಳದ ಹೊಲವನ್ನು ಉತ್ತು ಬೆಳೆಯುವಲ್ಲಿ ಇದೇನೂ ಅಸಂಭವವಲ್ಲವೆಂದು ತೋರುತ್ತದೆ. ಕ್ರಿ.ಶ. ೧೪ನೆಯ ಶತಕದ ಕೊನೆಯವರೆಗೆ ಕನ್ನಡ ತೆಲುಗು ಲಿಪಿಗಳು ಒಂದೇ ಆಗಿದ್ದುದನ್ನೂ ಇಲ್ಲಿ ನೆನೆಯಬಹುದು. ಹೀಗೆ ಕನ್ನಡದಲ್ಲಿ ಸ್ವರರಹಿತ ಅನುನಾಸಿಕಗಳ ಸ್ಥಾನವನ್ನು ಆಕ್ರಮಿಸುವಲ್ಲಿ ಬಿಂದುವಿಗೆ ಸಹಾಯ-ಸಹಕಾರಗಳನ್ನಿತ್ತುದು ಸಂಸ್ಕೃತ-ಪ್ರಾಕೃತಗಳ ಬರವಣಿಗೆಯ ರೂಪವೆಂದೇ ಊಹಿಸಬಹುದು.

---

೧೬ ಸಂಸ್ಕೃತ ನಾಂತ ಶಬ್ದಗಳು ಪ್ರಾಕೃತದಲ್ಲಿ ಬಿಂದುವಾಗುವುದು ತೀರ ಕಡಿಮೆ. ಅವುಗಳು ಅಂತ್ಯಾದರ್ಶನಗೊಂಡೋ, ಓಕಾರಾಂತವಾಗಿಯೋ ಬಳಕೆಯಾಗುವುದು ಹೆಚ್ಚು. ಉದಾ: ಶ್ರೀನ್—ತಿಣ್ಣ; ಯೌವನವಾನ್—ಜೋವಣವಂತೋ; ಹನುಮಾನ್—ಹಣುಮಂತೋ.

ಕನ್ನಡದಲ್ಲಿ ಬಿಂದುವಿನ ಆಕ್ರಮಣವು ಏಕಕಾಲದಲ್ಲಿ ನಡೆದಂತೆ ತೋರುವುದಿಲ್ಲ. ಅಲ್ಲೂ ಬೆಳವಣಿಗೆಯಿದೆ. ಕನ್ನಡ ಶಾಸನಗಳ ಆಧಾರದಿಂದ ಈ ದಿಸೆಯಲ್ಲೂ ಊಹೆಯನ್ನು ಬೆಳಸಬಹುದು. ಹಲ್ಮಿಡಿ ಶಾಸನದಿಂದಲೇ ಉದಾಹರಣೆಗಳನ್ನು ಮೊದಲು ಮಾಡಬಹುದು. ಹಲ್ಮಿಡಿ ಶಾಸನ(ಕ್ರಿ. ಶ. ೪೫೦)ದಲ್ಲಿ ಕನ್ನಡ ಶಬ್ದಗಳ ಮಧ್ಯದಲ್ಲಿ ಬರುವ ಸ್ವರರಹಿತ ಅನುನಾಸಿಕ ವರ್ಣ ಬಿಂದುವಾಗಿಲ್ಲ.

ಸುತ**ನ್ಗೆ**; ಅಳಿವೊ**ನ್ಗೆ**, ಅರಸ**ನ್ಗೆ**, ಆಪತೊ**ನ್ದಿ** ವಿಟ್ಟಾರಕರ
ಪಶುಪತಿಯೆ**ನ್ದು**, ಸಟ್ಟಿಜ್ಗದರ್

ಕನ್ನಡ ಪದಾಂತದಲ್ಲಿರುವ 'ನ್' ಬಿಂದುವಾಗಿಲ್ಲ.

ಕಳ್ದೋ**ನ್**, ಮಹಾಪಾತಕ**ನ್**

ಕನ್ನಡ ಪದಾಂತದಲ್ಲಿ ಬರುವ 'ಮ್' (ವಿಭಕ್ತಿ ಮತ್ತು ಸಮುಚ್ಚಯದ) ಕಾರ ಬಿಂದುವಾಗಿದೆ.

ಪಲ್ಲವ**ರಂ**[೧೭], ಪಲ್ಲಡಿ**ಉಂ**, ಮೂಱುವಳಿ**ಉಂ**, ಇರ್ವ**ರುಂ**,
ವಿಜಾರಸ**ರುಂ**

ಪದಾಂತದಲ್ಲಿ 'ಮ್'ಕಾರ ಬಿಂದುವಾಗದಿರುವುದು ಒಂದೆಡೆ ಮಾತ್ರ.

ಮಹಾಪಾತಕ**ಮ್**

ಕ್ರಿ. ಶ. ೭೦೦ರ ಬಾದಾಮಿ ಶಾಸನ[೧೮]ದಲ್ಲಿ—
ನಾಲ್ಕು ಪಾದಗಳ ಕೊನೆಯಲ್ಲಿ 'ನ್'ಕಾರವೂ ಒಂದೆಡೆ ಬಿಂದುವೂ ಬಳಸಲ್ಪಟ್ಟಿದೆ.

ಕಪ್ಪೆಅರಭಟ್ಟ**ನ್**, ಶಿಷ್ಟಜನಪ್ರಿಯ**ನ್**
ಕಷ್ಟಜನವರ್ಜಿತ**ನ್**, ಕಲಿಯುಗ ವಿಪರೀತ**ನ್**
ಮಾಧೂ**ರ್ಯಂ**

ಪದಮಧ್ಯದಲ್ಲಿ ಕನ್ನಡಪದದ 'ನ್' ಬಿಂದುವಾದ ಒಂದೇ ಒಂದು ಉದಾಹರಣೆಯಿದೆ. ಮಿಕ್ಕ ನಾಲ್ಕೆಡೆಗಳಲ್ಲಿ ಸ್ವಸ್ವರೂಪದಲ್ಲಿಯೇ ಇದೆ.

....ಬ**ನ್ದು** .... ಮಗೆ**ನ್ದು** ಮಾಧೂರ್ಯ**ನ್ಗೆ** ....ಮದಜಿ**ನ್ತೆ**
ವಿಪರೀ**ತಂ**ಗಹಿತಕ್ಕ**ರ್ಗಳ್**

ಈ ಶಾಸನದ ಸಮಕಾಲೀನವಾದ ಶ್ರವಣಬೆಳುಗೊಳದ ಶಾಸನ[೧೯]ವೊಂದರಲ್ಲಿ ಪದಾಂತ 'ನ್'ಕಾರ ಸ್ವಸ್ವರೂಪದಲ್ಲೂ ಬಿಂದುವಾಗಿಯೂ ಬರೆಯಲ್ಪಟ್ಟಿದೆ.

೧೭ ಆ ಕಾಲದಲ್ಲಿ ದ್ವಿತೀಯಾ ವಿಭಕ್ತಿ 'ಅಂ' ಎಂದಾಗಲು ಆರಂಭವಾಗಿರಬೇಕು,

೧೮ ಕನ್ನಡ ಶಾಸನಸಂಪದ ಸಂ. ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಂ. ಕಲಬುರ್ಗಿ. ಪುಟ ೩.

೧೯ ಅದೇ, ಪುಟ ೪.

ನೆಱಿದೊನ್ ಸಿದ್ಧಿಯಾನ್
ನಡೆದೊಂ ಪೆಗ್ಗೊರನಂ

ಅದೇ ಕಾಲದ ಶ್ರವಣಬೆಳುಗೊಳದ ಇನ್ನೊಂದು ಶಾಸನ[೨೦]ದಲ್ಲಿ ಪದಾಂತದ 'ಮ್' ಕಾರ ಪೂರ್ಣವಾಗಿ (ಐದೆಡೆಗಳಲ್ಲಿ) ಬಿಂದುವಾಗಿದೆ.

ಬೇಗಂ, ಪಿರಿಗುಂ, ಅಗ್ಗರ್ಂ, ಪರಮಾರ್ತ್ಥಂ, ಸನ್ಯಾಸನಂ,

ಇಲ್ಲೂ ಪದಮಧ್ಯ 'ನ್'ಕಾರ ಮತ್ತು ಪದಾಂತ 'ನ್'ಕಾರ ಮುಂದುವರಿದಿದೆ.

....ವಾನೆನ್ದು , ಮುನಿವರನ್ದೇವಲೋಕ.... ಸನ್ದಾನ್

ಕಾಲಕಳೆದಂತೆ ಪದಾಂತದ ಮ್ ಅಪೂರ್ವವಾಗಿ ಅಲ್ಲೊಲ್ಲ ಬಿಂದು ಸಾಮಾನ್ಯ ವಾಗುತ್ತದೆ. ಪದಾಂತದ ನ್ ಕಾರ ಕ್ರಿ. ಶ. ೯೩೦ ರ ಸುಮಾರಿಗೆ ಪೂರ್ಣವಾಗಿ ಬಿಂದುವಾದಂತೆ ತೋರುತ್ತದೆ. ಕಳಸದ ಶಾಸನ[೨೧](ಕ್ರಿ. ಶ. ೯೩೦)ದಲ್ಲಿ ಪದಾಂತ ದಲ್ಲಿ 'ನ್' ಕಾರ ಕಂಡುಬರುವುದಿಲ್ಲ. ಪದಮಧ್ಯದ ಸ್ವರರಹಿತ ಅನುನಾಸಿಕಗಳು ಹೆಚ್ಚುಹೆಚ್ಚಾಗಿ ಬಿಂದುವಾಗುತ್ತಿದ್ದು ಕ್ರಿಸ್ತಶಕ ಸುಮಾರು ೧೩ ನೆಯ ಶತಕದ ಮಧ್ಯಭಾಗಕ್ಕಾಗುವಾಗ ಹೆಚ್ಚುಕಡಿಮೆ ಪೂರ್ಣವಾಗಿ ಬಿಂದುವಾದಂತೆ ತೋರುತ್ತದೆ. ಪಡಕೇನೂರ ಶಾಸನ[೨೨]ದಲ್ಲಿ ಅಂತಹ ಸಂದರ್ಭಗಳಲ್ಲಿ ಬಿಂದುವನ್ನೇ ಕಾಣುತ್ತೇವೆ.

ಹೀಗೆ ಬಿಂದು ಸ್ವರರಹಿತ ಅನುನಾಸಿಕಗಳನ್ನು ಆಕ್ರಮಿಸುವಲ್ಲಿ ಪ್ರಧಾನವಾಗಿ ಮೂರು ಹೆಜ್ಜೆಗಳನ್ನು ಗುರುತಿಸಬಹುದು.

೧ ಪದಾಂತದ 'ಮ್' > 'ಂ'
೨ ಪದಾಂತದ 'ನ್' > 'ಂ'
೩ ಪದಮಧ್ಯದ 'ಙ್' > 'ಂ'
,, 'ಞ್' > 'ಂ'
,, 'ಣ್' > 'ಂ'
,, 'ನ್' > 'ಂ'
,, 'ಮ್' > 'ಂ'

ಶಾಸನದಲ್ಲಿ ಹೀಗಿದ್ದರೂ ಹಳೆಗನ್ನಡದಲ್ಲಿ ಗ್ರಂಥರಚನೆ ಆರಂಭವಾದ ಕಾಲ ಕ್ಕಾಗಲೇ ಪದಾಂತದ ಮನಕಾರಗಳು ಬಿಂದುವಾಗಿದ್ದಿರಬೇಕು. ಆದುದರಿಂದಲೇ ಗಜಗ, ಗುಣನಂದಿ, ಅಸಗ ಮೊದಲಾದವರ ಪ್ರಯೋಗಗಳನ್ನು ಪ್ರಮಾಣವಾಗೆತ್ತಿ

೨೦ ಕನ್ನಡ ಶಾಸನಸಂಪದ : ಸಂ ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಂ. ಕಲಬುರ್ಗಿ, ಪುಟ ೪.

೨೧ ಅದೇ, ಪುಟ ೭.

೨೨ ಅದೇ, ಪುಟ ೯೮.

ಕೊಂಡ ನಾಗವರ್ಮ ಕೇಶಿರಾಜರು ಆರಂಭದಲ್ಲಿ ವಿವರಿಸಿದಂತೆ ಮಕಾರಗಳಿಗೆ ಬಿಂದುವನ್ನು ಆದೇಶವಾಗಿಸಬೇಕಾಯಿತು. ಹೀಗಿರಲು "ಪೂರ್ವದ ಹಳಗನ್ನಡದಲ್ಲಿ ಅನುಸ್ವಾರವಾಗುತ್ತದೆ"[೨೩] ಎಂಬ ಹೇಳಿಕೆ ಭಾಷೆಯ ಬರವಣಿಗೆಯ ರೂಪಕ್ಕೆ ಮಾತ್ರ ಹೊಂದಾಣಿಕೆಯಾಗುವುದು.

• •

೨೩ ಕನ್ನಡ ಭಾಷೆಯ ಚರಿತ್ರೆ : ಪ್ರ. ಗೋ ಕುಲಕರ್ಣಿ. ಪುಟ : ೧೮೨.

ಅರ್ಥ

• ಬಿ. ಎಂ. ರಮೇಶ್

ಓದು, ಕೆಲಸ, ಮನೆ, ಸ್ವಾರ್ಥ....ಓಹ್. ಎಷ್ಟೊಂದು ಸೆಣಸಾಟ! ಇವೆಲ್ಲವುಗಳಿಂದ ಸರಕ್ಕನೇ ಒಮ್ಮೆ ಜಾರಿಹೋಗುತ್ತೇನೆ. ಹುಟ್ಟಿಗೂ ಬದುಕಿಗೂ ಯಾವ ಅರ್ಥ, ಹೊಣೆ? ಸಾವಿಗೆ? ನಾವು ಸೃಷ್ಟಿಸಿಕೊಳ್ಳುವ ಅರ್ಥಗಳ, ಹೊಣೆಗಾರಿಕೆಯ ನಿರಾಳ ಆಕರ್ಷಣೆಗೆ ಒಮ್ಮೊಮ್ಮೆ ಮೂಕನಾಗಿದ್ದೇನೆ, ಇಲ್ಲವೆಂದಲ್ಲ. ಅದನ್ನೆಲ್ಲ ಸೈರಿಸಿಕೊಂಡರೂ, ಬದುಕಿನ ಪ್ರಲೋಭನೆ ಅವರವರ ವೈಯಕ್ತಿಕ ಪ್ರಶ್ನೆ.

ಎಲ್ಲವನ್ನು ನೋಡುತ್ತೇನೆ–ಒಳಗೆ ನಡೆಯುವುದನ್ನು, ಹೊರಗಿನದನ್ನು. ನಿರ್ಲಿಪ್ತತೆಗೆ ಅರ್ಥವಿಲ್ಲ, ಹುಟ್ಟಿನಷ್ಟೇ ಸಾವೂ ಸಹಜ. ಆದರೆ ಅವೆರಡರ ಮಧ್ಯಂತರ? ಬಟ್ಟೆ ಉಡುವುದು ಏತಕ್ಕೆ? ವ್ಯಭಿಚಾರ ಅಂದರೆ ಏನು? ಅಳು, ನಗು, ಗಾಂಭೀರ್ಯ ಎಲ್ಲಕ್ಕೂ ಒಳಗೆ ಹರಿಯೋ ರಕ್ತ ಕಾರಣ. ಎಲ್ಲರಲ್ಲೂ ರಕ್ತವಿದೆ, ಗುಂಡಿಗೆಯಿದೆ. ಹೆಣ್ಣಿನ ಅಂಗರಚನೆ ಬೇರೆ, ಗಂಡಿನದು ಬೇರೆ. ಇವರಿಬ್ಬರ ಸಂಯೋಜಿತಕ್ರಿಯೆಯಲ್ಲಿ ಆತ್ಮ ಅನ್ನುವುದು ಎಲ್ಲಿಂದ ಬಂತು? ಅದು ಇರೋದಾದರೂ ಎಲ್ಲಿ? ವೈಜ್ಞಾನಿಕವಾಗಿಯಂತೂ ಒಪ್ಪುವ ಮಾತಲ್ಲ. ಅಧ್ಯಾತ್ಮ, ದೇವರು, ದೇಶ, ಧರ್ಮ.... ಅಬ್ಬ, ಎಷ್ಟೊಂದು ಜಟಿಲಗೊಳ್ಳಲು ನಿರ್ಮಿತವಾದ ಶಬ್ದಗಳು!

ಕಿಟಕಿಯಾಚೆ ಯಾರೋ ಹೋಗುತ್ತಿದ್ದಾರೆ. ಎಷ್ಟು ಸೊಗಸಾಗಿದ್ದಾಳೆ! ನಮ್ಮ ಕಾಲನಿ ಹುಡುಗಿ? ಮತ್ತೊಮ್ಮೆ ನೋಡಬೇಕು. ಸದ್ಯ, ಅವಳು ನನ್ನ ನೋಡಲಿಲ್ಲ.

ಓಹ್, ಇಂದಿನ ಪ್ರಜಾವಾಣಿ. ಪವಾಡಗಳ ಕುರಿತು ವಿಶೇಷ ವರದಿ. ಅನುಮೋದನೆ, ಪ್ರತಿಭಟನೆ. ಯಾಕೆ ಈ ಎಲ್ಲಾ ತರಲೆ? ನಾನೂ ಖಂಡಿಸುತ್ತಿದ್ದೆ ಇದನ್ನೆಲ್ಲಾ. ಬೂದಿಯಿಂದ ಆಗೋದೇನು? ದೇವರ ಕಾಲು ನೆಲ ತಾಕೋದಿಲ್ಲವಂತಲ್ಲ! ಹೊರುವ ಭಕ್ತಜನ ಹೊತ್ತೇ ಇರುತ್ತಾರೆ ಇವರನ್ನ, ಜೀವಂತ! ಹುಟ್ಟಿನಂತೆ ಸಾವೂ ಎಲ್ಲರ ಇಡುಗಂಟು. ಅವುಗಳೆರಡರ ಅಂತರವನ್ನ ಹೇಗೋ ತುಂಬಬೇಕಲ್ಲ!

ಹೇಗೆ ಹುಟ್ಟುತ್ತೇವೆಯೋ ಹಾಗೆಯೇ ಬೆಳೆದು ಸತ್ತುಹೋಗುವುದಿಲ್ಲ ನಾವೆಲ್ಲ. ಬಟ್ಟೆ ಉಡುತ್ತೇವೆ. ನಗು ಬರುತ್ತದೆ. ಇತ್ತೀಚೆಗೆ ಕೆರೆಗೆ ಹೋಗೋ

ಹಾದೀಲಿ ಅದೇ ತಾನೆ ಹುಟ್ಟಿದ ಮಗುವನ್ನ ಎಸೆದಿದ್ರು ಯಾರೋ. ಮದುವೆಯಾಗದೇ ಮಕ್ಕಳನ್ನ ಹೆರೋದು ತಪ್ಪಂತೆ. ಹೆರಿಗೆ, ಮಕ್ಕಳು, ಜಡತೆ, ಚಾಲನೆ, ಕಣ್ಣು, ಕೈ, ಕಾಲು, ತಲೆ, ಮಿದುಳು....ಒಂದೇ ಹನಿಯಿಂದ ಇಷ್ಟೆಲ್ಲಾ,, ಓಹ್ ಸ್ಲೆಂಡಿಡ್ ! ಇದೆಲ್ಲ ಕ್ರಮದ ಅಭಿವೃದ್ಧಿ. ಇಂದಿನ ಗಳಿಗೆ ನಾಳೆಯಾಗುತ್ತದೆ, ತಿಂಗಳಾಗುತ್ತದೆ, ವರುಷ, ಯುಗ....ಸೂರ್ಯಗ್ರಹ ಉರಿಯುತ್ತಲೇ ಇರುತ್ತದೆ. ಯಾವಾಗ ಹೊತ್ತಿಕೊಂಡಿತೋ, ಮುಂದೇನಾಗುತ್ತದೋ ! ಎದೆ ಥಬ್ ಎನ್ನುತ್ತದೆ ! ಅದ್ಯಾರೋ ಮಹಾಪತಿವ್ರತೆ ಸೂರ್ಯನನ್ನೇ ಹಿಡಿದು ನಿಲ್ಲಿಸಿದ್ದಳಂತೆ, ಅಜ್ಜಿ ಹೇಳುತ್ತಾಳೆ ! ಹೂಂ ಅನ್ನದಿದ್ದರೆ ಕೋಪ ಆಕೆಗೆ. ಸತ್ತವರು ನಕ್ಷತ್ರವಾಗುತ್ತಾರಂತೆ. ಚಿಕ್ಕವಸಿದ್ದಾಗಿನಿಂದಲೂ ಹೇಳುತ್ತಲೇ ಇದ್ದಾಳೆ ಅಜ್ಜಿ. ಆಗ ಬಯಲುಮಾಳಿಗೆಯ ಮೇಲೆ ರಾತ್ರಿ ಅಂಗಾತಮಲಗಿ ತಾತ ಮುತ್ತಾತಂದಿರ ಚುಕ್ಕೆ ಎಣಿಸುತ್ತಾ ಯಾವಾಗ ನಿದ್ದೆ ಹೋಗುತ್ತಿದ್ದೆನೋ !

ಸಾವಿನ ಹಿನ್ನೆಲೆಯಲ್ಲಿ ಬದುಕನ್ನು ಸ್ಮರಿಸಿಕೊಳ್ಳುತ್ತಾ ಈಗ ರಾತ್ರಿ–ಹಗಲು ಏಕವಾಗಿಬಿಡುತ್ತವೆ.

• •

ವಿಜಯನಗರ ಕಾಲದ ಘಟನಾವಳಿ ಸೂಚಿ

• ಎಸ್. ರಾಜಶೇಖರ

[ವಿಜಯನಗರ ಸಾಮ್ರಾಜ್ಯವನ್ನಾಳಿದ ಬೇರೆಬೇರೆ ಅರಸುಮನೆತನಗಳ ಕಾಲದಲ್ಲಿ ೧೩೩೬-೧೫೭೦) ನಡೆದ ಅನೇಕ ಮಹತ್ವಪೂರ್ಣ ಘಟನೆಗಳನ್ನು ಒಂದೆಡೆ ಸಂಕಲನ ಮಾಡಿ ಕೊಡುವುದೇ ಈ ಸೂಚಿಯ ಮುಖ್ಯ ಉದ್ದೇಶ. ಇದನ್ನು ಸಿದ್ಧಪಡಿಸುವಲ್ಲಿ ವಿಜಯನಗರದ ಬಗೆಗೆ ಪ್ರಕಟವಾಗಿರುವ ಶಾಸನ ಸಂಪುಟಗಳ ಮತ್ತು ಗ್ರಂಥಗಳ ಸಹಾಯ ಪಡೆಯಲಾಗಿದೆ. ಅವುಗಳ ಹೆಸರುಗಳನ್ನು 'ಸೂಚಿ'ಯ ಕೊನೆಗೆ ಕೊಡಲಾಗಿದೆ].

೧೩೩೬ ಮೊದಲನೆಯ ಹರಿಹರ ಹಾಗೂ ಅವನ ಸಹೋದರರಿಂದ ಸಂಗಮವಂಶದ ರಾಜ್ಯ ಸ್ಥಾಪನೆ;

— ಮೊದಲನೆಯ ಹರಿಹರನಿಂದ ಬಾರಕೂರಿನಲ್ಲಿ ಕೋಟೆ ನಿರ್ಮಾಣ.

೧೩೩೮ ಹೊಯ್ಸಳ ಮುಮ್ಮಡಿ ವೀರಬಲ್ಲಾಳನಿಂದ ಬಾರಕೂರು ಕೋಟೆಯ ವೀಕ್ಷಣೆ; ಕೋಟೆಯ ಕಾವಲಿಗೆ ಅಂಕೆಯ ನಾಯಕನ ನೇಮಕ.

೧೩೩೯ ವೀರವಿಜಯಪುರದಲ್ಲಿ ಮುಮ್ಮಡಿ ವೀರಬಲ್ಲಾಳ;

— ಮೊದಲನೆಯ ಹರಿಹರನು ಗುತ್ತಿ ಪ್ರದೇಶವನ್ನು ಆಳುತ್ತಿದ್ದುದು.

— ರಾಜನಾರಾಯಣ ಸಂಭುವರಾಯನ ಪಟ್ಟಬಂಧ.

೧೩೪೦ ಮೊದಲನೆಯ ಹರಿಹರ ನೆಲಮಂಗಲ ಪ್ರದೇಶದಲ್ಲಿ;

— ಮೊದಲನೆಯ ಹರಿಹರನ ಅಧಿಕಾರಿ ಚಾಮರಾಜನು ಬಾದಾಮಿಯಲ್ಲಿ ಕೋಟೆ ಕಟ್ಟಿಸಿದ್ದು;

— ವಿರೂಪಾಕ್ಷ ಬಲ್ಲಾಳನ ಯುವರಾಜ ಪಟ್ಟಬಂಧೋತ್ಸವ;

— ಮುಮ್ಮಡಿ ಬಲ್ಲಾಳನು ಉಣ್ಣಾಮಲೈದಲ್ಲಿ ತಂಗಿದ್ದು.

೮-೯-೧೩೪೨ ಕಣ್ಣಾನೂರು ಯುದ್ಧ;

— ಮಧುರೆಯ ಸುಲ್ತಾನ ಘಿಯಾಸುದ್ದೀನನಿಂದ ಮುಮ್ಮಡಿ ಬಲ್ಲಾಳನ ಸೋಲು ಮತ್ತು ಸಾವು.

೧೩೪೩ (Aug.) ವಿರೂಪಾಕ್ಷ ನಾಲ್ವಡಿ ಬಲ್ಲಾಳನ ಪಟ್ಟಬಂಧೋತ್ಸವ.

— ಸಂಗಮವಂಶದವರ ಮೇಲೆ ಬಲ್ಲಪ್ಪ ದಣ್ಣಾಯಕನ ವಿಜಯಸಾಧನೆ.

೧೩೪೬ ನಾಲ್ವಡಿ ಬಲ್ಲಾಳನ ಸಾವು ಮತ್ತು ಹೊಯ್ಸಳರ ಆಳ್ವಿಕೆಯ ಅಂತ್ಯ;

— ಬಲ್ಲಪ್ಪ ದಣ್ಣಾಯಕನು ಮೊದಲನೆಯ ಹರಿಹರನ ಮಗಳನ್ನು ಮದುವೆಯಾದದ್ದು;

— ವಿಜಯನಗರದ ಸೇವೆಯಲ್ಲಿ ಬಲ್ಲಪ್ಪದಣ್ಣಾಯಕನು ಪ್ರವೇಶ ಪಡೆದದ್ದು;

— ವಿಜಯೋತ್ಸವದ ಅಂಗವಾಗಿ ಸಂಗಮಸಹೋದರರು ಬಲ್ಲಪ್ಪದಣ್ಣಾಯಕ ಹಾಗೂ ಇತರರೊಂದಿಗೆ ಶೃಂಗೇರಿಗೆ ದರ್ಶನಕೊಟ್ಟದ್ದು.

೩.೮.೧೩೪೭ ಅಲ್ಲಾವುದ್ದೀನ ಹಸನ್ ಬಹಮನೀ ಶಹನಿಂದ ಬಹಮನೀ ರಾಜ್ಯ ಸ್ಥಾಪನೆ.

೧೩೫೦ ಕೊಂಡವೀಡುವಿನ ರೆಡ್ಡಿಕುಲದ ಅನಪೋತನ ಪಟ್ಟಬಂಧೋತ್ಸವ.

೧೩೫೨ ಮೊದಲನೆಯ ಬುಕ್ಕನು ದೋರಸಮುದ್ರದ ಮಂಡಲಾಧಿಪತಿಯಾದದ್ದು;

— ಮೊದಲನೆಯ ಬುಕ್ಕನ ಮಗ ಕುಮಾರ ಕಂಪಣನು ತಿರುವಣ್ಣಾಮಲೈ ಸುತ್ತುಮುತ್ತಲಿನ ಪ್ರದೇಶವನ್ನು ವಶಪಡಿಸಿಕೊಂಡದ್ದು.

೧೩೫೫ ಉದಯಗಿರಿಯ ಮಂಡಲಾಧಿಪತಿಯೂ ಮೊದಲನೆಯ ಹರಿಹರನ ಸಹೋದರನೂ ಆದ ಕಂಪಣನ ಮರಣ.

೧೩೫೬ ಮೊದಲನೆಯ ಹರಿಹರನ ಮರಣ;

— ಮೊದಲನೆಯ ಬುಕ್ಕನ ಪಟ್ಟಬಂಧ;

— ಮೊದಲನೆಯ ಬುಕ್ಕನ ಶೃಂಗೇರಿ ಭೆಟ್ಟಿ;

— ಮೊದಲನೆಯ ಬುಕ್ಕನ ವಿನಂತಿಯ ಮೇರೆಗೆ ವಿದ್ಯಾರಣ್ಯರು ವಾರಣಾಸಿಯಿಂದ ಶೃಂಗೇರಿಗೆ ಮರಳಿ ಬಂದುದು.

ಸುಮಾರು ೧೩೫೬ ಶೃಂಗೇರಿಯಲ್ಲಿ ವಿದ್ಯಾಶಂಕರ ದೇವಾಲಯದ ನಿರ್ಮಾಣ.

೧೧-೨-೧೩೫೮ ಅಲ್ಲಾವುದ್ದೀನ ಹಸನ್ ಬಹಮನ್ ಶಹಾನ ಮರಣ.

೧೩-೨-೧೩೫೮ ಮೊದಲನೆಯ ಮಹಮ್ಮದನು ಬಹಮನಿ ಸಿಂಹಾಸನವನ್ನೇರಿದುದು.

೧೩೫೯ ಕೇಶವವರ್ಣಿ 'ಗೊಮ್ಮಟಸಾರಕ್ಕೆ' ವಿವರಣಾತ್ಮಕ ಟೀಕು ಬರೆದದ್ದು.

೧೩೬೦ ಸಾಯಣಾಚಾರ್ಯ, ಮಾಧವಾಚಾರ್ಯ ಮೊದಲಾದವರಿಂದ, ವೇದಭಾಷ್ಯ ರಚನಾರಂಭ.

ಸುಮಾರು ೧೩೬೦ ಮೊದಲನೆಯ ಮಂಗರಾಜನಿಂದ 'ಖಗೇಂದ್ರಮಣಿದರ್ಪಣ'ದ ರಚನೆ.

೧೩೬೨ ಕೊಂಡವೀಡುವಿನ ಅನಪೋತನ ಮರಣ ಮತ್ತು ಅನವೇಮನ ಸಿಂಹಾಸನಾರೋಹಣ.

೧೩೬೨ (ಅಕ್ಟೋಬರ್-ಡಿಶೆಂಬರ್) ಕುಮಾರಕಂಪಣನು ಸಂಭುವರಾಯನ ಪ್ರದೇಶವನ್ನು ವಶಪಡಿಸಿಕೊಂಡುದು; ಮತ್ತು ಸೋವಣ್ಣ ದಂಡನಾಯಕನ ಮಗನಾದ ಗಂಡರಗೂಳಿ ಮಾರಯ್ಯನಾಯಕನು ರಾಜನಾರಾಯಣ ಸಂಭುವರಾಯನನ್ನು ಸೆರೆಹಿಡಿದದ್ದು; ಚಿಂಗಲ್‌ಪುಟ್, ಉತ್ತರ ಆರ್ಕಾಟ್ ಹಾಗೂ ದಕ್ಷಿಣ ಆರ್ಕಾಟ್‌ದ ಕೆಲವು ಪ್ರದೇಶಗಳನ್ನು ವಿಜಯನಗರ ಪ್ರದೇಶಕ್ಕೆ ಸೇರಿಸಿದುದು.

೧೩೬೩ ರಾಜನಾರಾಯಣ ಸಂಭುವರಾಯನ ಮೇಲೆ ಕಂಪಣನು ಸಾಧಿಸಿದ ವಿಜಯದ ಸ್ಮಾರಕವಾಗಿ ಗಂಡರಗೂಳಿ ಮಾರಯ್ಯನಾಯಕನು ಅಣ್ಣಮಂಗಲಪಜ್ಜುವಿನಲ್ಲಿರುವ ಕುಳಿಂದೈಯಾಂಡಾರ್ ದೇವಾಲಯದ ಎರಡನೆಯ ಪ್ರಾಕಾರದಲ್ಲಿ ಗೋಪುರವನ್ನು ಕಟ್ಟಿಸಿದುದು.

೧೩೬೫ ಅಭಿನವಶ್ರುತಮುನಿಯಿಂದ 'ಸಜ್ಜನಚಿತ್ತವಲ್ಲಭ'ವೆಂಬ ಟೀಕುವಿನ ರಚನೆ.

೧೩೬೬ ಕುಮಾರಕಂಪಣ ಕೊಂಗು ಪ್ರದೇಶವನ್ನು ಗೆದ್ದುದು;

— ಮೊದಲನೆಯ ಹರಿಹರನ ಸಹೋದರ ಮಾರಪ್ಪನಿಂದ ಗೋವೆಯ ಮೇಲೆ ದಾಳಿ, ಹಾಗೂ ಮುಸ್ಲಿಮರಿಂದ ಅದನ್ನು ವಶಪಡಿಸಿಕೊಂಡದ್ದು.

೧೩೬೬-೬೭ ರಾಯಚೂರ ದುಅಬ ಸ್ವಾಧೀನಕ್ಕಾಗಿ ಮೊದಲನೆಯ ಮುಹಮ್ಮದ ಶಹಾ ಹಾಗೂ ಮೊದಲನೆಯ ಬುಕ್ಕರ ನಡುವೆ ನಡೆದ ಕದನ.

೧೩೬೭ ಗುಲ್ಬರ್ಗಾದ ಜುಮ್ಮಾ ಮಸೀದೆಯ ನಿರ್ಮಾಣಕಾರ್ಯ ಮುಕ್ತಾಯಗೊಂಡದ್ದು.

೧೩೬೮ ಮೊದಲನೆಯ ಬುಕ್ಕರಾಯನು ಜೈನ ಮತ್ತು ಶ್ರೀವೈಷ್ಣವರ ನಡುವಿನ ಕಲಹವನ್ನು ನಿವಾರಿಸಿ, ಧಾರ್ಮಿಕ ಶಾಂತಿ ಸ್ಥಾಪಿಸಿದುದು.

ಸುಮಾರು ೧೩೬೯ ಭೀಮಕವಿಯಿಂದ 'ಬಸವಪುರಾಣ' ರಚನೆಗೊಂಡುದು.

೧೩೭೧ (ಎಪ್ರಿಲ್-ಮೇ) ಕುಮಾರಕಂಪಣನು ಮಧುರೆಯ ಸುಲ್ತಾನ ಫಕ್ರುದ್ದೀನ ಮುಬಾರಕ್ ಶಹಾನನ್ನು ಸೋಲಿಸಿ ಮಧುರೆಯನ್ನು ವಶಪಡಿಸಿಕೊಂಡದ್ದು.

೧೩೭೧ ವಿಜಯನಗರದ ಗೋಪಣಾರ್ಯನು ಶ್ರೀರಂಗಂ ವಶಪಡಿಸಿಕೊಂಡದ್ದು;

೧೩೬೦ ಶ್ರೀರಂಗಂದಲ್ಲಿ ರಂಗನಾಥನ ಮೂರ್ತಿಯನ್ನೂ, ಚಿದಂಬರಂದಲ್ಲಿ ತಿಲ್ಲಾಯ್ ಗೋವಿಂದರಾಜನ ಮೂರ್ತಿಯನ್ನೂ ಪುನಃ ಪ್ರತಿಷ್ಠಾಪಿಸಿದ್ದು;

— ವೇದಾಂತದೇಶಿಕರ ಮರಣ.

೧೩೭೪ ಚೀನಾದ ಮಿಂಗ್ ದೊರೆ ತಾಯ್‌ತ್ಸುವಿನ ಅಸ್ಥಾನಕ್ಕೆ ಮೊದಲನೆಯ ಬುಕ್ಕನ ರಾಯಭಾರಿಯ ಭೇಟಿ.

೧೩೭೪ (ಅಕ್ಟೋಬರ್–ಡಿಶೆಂಬರ್) ಕುಮಾರ ಕಂಪಣನ ಮರಣ.

೧೩೭೫ ಶೃಂಗೇರಿಯಲ್ಲಿ ವಿದ್ಯಾತೀರ್ಥರ ದೇಹಾಂತ;

— ವಿದ್ಯಾರಣ್ಯರು ಶೃಂಗೇರಿ ಮಠಾಧೀಶರಾದುದು;

— ಮೊದಲನೆಯ ಮಹಮ್ಮದ ಶಹಾನ ಮರಣ ಹಾಗೂ ಬಹಮನಿ ಸಿಂಹಾಸನಕ್ಕೆ ಮುಜಾಹಿದ್ ಶಹಾ ಬಂದುದು.

೧೩೭೭ ಮೊದಲನೆಯ ಬುಕ್ಕನ ಮರಣ ಹಾಗೂ ವಿಜಯನಗರ ಸಿಂಹಾಸನವನ್ನು ಇಮ್ಮಡಿ ಹರಿಹರ ಏರಿದುದು;

— ಬಾರಕೂರು ರಾಜ್ಯಕ್ಕೆ ಬೊಮ್ಮರಸ ಒಡೆಯನನ್ನು ಹಾಗೂ ಮಂಗಳೂರು ರಾಜ್ಯಕ್ಕೆ ಪಂಡರಿದೇವನನ್ನು ಮಂಡಲಾಧಿಪತಿಗಳೆಂದು ನೇಮಿಸಿದ್ದು;

— ಸಾಯಣಾಚಾರ್ಯನ ಮರಣ.

೧೬.೪.೧೩೭೮ ಮುಜಾಹಿದ್‌ಶಹಾನ ಕೊಲೆ.

೨೧.೫.೧೩೭೮ ಇಮ್ಮಡಿ ಮಹಮ್ಮದಶಹ ಬಹಮನಿ ಸಿಂಹಾಸನವನ್ನೇರಿದುದು.

೧೩೭೮ ಇಮ್ಮಡಿ ಹರಿಹರನ ಮಗ ಮೊದಲನೆಯ ದೇವರಾಯನನ್ನು ಉದಯಗಿರಿ ರಾಜ್ಯಕ್ಕೆ ಮಂಡಲಾಧಿಪತಿಯೆಂದು ನೇಮಿಸಿದ್ದು.

೧೩೭೯ ಮಾದರಸನನ್ನು ಮಂಗಳೂರು ರಾಜ್ಯಕ್ಕೆ ಮಂಡಲೇಶ್ವರನೆಂದು ನೇಮಿಸಿದ್ದು.

೧೩೮೦ ಬಾರಕೂರುವಿನಲ್ಲಿ ಭೈರಸನಾಯಕನಿಂದ ದಂಗೆ, ಅದನ್ನು ಇಮ್ಮಡಿ ಹರಿಹರನ ಮಗ ಇಮ್ಮಡಿ ಬುಕ್ಕನು ಹತ್ತಿಕ್ಕಿದ್ದು;

— ಆದವಾನಿ ಬಹಮನೀಯರಿಗೆ ವಶವಾದುದು ಹಾಗೂ ಮಲ್ಲಪ್ಪ ಒಡೆಯನ ಮಗ ಚನ್ನಪ್ಪನು ಅದನ್ನು ಪುನಃ ಗೆದ್ದುದು;

— ವೇದಭಾಷ್ಯದ ಮುಕ್ತಾಯ.

ಸುಮಾರು ೧೩೮೧ ಇಮ್ಮಡಿ ಹರಿಹರನ ಮಂತ್ರಿ ವೀರ ವಸಂತ ಮಾಧವರಾಯನು ಗೋವೆಯನ್ನು ವಶಪಡಿಸಿಕೊಂಡುದು.

೧೩೮೨ ಬಾರಕೂರು ರಾಜ್ಯಕ್ಕೆ ಜಕ್ಕನ ಒಡೆಯನು ಮಂಡಲೇಶ್ವರನಾಗಿ ನೇಮಕಗೊಂಡುದು.

೧೩೮೨-೮೫ ಇಮ್ಮಡಿ ಹರಿಹರನು ಶ್ರೀಶೈಲ ಮತ್ತು ತ್ರಿಪುರಾಂತಕಗಳನ್ನು ವಶಪಡಿಸಿಕೊಂಡದ್ದು.

೧೩೮೩ ಕುಮಾರಕಂಪ (ಇಮ್ಮಡಿ ಹರಿಹರನ ಮಗ)ನು ಆನೆಗೊಂದಿಯ ದಾರಿಯಲ್ಲಿ ತುಂಗಭದ್ರಾ ನದಿಯನ್ನು ದಾಟಲು ಹಾಯ್ಗಡ ಕಟ್ಟಿಸಿದ್ದು;
— ಕುಮಾರಗಿರಿರೆಡ್ಡಿಯು ಕೊಂಡವೀಡು ಸಿಂಹಾಸನವನ್ನೇರಿದುದು.

ಸುಮಾರು ೧೩೮೪ 'ಹರವಿಲಾಸಮು' ಗ್ರಂಥದ ಕರ್ತೃ ಶ್ರೀನಾಥನ ಜನನ.

೧೩೮೪ ಕೋಥಕುಂಡದಲ್ಲಿ ಬಹಮನಿ ಸೈನ್ಯದ ಪರಾಜಯ;
— ಕೋಥಕುಂಡ ಯುದ್ಧದಲ್ಲಿ ಇಮ್ಮಡಿ ಹರಿಹರನ ಮಾವ ಸಾಳುವ ರಾಮದೇವ ಮಡಿದುದು.

೧೩೮೮ ಇರುಗಪ್ಪನಾಯಕನಿಂದ ವಿಜಯನಗರದಲ್ಲಿ ಕುಂಥುನಾಥ ಬಸದಿಯ ನಿರ್ಮಾಣ;
— ಇಮ್ಮಡಿ ಹರಿಹರನು ಅದ್ದಂಕಿ ಮತ್ತು ಮೋಟುಪಲ್ಲಿಯವರೆಗಿನ ಕರಾವಳಿ ಪ್ರದೇಶವನ್ನು ವಶಪಡಿಸಿಕೊಂಡುದು;
— ಕುಮಾರಗಿರಿರೆಡ್ಡಿ ಹಾಗೂ ಇಮ್ಮಡಿ ಹರಿಹರರ ನಡುವೆ ಒಪ್ಪಂದ;
— ಕಾಟಯವೇಮನ ಮಗ ಕಾಟಪ್ರಭು. ಇಮ್ಮಡಿ ಹರಿಹರನ ಮಗಳನ್ನು ಮದುವೆಯಾದುದು;
— ಇಮ್ಮಡಿ ಹರಿಹರನ ಮಗ ಇಮ್ಮಡಿ ವಿರೂಪಾಕ್ಷನು ತುಂಡೀರ, ಚೋಳ ಮತ್ತು ಪಾಂಡ್ಯ ನಾಡುಗಳಲ್ಲಿ ಎದ್ದ ದಂಗೆಗಳನ್ನು ಹತ್ತಿಕ್ಕಿದುದು;
— ಮಂಗಳೂರು ರಾಜ್ಯಕ್ಕೆ ವೀರಚಂದರಸ ಒಡೆಯನನ್ನು ಮಂಡಲೇಶ್ವರನೆಂದು ನೇಮಿಸಿದುದು.

೧೩೮೫-೮೬ ಇಮ್ಮಡಿ ವಿರೂಪಾಕ್ಷನು ಸಿಂಹಳವನ್ನು ವಶಪಡಿಸಿಕೊಂಡದ್ದು.

೧೩೮೬ ವಿದ್ಯಾರಣ್ಯರ ದೇಹಾಂತ;
— ಬಾರಕೂರು ರಾಜ್ಯಕ್ಕೆ ಮಲ್ಲಪ್ಪ ಒಡೆಯನನ್ನು ಮಂಡಲೇಶ್ವರನೆಂದು ನೇಮಿಸಿದ್ದು.

೧೩೯೦ ದಂಡನಾಥ ಗುಂಡ ಹಾಗೂ ಮೊದಲನೆಯ ದೇವರಾಯನ ನೇತೃತ್ವದಲ್ಲಿ ವಿಜಯನಗರ ಸೈನ್ಯವು ತೆಲಂಗಾಣ ಪ್ರದೇಶದ ಮೇಲೆ ದಂಡೆತ್ತಿ ಹೋದುದು.

೧೩೯೦-೯೧ ಡೆಕ್ಕನ್ ಮತ್ತು ದಕ್ಷಿಣಭಾರತದಲ್ಲಿ ಭೀಕರ ಬರಗಾಲ.

೧೩೯೧ ಚೌಲ್, ದಾಭೋಲ್ ಹಾಗೂ ಖಾರೆ ಪಟ್ಟಣಗಳನ್ನು ವಿಜಯನಗರ ಸೈನ್ಯ ವಶಪಡಿಸಿಕೊಂಡುದು.

೧೩೯೪ ಇರುಗಪ್ಪ ದಂಡನಾಯಕನು ಕುಣಿಗಲ್ಲಕೆರೆಗೆ ತೂಬು ಕಟ್ಟಿದುದು.

೧೩೯೭ ಇಮ್ಮಡಿ ಹರಿಹರನ ರಾಣಿ ಬುಕ್ಕವ್ವೆ, ಇರುಗಪ್ಪ ದಂಡನಾಯಕನು ರಾಜಧಾನಿಯಲ್ಲಿ ಕಟ್ಟಿಸಿದ ಬಸದಿಗೆ ದತ್ತಿಬಿಟ್ಟದ್ದು.

೧೬.೧೧.೧೩೯೭ ತಾಜುದ್ದೀನ್ ಫಿರೋಜನು ಬಹಮನಿ ಸಿಂಹಾಸನವನ್ನಲಂಕರಿಸಿದುದು.

೧೩೯೭ ಇಮ್ಮಡಿ ಬುಕ್ಕನಿಂದ ಪಾನಗಲ್ ಕೋಟೆಯ ಮುತ್ತಿಗೆ.

೧೩೯೮ ಅಭಿನವಮಂಗರಾಜನಿಂದ 'ಮಂಗಾಭಿದಾನ' ಗ್ರಂಥ ರಚನೆಗೊಂಡುದು;

— ಇಮ್ಮಡಿ ಬುಕ್ಕನು ಪಾನಗಲ್ ಕೋಟೆಯುನ್ನು ವಶಪಡಿಸಿಕೊಂಡುದು.

೧೩೯೮-೯೯ ಫಿರೋಜಶಹಾ ಮತ್ತು ಇಮ್ಮಡಿ ಹರಿಹರರ ನಡುವೆ ಕದನ.

೧೩೯೯ ಫಿರೋಜಶಹಾನಿಂದ ವಿಜಯನಗರದ ಮೇಲೆ ನಿರರ್ಥಕದಾಳಿ.

ಸುಮಾರು ೧೪೦೦ ಆಯತವರ್ಮನಿಂದ 'ರತ್ನಕರಂಡಕ' ಮತ್ತು ಚಂದ್ರಕೀರ್ತಿಯಿಂದ 'ಪರಮಾಗಮಸಾರ' ಗ್ರಂಥಗಳ ರಚನೆ.

೧೪೦೨-೧೪೦೩ ಕಾವೇರಿಯ ಪ್ರವಾಹದಿಂದಾಗಿ ತಂಜಾವೂರು ಪ್ರದೇಶದ ಬಹುಭಾಗ ನೀರಲ್ಲಿ.

೧೪೦೩ ಕೊಂಡವೀಡುವಿನ ಕುಮಾರಗಿರಿ ರೆಡ್ಡಿಯ ಸಾವು ಹಾಗೂ ರಾಜ್ಯ ವಿಭಜನೆ.

೩೦.೮.೧೪೦೪ ಇಮ್ಮಡಿ ಹರಿಹರನ ಮರಣ.

೧೪೦೪ ಇಮ್ಮಡಿ ಹರಿಹರನ ಮರಣಾನಂತರ ವಿಜಯನಗರ ಸಿಂಹಾಸನಕ್ಕಾಗಿ ಇಮ್ಮಡಿ ಬುಕ್ಕ ಹಾಗೂ ಇಮ್ಮಡಿ ವಿರೂಪಾಕ್ಷರಲ್ಲಿ ಯಾದವೀಕಲಹ. ಇಮ್ಮಡಿ ಬುಕ್ಕನ ಸೋಲು, ಇಮ್ಮಡಿ ವಿರೂಪಾಕ್ಷನ ಸಿಂಹಾಸನಾರೋಹಣ.

೧೪೦೫ ಇಮ್ಮಡಿ ವಿರೂಪಾಕ್ಷನನ್ನು ತಳ್ಳಿ, ಇಮ್ಮಡಿ ಬುಕ್ಕನ ಸಿಂಹಾಸನಾರೋಹಣ.

೧೪೦೫-೬ ಗೋಪೆಯ ಬಾಚಪ್ಪ ಒಡೆಯನನ್ನು ಬಾರಕೂರುರಾಜ್ಯ ಹಾಗೂ ಮಂಗಳೂರುರಾಜ್ಯಗಳಿಗೆ ಮಂಡಳೇಶ್ವರನೆಂದು ನೇಮಿಸಿದ್ದು.

೭.೧೧.೧೪೦೬ ಮೊದಲನೆಯ ದೇವರಾಯ, ವಿಜಯನಗರ ಸಿಂಹಾಸನವನ್ನೇರಿದುದು.

೧೪೦೬ ಪೆರ್ತಾಲ ಪ್ರಸಂಗ ಮತ್ತು ರಾಯಚೂರು ಪ್ರದೇಶವನ್ನು ಬಹಮನಿಯ ಫಿರೋಜಶಹನು ಮುತ್ತಿದುದು;
— ಮುಳುಬಾಗಿಲು ರಾಜ್ಯಕ್ಕೆ ವಿಜಯರಾಯನು ಮಂಡಳೇಶ್ವರನಾದುದು.

೧೪೦೬-೭ ಕೊಂಡವೀಡುವಿನ ಮಲ್ಲಾರೆಡ್ಡಿಯು ಉದಯಗಿರಿ ರಾಜ್ಯವನ್ನು ಮುತ್ತಿದುದು ಹಾಗೂ ಪೊತ್ತಪಿನಾಡು ಮತ್ತು ಪುಲುಗುಲನಾಡುಗಳನ್ನು ವಶಪಡಿಸಿಕೊಂಡುದು.

೧೪೧೦ ಕಾಟಯವೇಮನು 'ಅಹೋಬಿಲಂ' ಸಂದರ್ಶಿಸಿದ್ದು;
— ಬುಲ್ಲಪ್ಪನಿಂದ ಹರಿದ್ರಾನದಿಗೆ ಹಂದರದ ಬಳಿ ಆಣೆಕಟ್ಟಿನ ನಿರ್ಮಾಣ;
— ಮೊದಲನೆಯ ದೇವರಾಯನ ರಾಣಿ ಭೀಮಾದೇವಿಯು ಶ್ರವಣಬೆಳ್ಗೊಳದ ಮಾಂಗಾಯಿ ಬಸದಿಯಲ್ಲಿ ಶಾಂತಿನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಿದುದು;
— ಸಂಗಮವಂಶದ ರಾಜಕುಮಾರ ದೇಪರಾಜನಿಂದ 'ಸೊಬಗಿನಸೋನೆ'ಕೃತಿ ರಚನೆ.

೧೪೧೧ ಮಹಮ್ಮದ ಗವಾನನ ಜನನ.

೧೪೧೩ ಮೊದಲನೆಯ ದೇವರಾಯನು ಪೊತ್ತಪಿನಾಡು ಹಾಗೂ ಪುಲುಗುಲ ನಾಡಗಳನ್ನು ಪುನಃ ವಶಪಡಿಸಿಕೊಂಡದ್ದು.

೧೪೧೪ ಗುಂಡುಕೊಲನು ಯುದ್ಧದಲ್ಲಿ ಕಾಟಯವೇಮನು ಕೊಪ್ಪನುಲ್ಲುವಿನ ಗಜ-ರಾವು ತಿಪ್ಪನ ಕೈಯಲ್ಲಿ ಪರಾಭವಹೊಂದಿ ಸಾವನ್ನಪ್ಪಿದ್ದು.

೧೪೧೬ ಫಿರೋಜಶಹಾ ಹಾಗೂ ಕೊಂಡವೀಡುವಿನ ಪೆದಕೊಮಟಿ ವೇಮರ ನಡುವೆ ಮೈತ್ರಿ.

೧೪೧೭ ಮೊದಲನೆಯ ದೇವರಾಯನು ಪಾನಗಲ್ಲನ್ನು ವಶಪಡಿಸಿಕೊಂಡದ್ದು;
— ಫಿರೋಜಶಹಾನು ಪಾನಗಲ್ಲನ್ನು ಮುತ್ತಿದುದು.

೧೪೧೮ ಬಹಮನಿಯರಿಗೆ ಎದುರಾಗಿ ವೇಲಮರು ಮೊದಲನೆಯ ದೇವರಾಯನ ಪಕ್ಷ ಸೇರಿದುದು;
— ಬಹಮನಿಯ ಪ್ರಧಾನಮಂತ್ರಿ ಮೀರ್ ಫಝ್ಲುಲ್ಲಾ ಇಂಜುವಿನ ಕೊಲೆ.

೧೪೧೯ ಪಾನಗಲ್ ಕದನದಲ್ಲಿ ಫಿರೋಜಶಹಾನ ಪರಾಜಯ ಮತ್ತು ಪಲಾಯನ:
— ಅನಪೋತನು ಮೇದಕ್ ಪ್ರದೇಶವನ್ನು ತಿರುಗಿಪಡೆದುದು.

ಸುಮಾರು ೧೪೨೦ ಮೊದಲನೆಯ ದೇವರಾಯನು ಶ್ರವಣಬೆಳಗೊಳದ ಗೊಮ್ಮಟನ ಪೂಜೆಗೆಂದು ದತ್ತಿನೀಡಿದುದು.

೧೪೨೦-೨೧ ಇಟಲಿ ಪ್ರವಾಸಿ, ನಿಕೊಲೊಕಾಂಟಿ ವಿಜಯನಗರದಲ್ಲಿ.

೧೪೨೦ ರಾಚವೇಮನು ಕೊಂಡವೀಡು ಸಿಂಹಾಸನವನ್ನೇರಿದುದು.

೧೪೨೨ ಮೊದಲನೆಯ ದೇವರಾಯನ ಸಾವು ಹಾಗೂ ರಾಮಚಂದ್ರನು ವಿಜಯನಗರ ಸಿಂಹಾಸನವನ್ನೇರಿದುದು.

೧೪೨೨ ರಾಮಚಂದ್ರನ ಸಾವು ಮತ್ತು ವೀರವಿಜಯನು ವಿಜಯನಗರ ಸಿಂಹಾಸನವನ್ನೇರಿದುದು.

೨೨.೯.೧೪೨೨ ಫಿರೋಜಶಹಾನ ಅಧಿಕಾರ ತ್ಯಾಗ ಹಾಗೂ ಮೊದಲನೆಯ ಷಹಾಬುದ್ದೀನ ಅಹಮ್ಮದನು ಬಹಮನಿ ಸಿಂಹಾಸನವನ್ನೇರಿದುದು.

೧.೧೧.೧೪೨೨ ಹಜರತ್ ಗೇಸು ದರಾಜ (ಬಂದೇನವಾಜ)ನ ಮರಣ.

೧೪೨೨-೨೩ ವಿಜಯನಗರ ಹಾಗೂ ಮೊದಲನೆಯ ಅಹಮ್ಮದಶಹಾನ ನಡುವೆ ಕದನ.

೧೪೨೪ ವೀರವಿಜಯರಾಯನ ಮರಣ, ಇಮ್ಮಡಿ ದೇವರಾಯನ ಸಿಂಹಾಸನಾರೋಹಣ;

— ಬಹಮನಿ ರಾಜಧಾನಿಯನ್ನು ಗುಲ್ಬರ್ಗಾದಿಂದ ಬೀದರಕ್ಕೆ ಸ್ಥಳಾಂತರಿಸಿದುದು;
— ಭಾಸ್ಕರಕವಿಯಿಂದ 'ಜೀವಂಧಚರಿತೆ' ಗ್ರಂಥ ರಚನೆ;
— ಹರಿದ್ರಾನದಿಯ ಅಣೆಕಟ್ಟು ಒಡೆದಾಗ ಬಲ್ಲರಸನು ಪುನಃ ಕಟ್ಟಿದುದು.

೧೪೨೪-೨೫ ಮೊದಲನೆಯ ಅಹಮ್ಮದಶಹಾನ ತೆಲಂಗಾಣ ಪ್ರದೇಶದ ಮೇಲಿನ ಮುತ್ತಿಗೆ ಹಾಗೂ ವರಂಗಲ್ ಮತ್ತು ಮಂಡಲಕೋಟೆಗಳನ್ನು ವಶಪಡಿಸಿಕೊಂಡುದುದು.

೧೪೨೬ ಇಮ್ಮಡಿ ದೇವರಾಯನ ಆಜ್ಞೆಯಂತೆ ರಾಜಧಾನಿಯಲ್ಲಿ ಪಾರ್ಶ್ವನಾಥನಿಗಾಗಿ ಬಸದಿಯ ನಿರ್ಮಾಣ.

೧೪೨೭ ಒರಿಸ್ಸಾದ ಭಾನುದೇವರಸನು ಕೊಂಡವೀಡುವನ್ನು ವಶಪಡಿಸಿಕೊಂಡುದು;
— ಅರಗ ರಾಜ್ಯದಲ್ಲಿ ಎದ್ದ ಬೇಡರ ದಂಗೆಯನ್ನು ವೀರಣ್ಣ ಒಡೆಯನು ಹತ್ತಿಕ್ಕಿದ್ದುದು.

೧೪೨೭-೨೮ ಇಮ್ಮಡಿ ದೇವರಾಯನಿಂದ ಗುಂಟೂರ ಪ್ರದೇಶದ ಕೆಲವು ಭಾಗಗಳನ್ನಾಳುತ್ತಿದ್ದ ಪಂತ ಮೈಲಾರರೆಡ್ಡಿ ಪರಾಜಯಗೊಂಡುದು;
— ಚುಂಡಿಯ ರೆಡ್ಡಿಗಳನ್ನು ಹಾಗೂ ಅವುಭು ಚೋಡನನ್ನು ಇಮ್ಮಡಿದೇವರಾಯ ಪರಾಭವಗೊಳಿಸಿದುದು.

೧೪೨೮ ವಿಜಯನಗರ ಸೈನ್ಯ ಕಲಿಂಗ ಮತ್ತು ವೇಲಮರ ಸೈನ್ಯಗಳನ್ನು ಪರಾಭವ ಗೊಳಿಸಿದುದು;
— ವಿಜಯನಗರವು ಕೊಂಡವೀಡುವನ್ನು ಪುನಃ ವಶಪಡಿಸಿಕೊಂಡುದು;
— ರಾಜಮಹೇಂದ್ರಿನಗರದಲ್ಲಿ ಇಮ್ಮಡಿ ದೇವರಾಯನಿಂದ ರೆಡ್ಡಿಯ ಆಳ್ವಿಕೆ ಪುನಃ ಪ್ರತಿಷ್ಠಾಪನೆ.

ಸುಮಾರು ೧೪೩೦ ಚಾಮರಸನಿಂದ 'ಪ್ರಭುಲಿಂಗಲೀಲೆ'ಯೂ, ಬೊಮ್ಮರಸನಿಂದ 'ಸೌಂದರಪುರಾಣ'ವೂ ಮತ್ತು ಕುಮಾರವ್ಯಾಸನಿಂದ 'ಭಾರತ'ವೂ ರಚನೆ ಗೊಂಡುದು.

೧೪೩೦-೩೨ ಲಕ್ಕಣ್ಣದಂಡನಾಯಕನು ಮುಳುಬಾಗಿಲು ಮತ್ತು ತೇಕಲ್‌ಗಳ ಅಧಿಕಾರಿ ಯಾಗಿದ್ದುದು.

೧೪೩೧ ಪಾಂಡ್ಯ ರಾಜ್ಯದಲ್ಲೆದ್ದ ದಂಗೆಯನ್ನು ಲಕ್ಕಣ್ಣದಂಡನಾಯಕ ಹತ್ತಿಕ್ಕಿ-ದುದು.

೧೪೩೨ ಮೊದಲನೆಯ ಅಹಮ್ಮದಶಹಾನು ಮತ್ತೊಮ್ಮೆ ತೆಲಂಗಾಣ ಪ್ರದೇಶದ ಮೇಲೆ ದಾಳಿ ಮಾಡಿ ರಾಮಗಿರ್ ಕೋಟೆಯನ್ನು ವಶಪಡಿಸಿಕೊಂಡುದು;
— ವೀರಪಾಂಡ್ಯನಿಂದ ಕಾರ್ಕಳದಲ್ಲಿ ಗೊಮ್ಮಟ ಮೂರ್ತಿಯ (೪೧'.೫'' ಎತ್ತರ) ಸ್ಥಾಪನೆ.

೧೪೩೪ ಕಪಿಲೇಶ್ವರ ಗಜಪತಿಯು ಕಲಿಂಗ ಸಿಂಹಾಸನವನ್ನೇರಿದುದು.

ಸುಮಾರು ೧೪೩೫ ಶ್ರೀನಾಥನು 'ಹರಿವಂಶಮು'ವನ್ನು ರಚಿಸಿದುದು.

೧೪೩೫-೩೬ ರಾಯಚೂರು ಪ್ರದೇಶಕ್ಕಾಗಿ ಬಹಮನಿ ಹಾಗೂ ವಿಜಯನಗರಗಳ ನಡುವೆ ಕದನ ಮತ್ತು ಬಹಮನೀಯರು ಮುದಗಲ್ಲನ್ನು ವಶಪಡಿಸಿ ಕೊಂಡುದು, ಇಮ್ಮಡಿ ದೇವರಾಯನು ಅದನ್ನು ತಿರುಗಿ ಪಡೆದುದು.

೧೪೩೬ ರಾಜಮಹೇಂದ್ರಿ ಪ್ರದೇಶದ ಮೇಲೆ ಕಪಿಲೇಶ್ವರ ಗಜಪತಿಯ ದಾಳಿ;
— ಕಪಿಲೇಶ್ವರ ಗಜಪತಿಯು ವಿಜಯನಗರ ಸೈನ್ಯದಿಂದ ಸೋಲನ್ನನುಭವಿಸಿ ದುದು.

೧೭.೪.೧೪೩೬ ಮೊದಲನೆಯ ಅಹಮ್ಮದಶಹಾನ ಮರಣ ಹಾಗೂ ಇಮ್ಮಡಿ ಅಲ್ಲಾವುದ್ದಿನ್ ಅಹಮ್ಮದಶಹಾನ ಸಿಂಹಾಸನಾರೋಹಣ.

೧೪೩೯ ಕಲ್ಯಾಣಕೀರ್ತಿಯಿಂದ 'ಜ್ಞಾನಚಂದ್ರೋದಯ'ದ ರಚನೆ.

೧೪೪೦ ಲಕ್ಕಣ್ಣದಂಡನಾಯಕನು ಬಾರಕೂರರಾಜ್ಯದ ಮಂಡಳೇಶ್ವರನಾದುದು.

೧೪೪೩ (ಎಪ್ರೀಲ–ಡಿಸೆಂಬರ) ವಿಜಯನಗರದಲ್ಲಿ ಅಬ್ದುಲ್-ರಜಾಕ್.

೧೪೪೩ ಇಮ್ಮಡಿ ದೇವರಾಯನ ಕೊಲೆಯ ಯತ್ನ;
— ಸಿಂಹಳದ ಮೇಲೆ ಲಕ್ಕಣ್ಣದಂಡನಾಯಕನ ದಾಳಿ.

ಸುಮಾರು ೧೪೪೩ ಕಪಿಲೇಶ್ವರ ಗಜಪತಿ ಹಾಗೂ ವೇಲಮರು ರೆಡ್ಡಿ ರಾಜ್ಯವಾದ ರಾಜಮಹೇಂದ್ರಿಯ ಮೇಲೆ ದಂಡೆತ್ತಿಹೋದುದು ಹಾಗೂ ಒಡೆಯನಿಂದ ಕಪಿಲೇಂದ್ರ ಗಜಪತಿಯ ಪರಾಜಯ.

೧೪೪೩–೪೪ ಬಹಮನಿ ಹಾಗೂ ವಿಜಯನಗರದ ಮಧ್ಯೆ ಕದನ, ಬಹಮನೀಯರ ಪರಾಭವ.

೨೪.೫.೧೪೪೬ ಇಮ್ಮಡಿ ದೇವರಾಯನ ಮರಣ. ಆತನ ಸಹೋದರ ಪ್ರತಾಪ ದೇವನು ಸಿಂಹಾಸನವನ್ನಾಕ್ರಮಿಸಿದುದು;
— ಪ್ರತಾಪದೇವನ ಆಳ್ವಿಕೆಯ ಅಂತ್ಯ ಹಾಗೂ ಇಮ್ಮಡಿ ದೇವರಾಯನ ಮಗ ಮಲ್ಲಿಕಾರ್ಜುನನ ಸಿಂಹಾಸನಾರೋಹಣ.

೨.೪.೧೪೪೭ ವ್ಯಾಸರಾಯರ ಜನನ.

೧೪೪೯-೫೦ ವಿಜಯನಗರದ ಮೇಲೆ ಕಪಿಲೇಂದ್ರ ಗಜಪತಿಯ ದಾಳಿ, ಅದನ್ನು ಮಲ್ಲಿಕಾರ್ಜುನ ಹಿಮ್ಮೆಟ್ಟಿದುದು.

ಸುಮಾರು ೧೪೫೦ ಕಲ್ಲರಸನಿಂದ 'ಜನವಶ್ಯ'ದ ರಚನೆ.

೧೪೫೦ ವಿಜಯನಗರದ ಮೇಲೆ ಬಹಮನಿಯರ ದಾಳಿ, ಮಲ್ಲಿಕಾರ್ಜುನ ಅವರನ್ನು ಸೋಲಿಸಿದುದು.

೧೪೫೨ ಚಂದ್ರಗಿರಿರಾಜ್ಯಕ್ಕೆ ಸಾಳುವ ನರಸಿಂಹನನ್ನು ಮಹಾಮಂಡಳೇಶ್ವರನೆಂದು ನೇಮಿಸಿದ್ದು.

ಸುಮಾರು ೧೪೫೪ ಕಪಿಲೇಶ್ವರ ಗಜಪತಿಯು, ರಾಜಮಹೇಂದ್ರಿಯನ್ನು ವಶ ಪಡಿಸಿಕೊಂಡು, ಕೊಂಡವೀಡು ಹಾಗೂ ವಿನುಕೊಂಡ ಪ್ರದೇಶಗಳನ್ನು ಗೆದ್ದುದು.

ಸುಮಾರು ೧೪೫೫ 'ಹರವಿಲಾಸಮು' ಕರ್ತೃ ಶ್ರೀನಾಥ ಕವಿಯ ಮರಣ;
— ವಿದ್ಯಾನಂದನಿಂದ 'ಪ್ರಾಯಶ್ಚಿತ್ತ'ದ ಟೀಕು ರಚನೆಯ ಮುಕ್ತಾಯ.

೭.೫.೧೪೫೮ ಅಲ್ಲಾವುದ್ದೀನ್ ಹುಮಾಯೂನ್ ಶಹಾನು ಬಹಮನಿ ಸಿಂಹಾಸನವನ್ನೇರಿದುದು.

೧೪೫೯ ಮುಖ್ಯಕಾರ್ಯ ನಿಮಿತ್ತ ಸಾಳ್ವ ನರಸಿಂಹನಿಗೆ ಚಂದ್ರಗಿರಿಯಿಂದ ಪೆನು-ಗೊಂಡೆಗೆ ಬರುವಂತೆ ಮಲ್ಲಿಕಾರ್ಜುನನು ಆಜ್ಞೆ ಇತ್ತುದು.

೧೪೬೦ ಕಪಿಲೇಂದ್ರನ ಮಗ ಹಮ್ಮೀರನು ಮಹಮ್ಮದ ಗವಾನನ್ನು ಸೋಲಿಸಿ ವರಂಗಲ್ಲನ್ನು ವಶಪಡಿಸಿಕೊಂಡುದು.

೪.೯.೧೪೬೧ ಹುಮಾಯೂನ್‌ಶಹಾನ ಮರಣ.

೩೦.೭.೧೪೬೩ ಮುಮ್ಮಡಿ ಶಮ್ಸುದ್ದೀನ ಮಹಮ್ಮದನು ಬಹಮನಿ ಸಿಂಹಾಸನವ-ನ್ನೇರಿದುದು.

೧೪೬೩ ಕಂಠರಾಜು ಮನೆತನದ ತಮ್ಮರಾಜು ಹಾಗೂ ಆತನ ಮಗ ಬಸವನ ಸಹಾಯದಿಂದ ಹಮ್ಮೀರ ಮಹಾಪಾತ್ರನು ಉದಯಗಿರಿಯನ್ನು ವಶಪಡಿಸಿ ಕೊಂಡುದು.

೧೪೬೩ (ನವ್ಹಂಬರ–ಜೂನ) ಕಲಿಂಗಸೈನ್ಯವು ತಮಿಳುನಾಡಿನ ಮೇಲೆ ದಾಳಿ ನಡೆಸಿ ದಕ್ಷಿಣ ಆರ್ಕಾಟ್ ಪ್ರದೇಶವನ್ನು ವಶಪಡಿಸಿಕೊಂಡುದು.

೧೪೬೫ ಪ್ರತಾಪರಾಯನ ಮಗ ಮುಮ್ಮಡಿ ವಿರೂಪಾಕ್ಷನು ಮಲ್ಲಿಕಾರ್ಜುನನಿಂದ ಅಧಿಕಾರ ಕಿತ್ತುಕೊಂಡು, ಮಲ್ಲಿಕಾರ್ಜುನನ ಮಗ ರಾಜಶೇಖರನ ಹಕ್ಕು ಗಳನ್ನು ಮನ್ನಿಸದೆ ಸಿಂಹಾಸನವನ್ನೇರಿದುದು.

೧೪೬೬ ಮಹಮ್ಮದ ಗವಾನನು ಬಹಮನಿರಾಜ್ಯದ ಪ್ರಧಾನಮಂತ್ರಿಯೆಂದು ನೇಮಕಗೊಂಡುದು.

೧೪೬೮–೭೪ ರಷ್ಯಾದೇಶದ ಪ್ರವಾಸಿ ಅಥನೇಶಿಯಸ್ ನಿಕಿಟಿನ್ ಗುಲಬರ್ಗಾ ಹಾಗೂ ಭಾರತದ ಇನ್ನಿತರ ಪ್ರದೇಶಗಳಿಗೆ ಭೇಟಿ ನೀಡಿದುದು.

೧೪೬೯ ಉದಯಗಿರಿಯನ್ನು ಕಲಿಂಗರಿಂದ ಸಾಳ್ವನರಸಿಂಹನು ತಿರುಗಿ ವಶಪಡಿಸಿ ಕೊಂಡುದು;

— ಮುಮ್ಮಡಿ ವಿರೂಪಾಕ್ಷನ ಆಣತಿಯಂತೆ ಹೊನ್ನಾವರದ ಅಧಿಕಾರಿಯಿಂದ ಭಟ್ಕಳದಲ್ಲಿ ಮುಸ್ಲಿಮರ ಸಾಮೂಹಿಕ ಕೊಲೆ;

— ಬಾಣವಂಶದ ಭುವನೈಕವೀರ ಸಮರಕೋಲಾಹಲನು ಕಾಂಚಿಯನ್ನು ವಶಪಡಿಸಿಕೊಂಡುದು.

೧೪೭೦ ಮಹಮ್ಮದ ಗವಾನನು ವಿಜಯನಗರದಿಂದ ಗೋವೆಯನ್ನು ಕಿತ್ತು ಕೊಂಡುದು.

೧೪೭೦ ಕಪಿಲೇಶ್ವರ ಗಜಪತಿಯ ಮರಣ ಹಾಗೂ ಪುರುಷೋತ್ತಮ ಗಜಪತಿಯ ಸಿಂಹಾಸನಾರೋಹಣ;

— ಬಹಮನೀಯರು ಕೊಂಡವೀಡುವನ್ನು ಹಿಡಿದುದು.

೧೪೭೦-೭೧ ಕಾಂಚಿಯಲ್ಲಿ ವಿಜಯನಗರ ಆಳ್ವಿಕೆಯ ಪುನರ್‌ಸ್ಥಾಪನೆ.

೧೪.೧.೧೪೭೧ ಮಹಮ್ಮದ ಗವಾನನು ಖೆಲ್ನವನ್ನು ವಶಪಡಿಸಿಕೊಂಡುದು.

೧೯.೭.೧೪೭೧ ಮಹಮ್ಮದ ಗವಾನನು ರೈಗ್ನವನ್ನು ಹಿಡಿದುದು.

೧೩.೧೨.೧೪೭೧ ಮಹಮ್ಮದ ಗವಾನನು ಸಂಗಮೇಶ್ವರವನ್ನು ವಶಕ್ಕೆ ತಗೆದು-ಕೊಂಡುದು.

ಸುಮಾರು ೧೪೭೧ ಸಮುರಲೋಕನ ನೇತೃತ್ವದಲ್ಲಿ ಮಧುರೆಯಲ್ಲಿ ದಂಗೆ.

೧.೨.೧೪೭೨ ಗೋವೆ, ಬಹಮನಿಯರ ವಶವಾದುದು.

೧೪೭೨ ಮಹಮ್ಮದ ಗವಾನನು ಬೆಳಗಾಂವನ್ನು ವಶಪಡಿಸಿಕೊಂಡುದು;

— ಬೀದರದಲ್ಲಿ ಮಹಮ್ಮದ ಗವಾನನು ಮದರಸಾ (ಶಾಲೆ) ಕಟ್ಟಿಸಿದುದು.

೧೪೭೩-೭೫ ವಿಜಾಪುರದಲ್ಲಿ ಭೀಕರ ಕ್ಷಾಮ.

೧೪೭೭ ಕೃಷ್ಣ-ಗೋದಾವರಿ ಮುಖಜಪ್ರದೇಶಕ್ಕಾಗಿ ಮುಮ್ಮಡಿ ಮಹಮ್ಮದ ಶಹಾ, ಪುರುಷೋತ್ತಮ ಗಜಪತಿ ಹಾಗೂ ಸಾಳ್ವ ನರಸಿಂಹರ ನಡುವೆ ತ್ರಿಕೋಣಸ್ಪರ್ಧೆ.

೧೪೮೧ ಮಾಲೂರಿನಿಂದ ಕಾಂಚಿಯವರೆಗೆ ಮುಮ್ಮಡಿ ಮಹಮ್ಮದಶಹಾನ ದಂಡ ಯಾತ್ರೆ ಹಾಗೂ ಕಾಂಚಿಯ ಸುಲಿಗೆ;

— ಕಂದಕೂರು ಯುದ್ಧ, ಸಾಳ್ವನರಸಿಂಹನ ಸೈನ್ಯಾಧಿಕಾರಿ ಈಶ್ವರನಾಯಕನಿಂದ ಬಹಮನಿಯರ ಸೋಲು.

೫-೪-೧೪೮೧ ಮಹಮ್ಮದ ಗವಾನನ ಕೊಲೆ.

೨೬-೩-೧೪೮೨ ಮುಮ್ಮಡಿ ಮಹಮ್ಮದಶಹಾನ ಸಾವು, ಇಮ್ಮಡಿ ಮಹಮೂದ ಶಹಾ ಬಹಮನಿ ಸಿಂಹಾಸನವನ್ನೇರಿದುದು.

೧೪೮೨ ಗೋವೆಯನ್ನು ತಿರುಗಿ ಪಡೆಯುವ ವಿಜಯನಗರದ ವ್ಯರ್ಥಪ್ರಯತ್ನ.

೧೪೮೫ ಸ್ವಂತ ಮಗನಿಂದ ಮುಮ್ಮಡಿ ವಿರೂಪಾಕ್ಷನ ಕೊಲೆ ಹಾಗೂ ಪಾಡೇರಾವನ ವಿಜಯನಗರ ಸಿಂಹಾಸನಾರೋಹಣ;

— ಸಾಳ್ವ ಮೊದಲನೇ ನರಸಿಂಹನಿಂದ ವಿಜಯನಗರ ಸಿಂಹಾಸನದ ಆಕ್ರಮಣ, ಸಂಗಮ ವಂಶದ ಅಂತ್ಯ.

ಸುಮಾರು ೧೪೮೫ ತೆರಕಣಾಂಬಿ ಬೊಮ್ಮರಸನಿಂದ 'ಆರಾಧ್ಯಚರಿತ್ರೆ', ಮತ್ತು ನೀಲಕಂಠ ಶಿವಾಚಾರ್ಯರಿಂದ 'ಜೀವಂಧರಸಾಂಗತ್ಯ' ರಚನೆಗೊಂಡುದು.

೨೦-೪-೧೪೮೫ ಸಾಳ್ವ ನರಸಿಂಹನಿಂದ ತಿರುಮಲೆಬೆಟ್ಟಕ್ಕೆ ಹೋಗುವ ಕಾಲು ಹಾದಿಯಲ್ಲಿ ಶ್ರೀ ನರಸಿಂಹಸ್ವಾಮಿ ದೇವಾಲಯದ ಸ್ಥಾಪನೆ.

೧೬-೨-೧೪೮೭ ಕೃಷ್ಣದೇವರಾಯನ ಜನನ.

೧೪೮೭ ಸಂಗಮವಂಶದ ಮಲ್ಲಿಕಾರ್ಜುನನ ಮರಣ;

— ಪುರುಷೋತ್ತಮ ಗಜಪತಿ, ಗೋದಾವರಿ ಮುಖಜಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡುದು.

೧೪೮೯ ಸಾಳ್ವ ಮೊದಲನೆಯ ನರಸಿಂಹನನ್ನು ಪುರುಷೋತ್ತಮ ಗಜಪತಿ ಸೋಲಿಸಿದುದು;

— ಬಿಜಾಪುರದಲ್ಲಿ ಯೂಸುಫ್ ಆದಿಲ್‌ಖಾನನು ತನ್ನ ಹೆಸರಿನಲ್ಲಿ ಕುತ್ಬ ಓದಿಸಿದುದು.

೧೪೯೧ ಸಾಳ್ವ ಮೊದಲನೆಯ ನರಸಿಂಹನ ಮರಣ;

— ಇಮ್ಮಡಿ ನರಸಿಂಹನು ಸಿಂಹಾಸನಕ್ಕೆ ಬಂದುದು.

೧೪೯೧-೧೫೦೩ ತುಳುವ ವಂಶದ ನರಸನಾಯಕನು ರಾಜಪ್ರತಿನಿಧಿಯಾಗಿದ್ದುದು.

೧೪೯೧ ಮನವ ಕದನದಲ್ಲಿ ಯೂಸುಫ್ ಆದಿಲ್‌ಖಾನನ ಪತನ.

೨೯-೪-೧೪೯೨ ಯೂಸುಫ್ ಆದಿಲ್‌ಖಾನನು ರಾಯಚೂರುಪ್ರದೇಶವನ್ನು ಪುನಃ ಆಕ್ರಮಿಸಿದ್ದು.

೧೪೯೩ ವಿಜಯನಗರವನ್ನು ಹಿಡಿಯುವ ಯೂಸುಫ್‌ಖಾನನ ಯತ್ನವನ್ನು ತುಳುವ ನರಸನಾಯಕನು ಭಂಗಗೊಳಿಸುದುದು;

— ಮನವದುರ್ಗವನ್ನು ಯೂಸುಫ್‌ಖಾನನಿಂದ ವಶಪಡಿಸಿಕೊಂಡುದು

೧೪೯೫ ಚೋಳರಾಜ್ಯದಲ್ಲಿ ಕೋನೇರಿರಾಜನು ಸ್ವತಂತ್ರನೆಂದು ಘೋಷಿಸಿದ್ದು.

೧೪೯೬ ಪುರುಷೋತ್ತಮ ಗಜಪತಿಯ ನಿಧನ ಹಾಗೂ ಪ್ರತಾಪರುದ್ರ ಗಜಪತಿಯ ಆಳ್ವಿಕೆಯ ಪ್ರಾರಂಭ.

೧೪೯೬-೯೭ ತುಳುವ ನರಸನಾಯಕನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡದ್ದು ಮತ್ತು ಗೋಕರ್ಣಕ್ಕೆ ದಂಡಯಾತ್ರೆ ಹೋದುದು.

೧೪೯೭ ತುಳುವ ನರಸನಾಯಕನು, ಜಾಟವರ್ಮನ್ ಕುಲಶೇಖರ ಪರಾಕ್ರಮ ಪಾಂಡ್ಯನನ್ನು ಸೋಲಿಸಿ ವಿಜಯನಗರದ ಆಳ್ವಿಕೆಗೊಳಪಡುವಂತೆ ಮಾಡಿದುದು.

೧೪೯೭ ಬಹಮನಿಯ ಮಹಮ್ಮದ ಶಹನ ಮಗನೊಡನೆ, ಯೂಸುಫ್‌ಖಾನನ ಮಗಳು ಬೀಬಿ ಮ ಜೀತಿಯ ಮದುವೆ.

೧೪-೫-೧೪೯೮ ಕಲ್ಲೀಕೋಟೆಗೆ ವಾಸ್ಕೋ ಡಿ ಗಾಮನ ಆಗಮನ.

೧೪೯೯ ತುಳುವ ನರಸನಾಯಕನಿಂದ ಕೋನೇರಿರಾಜನ ಪರಾಭವ.

೧೪೯೯-೧೫೦೦ ಬಾಣ ಅರಸನು ತುಳುವ ನರಸನಾಯಕನಿಂದ ಪರಾಭವ ಹೊಂದಿದುದು.

ಸುಮಾರು ೧೫೦೦ ಸಿಂಗಿರಾಜನಿಂದ 'ಅಮಲ ಬಸವರಾಜ ಚರಿತೆ', ಕೋಟೀಶ್ವರನಿಂದ 'ಜೀವಂಧರ ಷಟ್ಪದಿ', ಯಶಃಕೀರ್ತಿಯಿಂದ 'ಧರ್ಮಸಮಾಭ್ಯುದಯ ಟೀಕು', ಗುರುಬಸವನಿಂದ 'ಯಜುರ್ವೇದ ಭಾಷ್ಯ'ಕ್ಕೆ ಟೀಕು, ಮತ್ತು ಚನ್ನವೀರನಿಂದ 'ಸಾರಸ್ವತ ವ್ಯಾಕರಣ'ಕ್ಕೆ ಟೀಕು– ಇವುಗಳ ರಚನೆ.

೧೫೦೦ ಪುರುಷೋತ್ತಮ ಗಜಪತಿ ಹಾಗೂ ವಿಜಯನಗರ ಸೈನ್ಯಗಳ ನಡುವೆ ನಡೆದ ಕದನ.

೧೫೦೧ ಇಮ್ಮಡಿ ಮಹಮ್ಮದ ಶಹನು ರಾಯಚೂರು ಪ್ರದೇಶಕ್ಕೆ ಮುತ್ತಿಗೆ ಹಾಕಿ ರಾಯಚೂರು ಹಾಗೂ ಮುದಗಲ್ಲನ್ನು ವಶಪಡಿಸಿಕೊಂಡದ್ದು;

— ವಾಸ್ಕೋಡಿಗಾಮನು ತಿಮ್ಮೋಜನ ಹಡಗಗಳನ್ನು ಸುಟ್ಟು ಭಟ್ಕಳದಲ್ಲಿ ಇಳಿದದ್ದು.

೧೩-೧೨-೧೫೦೩ ತುಳುವ ನರಸನಾಯಕನ ಮರಣ.

೧೫೦೪-೧೫೧೪ ಪೋರ್ತುಗೀಜ ಯಾತ್ರಿಕ ದುವಾರ್ತೆ ಬಾರ್ಬೋಸನು ವಿಜಯನಗರವನ್ನು ಸಂದರ್ಶಿಸಿದುದು.

೧೫೦೪ ಯೂಸುಫ್ ಆದಿಲ್‌ಖಾನನು ಗುಲ್ಬರ್ಗವನ್ನು ಗೆದ್ದುದು.

೧೫೦೫ (ಮಾರ್ಚ) ಡಾಮ್ ಫ್ರಾನ್ಸಿಸ್ಕೊ ಡಿ ಅಲ್ಮೇಡಾ, ಪೋರ್ತುಗೀಜ ಗವರ್ನರನಾಗಿ ನೇಮಕಗೊಂಡುದು;

೧೫೦೫ ಕನ್ನಾನೋರಿನಲ್ಲಿ ವಿಜಯನಗರದ ರಾಯಭಾರಿ, ಡಾಮ್ ಪ್ರಾನ್ಸಿಸ್ಕೊ ಡಿ ಅಲ್ಮೇಡಾನನ್ನು ಸಂದರ್ಶಿಸಿದ್ದು;

— ತುಳುವ ವೀರನರಸಿಂಹನು ಇಮ್ಮಡಿ ನರಸಿಂಹನ ಕೊಲೆಗೈದದ್ದು;

— ವೀರನರಸಿಂಹನು ವಿಜಯನಗರ ಸಿಂಹಾಸನವನ್ನೇರಿ ತುಳುವ ಮನೆತನದ ಆಳ್ವಿಕೆ ಪ್ರಾರಂಭಿಸಿದ್ದು ಹಾಗೂ ಸಾಳ್ವ ಮನೆತನದ ಆಳ್ವಿಕೆಯ ಅಂತ್ಯ.

೧೫೦೫ (ಸೆಪ್ಟಂಬರ್) ಡಾಮ್ ಫ್ರಾನ್ಸಿಸ್ಕೋ ಡಿ ಅಲ್ಮೇಡನು ಅಂಜದೀವ ದ್ವೀಪವನ್ನು ಗೆದ್ದುಕೊಂಡು ಅಲ್ಲಿ ಕೋಟೆಯೊಂದನ್ನು ಕಟ್ಟಿಸಿದ್ದು.

೧೫೦೫ ಪೋರ್ತುಗೀಜರು ಹೊನ್ನಾವರದ ಮೇಲೆ ದಾಳಿ ಮಾಡಿದುದು;

— ಪೋರ್ತುಗೀಜರೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳಲು ತಿಮ್ಮೋಜ ಮತ್ತು ಮಲೆರಾವ್‌ನ ಅಧಿಕಾರಿಯೊಬ್ಬನು ಅಂಜದೀವಕ್ಕೆ ಭೇಟಿ ಇತ್ತುದು.

೧೫೦೬ ಡಾಮ್ ಫ್ರಾನ್ಸಿಸ್ಕೊ ಡಿ ಅಲ್ಮೇಡನು ಭಟ್ಕಳದಲ್ಲಿ ಕೋಟೆ ಕಟ್ಟಲು ವಿಜಯನಗರದ ಅರಸನ ಒಪ್ಪಿಗೆ ಪಡೆಯುವ ವಿಫಲಯತ್ನ.

೧೫೦೭ ಉಮ್ಮತ್ತೂರಿನ ನಂಜರಾಜನು ಸ್ವತಂತ್ರನೆಂದು ಘೋಷಿಸಿಕೊಂಡದ್ದು.

೧೫೦೮ (ಜನವರಿ) ಚೌಲ್ ಕದನದಲ್ಲಿ ಪೋರ್ತುಗೀಸರ ಸೋಲು.

೧೫೦೯ (ಫೆಬ್ರುವರಿ) ದಿಯೂ ಕದನದಲ್ಲಿ ಪೋರ್ತುಗೀಸರ ಸೋಲು.

೧೫೦೯ ತುಳುವ ವೀರನರಸಿಂಹನ ಮರಣ.

೨೫-೭-೧೫೦೯ ಕೃಷ್ಣದೇವರಾಯನು ವಿಜಯನಗರದ ಅರಸನಾದದ್ದು.

೮-೮-೧೫೦೯ ಕೃಷ್ಣದೇವರಾಯನ ಪಟ್ಟಬಂಧೋತ್ಸವ.

೫-೧೧-೧೫೦೯ ಅಫಾನ್ಸೊ ಡಿ ಅಲ್ಬುಕರ್ಕ, ಪೋರ್ತುಗೀಜ ಗವರ್ನರನಾಗಿ ನೇಮಕ.

೧೫೦೯ (ನವ್ಹಂಬರ-ಡಿಶಂಬರ) ಪ್ರತಾಪರುದ್ರ ಗಜಪತಿಯು ಕೃಷ್ಣದೇವರಾಯನ ಕೈಯಲ್ಲಿ ಸೋಲನ್ನು ಅನುಭವಿಸಿದ್ದು, ಮತ್ತು ಕೃಷ್ಣದೇವರಾಯನು, 'ಗಜಪತಿ ಗಜಕೂಟಪಾಕಲ' ಎಂಬ ಬಿರುದು ಧರಿಸಿದ್ದು.

೧೫೦೯-೧೦ ದಿವಾನಿಯುದ್ಧದಲ್ಲಿ ಬಹಮನೀಯರನ್ನು ಕೃಷ್ಣದೇವರಾಯನು ಸೋಲಿಸಿದ್ದು.

೧೫೧೦ (ಜನೇವರಿ) ಫಾದರ ಲೂಯಿಸನು ವಿಜಯನಗರಕ್ಕೆ ಪೋರ್ತುಗೀಜ ರಾಯಭಾರಿಯಾಗಿ ಬಂದದ್ದು.

೨೮-೨-೧೫೧೦ ಪೋರ್ತುಗೀಜರು ಗೋವೆಯನ್ನು ಆಕ್ರಮಿಸಿದ್ದು.

೧೫೧೦ (ಮಾರ್ಚ) ಭಟ್ಕಳದಲ್ಲಿ ಕೋಟೆಕಟ್ಟಿಕೊಳ್ಳಲು ವಿಜಯನಗರದ ಅರಸನ ಅಪ್ಪಣೆಗಾಗಿ ಅಲ್ಬುಕರ್ಕನು ಗಾಸ್ಪರ ಚನೋಕನನ್ನು ವಿಜಯನಗರಕ್ಕೆ ಕಳಿಸಿದ್ದು.

೧೭-೫-೧೫೧೦ ಘಾಜಿ ಕಣಿವೆಯನ್ನು ದಾಟುವಾಗ ಪೋರ್ತುಗೀಜರಿಂದ ಆದಿಲ್ ಶಹನ ಸೈನ್ಯವು ಸಾಕಷ್ಟು ಸಾವುನೋವುಗಳನ್ನು ಅನುಭವಿಸಿದ್ದು.

೨೦-೫-೧೫೧೦ ಗೋವೆಯನ್ನು ಆದಿಲ್‌ಶಹನ ಸೈನ್ಯ ಪುನಃ ವಶಪಡಿಸಿಕೊಂಡದ್ದು.

೧೫೧೦ (ಜುಲೈ) ಯೂಸುಫ್ ಆದಿಲ್‌ಖಾನನು ಗುಲ್ಬರ್ಗಾವನ್ನು ಮುತ್ತಿದುದು.

೧೭-೮-೧೫೧೦ ಕನ್ನಾನೋರ್‌ಗೆ ಹೋಗುವ ಹಾದಿಯಲ್ಲಿ ಅಲ್ಬುಕರ್ಕನು ಅಂಜದೀವವನ್ನು ತಲುಪಿದ್ದು.

೨೬-೮-೧೫೧೦ ಕನ್ನಾನೋರ್‌ಗೆ ಅಲ್ಬುಕರ್ಕನ ಆಗಮನ.

೧೩-೧೦-೧೫೧೦ ಪ್ರತಾಪರುದ್ರ ಗಜಪತಿಯೊಂದಿಗೆ ಕೃಷ್ಣದೇವರಾಯನ ಯುದ್ಧ;

— ಕೃಷ್ಣದೇವರಾಯನಿಂದ ಸಾಳ್ವ ತಿಮ್ಮನು ಕೊಂಡವೀಡು ರಾಜ್ಯದೊಳಗಣ ಅಮ್ಮನಂಬ್ರೋಲಿ ಸೀಮೆಯ ಕೊಂಚ್ಚಿರ್ಲಕೋಟೆ ಗ್ರಾಮವನ್ನು ದತ್ತಿಯಾಗಿ ಪಡೆದುದು.

೨೫-೧೧-೧೫೧೦ ಗೋವೆಯನ್ನು ಪೋರ್ತುಗೀಜರು ವಶಪಡಿಸಿಕೊಂಡದ್ದು.

೧೫೧೦ ಕೃಷ್ಣದೇವರಾಯನ ಸೇವೆಯಲ್ಲಿ ಶಾಲುವನಾಯಕನು ಸೇರಿದುದು;

— ರಾಜಧಾನಿಯ ವಿರೂಪಾಕ್ಷದೇವಾಲಯದ ರಂಗಮಂಟಪವನ್ನು ತನ್ನ ಪಟ್ಟಬಂಧೋತ್ಸವದ ಸವಿನೆನಪಿಗಾಗಿ ಕೃಷ್ಣದೇವರಾಯನು ಕಟ್ಟಿಸಿದುದು;

— ಮಲಿಕ್ ಅಹಮ್ಮದ ಬಹ್ರೀ ನಿಜಾಮುಲ್ಮುಲ್ಕನ ನಿಧನ;

— ಕೃಷ್ಣದೇವರಾಯನು ರಾಯಚೂರನ್ನು ವಶಪಡಿಸಿಕೊಂಡದ್ದು;

— ಯೂಸೂಫ್ ಆದಿಲ್‌ಖಾನನ ನಿಧನ;

— ಬಿಜಾಪುರದ ಆದಿಲ್‌ಶಾಹಿ ಸಿಂಹಾಸನವನ್ನು ಇಸ್ಮಾಯಿಲ್ ಆದಿಲ್‌ಶಹ ಏರಿದುದು;

— ಕಮಾಲಖಾನನಿಂದ ಇಸ್ಮಾಯಿಲ್ ಆದಿಲ್‌ಶಹನ ಬಂಧನ.

ಸುಮಾರು ೧೫೧೦ ಕೃಷ್ಣದೇವರಾಯನು ಸಾಗರ ಮತ್ತು ಕಲುಬರಿಗೆ (ಗುಲ್ಬರ್ಗಾ) ಯಲ್ಲಿ ಮುಸ್ಲಿಮ್ ಸೈನ್ಯದ ತುಕಡಿಗಳನ್ನು ನಾಶಮಾಡಿದುದು;

— ಚೈತನ್ಯ ಮಹಾಪ್ರಭು, ಆರ್ಕಾಟ ಪ್ರದೇಶದಲ್ಲಿ ಬೌದ್ಧರೊಂದಿಗೆ ವಾದಿಸಿದ್ದು.

೧೫೧೧ (ಮಾರ್ಚ) ಬಿಜಾಪುರದಲ್ಲಿ ಕಮಾಲ್ ಖಾನನ ಕೊಲೆ.

೧೫೧೧ ವಿಜಯನಗರದಲ್ಲಿ ಫಾದರ ಲೂಯಿಸನ ಕೊಲೆ.

೧೫೧೧ (ಡಿಸೆಂಬರ) ಕೃಷ್ಣದೇವರಾಯನ ಆಸ್ಥಾನಕ್ಕೆ ಪರ್ಶಿಯಾ ಚಕ್ರವರ್ತಿ ಶಹ ಇಸ್ಮಾಯಿಲ್‌ನ ಭೆಟ್ಟಿ.

೧೫೧೨ (ಜನೇವರಿ) ಸುಫ್‌ವಿಯ ರಾಯಭಾರಿ ಯಾದಗಾರ್ ಬೇಗ್ ಭೇಟಿ.

೧೫೧೨ (ಸಪ್ಟಂಬರ) ಕೃಷ್ಣದೇವರಾಯನು ಉಮ್ಮತ್ತೂರಿನ ಗಂಗರಾಜನನ್ನು ಸೋಲಿಸಿ ಶ್ರೀರಂಗಪಟ್ಟಣ, ಪೆನುಕೊಂಡ ಮತ್ತು ಉಮ್ಮತ್ತೂರುಗಳನ್ನು ವಶಪಡಿಸಿಕೊಂಡದ್ದು.

೧೫೧೨ (ಸೆಪ್ಟೆಂಬರ) ರಾಯಸಂ ಕೊಂಡಮರಸನು ಪೆನುಗೊಂಡೆ ಅಧಿಕಾರಿಯಾಗಿ ನೇಮಕ;

— ಕೃಷ್ಣದೇವರಾಯನು ರಾಯಚೂರು ಕೋಟೆಯನ್ನು ವಶಪಡಿಸಿಕೊಂಡುದು.

ಸುಮಾರು ೧೫೧೩ ಗುಬ್ಬಿಮಲ್ಲಣಾರ್ಯನಿಂದ 'ಭಾವಚಿಂತಾರತ್ನ'ದ ರಚನೆ.

೧೫೧೩ ಗುತ್ತಿರಾಜ್ಯದ ಅಧಿಕಾರಿಯಾಗಿ ತುಳವ ಗೋವಿಂದರಾಜನ ನೇಮಕ.

೧೦-೨-೧೫೧೩ ಚಿನ್ನಾದೇವಿ ಮತ್ತು ತಿರುಮಲಾದೇವಿಯರೊಡನೆ ಕೃಷ್ಣದೇವ ರಾಯನು ತಿರುಪತಿಗೆ ಭೇಟಿ ನೀಡಿದುದು.

೧೨-೩-೧೫೧೩ ಕೃಷ್ಣದೇವರಾಯನ ಎರಡನೇ ಪಟ್ಟಬಂಧೋತ್ಸವ.

೧೫೧೩ ಮೊದಲನೆಯ ಕೆಂಪೇಗೌಡನು ಯಲಹಂಕದ ಪ್ರಭುವಾದದ್ದು.

೨-೫-೧೫೧೩ ಕೃಷ್ಣದೇವರಾಯನು ತಿರುಪತಿಗೆ ಹೋಗಿ ರತ್ನಖಚಿತವಾದ ಮೂರುಕಿರೀಟಗಳನ್ನು ದತ್ತಿಯಾಗಿತ್ತುದು, ನಂತರ ಕಾಳಹಸ್ತೀಶ್ವರನನ್ನು ಸಂದರ್ಶಿಸಿದುದು.

೯-೬-೧೫೧೩ ಉದಯಗಿರಿಯ ಪತನ, ಗಜಪತಿಯ ಅಧಿಕಾರಿ ತಿರುಮಲಕಾಂತರಾಯನನ್ನು ಸೆರೆಹಿಡಿದದ್ದು ಹಾಗೂ ರಾಯಸಂ ಕೊಂಡಮರಸನನ್ನು ಉದಯಗಿರಿಯ ಅಧಿಕಾರಿಯನ್ನಾಗಿ ನೇಮಿಸಿದ್ದು.

೧೩-೬-೧೫೧೩ ತಿರುಪತಿಗೆ ಕೃಷ್ಣದೇವರಾಯನ ಸಂದರ್ಶನ.

೧೫೧೩ ಕೃಷ್ಣದೇವರಾಯನು ಉದಯಗಿರಿಯ ವಿಜಯದಲ್ಲಿ ವಶಪಡಿಸಿಕೊಂಡಿದ್ದ ಬಾಲಕೃಷ್ಣನ ವಿಗ್ರಹ ಸ್ಥಾಪನೆಗಾಗಿ ವಿಜಯನಗರದಲ್ಲಿ ದೇವಾಲಯ ಕಟ್ಟಲು ಪ್ರಾರಂಭಿಸಿದುದು.

೨-೬-೧೫೧೪ ಕಾಂಚೀಪುರದ ಪೆರುಳಾಳ ಪೆರುಮಾಳ್ ದೇವಾಲಯದ ಪುಣ್ಯಕೋಟಿ ವಿಮಾನದ ಚಿನ್ನದ ಲೇಪನೆಗಾಗಿ ಕೃಷ್ಣದೇವರಾಯನಿಂದ ಚಿನ್ನದ ದಾನ.

೬-೭-೧೫೧೪ ಚಿನ್ನಾದೇವಿ ಮತ್ತು ತಿರುಮಲಾದೇವಿಯರೊಡನೆ ಕೃಷ್ಣದೇವರಾಯನು ಉದಯಗಿರಿಯ ವಿಜಯದ ನಂತರ ರಾಜಧಾನಿಗೆ ಹಿಂತಿರುಗುವಾಗ ತಿರುಪತಿಗೆ ದರ್ಶನವಿತ್ತುದು.

೮-೧೧-೧೫೧೪ ಕೃಷ್ಣದೇವರಾಯನ ರಾಯಭಾರಿ ರತ್ನಪ್ಪ ಒಡೆಯನು ಅಲ್ಬುಕರ್ಕನ ಆಸ್ಥಾನದಲ್ಲಿ.

೧೬-೨-೧೫೧೫ ವಿಜಯನಗರದಲ್ಲಿ ಬಾಲಕೃಷ್ಣನ ವಿಗ್ರಹಸ್ಥಾಪನೆ.

೧೫೧೫ ಕೃಷ್ಣದೇವರಾಯನು ಅದ್ದಂಕಿ, ವಿನುಕೊಂಡ, ಬೆಲ್ಲಂಕೊಂಡ, ನಾಗಾರ್ಜುನಕೊಂಡ ಮತ್ತು ತಂಗೆಡಗಳನ್ನು ವಶಪಡಿಸಿಕೊಂಡದ್ದು.

೧೫೧೫ ಪೂಸಪಾತಿ ರಾಚಿರಾಜುವನ್ನು ಸೋಲಿಸಿ, ಕೇತಾವರಂ ವಶಪಡಿಸಿಕೊಂಡುದು;

— ಕೊಂಡವೀಡಿಗೆ ದಾಳಿಯಿಡಲು ಸಿದ್ಧತೆ;

— ಕೊಂಡವೀಡನ್ನು ತಿಮ್ಮರಸನು ವಶಪಡಿಸಿಕೊಂಡುದು;

— ಪ್ರತಾಪರುದ್ರ ಗಜಪತಿಯ ಅಧಿಕಾರಗಳಾದ, ವೀರಭದ್ರ (ಗಜಪತಿಯ ಮಗ), ಶ್ರೀನಾಥರಾಜು, ಲಕ್ಷ್ಮೀಪತಿರಾಜು, ಪಶ್ಚಿಮ ಬಾಳಚಂದ್ರ, ಪೂಸಪಾತಿ ರಾಚಿರಾಜು (ಗಜಪತಿಯ ಅಳಿಯ), ಮಲ್ಲುಖಾನ ಮತ್ತು ಉದ್ದಂಡಖಾನರನ್ನು ಸೆರೆಹಿಡಿದುದು.

— ನಾದಿಂಡ್ಲಗೋಪನು ಕೊಂಡವೀಡಿನ ಅಧಿಕಾರಿಯಾಗಿ ನೇಮಕಗೊಂಡುದು.

೧೩-೬-೧೫೧೫ ಕೃಷ್ಣದೇವರಾಯನ ತಿರುಪತಿ ಸಂದರ್ಶನ.

೮-೭-೧೫೧೫ ಕೃಷ್ಣದೇವರಾಯನು ಅಮರಾವತಿಯ ಅಮರೇಶ್ವರನ ದರ್ಶನ ಪಡೆದುದು.

೨೫-೭-೧೫೧೫ ಕೃಷ್ಣದೇವರಾಯನು ತನ್ನ ರಾಣಿಯರೊಡಗೂಡಿ ಶ್ರೀಶೈಲವನ್ನು ಸಂದರ್ಶಿಸಿ ಅಲ್ಲಿ ಮಂಟಪವನ್ನು ಕಟ್ಟಿಸಿದುದು.

೨೧-೧೨-೧೫೧೫ ನಂದಿತಿಮ್ಮಣ್ಣನಿಂದ 'ಪಾರಿಜಾತಾಪಹರಣಮು' ಕಾವ್ಯದ ರಚನೆ.

೨೧-೧೨-೧೫೧೫ ಕೃಷ್ಣದೇವರಾಯನು ತನ್ನ ಅರಸಿಯರೊಂದಿಗೆ ಅಹೋಬಲಂನಲ್ಲಿ ವಾಸ್ತವ್ಯ ಮಾಡಿದುದು.

೧೫೧೫ ಪೋರ್ತಗೀಜರು ಮಂಗಳೂರನ್ನು ಸುಟ್ಟು, ಬಾರಕೂರನ್ನು ಲೂಟಿ ಮಾಡಿದ್ದು.

೧೫೧೫–೧೫೧೬ ಪ್ರತಾಪರುದ್ರ ಗಜಪತಿಯ ಮಗ, ವೀರಭದ್ರನು ಮಳೆಬೆನ್ನೂರ ಸೀಮೆಯ ಅಧಿಕಾರಿಯಾಗಿ ನೇಮಕಗೊಂಡುದು.

೧೫೧೬ ಕೃಷ್ಣದೇವರಾಯನಿಂದ ವಿಜಯನಗರದ ವಿಠ್ಠಲಮಂದಿರದಲ್ಲಿ ನೂರುಕಂಬಗಳ ಮಂಟಪದ ನಿರ್ಮಾಣ;

— ರಾಜಧಾನಿಯಲ್ಲಿ ಕೃಷ್ಣದೇವರಾಯನಿಂದ ವಿಜಯಭವನದ ನಿರ್ಮಾಣ.

೭-೨-೧೫೧೬ ಕೃಷ್ಣದೇವರಾಯನು ವಿಜಯವಾಡವನ್ನು ವಶಪಡಿಸಿಕೊಂಡುದು.

೩೦-೩-೧೫೧೬ ಕೃಷ್ಣದೇವರಾಯನು ಅರಸಿಯರ ಜೊತೆಗೆ ಸಿಂಹಾಚಲಕ್ಕೆ ಭೆಟ್ಟಿಯಿತ್ತುದು.

೧೫೧೬ (ಜುಲೈ) ಕೃಷ್ಣದೇವರಾಯನಿಂದ ತೆಲಂಗಾಣ ಪ್ರದೇಶದಲ್ಲಿ ಯುದ್ಧ.

೨೯-೬-೧೯೫೬ ಕಲಿಂಗದಿಂದ, ರಾಜಮಹೇಂದ್ರಿ ಮಾರ್ಗವಾಗಿ ಕೃಷ್ಣದೇವರಾಯನು ವಿಜಯನಗರಕ್ಕೆ ಹಿಂದಿರುಗಿದುದು.

೧೫೧೬ (ಅಕ್ಟೋಬರ) ಕೃಷ್ಣದೇವರಾಯನು ಪೋತನೂರನ್ನು ವಶಪಡಿಸಿಕೊಂಡುದು.

೧೫೧೭ ಕೃಷ್ಣದೇವರಾಯನಿಂದ ಇಸ್ಮಾಯಿಲ್ ಆದಿಲ್‌ಶಹನ ಪರಾಭವ.

೨-೧-೧೫೧೭ ಕೃಷ್ಣದೇವರಾಯನು ತನ್ನ ಅರಸಿಯರೊಂದಿಗೆ ತಿರುಪತಿಯನ್ನು ಸಂದರ್ಶಿಸಿ, ದೇವಾಲಯದ ವಿಮಾನಕ್ಕೆ ಚಿನ್ನದಲೇಪನ ಮಾಡಿಸಲು ಮೂವತ್ತು ಸಾವಿರ ಚಿನ್ನದ ವರಹಗಳನ್ನು ದಾನಮಾಡಿದುದು.

೧೪-೧-೧೫೧೭ ವಿಷ್ಣುಕಾಂಚಿಗೆ ಕೃಷ್ಣದೇವರಾಯನ ಭೇಟಿ.

೬-೨-೧೫೧೭ 'ಮಹಾಮುಖಂ' ಉತ್ಸವದ ಸಂದರ್ಭದಲ್ಲಿ ಕೃಷ್ಣದೇವರಾಯನು, ಕುಂಭಕೋಣಂ ಸಂದರ್ಶಿಸಿದು.

೧೫೧೭ ಪೋರ್ತುಗೀಜ ಗವರ್ನರನಾದ ಲೊಪೊ ಸೋರೆಸ್ ಕ್ರಿಸ್ತಾವೊ ಡಿ ಫಿಗುರೆಡೊ-ನನ್ನು ಕುದುರೆಗಳೊಂದಿಗೆ ಕೃಷ್ಣದೇವರಾಯನ ಆಸ್ಥಾನಕ್ಕೆ ಕಳಿಸಿದುದು.

೧೫೧೮ ಕೃಷ್ಣದೇವರಾಯನು 'ಚಾಟುರ್' ವಶಪಡಿಸಿಕೊಂಡುದು.

೨೫-೪-೧೫೧೮ ಕೃಷ್ಣಾನದೀ ತೀರದಲ್ಲಿ, ಕೃಷ್ಣದೇವರಾಯನು 'ಮನುಚರಿತ'ದ ಕರ್ತೃ ಅಲ್ಲಸಾನಿ ಪೆದ್ದನ್ನನಿಗೆ, ಗ್ರಾಮವೊಂದನ್ನು ದತ್ತಿಬಿಟ್ಟುದು.

೮.೯.೧೫೧೮ ತಿರುಪತಿದೇವಾಲಯದ ವಿಮಾನಕ್ಕೆ ಚಿನ್ನದಲೇಪ ಮಾಡುವ ಕಾರ್ಯದ ಮುಕ್ತಾಯ.

೧೬-೧೦-೧೫೧೮ ತಿರುಮಲಾದೇವಿಗೆ ಪುತ್ರೋತ್ಸವದ ಸ್ಮರಣಾರ್ಥ, ಕೃಷ್ಣದೇವ-ರಾಯನು ತಿರುಪತಿಗೆ ಭೇಟಿ ನೀಡಿದುದು.

೨೭-೧-೧೫೧೯ ಕೃಷ್ಣದೇವರಾಯನಿಂದ 'ಆಮುಕ್ತಮಾಲ್ಯ'ದ ರಚನಾರಂಭ.

೮-೮-೧೫೧೯ ಕೃಷ್ಣದೇವರಾಯನು, ಪ್ರತಾಪರುದ್ರಗಜಪತಿಯಿಂದ ವಶಪಡಿಸಿಕೊಂಡ ಕಳಿಂಗದಂಡಪಾಟಕ್ಕೆ ಸೇರಿದ ಕೆಲವು ಗ್ರಾಮಗಳನ್ನು, ಸಿಂಹಾಚಲ ದೇವಸ್ಥಾನಕ್ಕೆ ದತ್ತಿಬಿಟ್ಟುದು.

೧೩-೨-೧೫೨೦ ಗೋವೆಯಿಂದ, ಕೆಂಪುಸಮುದ್ರಕ್ಕೆ ಸಕ್ವೇರಾನ ನಿರ್ಗಮನ.

೧೫೨೦ (ಫೆಬ್ರುವರಿ) ಕೃಷ್ಣದೇವರಾಯನ ರಾಯಚೂರ ಮುತ್ತಿಗೆ.

೧೯-೫-೧೯೨೦ ರಾಯಚೂರು ವಶಪಡಿಸಿಕೊಳ್ಳಲು. ವಿಜಾಪುರ ವಿಜಯನಗರಗಳ ಮಧ್ಯೆ ಕದನ ಹಾಗೂ ಗೊಬ್ಬೂರು, ಸಗರ, ಸುರಪುರ ಮತ್ತು ನಯಿರಾಮಣ

ಕಪನಗಳಲ್ಲಿ, ಬಿಜಾಪುರ ಸೈನ್ಯದ ಸೋಲು, ಇಬ್ರಾಹಿಮ್ ಆದಿಲ್‌ಶಹಾನು ರಾಯಚೂರು ಪ್ರದೇಶದಿಂದ ಕಾಲ್ತೆಗೆದುದು.

೧೫೨೦ ನಾಗಲಾದೇವಿಯ ನೆನಪಿಗಾಗಿ ಕೃಷ್ಣದೇವರಾಯನು ನಾಗಲಾಪುರ ಕಟ್ಟಿಸಿದ್ದು;

— ನಾಗಲಾಪುರದ ಬಳಿ, ಪೋರ್ತುಗೀಜ ಇಂಜನಿಯರ ಜೋ ಡಿ ಲಾ ಪೋಂಟೆಯಸಹಾಯದಿಂದ ಕೃಷ್ಣದೇವರಾಯನು ಜಲಾಶಯವೊಂದನ್ನು ನಿರ್ಮಿಸಿದುದು;

— ಅಪ್ಪಯ್ಯ ದೀಕ್ಷಿತನ ಜನನ.

೧೫೨೦–೧೫೨೨ ವಿಜಯನಗರಕ್ಕೆ ಪೋರ್ತುಗೀಜ ಪ್ರವಾಸಿ ಡೊಮಿಂಗೊ ಪೇಸನ ಆಗಮನ ಮತ್ತು ವಾಸ್ತವ್ಯ.

೧೯-೨-೧೫೨೧ ರಾಣಿಯರೊಂದಿಗೆ, ಕೃಷ್ಣದೇವರಾಯನು, ತಿರುಪತಿಗೆ ಪುನಃ ಭೆಟ್ಟಿ ನೀಡಿದ್ದು.

೧೫೨೧ (ಜುಲೈ) ವಿಜಯನಗರದ ಅಧಿಕಾರಿ ಕಂಠಮರಾಜ ಸಿಂಗರಾಜು, ರಾಯಚೂರಿನಲ್ಲಿ ರಂಗನಾಥ ದೇವಾಲಯ ಕಟ್ಟಿಸಿದುದು.

೧೫-೭-೧೫೨೧ ಕೃಷ್ಣದೇವರಾಯನು ರಾಯಚೂರು, ಆದವಾನಿ, ಮಾನುವ ಮತ್ತು ಪಾನುಂಗಲ್ಲು ಕೋಟೆಗಳನ್ನು ಗೆದ್ದನಂತರ ಭೀಮಾ–ಕೃಷ್ಣಾನದಿಗಳ ಸಂಗಮ ಸ್ಥಳವಾದ ಕಡಲೂರನ್ನು ಸಂದರ್ಶಿಸಿದ್ದು.

೧೫೨೧ ಕೃಷ್ಣದೇವರಾಯನು ಕಲುಬರಿಗೆಯನ್ನು ಗೆದ್ದು, ಬಹಮನಿ ವಂಶವನ್ನು ಪುನಃ ಸ್ಥಾಪಿಸಿದ್ದು;

— ತೆಲುಗು ಚೋಳವಂಶದ ತಿಮ್ಮರಾಜನಿಂದ ಹಜಾರ ರಾಮಸ್ವಾಮಿ ದೇವಸ್ಥಾನದ ಮುಂದೆ ಉತ್ಸವ ಮಂಟಪದ ನಿರ್ಮಾಣ.

೧೫೨೨ ಕೃಷ್ಣದೇವರಾಯನಿಂದ ಸಿಂಹಳದ ವಿಜಯ (?)

೧೫೨೩ ಸಾಳ್ವ ತಿಮ್ಮನ ನೇತೃತ್ವದಲ್ಲಿ ವಿಜಯನಗರದ ಸೈನ್ಯ ಪೊಂಡದ ಮೇಲೆ ಏರಿ ನಡೆದಾಗ ಬಿಜಾಪುರದ ಅಸದ್ ಖಾನನಿಂದ ಪರಾಭವಗೊಂಡುದು;

— ಕೃಷ್ಣದೇವರಾಯನ ಬಿಜಾಪುರದ ದಾಳಿ;

— ಆದಿಲ್‌ಖಾನನಿಂದ ಕೃಷ್ಣದೇವರಾಯನು ಕಲುಬರಿಗೆಯನ್ನು ವಶಪಡಿಸಿಕೊಂಡುದು;

— ಮೂವರು ಬಹಮನೀ ರಾಜಪುತ್ರರನ್ನು ಸೆರೆಯಿಂದ ಬಿಡಿಸಿ, ಹಿರಿಯನನ್ನು ಬಹಮನೀ ಅರಸನನ್ನಾಗಿ ಮಾಡಿದುದು.

೧೫೨೪ ಕೃಷ್ಣದೇವರಾಯನು, ತನ್ನ ಮಗ ತಿರುಮಲರಾಯನನ್ನು, ಸಹರಾಜನೆಂದು (co-ruler) ಘೋಷಿಸಿದ್ದು.

೧೫೨೪ ವಿಜಾಪುರದ ಅಸದ್‌ಖಾನ, ಗೋವೆಯನ್ನು ವಶಪಡಿಸಿಕೊಂಡುದು;

— ಕೃಷ್ಣದೇವರಾಯನು. ಸಲೆ ತಿರುಮಲ ಮಹಾರಾಯನಪುರವನ್ನು ಕಟ್ಟಿಸಿದುದು;

— ಕೃಷ್ಣದೇವರಾಯನಿಂದ, ಅನಂತಪದ್ಮನಾಭ ದೇವಾಲಯದ ನಿರ್ಮಾಣ;

— ಇಸ್ಮಾಯಿಲ್ ಆದಿಲ್‌ಶಹನೊಡನೆ, ಬುರ್ಹಾನ್ ನಿಜಾಮಶಹಾನ ಸೋದರಿ ಮರ್ಯಂಬೇಗಂಳ ಮದುವೆ.

೧೫೨೫ ಕೃಷ್ಣದೇವರಾಯನ ಮಗ ತಿರುಮಲರಾಯನ ಮರಣ;

— ರಾಯಸಂ ಕೊಂಡಮರಸನ ಮರಣ.

ಸುಮಾರು ೧೫೨೫ ನಂಜುಂಡ ಕವಿಯಿಂದ 'ಕುಮಾರರಾಮನ ಸಾಂಗತ್ಯ'ದ ರಚನೆ.

೧೫೨೬ ವೈಯಪ್ಪನು ಶೆಂಜಿಯ ನಾಯಕನಾದುದು.

೧೫೨೮ ವಿಜಯನಗರದಲ್ಲಿ ಲಕ್ಷ್ಮೀನರಸಿಂಹ (ಉಗ್ರನರಸಿಂಹ) ಮೂರ್ತಿಯ ಪ್ರತಿಷ್ಠಾಪನೆ.

೧೫೨೯ ಕೃಷ್ಣದೇವರಾಯನ ಮರಣ;

— ಮಧುರೆಯಲ್ಲಿ, ವಿಶ್ವನಾಥನಾಯಕನು, 'ಮಧುರೆಯನಾಯಕ' ರಾಜ್ಯವನ್ನು ಸ್ಥಾಪಿಸಿದನು;

— ಪೋರ್ತುಗೀಜ ಪ್ರವಾಸಿ ಕಾಸ್ಟನ್‌ಹೇಡ ಭಾರತಕ್ಕೆ ಬಂದುದು.

೨೦-೧೧-೧೫೨೯ ಕಾಳಹಸ್ತಿಯಲ್ಲಿ ಅಚ್ಯುತರಾಯನ ಪಟ್ಟಾಭಿಷೇಕ.

೧೫೨೯ ಅಚ್ಯುತರಾಯನು ಪ್ರತಾಪರುದ್ರಗಜಪತಿಯನ್ನು ಸೋಲಿಸಿದುದು.

೧೫೨೯-೩೦ ಕುಲಿಕುತುಬ್‌ಶಹನು, ಕೊಂಡವೀಡನ್ನು ವಶಪಡಿಸಿಕೊಳ್ಳಲೆತ್ನಿಸಿದಾಗ, ವಿಜಯನಗರದಿಂದ ಸೋಲನ್ನನುಭವಿಸಿದ್ದು.

ಸುಮಾರು ೧೫೩೦ ವೀರಭದ್ರನಿಂದ 'ವೀರಭದ್ರವಿಜಯ,' ಲಿಂಗಮಂತ್ರಿಯಿಂದ 'ಕಬ್ಬಿಗರ ಕೈಪಿಡಿ' ರಚನೆ;

— ತೆನಾಲಿ ರಾಮಲಿಂಗಕವಿ, ತನ್ನ 'ಉದ್ಭಟಾರಾಧ್ಯ ಚರಿತಮು' ಗ್ರಂಥವನ್ನು ಕೊಂಡವೀಡಿನ ಯೇಸುದೇಚನಿಗೆ ಅರ್ಪಿಸಿದ್ದು.

೧೫೩೦ ಇಸ್ಮಾಯಿಲ್ ಆದಿಲ್‌ಶಹನು, ಅಲ್ಲಾವುದ್ದೀನ ಇಮಾದ್‌ಶಹ ಹಾಗೂ ಅಮೀರ್ ಬಾರಿದ್‌ರ ಸಹಾಯದಿಂದ ರಾಯಚೂರು, ಮುದಗಲ್ ಕೋಟೆಗಳನ್ನು ಗೆದ್ದುದು;

— ಮಂಗಳೂರನ್ನು ಪೋರ್ತುಗೀಜರು ಸುಟ್ಟದ್ದು.

೧೫೩೧ ಕುಲಿಕುತುಬ್‌ಶಹನು. ವಿಜಯನಗರದಿಂದ ಕೊಂಡಪಲ್ಲಿಯನ್ನು ವಶಪಡಿಸಿ-ಕೊಂಡದ್ದು;

— ಅಚ್ಯುತರಾಯನು ಕೊಂಡಪಲ್ಲಿಯನ್ನು ತಿರುಗಿ ಪಡೆದದ್ದು.

೧೫೩೨ (ಜನೆವರಿ–ಜುಲೈ) ಶಾಲುವನಾಯಕ (ಶೆಲ್ಲಪ್ಪ)ನ ದಂಗೆ;

— ತಿರುವಾಡಿಯ ಅರಸ ಉದಯಮಾರ್ತಾಂಡವರ್ಮ ಮತ್ತು ತುಂಬಿಚಿನಾಯಕರು ಶಾಲುವನಾಯಕನ ಪಕ್ಷ ಸೇರಿದುದು;

— ಶಾಲುವನಾಯಕನ ದಂಗೆ ಅಡಗಿಸಲು ಅಚ್ಯುತರಾಯನು ಕಾಳಹಸ್ತಿ, ಕಾಂಚಿ, ತಿರುವಣ್ಣಾಮಲೈ ಮಾರ್ಗವಾಗಿ ಶ್ರೀರಂಗಂ ತಲುಪಿದ್ದು;

— ತಾಮ್ರಪರ್ಣಿಯುದ್ಧ;

— ತಿರುವಾಡಿಯ ಅರಸು ಉದಯಮಾರ್ತಾಂಡವರ್ಮ, ಶಾಲುವನಾಯಕ ಹಾಗೂ ತುಂಬಿಚಿನಾಯಕರ ಸೋಲು.

೧೫೩೨ ಅಚ್ಯುತರಾಯನು, ತಿರುವಾಡಿ ಪ್ರದೇಶದಿಂದ, ವಿಜಯಸಾಧಿಸಿ ಹಿಂತಿರುಗಿದ ಸಲಕರಾಜು ಚಿನ್ನತಿರುಮಲನನ್ನು ಸಂಭ್ರಮದಿಂದ ಸ್ವಾಗತಿಸಿದುದು;

— ವಿಜಯನಗರದ ವಿಠ್ಠಲಮಂದಿರದಲ್ಲಿ ವ್ಯಾಸರಾಯರು ಯೋಗವರದ ನರಸಿಂಹ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದು;

— ಶೆಜ್ಜಪ್ಪನಾಯಕನಿಂದ ತಂಜಾವೂರಿನಲ್ಲಿ ನಾಯಕವಂಶದ ಸ್ಥಾಪನೆ.

೧೫೩೩ (ಜನೆವರಿ) ಅಚ್ಯುತರಾಯನು ತನ್ನ ರಾಣಿ ವರದಾಂಬಿಕಾದೇವಿ ಹಾಗೂ ಮಗ ಕುಮಾರವೆಂಕಟನೊಂದಿಗೆ ತಿರುಪತಿಗೆ ದರ್ಶನವಿತ್ತುದು.

೧೫೩೩ ತಮಿಳು ಪ್ರಾಂತಗಳಿಗೆ ಸಲಕರಾಜು ಚಿನ್ನತಿರುಮಲನು ಮಹಾಮಂಡಳೇಶ್ವರ-ನೆಂದು ನೇಮಕಗೊಂಡುದು;

— ಗೇರುಸೊಪ್ಪೆಯ ಅಭಿನವವಾದಿವಿದ್ಯಾನಂದನಿಂದ 'ಕಾವ್ಯಸಾರ'ದ ರಚನೆ;

— ಅಚ್ಯುತರಾಯನು 'ಸುವರ್ಣಮೇರು' ದಾನಮಾಡಿದ ನೆನಪಿಗಾಗಿ, ಓದೂರು ತಿರುಮಲಮ್ಮನು ಸಂಸ್ಕೃತದಲ್ಲಿ ಪದ್ಯ ರಚಿಸಿದ್ದು.

೨೩-೧೨-೧೫೩೩ ತಿರುಪತಿಗೆ ಅಚ್ಯುತರಾಯನ ಭೆಟ್ಟಿ.

೧೫೩೪ ವಿಜಯವಾಡದಲ್ಲಿ ಅಚ್ಯುತರಾಯ.

ಸುಮಾರು ೧೫೩೫ ಸಾಳ್ವ ತಿಮ್ಮರಸನ ಮರಣ;

— 'ರಾಯವಾಚಕಂ' ಗ್ರಂಥದ ರಚನೆ.

೧೫೩೬ ಸುನೊ ಡಿ ಕುನ್ಹನು ರಾಚೋಲದಲ್ಲಿ ಕೋಟೆ ಕಟ್ಟಿಸಿದ್ದು, ಅದನ್ನು ಇಬ್ರಾಹಿಂ ಆದಿಲ್‌ಶಹಾನು ನಾಶಪಡಿಸಿದ್ದು.

೧೫೩೭ ಆದವಾನಿಯನ್ನು ವಶಪಡಿಸಿಕೊಳ್ಳಲು ಇಬ್ರಾಹಿಂ ಆದಿಲ್‌ಶಹಾನ ವ್ಯರ್ಥ ಪ್ರಯತ್ನ;
— ಮೊದಲನೇ ಕೆಂಪೇಗೌಡನಿಂದ ಬೆಂಗಳೂರು ನಗರದ ಸ್ಥಾಪನೆ;
— ಅಚ್ಯುತರಾಯನು ಪುನಃ ತಿರುಪತಿಯನ್ನು ಸಂದರ್ಶಿಸಿದ್ದು.

೧೫೩೯ (ಮೇ) ಚಿದಂಬರಂನ, ನಟರಾಜ ದೇವಸ್ಥಾನದ ಆವರಣದಲ್ಲಿ ಅಚ್ಯುತರಾಯನಿಂದ 'ತಿಳ್ಳೈಗೋವಿಂದರಾಜದೇವರ' ಮೂರ್ತಿ ಸ್ಥಾಪನೆ.

೧೫೩೯ ಅಚ್ಯುತರಾಯನು ರಾಜಧಾನಿಯಲ್ಲಿ ಅಚ್ಯುತರಾಯಸ್ವಾಮಿ ದೇವಾಲಯ ಕಟ್ಟಿಸಿದ್ದು.

ಸುಮಾರು ೧೫೪೧ ಸಾಳ್ವಗೋವಿಂದರಾಜನ ಮರಣ.

೧೫೪೨ ಅಚ್ಯುತರಾಯನ ಮರಣ;
— ಪೋರ್ತುಗೀಜ ಗವರ್ನರ್ ಅಫಾನ್ಸೊ ಡಿ ಸೌಸನು ಭಟ್ಕಳವನ್ನು ಮುತ್ತಿದುದು;
— ಸಂತ ಫ್ರಾನ್ಸಿಸ್ ಕ್ಸೇವಿಯರ್ ಭಾರತಕ್ಕೆ ಆಗಮಿಸಿದುದು;
— ವೆಂಕಟಾದ್ರಿಯ ವಶದಲ್ಲಿದ್ದ ಆದವಾನಿಯನ್ನು ಬಿಜಾಪುರದ ಅಸದ್‌ಖಾನನು ಹಿಡಿದುಕೊಳ್ಳುವಲ್ಲಿ ವಿಫಲನಾದುದು;
— ವೆಂಕಟಾದ್ರಿಯ ಸೈನ್ಯದ ಮೇಲೆ ಅಸದ್‌ಖಾನನ ಆಕಸ್ಮಿಕ ದಾಳಿ; ವೆಂಕಟಾದ್ರಿಯ ಪಲಾಯನ, ವೆಂಕಟಾದ್ರಿಯ ಮನೆಯವರ ಬಂಧನ, ಅಸದ್‌ಖಾನನೊಂದಿಗೆ ಒಪ್ಪಂದ ಮತ್ತು ವೆಂಕಟಾದ್ರಿಯ ಪರಿವಾರದವರ ವಿಮೋಚನೆ;
— ಮೊದಲನೆಯ ವೆಂಕಟನ ಸಿಂಹಾಸನಾರೋಹಣ;
— ಸಲಕರಾಜು ಚಿನ್ನತಿರುಮಲನು ರಾಜಪ್ರತಿನಿಧಿಯಾಗಿ ನೇಮಕವಾದುದು;
— ಸಲಕರಾಜು ಚಿನ್ನತಿರುಮಲನಿಂದ ಮೊದಲನೆಯ ವೆಂಕಟನ ಕೊಲೆ;
— ಅಳಿಯ ರಾಮರಾಯನು ಸಲಕರಾಜು ಚಿನ್ನತಿರುಮಲನಿಂದ ಪೆನುಗೊಂಡೆಯನ್ನು ಹಿಡಿದುಕೊಂಡದ್ದು.

೧೫೪೨–೪೩ ಗಂಡಿಕೋಟೆಯ ಮೇಲೆ ಚಿನ್ನತಿರುಮಲನು ದಂಡೆತ್ತಿ ಹೋದುದು;
— ಕೋಮಲಿ ಕದನದಲ್ಲಿ ಅಳಿಯ ರಾಮರಾಯನು ಚಿನ್ನತಿರುಮಲನನ್ನು ಸೋಲಿಸಿದ್ದು;
— ರಾಮರಾಯನು ಕಂದನವೋಲು (ಕರ್ನೂಲು) ಪ್ರಾಂತವನ್ನು ಹೊಕ್ಕದ್ದು;
— ಬೇತಂ ಚರ್ಲ ಮತ್ತು ಜೂಟೂರ್ ಯುದ್ಧಗಳಲ್ಲಿ ಚಿನ್ನತಿರುಮಲನ ಸೋಲು ಹಾಗೂ ರಾಮರಾಯನು ಕಂದನವೋಲನ್ನು ಗೆದ್ದುದು.

೧೫೪೩ ಜೆಡಗಲ್ಲು ಯುದ್ಧದಲ್ಲಿ ಚಿನ್ನತಿರುಮಲನು ರಾಮರಾಯನಿಂದ ಸೋಲನ್ನನು-ಭವಿಸಿದ್ದು;

— ಆದವಾನಿಯನ್ನು ರಾಮರಾಯನು ವಶಪಡಿಸಿಕೊಂಡದ್ದು;

೧೫೪೩ (ಸೆಪ್ಟಂಬರ) ವಿಜಯನಗರದ ಕಡೆಗೆ ರಾಮರಾಯನು ನಡೆದುದು;

— ತುಂಗಭದ್ರಾ ಕದನದಲ್ಲಿ ರಾಮರಾಯನಿಂದ ಚಿನ್ನತಿರುಮಲನ ಸೋಲು ಹಾಗೂ ಸಾವು.

೭-೧೧-೧೫೪೩ ರಾಮರಾಯನು ಸದಾಶಿವನ ಜೊತೆ ವಿಜಯನಗರ ಹೊಕ್ಕದ್ದು;

— ಸದಾಶಿವರಾಯನ ಸಿಂಹಾಸನಾರೋಹಣ.

೧೫೪೩-೧೫೫೦ ರಾಮರಾಯನು ರಾಜಪ್ರತಿನಿಧಿಯಾಗಿ ಆಳಿದಕಾಲ.

೧೫೪೩ ಬಿಜಾಪುರದ ವಿರುದ್ಧ ಅಹಮದನಗರ ಮತ್ತು ಗೋಲ್ಕೊಂಡಗಳೊಂದಿಗೆ ರಾಮರಾಯನ ಮೈತ್ರಿ;

— ಅಹಮದನಗರದಿಂದ ಸೊಲ್ಲಾಪುರ, ರಾಮರಾಯನಿಂದ ರಾಯಚೂರು ಪ್ರದೇಶ ವಶ.

೧೫೪೪ ತಿರುಮಲೈ, ಕೊಳ್ಳೆ ಹೊಡೆಯಲು ಪೋರ್ತುಗೀಜ ಗವರ್ನರ ಮಾರ್ಟಿನ್ ಅಲ್ಫಾನ್ಸೊ ಡಿಸೌಸನಿಂದ ವ್ಯರ್ಥ ಪ್ರಯತ್ನ.

೧೬-೬-೧೫೪೪ ವಿಜಯನಗರದ ವಿಠ್ಠಲರಾಯನು ಟ್ರಾವಂಕೋರ್ ಪ್ರದೇಶದ ಮೇಲೆ ದಾಳಿ ಮಾಡಿದಾಗ, ಜನರು ಅಲ್ಲಿಂದ ಓಡಿಹೋದುದಾಗಿ ಸಂತ ಫ್ರಾನ್ಸಿಸ್ ಕ್ಸೇವಿಯರನು ತನ್ನ ಪತ್ರವೊಂದರಲ್ಲಿ ಉಲ್ಲೇಖಿಸಿದುದು.

೧೫೪೪ (ಅಗಷ್ಟ) ವಿಠ್ಠಲರಾಯನು ಟ್ರಾವಂಕೋರ್ ರಾಜನನ್ನು ಕೊಟ್ಟೂರ ಕದನ-ದಲ್ಲಿ ಸೋಲಿಸಿ, ಪುಣ್ಣೈಕಾಯಲ್‌ನಲ್ಲಿ ಪೋರ್ತುಗೀಜರಿಗೆ ಸೇರಿದ ಪ್ರದೇಶ ಗಳನ್ನು ಸುಟ್ಟು, ಟುಟಿಕೋರಿನ್ ವಶಪಡಿಸಿಕೊಂಡು, ತನ್ನ ಅಳಿಯನನ್ನು ಪೋರ್ತುಗೀಜರ ಸೆರೆಯಿಂದ ವಿಮುಕ್ತಿಗೊಳಿಸಿದ್ದು.

೧೫೪೪-೧೫೭೫ ಸದಾಶಿವರಾಯನು ಕೆಳದಿಯ ಅರಸನಾಗಿ ಆಳಿದಕಾಲ.

೧೫೪೫ ಮಾರ್ಟಿನ್ ಅಫಾನ್ಸೊ ಡಿಸೌಸನ ಸ್ಥಾನದಲ್ಲಿ ಜೋ ಡಿ ಕಾಸ್ಟ್ರೊನನ್ನು ಪೋರ್ತಗೀಜ ಗವರ್ನರನೆಂದು ನೇಮಿಸಿದ್ದು.

೧೬-೨-೧೫೪೭ ಪೋರ್ತಗೀಜ ಮತ್ತು ವಿಜಯನಗರಗಳ ನಡುವೆ ಸಂಧಿ;

— ಪೋರ್ತಗೀಜರು **ಸಾಲಸೆಟ** ಮತ್ತು **ಬಾರ್ದೇಜ**ಗಳ ಒಡೆಯರೆಂದು ವಿಜಯನಗರ ಒಪ್ಪಿಕೊಂಡದ್ದು.

೧೯-೯-೧೫೪೭ ಪೋರ್ತುಗೀಜರು ಮತ್ತು ವಿಜಯನಗರಗಳ ನಡುವೆ ಸಂಧಿ; ಪೋರ್ತುಗೀಜರು ಕುದುರೆಗಳನ್ನು ವಿಜಯನಗರಕ್ಕೆ ಮಾರುವುದಾಗಿಯೂ ಮತ್ತು ವಿಜಯನಗರವು ತನ್ನ ವಿದೇಶಿ ವ್ಯಾಪಾರವನ್ನು ಪೋರ್ತುಗೀಜ ಬಂದರುಗಳ ಮೂಲಕ ಮಾಡುವುದಾಗಿಯೂ ಉಭಯತರು ಒಪ್ಪಿ-ಕೊಂಡುದು.

೬-೧೦-೧೫೪೭ ಬಿಜಾಪುರದ ವಿರುದ್ಧ, ಪೋರ್ತುಗೀಜರು ಮತ್ತು ಅಹಮದನರದ ಮಧ್ಯೆ ಸ್ನೇಹ ಒಪ್ಪಂದ.

೧೫೪೭ ಇಬ್ರಾಹಿಂ ಆದಿಲ್‌ಶಹಾನು ಸಾಲಪೆಟೆ ಮತ್ತು ಬಾರ್ದೇಜಗಳನ್ನು ವಶಪಡಿಸಿಕೊಳ್ಳಲೆತ್ನಿಸಿದಾಗ ಪೋರ್ತುಗೀಜರಿಂದ ಪರಾಜಿತನಾದದು.

೨೨-೮-೧೫೪೮ ಇಬ್ರಾಹಿಂ ಆದಿಲ್‌ಶಹಾನು **ಸಾಲಸೆಟೆ** ಮತ್ತು **ಬಾರ್ದೇಜಗಳು** ಪೋರ್ತುಗೀಜರ ಸ್ವತ್ತುಗಳೆಂದು ಒಪ್ಪಿಕೊಂಡದ್ದು.

೧೫೪೮ ರಾಮರಾಯನ ಸಹಾಯದಿಂದ ಬುರ್ಹಾನ್ ನಿಜಾಂ ಶಹನು ಕಲ್ಯಾಣವನ್ನು ವಶಪಡಿಸಿಕೊಂಡುದು.

೧೫೪೮-೪೯ ಬಿಜಾಪುರದ ಅಸದ್‌ಖಾನನ ಮರಣ.

೧೫೪೯ ದೊಣೇರು ಕೋನೇರಿನಾಥನ 'ಬಾಲಭಾಗವತಂ' ಗ್ರಂಥ ರಚನೆಯ ಮುಕ್ತಾಯ.

೧೫೪೯ ಬುರ್ಹಾನ್ ನಿಜಾಂ ಶಹ ಮತ್ತು ರಾಮರಾಯನ ನಡುವೆ ಸ್ನೇಹ, ಒಪ್ಪಂದ;

— ಬಿಜಾಪುರ ಮತ್ತು ಬೀದರಗಳ ಮಧ್ಯೆ ಸ್ನೇಹ, ಒಪ್ಪಂದ.

೨೩-೧೦-೧೫೪೯ ಬುರ್ಹಾನ್ ನಿಜಾಂ ಶಹಾ ಮತ್ತು ರಾಮರಾಯನ ಸೈನ್ಯಗಳು ಕಲ್ಯಾಣದ ಹತ್ತಿರ ಇಬ್ರಾಹಿಂ ಆದಿಲ್‌ಶಹನ ಸೈನ್ಯದ ಮೇಲೆ ದಾಳಿ ಮಾಡಿ; ದುದು;

— ಅಹಮದನಗರದಿಂದ ಕಲ್ಯಾಣದ ವಶ.

೧೫೫೦ ಜಮ್‌ಷೀದ್ ಕುತ್ಬ್ ಶಹಾನ ಮರಣ.

ಸುಮಾರು ೧೫೫೦ ಸಾಳ್ವನಿಂದ 'ಭಾರತ', ಗುರುಲಿಂಗ ವಿಭುವಿನಿಂದ 'ಭಿಕ್ಷಾಟನ ಚರಿತ್ರೆ', ಬಸವಾಂಕನಿಂದ 'ಉದ್ಭಟದೇವ ಚರಿತೆ', ಪೆರಿಯಾ ಪಟ್ಟಣದ ದೊಡ್ಡಯ್ಯನಿಂದ 'ಚಂದ್ರಪ್ರಭಜಿನ ಪುರಾಣ' ಮತ್ತು ಚನ್ನಬಸವಾಂಕನಿಂದ 'ಮಹಾದೇವಿಯಕ್ಕನ ಪುರಾಣಂ'ಗಳ ರಚನೆ.

೧೫೫೧ ವಿಠ್ಠಲರಾಯನ ಸೈನಿಕರಿಂದ ಪೋರ್ತುಗೀಜ ಜೆಸುಯಿಟ್ ಪಾದ್ರಿ ಪಾವುಲೋ ಡಿ ವಲ್ಲೆಯ ಬಂಧನ ಹಾಗೂ ಪರವರಿಂದ ಅವನ ಬಿಡುಗಡೆ.

೧೫೫೨ ರಾಮರಾಯ ಮತ್ತು ಅಹಮದನಗರದ ಸೈನಿಕರಿಂದ ಸೊಲ್ಲಾಪುರದ ವಶ.

೧೫೫೩ (ಮೇ) ಇಚಿಕಾಲಿಯ ನೇತೃತ್ವದಲ್ಲಿ ಮುಸ್ಲಿಮರಿಂದ ಪುನ್ನೈಕಾಯಲ್‌ನ ವಶ;

— ವಿಠ್ಠಲರಾಯನು ಕ್ಯಾಪ್ಟನ್ ಕುಟಿನೋನ ಹೆಂಡತಿ ಮಕ್ಕಳನ್ನು ಸೆರೆಹಿಡಿದು ಟುಟಿಕೋರಿನ್‌ನಲ್ಲಿ ಬಂಧನದಲ್ಲಿಟ್ಟದ್ದು;

— ಕ್ಯಾಪ್ಟನ್ ಕುಟಿನೋ ಮತ್ತು ಅವನ ಕುಟುಂಬದವರನ್ನು, ರಾಮರಾಯನು ಪೋರ್ತುಗೀಜ ಅಧಿಕಾರಿ ಕ್ಯಾಪ್ಟನ್ ಗಿಲ್ ಫರ್ನಾಂಡೀಜ್ ಡಿ ಕಾರ್ವಲ್ಹೊನ ವಿನಂತಿಯ ಮೇರೆಗೆ ಬಿಡುಗಡೆ ಮಾಡಿದ್ದು.

೧೫೫೩ ಬುರ್ಹಾನ್ ನಿಜಾಂಶಹನ ಮರಣ ಮತ್ತು ಹುಸೇನ್ ನಿಜಾಂಶಹಾನ ಸಿಂಹಾಸನಾರೋಹಣ.

೧೫೫೪ ಸದಾಶಿವಯೋಗಿಯಿಂದ 'ರಾಮನಾಥವಿಲಾಸ'ದ ರಚನೆ.

೧೫೫೫ ಇಬ್ರಾಹಿಂ ಆದಿಲ್‌ಶಹನ ವಿರುದ್ಧ, ಪೋರ್ತುಗೀಜರು ಪೊಂಡಾದಲ್ಲಿ ಅಬ್ದುಲ್ಲನನ್ನು ಬಿಜಾಪುರದ ಸುಲ್ತಾನನೆಂದು ಮನ್ನಿಸಿದ್ದು.

೧೫೫೫-೫೬ ಇಬ್ರಾಹಿಂ ಆದಿಲ್‌ಶಹಾನು ಪೊಂಡಾವನ್ನು ಪುನಃ ವಶಪಡಿಸಿಕೊಂಡುದ್ದಲ್ಲದೇ ಅಬ್ದುಲ್ಲನನ್ನು ಸೆರೆಹಿಡಿದದ್ದು.

೧೫೫೬ ಪೋರ್ತುಗೀಜರಿಂದ ಗೋವೆಯಲ್ಲಿ ಪ್ರಥಮ ಮುದ್ರಣಾಲಯದ ಸ್ಥಾಪನೆ.

೧೫೫೭ ಹುಸೇನ್ ನಿಜಾಂಶಹನು ಗುಲ್ಬರ್ಗಾವನ್ನು ಮುತ್ತಿದುದು;

— ರಾಮರಾಯನನ್ನು ಇಬ್ರಾಹಿಂ ಆದಿಲ್‌ಶಹನು ಸಹಾಯಕ್ಕಾಗಿ ಯಾಚಿಸಿದ್ದು;

— ರಾಮರಾಯನು, ಕೃಷ್ಣಾ ಮತ್ತು ಭೀಮಾ ನದಿಗಳ ಸಂಗಮಸ್ಥಳದಲ್ಲಿ, ಇಬ್ರಾಹಿಂ ಆದಿಲ್‌ಶಹ, ಹುಸೇನ್‌ನಿಜಾಂ ಶಹ ಹಾಗೂ ಇಬ್ರಾಹಿಂ ಕುತ್ಬ್‌ಶಹರೊಡನೆ ಸಮಾಲೋಚಿಸಿ ಬಿಕ್ಕಟ್ಟನ್ನು ಪರಿಹರಿಸಿದ್ದು;

— ವಿಜಯನಗರ ಮತ್ತು ಆದಿಲ್‌ಶಹರ ನಡುವೆ ಸ್ನೇಹ, ಒಪ್ಪಂದ;

— ಅಲಿ ಆದಿಲ್‌ಶಹನಿಂದ ಧಾರವಾಡದ ಕೋಟೆಯ ನಿರ್ಮಾಣ;

— ರತ್ನಾಕರವರ್ಣಿಯಿಂದ 'ಭರತೇಶ ವೈಭವ'ದ ರಚನೆ.

೧೪-೧೦-೧೫೫೮ ರಾಮರಾಯನಿಂದ ಅಹಮದನಗರದ ಮೇಲೆ ಮೊದಲದಾಳಿ;

— ರಾಮರಾಯ ಮತ್ತು ಅಲಿ ಆದಿಲ್‌ಶಹರ ಕೈಯಲ್ಲಿ ನಿಜಾಂಶಹನ ಸೋಲು;

— ಅಹಮದನಗರದ ಕೊಳ್ಳೆ.

೧೫೫೯ ತ್ರಾವಣಕೋರ ಸ್ವಾತಂತ್ರ್ಯ ಘೋಷಿಸಿದ್ದು;
— ನೇಮಣ್ಣನಿಂದ 'ಜ್ಞಾನಭಾಸ್ಕರ ಚರಿತೆ'ಯ ರಚನೆ.

ಸುಮಾರು ೧೫೬೦ ವಿರಕ್ತ ತೋಂಟದಾರ್ಯನಿಂದ 'ಪಾಲ್ಕುರಿಕೆ ಸೋಮನಾಥೇಶ್ವರ ಪುರಾಣ,' ತೆನಾಲಿರಾಮಲಿಂಗ ಕವಿಯಿಂದ 'ಪಾಂಡುರಂಗ ಮಹಾತ್ಮೆ' ಮತ್ತು 'ಘಟಿಕಾಚಲ ಮಹಾತ್ಮೆ'ಗಳ ರಚನೆ.

೧೫೬೦ ಅಲೆಕ್ಸ್ ಡೈಯಸ್ ಫಾಲ್ಕಾವ್ ಗೋವೆಯ ಪಾಪಂಡವಿಚಾರಣಾಧಿಕಾರಿಯಾಗಿ ನೇಮಕ.

೧೫೬೧ ಅಲಿ ಆದಿಲ್‌ಶಹನಿಂದ ಬಿಜಾಪುರದಲ್ಲಿ ಗಗನಮಹಲ್ ಕಟ್ಟಡ ನಿರ್ಮಾಣ.

೧೫೬೧-೬೨ ರಾಜಧಾನಿಯಲ್ಲಿ ಸದಾಶಿವರಾಯನು ವಿಷ್ಣುದೇವಾಲಯವೊಂದನ್ನು ನಿರ್ಮಿಸಿದ್ದು.

೧೫೬೩ ಇಬ್ರಾಹಿಂ ಕುತ್‌ಬಶಹ ಮತ್ತು ಹುಸೇನಿಜಾಂಶಹರ ನಡುವೆ ಸ್ನೇಹ, ಒಪ್ಪಂದ;
— ಕಲ್ಯಾಣದಮೇಲೆ ಅವರ ದಾಳಿ;
— ರಾಮರಾಯ ಮತ್ತು ಅಲಿ ಬರೀದರ ಸಹಾಯದೊಂದಿಗೆ ಅಲಿ ಆದಿಲ್ ಶಹನು ಕಲ್ಯಾಣವನ್ನು ಮುತ್ತಿ, ಹುಸೇನ್ ನಿಜಾಂಶಹನನ್ನು ಸೋಲಿಸಿ, ಅಹಮದನಗರದ ಕಡೆ ಮುನ್ನಡೆದು, ಅಹಮದನಗರವನ್ನು ವಶಪಡಿಸಿಕೊಂಡು ಕೊಳ್ಳೆ ಹೊಡೆದುದು.

ಸುಮಾರು ೧೫೬೪ ಚಿನ್ನಕೇಶವಪ್ಪನಾಯಕನು ತುಂಬಿಚಿನಾಯಕನ ದಂಗೆಯನ್ನು ಹತ್ತಿಕ್ಕಿದ್ದು.

೧೫೬೪ ಪುರಂದರದಾಸನ ಮರಣ;
— ಹುಸೇನ ನಿಜಾಂಶಹನ ಮಗ ಮುರ್ತಾಜನು ಅಲಿ ಆದಿಲ್‌ಶಹನ ಸೋದರಿಯನ್ನು ಮದುವೆಯಾದದ್ದು;
— ಬಿಜಾಪುರ, ಬೀದರ, ಅಹಮದನಗರ ಮತ್ತು ಗೋಲ್ಕಂಡಗಳು ವಿಜಯನಗರದ ವಿರುದ್ಧ ಹೋರಾಡಲು ಒಪ್ಪಂದ ಮಾಡಿಕೊಂಡದ್ದು.

೨೪-೧೨-೧೫೬೪ ಬೀದರ, ಬಿಜಾಪುರ, ಅಹಮದನಗರ ಮತ್ತು ಗೊಲ್ಕೊಂಡಗಳ ಸೈನ್ಯಗಳು ಬಿಜಾಪುರದಿಂದ ಕೃಷ್ಣಾನದೀತೀರದ ಕಡೆ ಮುನ್ನಡೆದುದು.

೨೩-೧-೧೫೬೫ ವಿಜಯನಗರ ಹಾಗೂ ಮುಸ್ಲಿಮ್ ಸೈನ್ಯಗಳ ನಡುವೆ ಕದನ;
— ರಾಮರಾಯನ ಸೆರೆ ಮತ್ತು ಮರಣ.

೨೩-೧-೧೫೬೫ ವಿಜಯನಗರ ಸೈನ್ಯದ ಸೋಲು;

— ತಿರುಮಲನು, ಸದಾಶಿವ ಹಾಗೂ ರಾಜ್ಯದ ಬೊಕ್ಕಸದೊಂದಿಗೆ ಪೆನುಗೊಂಡೆಗೆ ಪಲಾಯನ ಮಾಡಿದ್ದು.

(೧೫೬೫ ಫೆಬ್ರುವರಿ-ಜೂನ್) ಮುಸ್ಲಿಂ ಸೈನ್ಯದಿಂದ, ರಾಜಧಾನಿ ವಿಜಯನಗರದ ಸುಲಿಗೆ.

೧೫೬೫ (ಜುಲೈ) ಮುಸ್ಲಿಂ ಸೈನ್ಯಗಳು ರಾಜಧಾನಿ ವಿಜಯನಗರದಿಂದ ಹೊರಬಿದ್ದುದು.

೧೫೬೫ (ಜುಲೈ-ಅಗಷ್ಟ) ತಿರುಮಲನು ವಿಜಯನಗರಕ್ಕೆ ಹಿಂದಿರುಗಿದುದು.

೧೫೬೬ ಪೋರ್ತುಗೀಜರು ಮಂಗಳೂರನ್ನು ಪುನಃ ಕೊಳ್ಳೆಹೊಡೆದುದು.

೧೫೬೭ ಶ್ರೀರಂಗದಲ್ಲಿ ಸದಾಶಿವ;

— ವಿಜಯನಗರಕ್ಕೆ ಸೀಜರ್ ಫ್ರೆಡ್ರಿಕ್‌ನ ಸಂದರ್ಶನ;

— ಪೋರ್ತುಗೀಜರು ಮಂಗಳೂರನ್ನು ವಶಪಡಿಸಿಕೊಂಡು ಸೇಂಟ್ ಸೆಬಾಸ್ಟಿನ್ ಕೋಟೆ ಕಟ್ಟಿಸಿದ್ದು.

೧೫೬೯ ಪೋರ್ತುಗೀಜರು ಹೊನ್ನಾವರವನ್ನು ವಶಪಡಿಸಿಕೊಂಡು ಕೋಟೆ ಕಟ್ಟಿಸಿದ್ದು.

೧೫೭೦ ರಾಮರಾಜ ಭೂಷಣನಿಂದ 'ವಸುಚರಿತ್ರಂ'ದ ರಚನೆ;

— ತಿರುಮಲನಿಂದ ಸದಾಶಿವರಾಯನ ಕೊಲೆ, ತುಳುವ ವಂಶದ ಅಂತ್ಯ ಹಾಗೂ ಅರವೀಡು ವಂಶದ ಸ್ಥಾಪನೆ.

ಗ್ರಂಥಋಣ

ಎಸ್. ಕೃಷ್ಣಸ್ವಾಮಿ, ಅಯ್ಯಂಗಾರ್ :

'ಎ ಹಿಸ್ಟರಿ ಆಫ್ ತಿರುಪತಿ' (2 vols), ಮದ್ರಾಸ್, ೧೯೪೧.

'ಸಮ್ ಕಾಂಟ್ರಿಬ್ಯೂಶನ್ಸ್ ಆಫ್ ಸೌಥ್ ಇಂಡಿಯಾ ಟು ಇಂಡಿಯನ್ ಕಲ್ಚರ್', ಕಲ್ಕತ್ತಾ, ೧೯೨೩.

'ಎಟ್ಸ್ ರಿಮೆಂಬರ್ಡ್ ರೂಲರ್ ಆಫ್ ಎ ಲಾಂಗ್ ಫಾರ್‌ಗಾಟನ್ ಎಂಪಾಯರ್, ಕೃಷ್ಣದೇವರಾಯ ಆಫ್ ವಿಜಯನಗರ', A. D.೧೫೦೯-೧೫೩೦, ಮದ್ರಾಸ್, ೧೯೧೭.

'ಸೋರ್ಸೆಸ್ ಆಫ್ ವಿಜಯನಗರ ಹಿಸ್ಟರಿ', ಮದ್ರಾಸ್, ೧೯೧೯.

ಪಿ. ಬಿ. ದೇಸಾಯಿ : 'ಎ ಹಿಸ್ಟರಿ ಆಫ್ ಕರ್ನಾಟಕ', ಧಾರವಾಡ, ೧೯೭೦.

'ವಿಜಯನಗರ ಸಾಮ್ರಾಜ್ಯ', ಧಾರವಾಡ, ೧೯೬೫.

ಎ. ಕೃಷ್ಣಸ್ವಾಮಿ : ‘ದಿ ತಮಿಳ್ ಕಂಟ್ರಿ ಅಂಡರ್ ವಿಜಯನಗರ’, ಅಣ್ಣಾಮಲೈನಗರ, ೧೯೬೪

ಎ. ಎಚ್. ಲಾಂಗ್‌ಹರ್ಸ್ಟ್ : ‘ಹಂಪಿ ರೂಯಿನ್ಸ್, ಡಿಸ್ಕ್ರೈಬ್ಡ್ ಅಂಡ್ ಇಲ್ಲಸ್ಟ್ರೇಟೆಡ್’, ಮದ್ರಾಸ್, ೧೯೧೭.

ಟಿ. ವಿ. ಮಹಾಲಿಂಗಂ : ‘ಅಡ್ಮಿನಿಸ್ಟ್ರೇಶನ್ ಆಂಡ್ ಸೋಷಿಯಲ್ ಲೈಫ್ ಅಂಡರ ವಿಜಯನಗರ’, ಮದ್ರಾಸ್, ೧೯೭೫.

ಆರ್. ಎಸ್. ಮುಗಳಿ : ‘ಕರ್ನಾಟಕ ಸಾಹಿತ್ಯ ಚರಿತ್ರೆ’, ೧೯೫೩.

ಆರ್. ನರಸಿಂಹಾಚಾರ್ : ‘ಕರ್ನಾಟಕ ಕವಿಚರಿತೆ’, ಸಂ. II. ಬೆಂಗಳೂರು, ೧೯೭೩.

ಓ. ರಾಮಚಂದ್ರಯ್ಯ : ‘ಸ್ಟಡೀಸ್ ಆನ್ ಕೃಷ್ಣದೇವರಾಯ ಆಫ್ ವಿಜಯನಗರ’, ವಾಲ್ಟೇರ್ ೧೯೫೩.

ಎಂ. ರಾಮರಾವ್ : ‘ಕೃಷ್ಣದೇವರಾಯ’, ನ್ಯೂಡೆಲ್ಲಿ, ೧೯೭೧.

ಕೆ. ವಿ. ರಮೇಶ್ : ‘ಎ ಹಿಸ್ಟರಿ ಆಫ್ ಕೆನರಾ’, ಧಾರವಾಡ, ೧೯೭೦.

ಸೂರ್ಯನಾರಾಯಣರಾವ್ : ‘ಎ ಹಿಸ್ಟರಿ ಆಫ್ ವಿಜಯನಗರ ದಿ ನೆವ್ಹರ್ ಟು ಬಿ ಫಾರ್-ಗಾಟನ್ ಎಂಪಾಯರ್’ ಮದ್ರಾಸ್, ೧೯೦೫.

ಬಿ. ಎ. ಸಾಲೆತ್ತೊರೆ :

‘ಮಿಡೀವಲ್ ಜೈನಿಸಮ್ ವಿತ್ ಸ್ಪೆಶಲ್ ರೆಫರೆನ್ಸ ಟು ವಿಜಯನಗರ’, ಬಾಂಬೆ, ೧೯೩೮.

‘ಸೋಷಿಯಲ್ ಆಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪಾಯರ್’ (2 vols), ಮದ್ರಾಸ್, ೧೯೫೨.

ಕೆ. ಎ. ನೀಲಕಂಠಶಾಸ್ತ್ರಿ : ‘ಎ ಹಿಸ್ಟರಿ ಆಫ್ ಸೌಥ್ ಇಂಡಿಯಾ’, ಮದ್ರಾಸ್ ೧೯೫೮.

ಕೆ. ಎ. ನೀಲಕಂಠಶಾಸ್ತ್ರಿ ಮತ್ತು ಎನ್. ವೆಂಕಟರಮಣಯ್ಯ :

‘ಫರ್ದರ್ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ,’ ಮದ್ರಾಸ್, ೧೯೪೬.

ರಾಬರ್ಟ್ ಸಿವೆಲ್ : ‘ಎ ಫಾರ್‌ಗಾಟನ್ ಎಂಪಾಯರ್’ ನ್ಯೂಡೆಲ್ಲಿ, ೧೯೬೮.

ಎಚ್. ಕೆ. ಷೇರ್ವಾನಿ : ‘ದಿ ಬಹಮನೀಸ್ ಆಫ್ ದಿ ಡೆಕ್ಕನ್’. ಹೈದರಾಬಾದ, ೧೯೫೩.

ಎಚ್. ಕೆ. ಸಿನ್ಹಾ : ‘ಮಿಡೀವಲ್ ಹಿಸ್ಟರಿ ಆಫ್ ದಿ ಡೆಕ್ಕನ್’, ಹೈದರಾಬಾದ, ೧೯೬೪.

ಎನ್. ವೆಂಕಟರಮಣಯ್ಯ : ‘ದಿ ಅರ್ಲಿ ಮುಸ್ಲಿಮ್ ಎಕ್ಸ್‌ಪ್ಯಾನ್ಶನ್ ಇನ್ ದಿ ಡೆಕ್ಕನ್ ಆಂಡ ಸೌಥ್ ಇಂಡಿಯಾ’, ಮದ್ರಾಸ್, ೧೯೪೨.

‘ಓರಿಜಿನ್ ಆಫ್ ವಿಜಯನಗರ, ದಿ ಸಿಟಿ ಆಂಡ್ ದಿ ಎಂಪಾಯರ್’, ಮದ್ರಾಸ್, ೧೯೩೩.

‘ಸ್ಟಡೀಸ್ ಇನ್ ದಿ ಥರ್ಡ್ ಡೈನೆಸ್ಟಿ ಆಫ್ ವಿಜಯನಗರ’, ಮದ್ರಾಸ, ೧೯೩೫.

'ಎಪಿಗ್ರಾಫಿಯಾ ಕರ್ನಾಟಕ'ದ ಎಲ್ಲ ಸಂಪುಟಗಳು.
'ಎಪಿಗ್ರಾಫಿಯಾ ಇಂಡಿಕಾ'ದ ಎಲ್ಲ ಸಂಪುಟಗಳು.
'ಕರ್ನಾಟಕ ಇನ್ಸ್ಕ್ರಿಪ್ಶನ್ಸ್'ದ ಎಲ್ಲ ಸಂಪುಟಗಳು.
'ಜರ್ನಲ್ ಆಪ್ ಇಂಡಿಯನ್ ಹಿಸ್ಟರಿ' ಸಂಪುಟಗಳು.
'ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ'ಯ ಸಂಪುಟಗಳು.
'ಕ್ವಾರ್ಟರ್ಲಿ ಜರ್ನಲ್ ಆಪ್ ದಿ ಆಂಧ್ರ ಹಿಸ್ಟಾರಿಕಲ್ ರಿಸರ್ಚ ಸೊಸೈಟಿ' ಸಂಪುಟಗಳು.

• •

ನಾಲ್ಕು ಜನರಿಗೆ

• ಅಶೋಕ ಮಠದ

ನೀವು,
ಸಿಂದೀ ಗಿಡದ ಕೆಳಗೆ ಮೆಯ್ದು
ಆಕಳಹಾಲು–ಶಿಂದಿ ಎನ್ನುವುದನ್ನು
ಹಂಚು ಕಾಯ್ದಾಗ ರೊಟ್ಟಿ
ಸುಟ್ಟುಕೋಳ್ಳುವುದನ್ನು–ಕಂಡು
ನಾನೂ ಪ್ರಯತ್ನಿಸಿದ್ದೇನೆ.
ಆದರೆ........
ವ್ಯಾವಹಾರಿಕಜಗತ್ತಿನಲ್ಲಿ
ಬದುಕಲು ನೀವೇ ಅರ್ಹರು.
ನನಗೆ ಗೊತ್ತು,
ನನ್ನ ದುಃಖದಲ್ಲಿಯೂ
ತಪ್ಪದೇ ಶೋಕಸಂದೇಶ ಕಳಿಸಿ
ಸಮಭಾಗಿಗಳಾಗುವಿರೆಂದು.
ನನ್ನ ಪಯಣ
ನಿಮ್ಮ ಹೆಗಲ ಮೇಲೆ.
(ನೀವು ಮನಸ್ಸು ಮಾಡಿದರೆ)
ನನ್ನದೂ–ಅಂತ್ಯಯಾತ್ರೆ ಹೊರಟೀತು
ಆಗ
ಆಕಾಶದತ್ತ ಮುಖಮಾಡಿ
ಕಣ್ಣೆದುರಿನ ಮೊದಲ-ಶಾಶ್ವತ-ಕತ್ತಲೆ
ಜ್ವಾಲೆಗಳ ಬಂಧನ–ಅನುಭವಿಸಿ
ನಿಮ್ಮೆದುರಿಗೇ
ಹೇಳ ಹೆಸರಿಲ್ಲವಾಗಿ
ಬೂದಿಬೂದಿಯಾಗಿ........

ಅಂತ್ಯದರ್ಶನ ಕೊಡುವೆ
(ನಿಮಗೆ ಋಣಿಯಾಗಿ)
ನಿಮಗೆ ಈ ಭಾವೀ ಗಂಭೀರ
-ಸಮಾರಂಭದ ಆಮಂತ್ರಣವಿದೆ
(ಕರ್ತವ್ಯವೆಂದಾದರೂ)
ಬರುವಿರಲ್ಲ ?

• •

ಭಾರತೀಯ ಕಾವ್ಯಮೀಮಾಂಸೆಯಲ್ಲಿ ಔಚಿತ್ಯಸಿದ್ಧಾಂತ

● ವ್ಹಿ. ಎನ್‌. ಭಟ್‌

ಪೀಠಿಕೆ :

ಅಲಂಕಾರಶಾಸ್ತ್ರದ ಗುರಿ ಕಾವ್ಯತತ್ವ ಸಾಕ್ಷಾತ್ಕಾರ. ಈ ತತ್ವದ ಅನ್ವೇಷಣೆ ಕಾವ್ಯಮೀಮಾಂಸೆಯ ಅಡಿಯಿಂದ ಮುಡಿಯ ವರೆಗೂ ನಾನಾಮುಖವಾಗಿ ನಡೆದಿದೆ. ಶಬ್ದಾರ್ಥಸಂಯೋಗದಿಂದ ಪ್ರಾರಂಭಿಸಿ ಕಾವ್ಯದಲ್ಲಿ ಬ್ರಹ್ಮಾಸ್ವಾದಸದೃಶವಾದ ಅನುಭವ ಉಂಟೆಂದು ಹೇಳುವ ವರೆಗೂ ಆಲಂಕಾರಿಕರು ಶ್ರಮಿಸಿದ್ದಾರೆ; ವಿಚಾರ ಮಂಥನ ಮಾಡಿದ್ದಾರೆ; ವಿಮರ್ಶಿಸಿದ್ದಾರೆ. ಕಾವ್ಯಸ್ವರೂಪವನ್ನು ತರ್ಕಬದ್ಧವಾದ ರೀತಿಯಲ್ಲಿ ನಿರೂಪಿಸುವ ಪ್ರಯತ್ನದಲ್ಲಿ ಉದ್ಭವಿಸುವ ಸಮಸ್ಯೆಗಳ ಪರಿಹಾರದಲ್ಲಿ ತೊಡಗಿ, ಬುದ್ಧಿಸೂಕ್ಷ್ಮತೆ, ಹೃದಯಸಂಸ್ಕಾರ ಬಲದಿಂದ ಜಯಶಾಲಿಗಳಾಗಿದ್ದಾರೆ. ಅವರ ಗುರಿ ಏಕಮುಖವೂ ವೈಭವೋಪೇತವೂ ಆದುದು. ಆದರೆ ಆ ಸ್ವರೂಪ ವರ್ಣನೆಯಲ್ಲಿ, ಅದನ್ನು ಸೇರಲು ಬೇಕಾಗುವ ಸಾಧನಗಳ ವಿಚಾರದಲ್ಲಿ ಸಂದರ್ಭೋಚಿತವಾಗಿ ಚಾರಿತ್ರಿಕ ತಾರತಮ್ಯಗಳೂ, ಭಿನ್ನಾಭಿಪ್ರಾಯಗಳೂ ತಲೆದೋರಿ ಅಲಂಕಾರ, ರೀತಿ, ಗುಣ, ರಸ, ಧ್ವನಿ, ವಕ್ರೋಕ್ತಿ, ಅನುಮಾನ, ಔಚಿತ್ಯವೆಂಬ ಸಿದ್ಧಾಂತ ವೈವಿಧ್ಯವು ಕಂಡುಬಂದಿದೆ.

ಇವುಗಳಲ್ಲಿ ಕೆಲವು ಸಿದ್ಧಾಂತಗಳು ವಿಶೇಷಮನ್ನಣೆ ಪಡೆದು ಅನುಕರಣೆ, ಅನುಸರಣೆಗಳಿಗೆ ವಿಷಯಗಳಾಗಿ ಸತ್ವವೈಶಾಲ್ಯಗಳಿಂದ ಕೂಡಿ ಅಲಂಕಾರ, ರೀತಿ, ರಸ, ಧ್ವನಿ ಎಂಬ ಪ್ರಸ್ಥಾನಗಳೆನಿಸಿಕೊಳ್ಳುವ ಅರ್ಹತೆಯನ್ನು ಹೊಂದಿವೆ. ಕೆಲವು ನಿರ್ದಿಷ್ಟತೆಯಿಂದ ಕೂಡಿರದೆ, (ಅಥವಾ) ಹಳೆಯ ವಿಚಾರಗಳನ್ನು ನೂತನದೃಷ್ಟಿಯಲ್ಲಿ ನಿರೂಪಿಸುವ ಸಾಧನಗಳಂತಿದ್ದು, ಕೇವಲ ಆಯಾ ಕರ್ತೃವಿನಿಂದ ಕೊಡಲ್ಪಟ್ಟ ಪ್ರತಿಪಾದನೆಯ ಆಧಾರದ ಪರಿಮಿತಿಯುಳ್ಳವುಗಳಾಗಿ ನಿಂತಿವೆ. ಗುಣ, ವಕ್ರೋಕ್ತಿ, ಔಚಿತ್ಯ ಈ ಬಗೆಯವು. ಪ್ರಸಿದ್ಧವಾದ 'ಧ್ವನಿ' ಪ್ರಸ್ಥಾನದ ವಿರೋಧವೇ ಜೀವವಾಗಿರುವ "ಕಾವ್ಯಾನುಮಿತಿ" (ಅನುಮಾನ) ಎಂಬ ಸಿದ್ಧಾಂತವು ಕಾವ್ಯತತ್ವವನ್ನು ಅವಲಂಬಿಸಿಕೊಂಡಿರದೆ, ತತ್ವಸಾಧನೆಯ ತಾರ್ಕಿಕಪ್ರತಿಪಾದನೆಯಲ್ಲಿ ಪರ್ಯವಸಾನಗೊಂಡು ಅಲಂಕಾರಶಾಸ್ತ್ರದಲ್ಲಿ ಗಮನೀಯವಾದ ಒಂದು ವಿಷಯವಾಗಿದೆ. ಈ ಮೇಲ್ಕಂಡ ಸಿದ್ಧಾಂತಗಳಲ್ಲೊಂದಾದ "ಔಚಿತ್ಯಸಿದ್ಧಾಂತವು" ರೂಪಗೊಂಡ ಬಗೆಯ ಪರಿಶೀಲನೆಯೇ ಪ್ರಕೃತ ಪ್ರಬಂಧದ ವಿಷಯವಾಗಿದೆ.

ಸುಮಾರು ಕ್ರಿ.ಶ.ದ ಪ್ರಾರಂಭದಲ್ಲಿ ಗೋಚರವಾದ ಅಲಂಕಾರಶಾಸ್ತ್ರದ ಏಳೆಂಟು ಶತಮಾನಗಳ ಬೆಳವಣಿಗೆಯಲ್ಲಿ ಕಾವ್ಯತತ್ತ್ವಜಿಜ್ಞಾಸೆಯು ಹಲವಾರು ದೃಷ್ಟಿಗಳಿಂದ ನಡೆದಿರುವುದನ್ನು ಕಾಣಬಹುದು. ಶಬ್ದಾರ್ಥಗಳ ಸಂಯೋಜನೆಯನ್ನು ಕಾವ್ಯಶರೀರವೆಂದು ವ್ಯವಹರಿಸಿ ಅವರಲ್ಲಿ ಕಾವ್ಯತ್ವವನ್ನು ನಿರೀಕ್ಷಿಸಿ ಅಷ್ಟೇ ಕಾವ್ಯವಾಗಬಾರದೆಂದು ಮನಗಂಡ ಕೆಲವು ಪ್ರಾಚೀನಾಲಂಕಾರಿಕರು ಆ ಶಬ್ದಾರ್ಥಗಳಿಗೆ ಸಂಬಂಧಪಟ್ಟ ಅಲಂಕಾರ, ಗುಣ ಮುಂತಾದ ಅಂಶಗಳನ್ನು ಚರ್ಚಿಸಿದರು. ಶಬ್ದಾರ್ಥಗಳೆರಡರಲ್ಲೂ ಅವನ್ನು ಗುರುತಿಸಿ ಕಾವ್ಯವು ಅಲಂಕಾರ ಗುಣಗಳಿಂದ ಕೂಡಿದ ಶಬ್ದಾರ್ಥಸಾಹಿತ್ಯವೆಂದರು. ಕಾವ್ಯದಲ್ಲಿ ತಾತ್ವಿಕವಾದ ಒಂದು ಸೌಂದರ್ಯ ಗಮನಕ್ಕೆ ಬಂದು ಅದು ಶಬ್ದಾರ್ಥಗಳಲ್ಲಿ ಮಾತ್ರವಲ್ಲದೇ ಅವುಗಳ ಸಂಯೋಜನೆಯ ಇನ್ನೂ ಕೆಲವು ಸಂದರ್ಭಗಳಲ್ಲಿ ಗೋಚರವಾದುದರಿಂದ ಆ ಸೌಂದರ್ಯೋತ್ಪಾದಕವಾದ ಅಂಶವು ಕಾವ್ಯಾಂತರ್ಗತವಾಗಿರಲೇಬೇಕೆಂಬ ಜ್ಞಾನ ಅವರಿಗುಂಟಾಯಿತು. ಆಗಲೇ ಕಾವ್ಯವಲ್ಲಿ ಇರಬಹುದಾದ ಆತ್ಮದ ವಿವೇಚನೆ ಉದಯಿಸಿತೆಂದು ಹೇಳಬಹುದು. ಒಟ್ಟಿನಲ್ಲಿ ಶಬ್ದಾರ್ಥಗಳ ಸಂಯೋಜನೆಯ ಬಾಹ್ಯವೂ ಅಂತರಂಗವೂ ಆಗಿರುವ ಅಂಶಗಳ ಗುಣಗಳನ್ನು ತಾರತಮ್ಯದಿಂದ ವಿವೇಚಿಸಿ, ಈ ಅಂಶಗಳು ಕಾವ್ಯಸೌಂದರ್ಯ ದೃಷ್ಟಿಯಿಂದ ಪರಸ್ಪರ ಚೆನ್ನಾಗಿ ಹೊಂದಿಕೊಳ್ಳಬೇಕಾದ ಅವಶ್ಯಕತೆಯನ್ನು ಆಲಂಕಾರಿಕರು ಮನಗಂಡರು. ಕಾವ್ಯತತ್ತ್ವ ಯಾವುದೇ ಆಗಿರಲಿ, ಅದರ ಸೌಂದರ್ಯ ಹೇಗಾದರೂ ಉಂಟಾಗಲಿ ಕಾವ್ಯವೆನಿಸಿಕೊಳ್ಳುವ ಶಬ್ದಾರ್ಥ ಸಂಯೋಜನೆಯಲ್ಲಿ ಅದರ ವಿವಿಧ ಅಂಶಗಳು ಒಂದನ್ನೊಂದು ಅವಲಂಬಿಸಿಕೊಂಡು ಸುಸಂಗತವಾಗಿಲ್ಲದಿದ್ದರೆ ಕಾವ್ಯಸೌಂದರ್ಯ ನಷ್ಟವಾಗಿ ದೋಷದಲ್ಲಿ ಪರ್ಯಾವಸಾನವಾಗುವದೆಂಬ ವಿಚಾರ ಅವರಿಗೆ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಕಾವ್ಯಭಾಷೆಯ ವರ್ಣಗಳು, ಪದಗಳು, ಅವುಗಳ ರಚನೆ, ಅಭಿಪ್ರಾಯಗಳು, ಅಲಂಕಾರ, ಗುಣಗಳು, ಮುಂತಾದವುಗಳಲ್ಲಿ ವಸ್ತು ದೇಶ ಕಾಲ ಇತ್ಯಾದಿಗಳಲ್ಲಿ ಅಂಗಿ-ಅಂಗ ಇವುಗಳಲ್ಲಿ ಪರಸ್ಪರ ಸಾಂಗತ್ಯವಿರಲೇಬೇಕೆಂಬ ಅರಿವು ಅವರಿಗೆ ಸಂದರ್ಭೋಚಿತವಾಗಿ ಉಂಟಾಯಿತು.

ಈ ಬಗೆಯ ಹೊಂದಿಕೆಯ ವಿಚಾರವು ಪ್ರಾಚೀನ ಆಲಂಕಾರಿಕನಾದ ಭರತನ 'ನಾಟ್ಯಶಾಸ್ತ್ರ'ದಲ್ಲಿಯೇ ಸೂಚಿತವಾಗಿ ಕ್ರಮಕ್ರಮವಾಗಿ ಅಭಿವೃದ್ಧಿಹೊಂದಿ ಕ್ಷೇಮೇಂದ್ರನ "ಔಚಿತ್ಯವಿಚಾರಚರ್ಚೆ"ಯಲ್ಲಿ ಒಂದು ಸಿದ್ಧಾಂತವಾಗಿ ರೂಪುಗೊಂಡು ಸಂಸ್ಕೃತಸಾಹಿತ್ಯವಿಮರ್ಶೆಯಲ್ಲಿ ತನ್ನದೇ ಆದ ವಿಶಿಷ್ಟಸ್ಥಾನವನ್ನು ಹೊಂದಿದೆ. ಭರತನಿಂದ ಪ್ರಾರಂಭವಾಗಿ ಕ್ಷೇಮೇಂದ್ರನ ಕಾಲದ ವರೆಗೆ ಈ ಸಿದ್ಧಾಂತವು ರೂಪಗೊಂಡ ಬಗೆಯ ಪರಿಶೀಲನೆ ಇಲ್ಲಿ ಅವಶ್ಯಕ.

೧ ಭರತ :

ಅಲಂಕಾರಶಾಸ್ತ್ರದ ಪ್ರಮುಖ ಪ್ರಸ್ಥಾನವಾದ "ರಸ"ದ ಶಾಸ್ತ್ರೀಯ ವಿವೇ

ಚನೆಯುನ್ನೊಳಗೊಂಡ ಪ್ರಥಮಗ್ರಂಥ "ಭರತನ ನಾಟ್ಯಶಾಸ್ತ್ರ". ಅಭಿನಯಗಳೂ ಅನುಭಾವ ಮತ್ತು ಸಂಚಾರೀಭಾವಗಳೂ ರಸಾಭಿವ್ಯಕ್ತಿಗೆ ಹೊಂದಿಕೊಳ್ಳುವಂತೆ ಇರಬೇಕೆಂದು ಭರತನು ಹೇಳುತ್ತಾನೆ. ರಸಾಭಿವ್ಯಕ್ತಿಗೆ ಅನುಗುಣವಲ್ಲದ ರೀತಿಯಲ್ಲಿ ಇವುಗಳು ಪ್ರಯೋಗಿಸಲ್ಪಟ್ಟರೆ ಅದು ಅತ್ಯಂತ ದೊಡ್ಡ ದೋಷವಾಗಿ ಮೇಖಲೆಯನ್ನು ಎದೆಯಲ್ಲಿ ಧರಿಸಿದರೆ ಆಗುವಂತೆ ಹಾಸ್ಯಾಸ್ಪದವಾಗುತ್ತದೆಂದು ಹೇಳುತ್ತಾನೆ–

"ಅದೇಶಜೋ ಹಿ ವೇಷಸ್ತು ನ ಶೋಭಾಂ ಜನಯಿಷ್ಯತಿ
ಮೇಖಲೋರಸಿ ಬಂಧೇ ಚ ಹಾಸ್ಯಾಯೈವೋಪಜಾಯತೆ"

ನಾಟ್ಯಶಾಸ್ತ್ರ XXIII ೬೯

ಆದ್ದರಿಂದ ರಸಾನುಗುಣವಲ್ಲದ ಪ್ರಯೋಗಗಳನ್ನು ತ್ಯಜಿಸಿ ರಸಪ್ರತೀತಿಗೆ ಉಪಕಾರವಾಗುವಂತೆ ಅಲಂಕಾರಾದಿಗಳನ್ನು ಪ್ರಯೋಗಿಸುವುದೇ ಕಲಾತ್ಮಕಶೈಲಿಯ ಸಾರ. ಇದೇ ಔಚಿತ್ಯವೆಂಬ ಪಾರಿಭಾಷಿಕ ಪದಪ್ರಯೋಗವಿಲ್ಲದಿದ್ದರೂ, ಆ ಅಭಿಪ್ರಾಯವು ಹೆಜ್ಜೆಹೆಜ್ಜೆಗೂ ಸೂಚಿತವಾಗಿರುವದನ್ನು ನಾವು ಕಾಣಬಹುದು. ಡಾ. ರಾಘವನ್ ರವರ ಮಾತಿನಲ್ಲಿ ಹೇಳುವುದಾದರೆ ‹We can thus see how this doctrine of appropriateness, propriety and adoptation... all comprehended in the one word Aucitya, is directly derivable from Bharata''.

ಮೇಲೆ ಉಲ್ಲೇಖಿಸಲಪಟ್ಟಿರುವ ಶ್ಲೋಕದ ಅಭಿಪ್ರಾಯವನ್ನೇ ಮುಂದೆ ಕ್ಷೇಮೇಂದ್ರನೂ ತನ್ನ "ಔಚಿತ್ಯವಿಚಾರಚರ್ಚೆ"ಯಲ್ಲಿ ವ್ಯಕ್ತಪಡಿಸುತ್ತಾನೆ.

೨ ಭಾಮಹ ಮತ್ತು ದಂಡಿ :

ಗುಣದೋಷ ಪ್ರಸ್ತಾಪದ ಸಂದರ್ಭದಲ್ಲಿ ಮೇಲೆ ಹೇಳಿದ ಹೊಂದಿಕೆಯ ಅಭಿಪ್ರಾಯವನ್ನು ಭಾಮಹ–ದಂಡಿ ಇವರೂ ಸೂಚಿಸಿದ್ದಾರೆ. ಔಚಿತ್ಯವೆನ್ನುವುದು ಕಾವ್ಯದ ವಿವಿಧ ಅಂಗಗಳಲ್ಲಿ ಕಂಡುಬರುವ ಸಾಮರಸ್ಯ; ಮತ್ತು ಪ್ರಮಾಣಬದ್ಧತೆ ಸಂದರ್ಭಾನುಗುಣವಲ್ಲದ ಗುಣಗಳು ದೋಷಗಳಾಗುತ್ತವೆ." ಕಾವ್ಯದೋಷವೂ" ಒಂದು ರೀತಿಯಲ್ಲಿ ಅನೌಚಿತ್ಯವೇ. ಆದ್ದರಿಂದ ಕಾವ್ಯದಲ್ಲಿ ಅನೌಚಿತ್ಯವನ್ನೇ ಅವರು ದೋಷವೆಂದೂ ಔಚಿತ್ಯವನ್ನೇ ಗುಣಾಲಂಕಾರಾದಿಗಳೆಂದೂ ವ್ಯವಹರಿಸುತ್ತಿದ್ದಂತೆ ತೋರುತ್ತದೆ. ಗುಣ ಮತ್ತು ದೋಷಗಳು ಅನಿತ್ಯಗಳೆಂದೂ ಸಂದರ್ಭಾನುಗುಣವಾಗಿ ದೋಷವು ಗುಣವೂ, ಗುಣವು ದೋಷವೂ ಆಗಬಹುದೆಂದು ಭಾಮಹಾದಿಗಳ ಅಭಿಪ್ರಾಯ.

ಉದಾಹರಣೆಗಾಗಿ : ಶೃಂಗಾರರಸಕ್ಕೆ ಉಚಿತವಾದ ವೈದರ್ಭೀರೀತಿಯು ರೌದ್ರ, ವೀರ, ಅದ್ಭುತ ರಸಗಳನ್ನು ಸಮರ್ಥವಾಗಿ ಪ್ರತಿಬಿಂಬಿಸುವ ಗೌಡೀರೀತಿಯು ಶೃಂಗಾರರಸಾಭಿವ್ಯಕ್ತಿಯ ಸಂದರ್ಭದಲ್ಲಿ ಅನುಚಿತವಾಗಬಹುದು. ಈ ಗುಣದೋಷಗಳ ಅನಿತ್ಯತೆಯನ್ನೇ ಭಾಮಹಾಚಾರ್ಯರು ಈ ರೀತಿ ಹೇಳುತ್ತಾರೆ :

ಸನ್ನಿವೇಶ ವಿಶೇಷಾತ್ತು ದುರುಕ್ತಮಪಿ ಶೋಭತೇ
ನೀಲಂ ಪಲಾಶಮಾಬದ್ಧಮಂತರಾಲೇ ಸ್ರಜಾಮಿವ
ಕಿಂಚಿದಾಶ್ರಯ ಸೌಂದರ್ಯಾತ್ ಧತ್ತೇಶೋಭಾಂ ಅಸಾಧ್ವಪಿ
ಕಾಂತಾ – ವಿಲೋಚನನ್ಯಸಂ ಮಲೀಮಸಮಿವಾಂಜನಮ್

ಉದಾಹರಣೆಗಾಗಿ 'ಅಪಾರ್ಥ' ಒಂದು ದೋಷ; ಆದರೆ ಹುಚ್ಚನ ಪಾತ್ರವನ್ನು ಚಿತ್ರಿಸುವಾಗ ಅದು (ಶಕಾರನ ಪಾತ್ರದಂತೇ) ಗುಣವಾಗುತ್ತದೆ. ದೋಷಗಳೆಲ್ಲಾ ಔಚಿತ್ಯದಿಂದ ಗುಣವಾಗುವುದೆಂದು ದಂಡಿಯೂ ಸಾರುತ್ತಾನೆ—

ವಿರೋಧಸ್ಸಕಲೋಪೇಷ ಕದಾಚಿತ್ ಕವಿಕೌಶಲಾತ್ ।
ಉತ್ಕ್ರಮ್ಯ ದೋಷಗಣನಾಂ ಗುಣವೀಥೀಂ ವಿಗಾಹತೇ ॥

ಈ ಸಂದರ್ಭದಲ್ಲಿ ಡಾ. ರಾಘವನ್ನರವರು ಈ ರೀತಿ ಹೇಳುತ್ತಾರೆ :

"The fact of Dosas becoming Gunas recorded by Bhamaha and Dandin means, if it means or implies anything, the doctrine of Aucitya as the only ruling principal holding good in the realm of poetry for ever".

೩ ಯಶೋವರ್ಮ :

ಔಚಿತ್ಯತತ್ವ ಬಹಳ ಪ್ರಾಚೀನವಾಗಿದ್ದರೂ ಆ ಹೆಸರು ಮೊಟ್ಟ ಮೊದಲು ಸಿಕ್ಕುವುದು ಈಗ ತಿಳಿದಮಟ್ಟಿಗೆ ಯಶೋವರ್ಮನ "ರಾಮಾಭ್ಯುದಯ" ನಾಟಕದಲ್ಲಿ. ಅಲ್ಲಿ ಯಶೋವರ್ಮ ಒಳ್ಳೆಯ ನಾಟಕದಲ್ಲಿರಬೇಕಾದ ಅಂಶಗಳನ್ನು ಹೇಳುತ್ತಾ ಅವುಗಳಲ್ಲಿ ಮೊಟ್ಟಮೊದಲು 'ಔಚಿತ್ಯ'ವನ್ನು ಹೇಳುತ್ತಾನೆ. ಮಾತು, ಪಾತ್ರ, ರಸ, ಮುಂತಾದ ಎಲ್ಲಾ ಅಂಗಗಳಲ್ಲಿ ಔಚಿತ್ಯವಿರಬೇಕೆನ್ನುತ್ತಾನೆ. ಇವನು ಹೇಳಿದ "ಪಾತ್ರೌಚಿತ್ಯಂ ಪುಷ್ಟಿ" ಮುಂತಾದ ಮಾತುಗಳನ್ನು ರುದ್ರಟ, ಆನಂದವರ್ಧನರು ಹಿಗ್ಗಿಸಿದ್ದಾರೆ.

ಈ ನಾಟಕದ ಪ್ರಸ್ತಾವನೆಯು ಸಂಸ್ಕೃತಕಾವ್ಯವಿಮರ್ಶಾಭ್ಯಾಸಿಗಳಿಗೆ ಕೂತೂಹಲವನ್ನುಂಟುಮಾಡುವಂತಹ ಕೆಲವು ವಿಷಯಗಳನ್ನೊಳಗೊಂಡಿದೆ. ಯಶೋ

ವರ್ಮನು "ಪ್ರಕೃತ್ಯನುಗತವಾದ ಔಚಿತ್ಯ" ಮತ್ತು "ಪಾತ್ರೋಚಿತವಾದ ರಸೌಚಿತ್ಯ" ಎಂದು ಎರಡು ಔಚಿತ್ಯಪ್ರಕಾರಗಳನ್ನು ಸೂಚಿಸಿದ್ದಾನೆ.

೪ ರುದ್ರಟ :

ದಂಡಿಯಾದ ಮೇಲೆ ಔಚಿತ್ಯವನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ ಅಲಂಕಾರಿಕನೆಂದರೆ ರುದ್ರಟನೇ, ಸರಿ. ಈತನು ತನ್ನ 'ಕಾವ್ಯಾಲಂಕಾರದ' ಎರಡನೆಯ ಅಧ್ಯಾಯದ ಕೊನೆಯಲ್ಲಿ ಯಮಕ ಮುಂತಾದ ಶಬ್ದಾಲಂಕಾರಗಳ ವಿಚಾರ ಮಾಡುವಾಗ ಔಚಿತ್ಯವನ್ನು ಕುರಿತು ಹೇಳುತ್ತಾನೆ.

"ಏತಾಃ ಪ್ರಯತ್ನಾತ್ ಅಧಿಗಮ್ಯ ಸಮ್ಯಕ್ ಔಚಿತ್ಯಮಾಲೋಚ್ಯ ತಥಾರ್ಥಸಂಸ್ಥಮ್ ಮಿಶ್ರಾಃ ಕವೀಂದ್ರೈಃ ಅಘನಾಲ್ಪದೀರ್ಘಾಃ ಕಾರ್ಯಾಮುಹುಶ್ಚೈವ ಗೃಹೀತಮುಕ್ತಾಃ" ರುದ್ರಟನು ಇನ್ನೂ ಅನೇಕ ಕಡೆ ಔಚಿತ್ಯಪದ ಪ್ರಯೋಗಿಸಿದ್ದಾನೆ. ಗುಣದೋಷಗಳ ರಸದ ವಿವೇಚನೆಯಲ್ಲಿ ಅವನು ಇಂತಹ ಔಚಿತ್ಯದ ದೃಷ್ಟಿಯುಳ್ಳವನಾಗಿದ್ದಾನೆ.

ದಂಡಿ ರುದ್ರಟರ ನಂತರ ಆನಂದವರ್ಧನನ 'ಧ್ವನ್ಯಾಲೋಕ'ದಲ್ಲಿ ಔಚಿತ್ಯಪದವು ಸಾಕಷ್ಟು ವಿಮರ್ಶಿತವಾದುದನ್ನು ಕಂಡಾಗ ಔಚಿತ್ಯದ ಬೆಳವಣಿಗೆಯ ಮೂರು ಹಂತವನ್ನು ಕಾಣಬಹುದು. ಅದನ್ನೇ ಡಾ. ರಾಘವನ್ನರು "Thus the three stages to be noticed in the appearence of the name Aucitya is its mention by Yeshovarman. treatment of it, to a small extent in Rudrata and to a large extent in Anandavardhan's Dhvanyaloka''.

೫ ಲೊಲ್ಲಟ :

ಈತನು ರಸೌಚಿತ್ಯವನ್ನು ಪ್ರಧಾನವಾಗಿ ಒತ್ತಿಹೇಳುತ್ತಾನೆ. ದೇಹದ ಯಾವುದೇ ಒಂದು ಅಂಗ ಅತಿಯಾಗಿ ಬೆಳೆದರೆ (ಆನೆಕಾಲಿನಂತೆ) ಅದು ಅನೌಚಿತ್ಯಕ್ಕೆ ಗುರಿಯಾಗುತ್ತದೆ. ಕಾವ್ಯದ ಎಲ್ಲ ಭಾಗಗಳ ಸಮನ್ವಯ ಮತ್ತು ಸಾಮರಸ್ಯವೇ ಅದರ ಯಶಸ್ಸಿಗೆ ಕಾರಣ, ಅದೇ ಔಚಿತ್ಯ. ಅಲಂಕಾರಗಳು ಕೂಡ ಔಚಿತ್ಯವರಿತು ಬರದಿದ್ದರೆ ಸೌಂದರ್ಯಕ್ಕೆ ಕಾರಣವಾಗುವುದರ ಬದಲು ಅದಕ್ಕೆ ಮಾರಕವಾಗುತ್ತದೆ. ಆದುದರಿಂದ ಉಚಿತವಲ್ಲದ ರೀತಿಯಲ್ಲಿ ಬಂದ 'ಚಕ್ರಬಂಧ' 'ಯಮಕಾದಿಗಳು' ರಸಕ್ಕೆ ಕಾರಣವಾಗುವುದರ ಬದಲು ರಸಕ್ಕೆ ಮಾರಕವಾಗುತ್ತವೆ ಎಂಬುದು ಲೊಲ್ಲಟನ ಅಭಿಪ್ರಾಯ.

೬ ಆನಂದವರ್ಧನ :

ಔಚಿತ್ಯಸಿದ್ಧಾಂತದ ಇತಿಹಾಸದಲ್ಲಿ ಆನಂದವರ್ಧನನ ಸ್ಥಾನ ಅತಿ ಹಿರಿದಾದುದು. ಅವನ ಅಭಿಪ್ರಾಯಗಳಿಂದಲೇ ಸ್ಫೂರ್ತಿಹೊಂದಿ ಕ್ಷೇಮೇಂದ್ರನು ತನ್ನ ಸಿದ್ಧಾಂತವನ್ನು

ಸ್ಥಾಪಿಸಿದ್ದಾನೆ. ಔಚಿತ್ಯ ಪದಪ್ರಯೋಗವೂ ಅವರ ಅಭಿಪ್ರಾಯ ಪ್ರಾಮುಖ್ಯಗಳೂ, ಧ್ವನ್ಯಾಲೋಕದಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ಧ್ವನ್ಯಾಲೋಕದ ಮೂರನೆಯ ಉದ್ಯೋತದಲ್ಲಿ ಔಚಿತ್ಯದ ಬಗ್ಗೆ ವಿಸ್ತಾರವಾದ ಚರ್ಚೆಯಿದೆ. ವ್ಯಂಗ್ಯಾರ್ಥವಾದ 'ಧ್ವನಿ' ಎಂಬ ತತ್ವದಲ್ಲಿ ಕಾವ್ಯದ ಹಲವಾರು ಅಂಶಗಳನ್ನು ಸಮನ್ವಯಗೊಳಿಸಿದ ಆನಂದವರ್ಧನನು ಔಚಿತ್ಯದ ಪ್ರಾಮುಖ್ಯವನ್ನರಿತು ಅದನ್ನು ಸಂದರ್ಭೋಚಿತವಾಗಿ ತನ್ನ ಕಾವ್ಯತತ್ವ ಪರಿಶೀಲನೆಯಲ್ಲಿ ಅಳವಡಿಸಿದ್ದಾನೆ. ವರ್ಣೌಚಿತ್ಯ, ಶಬ್ದೌಚಿತ್ಯ, ಗುಣೌಚಿತ್ಯ, ವಿಷಯೌಚಿತ್ಯ, ಪ್ರಬಂಧೌಚಿತ್ಯ, ಪ್ರಕರಣೌಚಿತ್ಯ, ರೀತ್ಯೌಚಿತ್ಯ, ಭಾವೌಚಿತ್ಯ ಮುಂತಾದ ಔಚಿತ್ಯಪ್ರಕಾರಗಳನ್ನು ಆನಂದವರ್ಧನನು ತನ್ನ ಗ್ರಂಥದಲ್ಲಿ ಚರ್ಚಿಸಿದ್ದಾನೆ.

ಧ್ವನಿಯಲ್ಲಿ ವಸ್ತು, ಅಲಂಕಾರ, ರಸ ಎಂಬ ಮೂರು ವಿಷಯಗಳನ್ನು ಸೇರಿಸಿದ್ದರೂ ಕೇವಲ ವ್ಯಂಗ್ಯವಾದ 'ರಸ'ವೇ ಶ್ರೇಷ್ಠವಾದ ಧ್ವನಿಯೆಂಬ ಅಭಿಪ್ರಾಯವುಳ್ಳ ಅವನು ಅಲಂಕಾರ, ಗುಣ ಮುಂತಾದವು ರಸಕ್ಕೇ ಹೊಂದಿಕೊಂಡಿರಬೇಕಾದ ಔಚಿತ್ಯವನ್ನು ವಿಮರ್ಶಿಸಿ ಅದರ ಪ್ರಾಮುಖ್ಯವನ್ನು ಈ ರೀತಿ ಹೇಳುತ್ತಾನೆ.

"ರಸಭಾವಾದಿ ತಾತ್ಪರ್ಯಮಾಶ್ರಿತ್ಯ ವಿನಿವೇಶನಂ
ಅಲಂಕೃತೀನಾಂ ಸರ್ವಾಸಾಂ ಅಲಂಕಾರತ್ವಸಾಧನಮ್" ॥

ಈ ಅಲಂಕಾರಗಳ ಔಚಿತ್ಯವನ್ನು ದೀರ್ಘವಾಗಿ ವಿವೇಚಿಸಿ ಔಚಿತ್ಯರಹಿತವಾದ ಯಮಕಾದಿ ಶಬ್ದಾಲಂಕಾರವನ್ನು ಖಂಡಿಸುತ್ತಾನೆ. ಅರ್ಥಲಂಕಾರಗಳಿಗೂ ಈ ಮಾತು ಅನ್ವಯಿಸುತ್ತದೆ. ಅದನ್ನು ಕುರಿತು ಹೇಳುವಾಗ—

ರಸಾಕ್ಷಿಪ್ತತಯಾ ಯಸ್ಯ ಬಂಧಃ ಶಕ್ಯಕ್ರಿಯೋ ಭವೇತ್
ಅಪೃಥಗ್ಯತ್ನನಿರ್ವರ್ತ್ಯಃ ಸೋಽಲಂಕಾರೋ ಧನ್ವೌ ಮತಃ ॥

ಅಂದರೆ "ಅಲಂಕಾರಗಳು ರಸಾಕ್ಷಿಪ್ತವಾಗಿರಬೇಕು, ಸನ್ನಿವೇಶಕ್ಕನುಗುಣವಾಗಿಯೂ ಅಪ್ರಯತ್ನಪೂರ್ವಕವಾಗಿಯೂ ಮೂಡಿಬಂದಿರಬೇಕು" ಎಂಬಲ್ಲಿ ಔಚಿತ್ಯದ ಮರ್ಮ ಸೂಚಿತವಾಗಿದೆ.

ಅಲಂಕಾರೌಚಿತ್ಯದ ನಂತರ ಗುಣೌಚಿತ್ಯವನ್ನು ಹೇಳುತ್ತಾನೆ. ಮಾಧುರ್ಯವೋ, ಓಜಸ್ಸೋ, ಪ್ರಸಾದವೋ ರಸಕ್ಕೆ ಅನುಗುಣವಾಗಿರಬೇಕು. ಶೃಂಗಾರರಸಕ್ಕೆ ಸಹಜ ಗುಣ ಮಾಧುರ್ಯ: ಹಾಗೆಯೇ ವೀರರಸಕ್ಕೆ ಓಜಸ್ಸು ಇತ್ಯಾದಿ ಅರಿತಿರಬೇಕು. ಹೀಗೆ ರಸಕ್ಕೆ ಅನುಗುಣವಾಗಿ ಗುಣಗಳೂ ಮತ್ತು ಅದಕ್ಕೆ ಸಂವಾದಿಯಾಗಿ ಸಂಘಟನೆಯೂ ರೂಪುಗೊಳ್ಳುತ್ತದೆ. ಸಂಘಟನೆಯಲ್ಲಿ ಬರುವ ಪದಪ್ರಯೋಗದಲ್ಲಿಯೂ ಔಚಿತ್ಯವಿರಬೇಕು. ಇದನ್ನು ಸಂಘಟನೌಚಿತ್ಯವೆಂದು ಕರೆದಿದ್ದಾನೆ. ಹೀಗೆ ಸನ್ನಿವೇಶ ರಚನೆ, ಪಾತ್ರವರ್ಣನೆ ಇತ್ಯಾದಿಗಳಲ್ಲೂ ಔಚಿತ್ಯವಿರಬೇಕು. ಇವೆಲ್ಲದರಿಂದ ಪ್ರಬಂಧ

ಧ್ವನಿ ಸಿದ್ಧಿಸುತ್ತದೆ. ಕೆಲವುವೇಳೆ ವರ್ಣನೆ ತನಗೆ ತಾನೇ ಚೆನ್ನಾಗಿದ್ದರೂ ಔಚಿತ್ಯ ರಹಿತವಾಗಿರುತ್ತದೆ. ಉದಾ: ಗಿರಿಜಾಕಲ್ಯಾಣದಲ್ಲಿ ಹರಿಹರ ನಾರದನನ್ನು ವೇಶ್ಯಾ ವಾಟಿಕೆಗೆ ಕರೆದುಕೊಂಡು ಹೋದುದನ್ನು ಸ್ಮರಿಸಬಹುದು. ವ್ಯುತ್ಪನ್ನವಾದ ಕವಿ ತನ್ನ ಅನೌಚಿತ್ಯವನ್ನು ಕೆಲವೊಮ್ಮೆ ಮರೆಸುವಷ್ಟು ಸಮರ್ಥನಾಗಿರುತ್ತಾನೆ. ಅದನ್ನೇ ಆನಂದವರ್ಧನನು

"ಅವ್ಯುತ್ಪತ್ತಿಕೃತೋ ದೋಷಃ ಶಕ್ತ್ಯಾ ಸಂಪ್ರಿಯತೇ ಕವೇಃ
ಯಸ್ತು ಅಶಕ್ತಿಕೃತೋ ದೋಷಃ ಝುಟಿತ್ಯೇವಾವಭಾಸತೇ॥"

ಎಂದಿದ್ದಾನೆ.

ಅನೌಚಿತ್ಯವೇ ರಸವಿಘ್ನಕಾರಿ; ಅದುವೇ ರಸಭಂಗಕ್ಕೆ ಕಾರಣ. ಔಚಿತ್ಯವೇ ರಸದ ರಹಸ್ಯ ಎನ್ನುತ್ತಾನೆ ಆನಂದವರ್ಧನ.

"ಅನೌಚಿತ್ಯಾದೃತೇ ನಾನ್ಯತ್ ರಸಭಂಗಸ್ಯ ಕಾರಣಮ್
ಪ್ರಸಿದ್ಧೌಚಿತ್ಯಬಂಧಸ್ತು ರಸಸ್ಯೋಪನಿಷತ್ಪರಾ"

ಔಚಿತ್ಯದ ಪ್ರಸಿದ್ಧ ನಿಯಮಗಳ ಅನುಸರಣೆಯೇ ರಸದ ಪರಮ ರಹಸ್ಯ. ವಾಚ್ಯ–ವಾಚಕಗಳ ಔಚಿತ್ಯವನ್ನು ರಸಾನುಗುಣವಾಗಿ ಯೋಜಿಸುವುದೇ ಮಹಾಕವಿಯ ಮುಖ್ಯ ಕರ್ತವ್ಯವೆಂಬುದು ಆನಂದವರ್ಧನನ ಅಭಿಪ್ರಾಯ.

ವಾಚ್ಯಾನಾಂ ವಾಚಕಾನಾಂ ಚ ಯದೌಚಿತ್ಯೇನ ಯೋಜನಮ್
ರಸಾದಿವಿಷಯೇಣೈತತ್ ಕರ್ಮ ಮುಖ್ಯಂ ಮಹಾಕವೇಃ॥

ಈ ಶ್ಲೋಕದ್ವಯದಲ್ಲಿ ಔಚಿತ್ಯಸಿದ್ಧಾಂತ ಪೂರ್ಣವಾಗಿ ಅಡಕವಾಗಿದೆ.

೭ ರಾಜಶೇಖರ :

"ಕಾವ್ಯಮೀಮಾಂಸಾ" ಕರ್ತೃವಾದ ರಾಜಶೇಖರನು ಔಚಿತ್ಯದ ಪ್ರಾಮುಖ್ಯತೆಯನ್ನು ತನ್ನ ಗ್ರಂಥದಲ್ಲಿ ವಿವರಿಸಿ, ತನ್ನ ಪತ್ನಿಯಾದ ಅವಂತಿಸುಂದರಿಯ ಅಭಿಪ್ರಾಯಗಳನ್ನು ಅಲ್ಲಲ್ಲಿ ಹೇಳುತ್ತಾನೆ.

"ಉಚಿತಾನುಚಿತ ವಿವೇಕೋ ವ್ಯುತ್ಪತ್ತಿಃ ಇತಿ ಯಾಯಾವರೀಯಃ
ತಸ್ಮಾದ್ ರಸೋಚಿತ ಶಬ್ದಾರ್ಥಸೂಕ್ತಿನಿಬಂಧನಃ ಚಾರುಃ"

ಈ ಉಲ್ಲೇಖಗಳು ಕಾವ್ಯಮೀಮಾಂಸೆಯಲ್ಲಿ ಕಂಡುಬರುತ್ತವೆ.

೮ ಅಭಿನವಗುಪ್ತ :

ಔಚಿತ್ಯಸಿದ್ಧಾಂತದ ಚರಿತ್ರೆಯಲ್ಲಿ ಅಭಿನವಗುಪ್ತನ ಸ್ಥಾನವು ಮುಖ್ಯವಾದುದು. 'ಧ್ವನ್ಯಾಲೋಕ'ಕ್ಕೆ ಲೋಚನವೆಂಬ ವ್ಯಾಖ್ಯಾನವನ್ನು ಬರೆದಿರುವ ಈತನು ಆನಂದ

ವರ್ಧನನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವಿವರಿಸಿದ್ದಾನೆ. ಅಲ್ಲದೆ ಅಭಿನವಗುಪ್ತನು 'ಔಚಿತ್ಯ'ವನ್ನು ಸಿದ್ಧಾಂತದ ಸ್ಥಾನಕ್ಕೆ ಏರಿಸಿದ 'ಕ್ಷೇಮೇಂದ್ರ'ನ ಗುರು. ರಸಧ್ವನಿಗಳಿಗೆ ಪೂರಕವಾಗುವಂತೆ ಈತ ಔಚಿತ್ಯವನ್ನು ಪ್ರತಿಪಾದಿಸಿದ್ದಾನೆ.

"ಉಚಿತಶಬ್ದೇನ ರಸವಿಷಯಮ್ ಔಚಿತ್ಯಂ ಭವತೀತಿ ದರ್ಶಯನ್ ರಸಧ್ವನೇಃ ಜೀವಿತತ್ವಂ ಸೂಚಯತಿ, ತದಭಾವೇ ಹಿ ಕಿಮಪೇಕ್ಷಯಾ ಇದಮೌಚಿತ್ಯಂ ನಾಮ ಸರ್ವತ್ರ ಉದ್ಘೋಷ್ಯತೇ ? ಇತಿ ಭಾವಃ" (ಲೋಚನ ಪುಟ-೧೩).

ಶಬ್ದ ಅಲಂಕಾರಾದಿಗಳಲ್ಲಿ ಔಚಿತ್ಯವಿದ್ದಾಗ ಮಾತ್ರ ರಸಧ್ವನಿಯು ಅನುಭವವೇದ್ಯವಾಗುತ್ತದೆ. ಅನುಭವರಹಿತವಾದ ಅಲಂಕಾರಗಳು ಹೆಣಕ್ಕೆ ಮಾಡಿದ ಶೃಂಗಾರದಂತೆ; ಹಾಗೆಯೇ ಭಾವಕ್ಕೆ ಅನುಗುಣವಾಗಿ ಇವು ಮೂಡಿಬರಬೇಕು. ಈತನು ಹೇಳುವ ಇನ್ನೊಂದು ವಿಶೇಷಾಂಶವೆಂದರೆ "ಔಚಿತ್ಯ"ವೆನ್ನುವದು ತನಗೆ ತಾನೇ ಇರುವ ಮೂಲತತ್ವವಲ್ಲ. ಇದಕ್ಕೆ ಇತರ ವಸ್ತುಗಳು ಬೇಕು. ಗುಣ, ಅಲಂಕಾರ, ಪದ ಇವೆಲ್ಲವುಗಳಲ್ಲಿರುವ ಔಚಿತ್ಯ, ರಸಪ್ರತೀತಿಗೆ ಸಹಾಯಕ. ಆದುದರಿಂದ ಔಚಿತ್ಯವೊಂದೇ ಕಾವ್ಯದ ಗುರಿ ಎನ್ನುವಂತಿಲ್ಲ. ಕಾವ್ಯದ ಗುರಿ ರಸ; ಧ್ವನಿಯಿಂದ ಇದು ಸಾಧ್ಯವಾಗುತ್ತದೆ; ಔಚಿತ್ಯದಿಂದ ಧ್ವನಿ ಸಿದ್ಧಿಸುತ್ತದೆ. ರಸ, ಧ್ವನಿ, ಔಚಿತ್ಯ ಈ ಮೂರು ಕಾವ್ಯದ ಜೀವಾಳ. "ಔಚಿತ್ಯವತ್ ರಸಧ್ವನಿಃ" ಔಚಿತ್ಯಭಂಗವೇ ಅಭಾಸ; ಔಚಿತ್ಯವಿಲ್ಲದ ಕಾವ್ಯವು "ಕಾವ್ಯಾಭಾಸ"ವೆನಿಸಿಕೊಳ್ಳುತ್ತದೆ ಎಂಬುದು ಅವನ ಅಭಿಪ್ರಾಯ.

೯ ಭೋಜ :

"ಶೃಂಗಾರಪ್ರಕಾಶ"ದ ಆರನೆಯ ಅಧ್ಯಾಯದಲ್ಲಿ ಭೋಜನು ಇತರ ಅನೇಕ ವಿಷಯಗಳೊಡನೆ ಔಚಿತ್ಯವನ್ನೂ ಸ್ವಲ್ಪದರಲ್ಲಿ ಚರ್ಚಿಸುತ್ತಾನೆ. "ಏತಸ್ಮಿನ್ ಶೃಂಗಾರಪ್ರಕಾಶೇ ಸುಪ್ರಕಾಶಮೇವ ಅಶೇಷ ಶಾಸ್ತ್ರಾರ್ಥಸಂಪದುಪನಿಷದಾಮ್ ಅಖಿಲ-ಕಲಾ-ಕಾವ್ಯ-ಔಚಿತ್ಯ-ಕಲ್ಪನಾ ರಹಸ್ಯಾನಾಂ ಚ ಸನ್ನಿವೇಶೋ ದೃಶ್ಯತೇ."

ಕಾವ್ಯದಲ್ಲಿ ಔಚಿತ್ಯದ ಪ್ರಾಮುಖ್ಯ ಭೋಜನಿಗೆ ಚೆನ್ನಾಗಿ ಗೊತ್ತು. ಡಾ. ರಾಘವನ್‌ರವರು ಹೇಳುವಂತೆ "He realises that it is a vast and elastic principle and that it pertains to every part of a work of art." ರಸ, ಇತಿವೃತ್ತ, ಗುಣ, ಅಲಂಕಾರ, ಲೀಲೆ, ಛಂದಸ್ಸು ಇವುಗಳಿಗೆ ಸಂಬಂಧಿಸಿದ ಔಚಿತ್ಯವನ್ನು ಭೋಜನು ವಿವರಿಸುತ್ತಾನೆ. ಎಲ್ಲ ವಿಧವಾದ ದೋಷಗಳೂ ಅನೌಚಿತ್ಯದ ರೂಪಗಳೆಂದು ಅವನ ಅಭಿಪ್ರಾಯ. ಗುಣಾಲಂಕಾರ ಸಂಗ್ರಹದಿಂದಲೂ ದೋಷತ್ಯಾಗದಿಂದಲೂ ರಸಾವಿರ್ಭಾವವು ಸಿದ್ಧಿಸುವದೆಂದು ಭೋಜನು ಹೇಳುತ್ತಾನೆ. ಪ್ರಬಂಧದಲ್ಲಿರಬಹುದಾದ ರಸಬಾಧಕವಾದ ದೋಷ ಅಥವಾ

ಅನೌಚಿತ್ಯಗಳನ್ನು ಕವಿಯು ತ್ಯಜಿಸಬೇಕೆಂದು ಹೇಳಿ, ಇದನ್ನು 'ಪ್ರಬಂಧ-ದೋಷ-ಹಾನ' ಮತ್ತು 'ಅನೌಚಿತ್ಯ-ಪರಿಹಾರ'ವೆಂದು ಅವನು ಹೆಸರಿಸುತ್ತಾನೆ. "ತತ್ರ ಪ್ರಬಂಧೇ ದೋಷಹಾನಂ, ಅನೌಚಿತ್ಯ – ಪರಿಹಾರೇಣ, ಯಥಾ ಮಾಯಾ ಕೈಕೆಯೀ-ದಶರಥಾಭ್ಯಾಂ ರಾಮಃ ಪ್ರವಾಸಿತಃ ನ ಮಾತಾ - ಪಿತೃಭ್ಯಾಂ ಇತಿ ನಿರ್ದೋಷ ದಶರಥೇ"।

(ರಾಜಶೇಖರಸ್ಯ ಬಾಲರಾಮಾಯಣೆ) ಶೃಂಗಾರ ಪ್ರಕಾಶ ಪು. ೪೧೦.

೧೦ ಕುಂತಕ:

"ವಕ್ರೋಕ್ತಿಜೀವಿತ"ದ ಕರ್ತೃವಾದ ಕುಂತಕನು ಔಚಿತ್ಯಕ್ಕೆ ಅಧಿಕಗೌರವ ಕೊಟ್ಟು ಅದನ್ನು ಗುಣದ ಸ್ಥಾನಕ್ಕೇರಿಸಿದ್ದಾನೆ. ಕಾವ್ಯತತ್ವಕ್ಕೆ ಸಂಬಂಧಿಸಿದಂತೆ "ಜೀವಿತ" ಎಂಬ ಪದವನ್ನು ಪ್ರಥಮಬಾರಿಗೆ ಬಳಸಿದವನು ಕುಂತಕ. ಅಭಿನವಗುಪ್ತನ ಕಿರಿಯ ಸಮಕಾಲೀನನೀತ. ಕ್ಷೇಮೇಂದ್ರನೂ ಇವನನ್ನೇ ಅನುಸರಿಸಿ "ಔಚಿತ್ಯ"ವನ್ನು 'ಕಾವ್ಯದ ಜೀವಿತ' ಎಂದಿದ್ದಾನೆ. ವಕ್ರೋಕ್ತಿಯೇ ಕಾವ್ಯದ ಜೀವಿತವೆಂಬ ಅಭಿಪ್ರಾಯವುಳ್ಳ ಕುಂತಕನು, ಕೆಲವು ಸಾಧಾರಣ ವಿಷಯಗಳನ್ನು ತನ್ನ ಗ್ರಂಥದಲ್ಲಿ ಚರ್ಚಿಸುತ್ತಾನೆ. ಇವುಗಳಲ್ಲಿ ಮುಖ್ಯವಾದ 'ಸಾಹಿತ್ಯ' ದೊಡನೆ 'ಔಚಿತ್ಯ' ಮತ್ತು 'ಸೌಭಾಗ್ಯ'ವೆಂಬ ಎರಡು ಸಾಧಾರಣಗುಣಗಳನ್ನು ಹೇಳಿ ಇವು ಸುಕುಮಾರ, ವಿಚಿತ್ರ, ಮಧ್ಯಮ ಎಂದು ಅವನು ಕರೆಯುವ ಮೂರು 'ಮಾರ್ಗ'ಗಳಿಗೂ ಅನ್ವಯಿಸುವವೆಂದು ಹೇಳುತ್ತಾನೆ. ಔಚಿತ್ಯಕ್ಕೆ ಅವನು ಕೊಡುವ ಲಕ್ಷಣ ಈ ರೀತಿ ಇದೆ:

"ಅಂಜಸೇನ ಸ್ವಭಾವಸ್ಯ ಮಹತ್ವಂ ಯೇನ ಪೋಷ್ಯತೇ
ಪ್ರಕಾರೇಣ ತದೌಚಿತ್ಯಂ ಉಚಿತಾಖ್ಯಾನ ಜೀವಿತಮ್॥
ಯತ್ರ ವಕ್ತುಃ ಪ್ರಮಾತುರ್ವಾ ವಾಚ್ಯಂ ಶೋಭಾತಿಶಾಯಿನಾ
ಆಚ್ಛಾದ್ಯತೇ ಸ್ವಭಾವೇನ ತದಪ್ಯೌಚಿತ್ಯಮುಚ್ಯತೇ"॥

ಔಚಿತ್ಯವನ್ನು 'ಉಚಿತಾಖ್ಯಾನ'ವೆಂದು ಅವನು ವಿವರಿಸುತ್ತಾನೆ.

ಕುಂತಕನು ರಸ ಮತ್ತು ಪಾತ್ರಗಳ ಪ್ರಾಮುಖ್ಯವನ್ನು ಗ್ರಹಿಸಿ ಭರತ, ಆನಂದವರ್ಧನ ಮತ್ತು ಅಭಿನವಗುಪ್ತರಿಂದ ವಿವರಿಸಲ್ಪಟ್ಟಿರುವ ಅವುಗಳಿಗೆ ಸಂಬಂಧಪಟ್ಟ ಔಚಿತ್ಯವನ್ನು ಅಂಗೀಕರಿಸುತ್ತಾನೆ. ಇತರ ಔಚಿತ್ಯಪ್ರಕಾರಗಳನ್ನು ಕುಂತಕನು ವಿವರಿಸಿ ಎಲ್ಲ ಬಗೆಯ ಔಚಿತ್ಯಗಳೂ ರಸಾಭಿವೃದ್ಧಿಗೆ ಸಹಾಯವಾಗಬೇಕೆಂದು ಹೇಳುತ್ತಾನೆ.

೧೧ ಮಹಿಮಭಟ್ಟ :

ಕುಂತಕನ ಅನಂತರ ಬಂದ ಮಹಿಮಭಟ್ಟನು ಪ್ರಸಿದ್ಧವಾದ "ಧ್ವನಿ" ಮತವನ್ನು ಖಂಡಿಸುವುದಕ್ಕಾಗಿಯೇ "ವ್ಯಕ್ತಿವಿವೇಕ"ವನ್ನು ಬರೆದಿದ್ದಾನೆ. ಆದರೆ ಈತ ರಸಕ್ಕೆ ಪ್ರಾಧಾನ್ಯವನ್ನು ಕೊಟ್ಟು ಔಚಿತ್ಯವನ್ನು ಅದಕ್ಕೆ ಅನಿವಾರ್ಯವಾದ ಅಂಗವೆಂದು

ಸಾರಿದ್ದಾನೆ. ತನ್ನ ಕೃತಿಯಲ್ಲಿ ರಸ, ಭಾವ ಮತ್ತು ಪ್ರಕೃತಿ ಇವುಗಳಿಗೆ ಸಂಬಂಧಿಸಿದ ಔಚಿತ್ಯವನ್ನು ವಿವರಿಸುತ್ತಾನೆ.

ರಸ ಮತ್ತು ಅದಕ್ಕೆ ಸಂಬಂಧಿಸಿದ ಔಚಿತ್ಯ ಈ ವಿಷಯಗಳ ನಿರೂಪಣೆಯಲ್ಲಿ ಮಹಿಮಭಟ್ಟನು ಆನಂದವರ್ಧನನ ಅಭಿಪ್ರಾಯಗಳನ್ನು ಒಪ್ಪುತ್ತಾನೆ. ನೀರಸವಾದ ಶಬ್ದವು ಅಪಶಬ್ದವೆಂಬ ದೋಷವೆಂದು ಹೇಳಿ ಆನಂದವರ್ಧನನು ಎಲ್ಲ ಬಗೆಯ ದೋಷಗಳನ್ನು ರಸಪ್ರತೀತಿಗೆ ವಿಘ್ನವನ್ನುಂಟುಮಾಡುವ ದೋಷಗಳೆಂದು ಹೇಳಿ, ಅವನ್ನು ಸಾಮಾನ್ಯದೋಷದಲ್ಲಿ ಅಡಕಗೊಳಿಸುತ್ತಾನೆ. ಮಹಿಮಭಟ್ಟನೂ ಈ ಅಭಿಪ್ರಾಯವನ್ನೇ ಪುನರುಚ್ಚರಿಸಿ ಅವುಗಳನ್ನು ಅನೌಚಿತ್ಯಗಳೆಂದು ಕರೆಯುತ್ತಾನೆ. ಈ ಸಂದರ್ಭದಲ್ಲಿಯೇ ಅವನು ಆನಂದವರ್ಧನನ ಶ್ಲೋಕವನ್ನೂ ಉಲ್ಲೇಖಿಸುತ್ತಾನೆ. "ಕಥಂ ಚಿದ್ವಾ ಭಿನ್ನಕ್ರಮತಯಾ ಅಪಿ ಅಭಿಮತಾರ್ಥ ಸಂಬಂಧೋಪಕಲ್ಪನಂ, ಪ್ರಸ್ತುತಾರ್ಥ ಪ್ರತೀತೇಃ ವಿಘ್ನಿತತ್ವಾತ್ ತನ್ನಿಬಂಧನೋ ರಸಾಸ್ವಾದೇ ಅಪಿ ವಿಘ್ನಿತಃ ಸ್ಯಾತ್, ಶಬ್ದದೋಷಾಣಾಮ್ ಅನೌಚಿತ್ಯೋಪಗಮಾತ್ ತಸ್ಯ ಚ ರಸಭಂಗ ಹೇತುತ್ವಾತ್, ಇವಾಹುಃ :– ಅನೌಚಿತ್ಯಾದೃತೇ ನಾನ್ಯತ್........".

ಮಹಿಮಭಟ್ಟನು ಅನೌಚಿತ್ಯವನ್ನು 'ಅರ್ಥವಿಷಯ' ಮತ್ತು 'ಶಬ್ದವಿಷಯ' ಗಳೆಂದು ವಿಂಗಡಿಸಿ, ಮೊದಲನೆಯದನ್ನು 'ಅಂತರಂಗ'ವೆಂದೂ ಎರಡನೆಯದನ್ನು 'ಬಹಿರಂಗ'ವೆಂದೂ ಕರೆಯುತ್ತಾನೆ. 'ಶಬ್ದಾನೌಚಿತ್ಯ'ವನ್ನು 'ವಿಧೇಯಾವಿಮರ್ಶ', 'ಪ್ರಕ್ರಮಭೇದ', 'ಕ್ರಮಭೇದ', ಪೌನರುಕ್ತ, 'ವಾಚ್ಯಾವಚನ'ವೆಂದು ಐದು ಭಾಗಗಳಾಗಿ ವಿಭಾಗಿಸಿದ್ದಾನೆ. ಈ ವಿಧೇಯಾವಿಮರ್ಶಾದಿಗಳೇ 'ದೋಷ'ಗಳೆನಿಸಿಕೊಳ್ಳುವವೆಂದು ಅವನು ಹೇಳುತ್ತಾನೆ.

೧೨ ಕ್ಷೇಮೇಂದ್ರ :

'ಔಚಿತ್ಯತತ್ವ' ತನ್ನ ಬೆಳವಣಿಗೆಯ ತುತ್ತತುದಿ ತಲುಪಿದ್ದಾಗ ಅದನ್ನು ಕೈಗೆತ್ತಿಕೊಂಡು 'ಸ್ವತಂತ್ರಸಿದ್ಧಾಂತವನ್ನಾಗಿ' ಪ್ರತಿಪಾದಿಸಿದವನು ಕ್ಷೇಮೇಂದ್ರ. ೧೧ನೇ ಶತಮಾನದಲ್ಲಿ ಆಗಿಹೋದ ಕಾಶ್ಮೀರದ ಕ್ಷೇಮೇಂದ್ರನು ತನ್ನ "ಔಚಿತ್ಯವಿಚಾರ ಚರ್ಚಾ" ಎಂಬ ಗ್ರಂಥದಲ್ಲಿ ಔಚಿತ್ಯವನ್ನೇ 'ಕಾವ್ಯದ ಜೀವಿತ'ವೆಂದು ಸಾರಿದ್ದಾನೆ.

ಕ್ಷೇಮೇಂದ್ರ ಸ್ವತಃ ಕವಿ, ವಿಮರ್ಶಕ. ರಾಮಾಯಣ, ಮಹಾಭಾರತ, ಬೃಹತ್ಕಥೆಗಳ ಸಂಗ್ರಹಗಳನ್ನೂ ಇತರ ಅನೇಕ ಸರಸ ವಿಡಂಬನಾತ್ಮಕ ಲಘುಕಾವ್ಯಗಳನ್ನೂ ರಚಿಸಿದ್ದಾನೆ. ಸಂಸ್ಕೃತಸಾಹಿತ್ಯದಲ್ಲಿ ಅವನಿಗೆ ಮಹತ್ವದ ಸ್ಥಾನವಿದೆ. ಇವನ 'ಸುವೃತ್ತ ತಿಲಕ' ಛಂದಶ್ಶಾಸ್ತ್ರಾಧ್ಯಾಯಿಗಳಿಗೆ ಕೈಪಿಡಿ. ಅಭಿನವಗುಪ್ತ ಈತನ ಗುರು. "ಶ್ರುತ್ವಾಭಿನವಗುಪ್ತಾಖ್ಯಾತ್ ಸಾಹಿತ್ಯಂ ಬೋಧವಾರಿಧೇಃ" ಎಂದು

ಅವನೇ ಹೇಳಿಕೊಂಡಿದ್ದಾನೆ. ಈತನು ಬರೆದ 'ಕವಿಕಂಠಾಭರಣ'ವೆಂಬ ಅಲಂಕಾರ ಲಕ್ಷಣಗ್ರಂಥ (ಲೇಖಕರಿಗೆ) ಸಿಕ್ಕಿಲ್ಲ.

'ಔಚಿತ್ಯವಿಚಾರಚರ್ಚೆ', 'ಕ್ಷೇಮೇಂದ್ರನೇ' ಬರೆದ 'ವೃತ್ತಿ' ಹಾಗೂ 'ಕಾರಿಕೆ'ಗಳಿಂದ ಕೂಡಿದೆ. ಉದಾಹರಣೆಗಾಗಿ ಹಲವಾರು ಪದ್ಯಗಳನ್ನು ಸ್ವಕೃತಿಗಳಿಂದಲೂ ಇತರ ಕವಿಗಳಿಂದಲೂ ಆಯ್ದುಕೊಂಡಿದ್ದಾನೆ. ಈತನ ಮತದಂತೆ ಕಾವ್ಯದಲ್ಲಿ ಔಚಿತವು ಅತಿಮುಖ್ಯ. ಔಚಿತ್ಯವು ಕಾವ್ಯಸೌಂದರ್ಯಾಸ್ವಾದನೆಯಲ್ಲಿ ಚಮತ್ಕಾರಕ್ಕೆ ಕಾರಣವೂ ಕಾವ್ಯಾತ್ಮವೆನಿಸಿದ ರಸದ ಜೀವಿತಸ್ವರೂಪವೂ ಆದುದೆಂದು ಆತ ಹೇಳುತ್ತಾನೆ.

"ಔಚಿತ್ಯಸ್ಯ ಚಮತ್ಕಾರಕಾರಿಣಃ ಚಾರುಚರ್ವಣೇ ।
ರಸಜೀವಿತಭೂತಸ್ಯ ವಿಚಾರಂ ಕುರುತೇಽಧುನಾ ॥

ಔಚಿತ್ಯವಿಲ್ಲದೇ ಅಲಂಕಾರ ಗುಣ ಇವು ಎಷ್ಟಿದ್ದರೇನೆಂದು ಪ್ರಶ್ನಿಸಿ, ಈ ಔಚಿತ್ಯವು ರಸಸಿದ್ಧವಾದ ಕಾವ್ಯದ ಜೀವಿತವೆಂದು ಸ್ಪಷ್ಟವಾಗಿ ಹೇಳುತ್ತಾನೆ.

"ಕಾವ್ಯಸ್ಯಾಲಮಲಂಕಾರೈಃ ಕಿಂ ಮಿಥ್ಯಾಗುಣಿತೈರ್ಗುಣೈಃ
ಯಸ್ಯ ಜೀವಿತಮೌಚಿತ್ಯಂ ವಿಚಿಂತ್ಯಾಪಿ ನ ದೃಶ್ಯತೇ
ಅಲಂಕಾರಸ್ತು ಅಲಂಕಾರಾಃ ಗುಣಾ ಏವ ಗುಣಾಃ ಸದಾ
ಔಚಿತ್ಯಂ ರಸಸಿದ್ಧಸ್ಯ ಸ್ಥಿರಂ ಕಾವ್ಯಸ್ಯ ಜೀವಿತಮ್ ।"

ಭರತ, ಆನಂದವರ್ಧನ ಮತ್ತು ಅಭಿನವಗುಪ್ತರಂತೆ ಕ್ಷೇಮೇಂದ್ರನೂ ಅಲಂಕಾರ ಗುಣಗಳನ್ನು ಆಭರಣಗಳಿಗೆ ಹೋಲಿಸಿ ಅವು ಉಚಿತವಾದ ಅಂಗಾಂಗಳಲ್ಲಿದ್ದಾಗ ಮಾತ್ರ ಶೋಭೆಯುನ್ನುಂಟುಮಾಡುತ್ತವೆಂದು ಹೇಳಿ ಸುಂದರವಾದ ಶ್ಲೋಕವೊಂದನ್ನು ಉದಾಹರಿಸುತ್ತಾನೆ.

"ಕಂಠೇ ಮೇಖಲಯಾ, ನಿತಂಬಫಲಕೇ ತಾರೇಣ ಹಾರೇಣ ವಾ ।
ಪಾಣೌ ನೂಪುರಬಂಧನೇನ, ಚರಣೇ ಕೇಯೂರಪಾಶೇನ ವಾ ।
ಶೌರ್ಯೇಣಪ್ರಣತೇ, ರಿಪೌ ಕರುಣಯಾ, ನಾಯಾಂತಿ ಕೇ ಹಾಸ್ಯತಾಮ್?
ಔಚಿತ್ಯೇನ ವಿನಾ ರುಚಿಂ ಪ್ರತನುತೇ ನಾಲಂಕೃತಿರ್ನೋಗುಣಾಃ ॥

ಅಂದರೆ ಕೊರಳಿನಲ್ಲಿ ಡಾಬು, ಕೈಯಲ್ಲಿ ಕಾಲ್ಬಳೆ, ಕಾಲಲ್ಲಿ ತೋಳ್ಬಂದಿ, ಇಂತಹ ಒಡವೆಗಳಿಂದಲೂ ಕಾಲ್ಗೆರಗಿದವನ ಮೇಲೆ ಪರಾಕ್ರಮ, ಹಗೆಯ ಮೇಲೆ ಕರುಣೆ ಇಂತಹ ಗುಣಗಳಿಂದಲೂ ಯಾರು ತಾನೇ ನಗೆಗೀಡಾಗರು? ಔಚಿತ್ಯವಿಲ್ಲದೇ ಹೋದರೆ ಅಲಂಕಾರವಾಗಲೀ ಗುಣವಾಗಲೀ ಶೋಭಿಸುವದಿಲ್ಲ ಎನ್ನುತ್ತಾನೆ.

ಕಾವ್ಯ ಮತ್ತು ರಸಗಳಿಗೆ ಜೀವಿತ್ವಸ್ವರೂಪವಾದ ಔಚಿತ್ಯವನ್ನು ಅವನು ಈ ರೀತಿ ವಿವರಿಸುತ್ತಾನೆ.

"ಉಚಿತಂ ಪ್ರಾಹುರಾಚಾರ್ಯಾಃ ಸದೃಶಂ ಕಿಲ ಯಸ್ಯಯತ್ ।
ಉಚಿತಸ್ಯಚ ಲವೋ ಭಾವಃ ತದೌಚಿತ್ಯಂ ಪ್ರಚಕ್ಷತೇ ॥

"ಯಾವುದು ಯಾವುದಕ್ಕೆ ಅನುರೂಪವೋ ಅದೇ ಉಚಿತ; ಅದರ ಭಾವವೇ ಔಚಿತ್ಯ". ಆನಂದವರ್ಧನನಂತೆ ಕ್ಷೇಮೇಂದ್ರನೂ ಔಚಿತ್ಯ ಮತ್ತು ಅನೌಚಿತ್ಯಗಳನ್ನು ರಸದೃಷ್ಟಿಯಿಂದಲೇ ಹೇಳಿದ್ದಾನೆಂದು ಅವನು ಇವುಗಳಿಗೆ ಕೊಟ್ಟ ಉದಾಹರಣೆಗಳಿಂದ ಇದು ಸ್ಪಷ್ಟವಾಗುವದೆಂದೂ, ಆದ್ದರಿಂದ ಮೇಲೆ ಹೇಳಿದ ಲಕ್ಷಣದಲ್ಲಿನ 'ಯಸ್ಯ' ಎಂಬ ಪದವು 'ರಸಸ್ಯ' ಎಂದರೆ ರಸವನ್ನೇ ಸೂಚಿಸುವದೆಂದೂ ಮುಕುಂದ ಮಾಧವ ಶರ್ಮರ ಅಭಿಪ್ರಾಯ. "In this manner examples may be multiplied to a good number to show that the word ‹yasya' in Ksemendra's definition Aucitya means nothing other than Rasa although it is not explicitly stated in the definition''.

ಸಕಲ ಕಾವ್ಯಶರೀರಕ್ಕೂ ಜೀವರೂಪವಾಗಿರುವ ಔಚಿತ್ಯವು ಮುಖ್ಯವಾಗಿ ಲಕ್ಷ್ಯಕ್ಕೆ ಬರುವದು ಹೇಗೆಂದು ಸೂಚಿಸಲು ಕ್ಷೇಮೇಂದ್ರನು ಔಚಿತ್ಯವನ್ನು ೨೭ ಪ್ರಕಾರಗಳಾಗಿ ವಿಂಗಡಿಸಿ ಮೂರು ಕಾರಿಕೆಗಳಲ್ಲಿ ಹೆಸರಿಸುತ್ತಾನೆ.

"ಪದೇ, ವಾಕ್ಯೇ, ಪ್ರಬಂಧಾರ್ಥೇ, ಗುಣೇ, ಅಲಂಕರಣೇ, ರಸೇ ।
ಕ್ರಿಯಾಯಾಂ, ಕಾರಕೇ, ಲಿಂಗೇ, ವಚನೇಚ ವಿಶೇಷಣೇ ॥
ಉಪಸರ್ಗೇ, ನಿಪಾತೇಚ ಕಾಲೇ, ದೇಶೇ, ಕುಲೇ, ವ್ರತೇ ।
ತತ್ತ್ವೇ, ಸತ್ತ್ವೇಪ್ಯಭಿಪ್ರಾಯೇ ಸ್ವಭಾವೇ ಸಾರಸಂಗ್ರಹೇ ॥
ಪ್ರತಿಭಾಯಾಂ ಅವಸ್ಥಾಯಾಂ ವಿಚಾರೇ ನಾಮ್ನ್ಯಥಾಶಿಷಿ ।
ಕಾವ್ಯಸ್ಯಾಂಗೇಷು ಚ ಪ್ರಾಹುಃ ಔಚಿತ್ಯಂ ವ್ಯಾಪಿ ಜೀವಿತಮ್ ॥

ಪದ, ವಾಕ್ಯ, ಪ್ರಬಂಧಾರ್ಥ, ಗುಣ, ಅಲಂಕಾರ, ರಸ, ಕ್ರಿಯಾಪದ, ಕಾರಕ, ಲಿಂಗ, ವಚನ, ವಿಶೇಷಣ, ಉಪಸರ್ಗ, ನಿಪಾತ, ಕಾಲ, ದೇಶ ಇತ್ಯಾದಿ ೨೭ ಕಾವ್ಯಾಂಗಗಳನ್ನು ಹೇಳಿ ಈ ಎಲ್ಲವುಗಳಲ್ಲಿಯೂ ಔಚಿತ್ಯವಿರಬೇಕೆಂಬುದನ್ನು ಉದಾಹರಣೆಗಳ ಮೂಲಕ ಪ್ರತಿಪಾದಿಸುವದರಲ್ಲಿ 'ಔಚಿತ್ಯವಿಚಾರ ಚರ್ಚಾ' ಮುಕ್ತಾಯವಾಗುತ್ತದೆ.

ಹಿಂದೆ ಯಾರೂ ಸಾಧಿಸಲು ಪ್ರಯತ್ನಿಸದ, ಕ್ಷೇಮೇಂದ್ರನೊಬ್ಬನೆ ಸಾಧಿಸಲು ಯತ್ನಿಸಿದ ಮಹಾಕಾರ್ಯವೆಂದರೆ- ಪ್ರಾಯೋಗಿಕ ವಿಮರ್ಶೆ. S. K. De ಯವರ ಮಾತಿನಲ್ಲಿ ಹೇಳುವದಾದರೆ "Ksemendra's work in this respect posseses a unique value, and the part of his treatment which discusses the illustrative verses is extremely interesting at an

evidence of "Appreciation" which is comparatively rare in Sanskrit."

ಕಾಳಿದಾಸ, ಭವಭೂತಿಗಳಂತಹ ಪ್ರಸಿದ್ಧಕವಿಗಳ ಕೃತಿಗಳಿಂದ ಔಚಿತ್ಯಕ್ಕೆ ಉದಾಹರಣೆಗಳನ್ನು ತೆಗೆದುಕೊಂಡಿರುವಂತೆಯೇ, ಅನೌಚಿತ್ಯಕ್ಕೂ ಉದಾಹರಣೆಗಳನ್ನು ತೆಗೆದುಕೊಂಡಿರುವದು ಕ್ಷೇಮೇಂದ್ರನ ವೈಶಿಷ್ಟ್ಯ. ತನ್ನ ಗ್ರಂಥಗಳಿಂದ ಔಚಿತ್ಯವನ್ನು ಆಯ್ದುಕೊಂಡದ್ದಲ್ಲದೆ ಅನೌಚಿತ್ಯವನ್ನೂ ಆಯ್ದುಕೊಂಡು ಉದಹರಿಸಿರುವದು ಅವನ ನಿಗರ್ವಿತನಕ್ಕೆ ಸಾಕ್ಷಿ. ಸಂದರ್ಭೋಚಿತವಾಗಿ ಅವನು ಔಚಿತ್ಯಕ್ಕೆ ಕೊಟ್ಟ ಉದಾಹರಣೆಗಳಲ್ಲಿ ಒಂದೆರಡನ್ನು ನಿರೀಕ್ಷಿಸೋಣ.

ಪದೌಚಿತ್ಯವನ್ನು ಕುರಿತು ಹೇಳುತ್ತಾ, ತಿಲಕದಂತಿರುವ ಒಂದೇ ಉಚಿತ ಪದವನ್ನೊಳಗೊಂಡ ಸೂಕ್ತಿ ಕೂಡ ಕಸ್ತೂರಿತಿಲಕವನ್ನಿಟ್ಟುಕೊಂಡ ಚಂದ್ರಾನನೆಯಂತೆಯೂ, ಶ್ರೀಗಂಧದ ತಿಲಕವನ್ನಿಟ್ಟುಕೊಂಡ ಶ್ಯಾಮಲಯುವತಿಯಂತೆಯೂ ಶೋಭಿಸುತ್ತದೆ." ವಾಕ್ಯದಲ್ಲಿ ಔಚಿತ್ಯವನ್ನು ಹೇಳುವಾಗ ತ್ಯಾಗದಿಂದ ಶೋಭಿಸುವ ಐಶ್ವರ್ಯದಂತೆ, ಶೀಲದಿಂದ ಬೆಳಗುವ ವಿದ್ಯೆಯಂತೆ, –ಎಂದು ಸಾದೃಶಗಳನ್ನು ಕೊಟ್ಟು ಔಚಿತ್ಯಪೂರ್ಣವಾದ ವಾಕ್ಯ ಸಹೃದಯರಿಗೆ ಮೆಚ್ಚಾಗುತ್ತದೆ ಎನ್ನುತ್ತಾನೆ. ಪ್ರಬಂಧಾರ್ಥದಲ್ಲಿ ಔಚಿತ್ಯ ವಿವರಿಸುತ್ತಾ 'ಉಚಿತಾರ್ಥ ವಿಶೇಷಣ ಪ್ರಬಂಧಾರ್ಥಃ ಪ್ರಕಾಶ್ಯತೇಽ' ಎಂದರೆ ಉಚಿತವಾದ ಅರ್ಥವಿಶೇಷದಿಂದ ಇಡಿಯ ಪ್ರಬಂಧದ ಅರ್ಥವೂ ಪ್ರಕಾಶಿತವಾಗುತ್ತದೆ.

ಗುಣಾಲಂಕಾರ ಔಚಿತ್ಯದ ಬಗ್ಗೆ ಹೇಳುತ್ತಾ "ಕಾವ್ಯದಲ್ಲಿ ಪ್ರಸ್ತುತಾರ್ಥಕ್ಕೆ ಉಚಿತವಾದ ಗುಣವು ಮಾತ್ರ 'ಭವ್ಯ' ಮತ್ತು 'ಸುಂದರ' ಎನಿಸಿಕೊಳ್ಳುತ್ತದೆ. ಶೃಂಗಾರದ ಸಂದರ್ಭದಲ್ಲಿ ಉದಿಸಿದ ಚಂದ್ರನಂತೆ ಆಸಂದಸ್ಯಂದಿಯಾಗುತ್ತದೆ." ರಸೌಚಿತ್ಯವನ್ನಂತೂ ಬಹುದೀರ್ಘವಾಗಿ ವಿವರಿಸಿದ್ದಾನೆ. 'ಔಚಿತ್ಯದಿಂದ ಬೆಳಗುತ್ತಿರುವ ಶೃಂಗಾರಾದಿ ರಸಗಳು ಎಲ್ಲರ ಹೃದಯವನ್ನು ವಸಂತಮಾಸ ಅಶೋಕಲತೆಯನ್ನು ಚಿಗರಿಸುವಂತೆ, ಅರಳಿಸುತ್ತದೆ; ಎಂದು ಹೇಳಿ ಒಂದೊಂದು ರಸಕ್ಕೂ ಔಚಿತ್ಯ–ಅನೌಚಿತ್ಯಗಳೆರಡಕ್ಕೂ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಇಡೀ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕುಂತಕನನ್ನು ಬಿಟ್ಟರೆ ಬೇರಾವ ಅಲಂಕಾರಿಕನೂ ಈತನಷ್ಟು ಒಳ್ಳೆಯ ಉದಾಹರಣೆಗಳನ್ನು ಆರಿಸಿಲ್ಲ. ಕುಂತಕನ ವಕ್ರೋಕ್ತಿಜೀವಿತದಲ್ಲಿಯೂ ಕೆಲವು ಒಳ್ಳೆಯ ಉದಾಹರಣೆಗಳಿವೆ. ಈ ದೃಷ್ಟಿಯಿಂದ ಇವರಿಬ್ಬರ ಸ್ಥಾನ ವಿಶಿಷ್ಟವಾದುದು.

ಹೀಗೆ ಅಲಂಕಾರ ಮುಂತಾದವುಗಳ ನಿರೂಪಣೆಯಲ್ಲಿ ಗೋಚರವಾದ ಔಚಿತ್ಯದ ಅಂಶಗಳನ್ನು ಗ್ರಹಿಸಿ, ಅದನ್ನೇ ಪ್ರಧಾನವಾಗಿಸಿ, ಅದರಲ್ಲಿ ಇತರ ಎಲ್ಲ ಮತಗಳೂ ಅಡಕವಾಗುವಂತೆ ವಿಸ್ತರಿಸಿದ ಸ್ತುತ್ಯಕಾರ್ಯ ಕ್ಷೇಮೇಂದ್ರನದು. ಅಲಂಕಾರಶಾಸ್ತ್ರಕ್ಕೆ

ಅವನ ಕೊಡುಗೆ ನೂತನವಾದ ಕಾವ್ಯತತ್ವವೇನಲ್ಲ. ಅವನ ಹಿಂದಿನ ಅನೇಕ ಆಲಂಕಾರಿಕರು ಶಬ್ದಾರ್ಥಸಾಹಿತ್ಯದ ವಿಶ್ಲೇಷಣೆಯಲ್ಲೂ ರೀತಿ, ರಸ, ಧ್ವನಿ ಮುಂತಾದ ತತ್ವಾನ್ವೇಷಣೆಯಲ್ಲೂ ತೊಡಗಿ ಅವುಗಳಲ್ಲಿ ಯಾವದೋ ಒಂದನ್ನು ಕಾವ್ಯದ ಆತ್ಮವೆಂದು ಪ್ರತಿಪಾದಿಸಿದರು. ಆದರೆ ಕಾವ್ಯದ ಇತರ ಅಂಶಗಳನ್ನು ಸೇರಿಸಿಕೊಂಡು ಕಾವ್ಯಕ್ಕೆಲ್ಲ ವ್ಯಾಪಕವೂ ಸಮಗ್ರವೂ ಆದ ಒಂದು ತತ್ವವನ್ನು ಮುಂದಿಡುವ ಪ್ರಯತ್ನ ಮಾಡಿದವರು ಕುಂತಕ ಮತ್ತು ಕ್ಷೇಮೇಂದ್ರ. ಇವರ ತತ್ವದ ಆಧಾರದಿಂದ ಕಾವ್ಯಭಾಷೆಯ ಎಲ್ಲ ಸಮಸ್ಯೆಗಳೂ ಪರಿಹಾರವೆಂದಾಗಲೀ ಸರ್ವಸಮ್ಮತವಾದ ಕಾವ್ಯಲಕ್ಷಣ ಲಭಿಸಿತೆಂದಾಗಲೀ ಹೇಳುವಂತಿಲ್ಲ. ಆದರೂ ಅವರ ಪ್ರಯತ್ನ ಪ್ರಯೋಗಗಳು ಶ್ಲಾಘ್ಯವಾಗಿವೆ. ಕ್ಷೇಮೇಂದ್ರನು ಹಿಂದಿನ ಅನೇಕ ಆಲಂಕಾರಿಕರಲ್ಲಿ ಕಂಡುಬರುವ ಕೇವಲ ನಿಯಮಪ್ರತಿಪಾದನೆಯ ಕ್ರಮವನ್ನೇ ತಾನು ಅನುಸರಿಸದೆ, ರಚಿತವಾದ ಕಾವ್ಯಾದಿಗಳನ್ನು ಮುಂದಿಟ್ಟುಕೊಂಡು ಅವನ್ನು ಕುರಿತಾದ ವಿಮರ್ಶೆಯಿಂದ ಕಾವ್ಯದಲ್ಲಿ ರುಚಿ ಮತ್ತು ವಿವೇಕ ಇವುಗಳ ಬಗ್ಗೆ ಪ್ರಾಯೋಗಿಕ ಸಲಹೆಗಳನ್ನು ಕೊಡುವದರ ಮೂಲಕ ಸಂಸ್ಕೃತಸಾಹಿತ್ಯವಿಮರ್ಶೆಯಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿಕೊಂಡಿದ್ದಾನೆ.


ಅಭಿನವಗುಪ್ತ ಗುರುತಿಸುವಂತೆ ಔಚಿತ್ಯ ತನಗೆ ತಾನೇ ಇಲ್ಲ. ಇತರ ಎಲ್ಲ ಕಾವ್ಯಾಂಶಗಳ ಸುಂದರ ಸಮನ್ವಯವಿದು. ಅಲಂಕಾರ, ಗುಣ, ರೀತಿ, ರಸ, ಧ್ವನಿ, ಎಲ್ಲವೂ ಇಲ್ಲಿ ಸಮಾವೇಶವಾಗುತ್ತವೆ. ಇವೆಲ್ಲವುಗಳನ್ನೂ ನಿಯಂತ್ರಿಸಿ ಇವುಗಳಿಂದ ಕಾವ್ಯ ಅಸ್ವಾದ್ಯವಾಗುವಂತೆ ಮಾಡುವ ಒಂದು ತತ್ವವೇ ಔಚಿತ್ಯ. ಅದರ ಸ್ಪಷ್ಟ ಪ್ರತಿಪಾದಕನೇ ಕ್ಷೇಮೇಂದ್ರ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಇದು ಕೊನೆಯ ತತ್ವ. ಒಂದರ್ಥದಲ್ಲಿ ಮೊಟ್ಟಮೊದಲನೆಯ ಮೂಲಭೂತತತ್ವವೂ ಹೌದು. ಎಲ್ಲ ಆಲಂಕಾರಿಕರು ಒಂದಲ್ಲ ಒಂದು ರೂಪದಲ್ಲಿ ಇದನ್ನು ಗುರುತಿಸಿದ್ದಾರೆ. ಕೆಲವರು ಒತ್ತಿ ಹೇಳದೆ ಮುಂದುವರಿದಿರಬಹುದು. ಅಂತೂ ಇದು ಸರ್ವವ್ಯಾಪಕವಾದ ಸರ್ವವ್ಯಾಪಿಯಾದ ತತ್ವವೆಂದು ಒಪ್ಪಲೇಬೇಕಾಗುತ್ತದೆ.

ಇದರ ವ್ಯಾಪಕತೆಯನ್ನು ಹೇಳುತ್ತಾ 'ಮ. ಕುಪ್ಪುಸ್ವಾಮಿಶಾಸ್ತ್ರಿ'ಗಳವರು ತಮ್ಮ "Some Highways and Byways of Literary Criticism" ಎಂಬ ಗ್ರಂಥದಲ್ಲಿ ಶ್ಲೋಕವೊಂದನ್ನು ರಚಿಸಿ ರೇಖಾಚಿತ್ರವೊಂದನ್ನು ಕೊಟ್ಟಿದ್ದಾರೆ. ಈ 'ಅಲಂಕಾರಶಾಸ್ತ್ರದ ವರ್ತುಲದಲ್ಲಿ' ಔಚಿತ್ಯದ ಹಿರಿಮೆ–ಗರಿಮೆ–ಮಹಿಮೆಗಳನ್ನು ಕಾಣಬಹುದಾಗಿದೆ. 'ಅವರು ರಚಿಸಿರುವ ಶ್ಲೋಕವಿದು–

ಔಚಿತೀ ಮುಸುಧಾವಂತಿ ಸರ್ವೇ ಧ್ವನಿ ರಸೋನ್ನಯಾಃ ।
ಗುಣಾಲಂಕೃತಿ ರೀತೀನಾಂ ನಯಾಶ್ಚಾನೃಜಂ ವಾಙ್ಮಯಾಃ ॥

ಎಂದರೆ "ರಸ ಧ್ವನಿ ಮತ್ತು ಅನುಮಾನಗಳೂ ಗುಣ ಅಲಂಕಾರ ರೀತಿ ಮತ್ತು ವಕ್ರೋಕ್ತಿಗಳೂ – ಔಚಿತ್ಯದಲ್ಲಿಯೇ ಈ ಎಲ್ಲವೂ ಅಡಗುತ್ತವೆ" ಎಂದು ಹೇಳಿ

ಅರ್ಥವತ್ತಾದ ರೇಖಾಚಿತ್ರದ ಮೂಲಕ ಅದನ್ನು ಸ್ಪಷ್ಟಪಡಿಸಿದ್ದಾರೆ. ಈ ರೇಖಾ ಚಿತ್ರವನ್ನು ನೋಡುತ್ತಾಹೋದಂತೆ ಸಂಪೂರ್ಣ ಭಾರತೀಯ ಕಾವ್ಯಮೀಮಾಂಸೆಯು ಸಮಗ್ರ ಚಿತ್ರ ಕಣ್ಮುಂದೆ ಸುಳಿಯುತ್ತದೆ.



ಭಿನ್ನತೆಯಲ್ಲಿ ಏಕತೆಯನ್ನು ಕಾಣುವ ಯೋಗವೇ ಭಾರತದಲ್ಲಿ ಧರ್ಮ ಮುಂತಾದವುಗಳ ಗುರಿಯಾಗಿದೆ. ಅದರ ಸಾಧನೆಯನ್ನು ಸಾಹಿತ್ಯ ಮತ್ತು ವಿಮರ್ಶಾ ಕ್ಷೇತ್ರದಲ್ಲೂ ಕಾಣಬಹುದು. ಔಚಿತ್ಯವೇ ಕಾವ್ಯದ ತತ್ವವೆಂಬ ಅಭಿಪ್ರಾಯದಲ್ಲಿ, ಆನಂದವೇ ಸಾಹಿತ್ಯದ ಗುರಿಯೆಂಬ ಅಭಿಪ್ರಾಯದಲ್ಲಿ, ಆ ಯೋಗ ಗೋಚರವಾಗುತ್ತದೆ. ನಮ್ಮ ಹಿಂದಿನ ಆಲಂಕಾರಿಕರು ಈ ಯೋಗಸಾಧನೆಯ ದೃಷ್ಟಿಯುಳ್ಳವರಾಗಿದ್ದರು. ಮ. ಕುಪ್ಪುಸ್ವಾಮಿಶಾಸ್ತ್ರೀಗಳವರು ಮೇಲಿನ ಚಿತ್ರದಲ್ಲಿ ಈ ಬಗೆಯ ಯೋಗಸಾಧನೆಯನ್ನು ಗುರುತಿಸಿ ಕ್ಷೇಮೇಂದ್ರನಿಂದ ಪ್ರತಿಪಾದಿತವಾದ "ಔಚಿತ್ಯ ತತ್ವ"ವೇ ಸರ್ವವ್ಯಾಪಕ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಅವರ ಪ್ರಕಾರ ಔಚಿತ್ಯವೆಂಬ 'ಮಹಾವರ್ತುಲದಲ್ಲಿ, ರಸ, ಧ್ವನಿ ಅನುಮಿತಿಗಳ ತ್ರಿಕೋನ ಅಂತರ್ಗತವಾಗುವದೆಂದೂ, ಆ ತ್ರಿಕೋನದಲ್ಲಿ ಅಂತರ್ಗತವಾಗುವ ವಕ್ರೋಕ್ತಿ ವರ್ತುಲ, ಅದರೊಡನೆ ಅಡಕವಾಗುವ ರೀತಿ, ಗುಣ, ಅಲಂಕೃತಿ ತ್ರಿಕೋಣಕ್ಕಿಂತ

ವ್ಯಾಪಕವೆಂದೂ ಅವರು ಪ್ರತಿಪಾದಿಸಿದ್ದಾರೆ. ರೀತಿ, ಗುಣ, ಅಲಂಕಾರಗಳಲ್ಲಿಯೂ ರೀತಿಯನ್ನು ಶೃಂಗದಲ್ಲಿಟ್ಟಿರುವುದು ಗಮನಾರ್ಹ.

ಈ ಮೂರನ್ನು ಒಳಗೊಳ್ಳುವಂತಹ ಸಿದ್ಧಾಂತ ವಕ್ರೋಕ್ತಿ. ಒಳಗಡೆಯ ಚಿಕ್ಕವೃತ್ತ ಇದನ್ನು ಸೂಚಿಸುತ್ತದೆ. ಹಾಗೇ ಧ್ವನಿ, ಅನುಮತಿ, ರಸಗಳಲ್ಲಿ ರಸವೇ ಪರಮಗುರಿ; ಅದಕ್ಕೆ ಶೃಂಗಸ್ಥಾನ; ಉಳಿದೆರಡು ಅದಕ್ಕೆ ಸಾಧನಗಳು. ಈ ಮೂರನ್ನು ಮತ್ತು ಇವುಗಳಲ್ಲಿ ಅಂತರ್ಗತವಾದ ಗುಣ, ರೀತಿ, ಅಲಂಕಾರ ವಕ್ರೋಕ್ತಿಗಳನ್ನು ಒಳಗೊಳ್ಳಬಲ್ಲ ಮಹಾವೃತ್ತವೇ ಔಚಿತ್ಯ.

ಈ ರೇಖಾಚಿತ್ರ ಭಾರತೀಯ ಕಾವ್ಯತತ್ತ್ವ ವಿಕಾಸವನ್ನು ಧ್ವನಿಪೂರ್ವಕವಾಗಿ, ಸತ್ವಯುತವಾಗಿ, ಚಿತ್ರಿಸಿದೆ. ಒಂದೊಂದು ಸಿದ್ಧಾಂತಕ್ಕೂ ಅದರದರ ಸ್ಥಾನವನ್ನು ನಿರ್ದೇಶಿಸಿ ಅವೆಲ್ಲವನ್ನೂ ಔಚಿತ್ಯದಲ್ಲಿ ಸಮಾವೇಶಗೊಳಿಸುವ ಈ ಕ್ರಮ ಭಾರತೀಯ ಕಾವ್ಯಮೀಮಾಂಸೆಯ ಸಮಗ್ರಚಿತ್ರವನ್ನು ಸಮರ್ಥವಾಗಿ ನಿರೂಪಿಸುವಲ್ಲಿ ಯಶಸ್ವಿಯಾಗಿದೆ.

ಔಚಿತ್ಯವನ್ನು ಕುರಿತು ಪಾಶ್ಚಾತ್ಯ ವಿಚಾರಧಾರೆ :

ಈ ಸಂದರ್ಭದಲ್ಲಿ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಔಚಿತ್ಯದ ಸ್ಥಾನಮಾನಗಳೇನು ? ಎಂಬುದನ್ನು ಸಂಕ್ಷಿಪ್ತವಾಗಿಯಾದರೂ ತಿಳಿಸದಿದ್ದರೆ ಪ್ರಬಂಧ ಅಪೂರ್ಣವಾದೀತು. ಆದ್ದರಿಂದ ಸಿಂಹಾವಲೋಕನಕ್ರಮದಿಂದ ಪಾಶ್ಚಾತ್ಯ ವಿಚಾರಸರಣಿಯನ್ನು ಅವಲೋಕಿಸೋಣ.

'ಅರಿಸ್ಟಾಟಲ್' ಪಾಶ್ಚಾತ್ಯ ಕಾವ್ಯಮೀಮಾಂಸೆಯ ಭರತ. ಈತ ತನ್ನ ಕಾವ್ಯಮೀಮಾಂಸೆಯಲ್ಲಿ ಕಾವ್ಯಶೈಲಿಯನ್ನು ಕುರಿತು ಕೆಲವು ಅಂಶ ಹೇಳುತ್ತಾನೆ. "ಕಾವ್ಯಶೈಲಿ ವಸ್ತುವಿಗೆ ಅನುಗುಣವಾಗಿರಬೇಕು, ಮತ್ತು ವ್ಯಕ್ತಿಗಳ ಶೀಲ ಸ್ವಭಾವಗಳಿಗೆ ಅನುರೂಪವಾಗಿರಬೇಕು. ಅದು ದೈನಂದಿನ ಜೀವನದ ವ್ಯಾವಹಾರಿಕಭಾಷೆಯಂತಿರಬಾರದು. ಅದಕ್ಕಿಂತ ಭಿನ್ನವಾಗಿ ಲೊಕೋತ್ತರವಾಗಿರಬೇಕು. ಆದರೆ ಕೃತಕವಾಗಿರಬಾರದು. ಕವಿಯ ಕೌಶಲವನ್ನು ಎತ್ತಿತೋರಿಸುವಂತಿದ್ದು ಸಹೃದಯಕರನ್ನು ಆಕರ್ಷಿಸುವಂತಿರಬೇಕು. "ಭಾವೋದ್ರೇಕ ಕಾವ್ಯವಲ್ಲ; ಅದು ಭಾವಶೋಧನೆ ಮಾತ್ರ" ಎನ್ನುತ್ತಾನೆ, ಅರಿಸ್ಟಾಟಲ್.

ಹೊರೇಸನು ತನ್ನ 'ಕಾವ್ಯಕಲೆ'ಯಲ್ಲಿ ಈ ವಿಚಾರ ಪ್ರಸ್ತಾಪಿಸುತ್ತಾ— "ಕಾವ್ಯ ಬುದ್ಧಿಪೂರ್ವಕವಾದ ಒಂದು ಕಲೆ : ಅದು ಕೇವಲ ಭಾವೋನ್ಮಾದವಲ್ಲ. ಔಚಿತ್ಯಜ್ಞಾನ ಮತ್ತು ಕಲಾಕೌಶಲ್ಯಗಳಿಂದ ಕವಿ ಕಾವ್ಯದಲ್ಲಿ ಐಕ್ಯತೆಯನ್ನು ಸಾಧಿಸಿಕೊಳ್ಳಬೇಕು. ಕಾವ್ಯದ ವಿವಿಧ ಭಾಗಗಳು ಆಯಾ ಸಂದರ್ಭದಲ್ಲಿ ಸಹಜವಾಗಿ ಮೂಡಿಬಂದವುಗಳಾಗಿರಬೇಕು.

ಕೃತಕವಾಗಿ ಎಲ್ಲಿಂದಲೋ ತಂದು ಸೇರಿಸಿದಂತಿರಬಾರದು. ಕೃತಿಗೆ ಹೊಂದಿಕೊಳ್ಳದ ಇಂತಹ ಭಾಗಗಳನ್ನು "ಜರಿಲೇಪ" ಎನ್ನುತ್ತಾನೆ ಹೋರೆಸ್. ಈ ಐಕ್ಯತೆ ಸಾಧಿಸುವದೇ ಕೃತಿಯ ಜೀವಾಳ. ಒಂದು ಕ್ರಿಯೆ ಕಾವ್ಯವಾಗುವದು ಅದರಲ್ಲಿ ಕಂಡುಬರುವ ಐಕ್ಯತೆಯ ಸೂತ್ರದಿಂದ........ಏಕತೆಯಿಲ್ಲದ ಕೃತಿ ವಿಕೃತಿಯಲ್ಲಿ ಪರ್ಯವಸಾನಗೊಳ್ಳುತ್ತದೆ. ಈ ಐಕ್ಯತೆ ವಸ್ತುವಿನದಷ್ಟೇ ಅಲ್ಲ, "ಭಾವೈಕ್ಯತೆ ಪ್ರಭಾವದ ಐಕ್ಯತೆ ಕೂಡ ಸಾಧಿತ ವಾಗಿರಬೇಕು. ಅರಿಸ್ಟಾಟಲ್ ಐಕ್ಯತೆ ಹೇಳಿದ್ದ; ಅದನ್ನು ಇನ್ನೂ ಒತ್ತಿ ಹೇಳಿ ವಿಮರ್ಶೆಯ ಪ್ರಮುಖ ಅಂಶವನ್ನಾಗಿ ಪರಿಗಣಿಸುವಂತೆ ಮಾಡಿದವನು ಹೊರೇಸ." [ಹೊರೇಸನ ಸಾಹಿತ್ಯವಿಮರ್ಶೆ ಪುಟ ೧೧೩ – ೧೧೪ ಎಸ್. ಬಾಲಸುಬ್ರಹ್ಮಣ್ಯ.] ಔಚಿತ್ಯದ ಸೂತ್ರವನ್ನು ನಮಗೆ ಕೊಟ್ಟ ಮಹಾವ್ಯಕ್ತಿ ಹೊರೇಸನಾಗಿದ್ದಾನೆ. ಮುಂದು ವರಿದು ಹೊರೇಸ ರುದ್ರನಾಟಕ – ವಿನೋದನಾಟಕಗಳನ್ನು ಉದಾಹರಿಸುತ್ತಾ ಇವೆರಡರಲ್ಲೂ ಬಳಸುವ ಛಂದಸ್ಸು ಒಂದೇ ಆದರೂ ಭಾಷಾ–ಶೈಲಿಯಲ್ಲಿ ಸ್ಪಷ್ಟವಾದ ವ್ಯತ್ಯಾಸವಿದೆ. ರುದ್ರನಾಟಕದ ಶೈಲಿ ಗಂಭೀರವಾದುದು, ವಿನೋದನಾಟಕದ ಶೈಲಿ ಲಘುವಾದುದು, ಬಳಕೆಯ ಮಾತುಗಳಿಗೆ ಹತ್ತಿರವಾದುದು. ವಿನೋದದ ವಸ್ತುವನ್ನು ರುದ್ರಶೈಲಿ ನಿರೂಪಿಸಲಾರದು. ಪ್ರತಿಶೈಲಿಯೂ ಅದರ ನಿರ್ದಿಷ್ಟವಾದ ಉಚಿತ ಸ್ಥಾನದಲ್ಲಿರಬೇಕು. "ದುಃಖದ ಮೋರೆಗೆ ಶೋಕದ ನುಡಿಗಳೂ, ಕೋಪದ ಬಾಯಿಗೆ ಬೆದರಿಕೆಯ ಶಬ್ದಗಳೂ, ವಿನೋದದ ನಾಲಿಗೆಗೆ ಪರಿಹಾಸ್ಯದ ಪದಗಳೂ, ಗಂಭೀ ರತ್ವದ ವದನಕ್ಕೆ ಪ್ರೌಢಸೂತ್ರಗಳೂ ಉಚಿತವಾದವು" ಎನ್ನುತ್ತಾನೆ.

"ಪಾತ್ರವೊಂದರ ಮಾತುಗಳು ಅದರ ಸ್ಥಿತಿ–ಗತಿಗೆ ವಿರುದ್ಧವಾಗಿದ್ದರೆ ಅದು ಅಪಹಾಸ್ಯಕ್ಕೆ ಗುರಿಯಾಗುತ್ತದೆ". ಅವನ ಈ ಮಾತುಗಳಲ್ಲೆಲ್ಲಾ ಔಚಿತ್ಯತತ್ವ ಪ್ರತಿ ಪಾದಿತವಾಗಿರುವದನ್ನು ಕಾಣಬಹುದು. ಈ ಸಾಹಿತ್ಯದ ಔಚಿತ್ಯದ ನಿಯಮ (Theory of Decorum) ಸಾಕಷ್ಟು ವಿವರವಾಗಿ ಇಲ್ಲಿ ಬಂದಿದೆ.

ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಅರಿಸ್ಟಾಟಲ್ ಮತ್ತು ಹೋರೇಸರಷ್ಟೇ ಪ್ರಮುಖವಾದ ಇನ್ನೊಂದು ಹೆಸರು 'ಲಾಂಜೈನಸ್' (Longinus). ವಿಮರ್ಶೆಯ ರತ್ನತ್ರಯರಿವರು. ಇವನು ತನ್ನ On the sublime (ಇದು ಇಂಗ್ಲೀಷ ಅನುವಾ ದದ ಹೆಸರು. ಮೂಲಹೆಸರು 'ಪೆರಿ ಹುಪ್ಸಾಸ್' ಎಂದು)ನಲ್ಲಿ ಕಾವ್ಯದ ಬಗ್ಗೆ ನಮ್ಮ ಗಮನ ಸೆಳೆಯುತ್ತಾನೆ. ಒಂದೊಂದು ಪದಕ್ಕೂ ಇರುವ ಶಕ್ತಿಯನ್ನು ಕವಿ ಗಮನಿಸಿ ಕಾವ್ಯದಲ್ಲಿ ಬಳಸಬೇಕು'' ಎನ್ನುತ್ತಾನೆ ಲಾಂಜಿನಸ್. ಕಾವ್ಯ ಕಿವಿಗಿಂಪಾಗಿದ್ದರಷ್ಟೇ ಸಾಲದು; ಆ ಶಬ್ದಶಕ್ತಿಯ ಜೊತೆ ಅರ್ಥಶಕ್ತಿಯನ್ನೂ ಪಡೆದಿರಬೇಕು. ''Beautiful words are in very truth the peculiar light of thought'' ಎನ್ನುತ್ತಾನೆ.

ಔಚಿತ್ಯವರಿತು ಮಾತುಗಳನ್ನು ಬಳಸಬೇಕು. ಹೇಳಬೇಕಾದ ಅಂಶವನ್ನು ಸ್ಪಷ್ಟವಾಗಿ ನಿರೂಪಿಸುವ ಸಾಮರ್ಥ್ಯವೇ ಔಚಿತ್ಯದ ಒರೆಗಲ್ಲು. ಗಂಭೀರವಾದ ವಿಷಯದ ಅಭಿವ್ಯಕ್ತಿಗೆ ಗಂಭೀರವಾದ ಭಾಷೆಯೇ ಬೇಕು. ಸಾಮಾನ್ಯ ಅನುಭವಕ್ಕೆ ಸಾಮಾನ್ಯ ಭಾಷೆ ಸಾಕು. ಇದಕ್ಕೆ ವಿರುದ್ಧವಾದರೆ ಹಾಸ್ಯಾಸ್ಪದವಾಗುತ್ತದೆ. ಅಲಂಕಾರಕ್ಕೂ ಈ ಔಚಿತ್ಯವನ್ನು ಆತ ನಿರೂಪಿಸುತ್ತಾನೆ. ಅನುಭವದ ತೀವ್ರತೆ, ಸಂದರ್ಭದ ಅಗತ್ಯಗಳು ರೂಪಕಾದಿ ಅಲಂಕಾರಗಳ ನಿರ್ಮಾಣವನ್ನು ನಿಯಂತ್ರಿಸುತ್ತವೆ. ಪದಗಳ ಆಯ್ಕೆ ಮತ್ತು ಸಂಯೋಜನೆಯಲ್ಲಿ ಸಮತೂಕವಿದ್ದು ಅನ್ಯೋನ್ಯ ಹೊಂದಿಕೆಯಿಂದ ಓದುಗನ ಮನಸ್ಸು ಆಕರ್ಷಿಸಿ ಆತನಿಗೆ ಸಂತೋಷವನ್ನುಂಟುಮಾಡುವದರಲ್ಲಿಯೇ ಶೈಲಿಯ ಸಾರ್ಥಕತೆ ಇದೆ ಎನ್ನುತ್ತಾನೆ.

'ಪ್ಲೋಟಿನಸ್' ಸೌಂದರ್ಯ ಮೀಮಾಂಸೆಯನ್ನು ಅನುಭವದ ನಿಲುವಿನಲ್ಲಿ ನಿರ್ವಹಿಸಿದ್ದಾನೆ. ನನ್ನಲ್ಲಿ ಸೌಂದರ್ಯದ ಅಂಶವಿರುವದರಿಂದಲೇ ಸೌಂದರ್ಯವನ್ನು ನಾನು ಗುರುತಿಸುವದು ಸಾಧ್ಯ ಎನ್ನುತ್ತಾನೆ. "Never did the eye see the sun unless it had first become sunlike, and never can the soul have vision of first beauty unless itself be beautiful''. ಈ ಮಾತು ಅವನ ಅಧ್ಯಾತ್ಮಿಕ ದೃಷ್ಟಿಯನ್ನು ಸ್ಪಷ್ಟಪಡಿಸುತ್ತದೆ. ಇದು ''ಭಗ್ನಾವರಣಚಿದೇವ ರಸಃ'' ಎಂಬ ಅಭಿನವಗುಪ್ತನ ಮಾತಿಗೆ ಹೋಲುತ್ತದೆ.

'ಸಿ. ಡಿ. ಲೂಯಿ' ತನ್ನ "The Poetic Image'' ಎಂಬ ಕೃತಿಯಲ್ಲಿ ಕಾವ್ಯಪ್ರತಿಮೆಗಳತ್ತ ಗಮನ ಸೆಳೆಯುತ್ತ ಪ್ರತಿಮೆಗಳು ಸಹಜವಾಗಿ ಮೂಡಿಬಂದಿರಬೇಕು." ಅಪೃಥಗ್ಯತ್ನ ನಿರ್ವರ್ತ್ಯ''ಗಳಾಗಿರಬೇಕು ಎನ್ನುತ್ತಾನೆ.

"Imaging is in itself the very light and life of poetry'' ಎನ್ನುತ್ತಾನೆ 'ಡ್ರೈಡನ್'. ಅಲಂಕಾರಗಳನ್ನು ಸಹ ಔಚಿತ್ಯವರಿತು ಬಳಸಬೇಕು. ಕೇವಲ ಚಮತ್ಕಾರಕ್ಕಾಗಿ ತಂದು ಸೇರಿಸಿದಾಗ ಅವು ಕಾವ್ಯಕ್ಕೆ ಹೊರೆಯಾಗುತ್ತವೆ.

ಭಾರತೀಯ ಅಲಂಕಾರಸಿದ್ಧಾಂತದಲ್ಲಿ ಬಂದ ಪ್ರಶ್ನೆಯೇ ಇಲ್ಲಿಯೂ ಬಂದಿದೆ. ಅಲಂಕಾರಗಳ ಔಚಿತ್ಯಪ್ರಜ್ಞೆಯತ್ತ ದೃಷ್ಟಿ ಹರಿಸಿದ **'ಕೊಲರಿಜ'**ನ ಹೇಳಿಕೆ ಹೀಗಿದೆ : "Images, however beautiful.........do not themselves characterize the poet. They become proofs of original genius only as far as they are modified by a Predominant Passion or by associated thought or images awakened by that Passion''. ''ಕಾವ್ಯಪ್ರತಿಮೆಗಳು ಎಷ್ಟೇ ಸುಂದರವಾಗಿರಲಿ ಅವು ತಮಗೆ ತಾವೇ ಇಲ್ಲ. ತೀವ್ರವಾದ ರಸಾನುಭವವನ್ನು (Predominant Passion) ಅಭಿವ್ಯಕ್ತಿಗೊಳಿಸಿರುವ

ಕವಿ ಪ್ರತಿಭೆಗೆ ಅವು ಸಾಕ್ಷಿ'' ಎಂಬುದು ''ರಸಾಕ್ಷಿಪ್ತತಯಾಯಸ್ಯ ಬಂಧಃ ಶಕ್ಯಕ್ರಿಯೋ ಭವೇತ್'' ಎಂಬ ಆನಂದವರ್ಧನನ ಮಾತಿಗೆ ಸಂವಾದಿಯಾಗಿದೆ. ಒಟ್ಟಾರೆ ಕಾವ್ಯ ಪ್ರತಿಮೆಗಳು ಆಂತರಿಕ ಅನಿವಾರ್ಯತೆಯಿಂದ ತಾವೇತಾವಾಗಿ ಮೂಡಿಬಂದಿರಬೇಕೇ ಹೊರತು ವಿನೂತನವಾದುದನ್ನು ನಿರ್ಮಿಸಲೇಬೇಕೆಂಬ ಚಪಲತೆಯಿಂದ ಬಂದವು ಗಳಾಗಿರಬಾರದು.

ಲೂಯಿಯ ಪ್ರಕಾರ ಪ್ರತಿಮೆಗಳಲ್ಲಿ (Freshness) 'ನೂತನತೆ' (Intensity) 'ಸಾಂದ್ರತೆ'; ಮತ್ತು (Evocative Power) ಅಂದರೆ 'ಉದ್ದೀಪಕಶಕ್ತಿ'ಗಳಿರಬೇಕು. ಅವು ಅನುಭವ ಶ್ರೀಮಂತಿಕೆಯಿಂದ ಮೂಡಿಬಂದಿರಬೇಕು. ಹಿತ-ಮಿತವಾಗಿ ಸಾಸಿವೆ ಯಲ್ಲಿ ಸಾಗರವನ್ನು ತುಂಬಿದಂತೆ ಇರಬೇಕು. ಹೊಸತನ್ನು ಸಾಧಿಸುವ ಭರದಲ್ಲಿ ಚಮತ್ಕಾರಕ್ಕಾಗಿ ಹೊಸೆದು ಮಾಡಿದ ಬುದ್ಧಿಪೂರ್ವಕ ಪ್ರತಿಮೆಗಳು ನಿತ್ಯನೂತನವೆನಿಸಿ ಕೊಳ್ಳುವದಿಲ್ಲ. ವಿನೂತನತೆ ವಿಕೃತಿಯಾಗಬಾರದಷ್ಟೇ. ಇಲ್ಲೆಲ್ಲ ಭಾರತೀಯ ಕಾವ್ಯ ಮೀಮಾಂಸೆಯ ಔಚಿತ್ಯಪ್ರಜ್ಞೆಯ ಇಣುಕುನೋಟವನ್ನು ಹೆಜ್ಜೆಹೆಜ್ಜೆಗೂ ಕಾಣ ಬಹುದು. ಕಾವ್ಯದಲ್ಲಿ "We ask ourselves first what the poet is trying to do in a poem and then whether his images are well adopted to this purpose or not" ಎಂದು ನೋಡಬೇಕು.

ಒಂದು ಪ್ರತಿಮೆ ಹೊರಹೊಮ್ಮಿದ ಬಳಿಕ ಅದನ್ನು ನೋಡಿ ಕವಿಯೇ ಆಶ್ಚರ್ಯ ಪಡಬೇಕು. 'ತನ್ನ ಶಿಲ್ಪಕ್ಕೆ ತಾನೇ ಮಣಿವ ಶಿಲ್ಪಿಯಂತೆ' ಲೌಕಿಕ ವಸ್ತುವಿಶೇಷ ಗಳು ಜೀವಂತಪ್ರತಿಮೆಗಳಾಗಬೇಕಾದರೆ ಕವಿಪ್ರಜ್ಞೆಯ ಪರಿಭಾವನೆಗೆ ಒಳಗೊಂಡು ಪರಿವರ್ತಿತವಾಗಬೇಕು. ಆಗಲೇ ಅಲ್ಲಿ ಔಚಿತ್ಯ ಒಡಮೂಡುತ್ತದೆ.

ಐ. ಎ. ರಿಚರ್ಡ್ಸ್ ತನ್ನ ''Principles of Literary Criticism''ನಲ್ಲಿ ''ಕವಿ ಈ ಲೋಕದ ಅನುಭವಗಳನ್ನು ಅರಗಿಸಿಕೊಂಡು ಕಾವ್ಯದಲ್ಲಿ ಎರಕ ಹೊಯ್ಯ ಬೇಕು. ಅಭಿವ್ಯಕ್ತಿಗೆ ಮುನ್ನ ಅನುಭವ ಕವಿಯ ಮನಸ್ಸಿನಲ್ಲಿ ರೂಪುಗೊಳ್ಳಬೇಕು, ಪರಿಪಾಕಗೊಳ್ಳಬೇಕು. ಅನಂತರ ಸಂವಹನಕ್ರಿಯೆ ಬರುತ್ತದೆ.... Arts are the supreme form of communicative activity'' ಎನ್ನುತ್ತಾನೆ. ಕವಿಯ ಅನುಭವ ಓದುಗನಲ್ಲೂ ತತ್ಸದೃಶ ಅನುಭವ ತರುವಂತಿರಬೇಕು. ಇದನ್ನು ನಮ್ಮ ರಸಸಿದ್ಧಾಂತದ ''ಸಾಧಾರಣೀಕರಣ''ಕ್ಕೆ ಹೋಲಿಸಬಹುದು.

ಕಲೆಯನ್ನು 'ಅಭಿವ್ಯಕ್ತಿಗೊಂಡ ಜೀವನ ಮೌಲ್ಯಗಳ ಅಮೂಲ್ಯ ಭಂಡಾರವೆಂದು' ಈತ ಪರಿಗಣಿಸಿದ್ದಾನೆ. "The arts are our storehouse of recorded values" ಎಂಬುದು ಈತನ ಹೇಳಿಕೆ. ಕಲೆಯಲ್ಲಿ ನೀತಿಪ್ರತಿಪಾದಿತವಾಗಬೇಕಾದರೆ ಅದು ಕಲಾತ್ಮಕವಾಗಿರಬೇಕೇ ಹೊರತು ತತ್ತ್ವವಾಗಿ ಬರಬಾರದು. ಮನಶ್ಶಾಸ್ತ್ರದ

ಹಿನ್ನೆಲೆಯಲ್ಲಿ ಕಲೆಯ ಮೌಲ್ಯವಿವೇಚನೆಯನ್ನು (account of value) ಈತ ಸುಂದರವಾಗಿ ವಿಮರ್ಶಿಸಿದ್ದಾನೆ. 'Poetry for Poetry Sake' ಎಂಬುದನ್ನೊಪ್ಪದ ರಿಚರ್ಡ್ಸ್ "ಈ ಜಗತ್ತಿನಿಂದಲೇ ಹುಟ್ಟಿದರೂ ಇದಕ್ಕೆ ಅತೀತವಾಗಿ ನಿಲ್ಲುವ ಕಾವ್ಯಾನುಭವ ಜೀವನದ ಅನುಭವವನ್ನು ಶ್ರೀಮಂತಗೊಳಿಸಿ ಮಾರ್ಗದರ್ಶಕವಾಗದಿದ್ದರೆ ಕಾವ್ಯ ವಿಫಲಗೊಂಡಂತೆ ಎನ್ನುತ್ತಾನೆ.

ಅನುಭವದ ಸಂವಹನ ಕ್ರಿಯೆಯಲ್ಲಿ ಛಂದಸ್ಸಿನ ಪಾತ್ರ ಹಿರಿದಾದದ್ದು ಎನ್ನುತ್ತಾನೆ ರಿಚರ್ಡ್ಸ್. ಅನುಭವಕ್ಕನುಗುಣವಾಗಿ ಲಯ–ಛಂದಸ್ಸು– ಮೂಡಿಬರಬೇಕು.

"Metre for the most different and most delicate utterances is the all but inevitable means." ಅನುಭವ ಹೆಚ್ಚು ಸೂಕ್ಷ್ಮವಾದಷ್ಟೂ ಸಂಕೀರ್ಣವಾದಷ್ಟೂ ತೀವ್ರವಾದಷ್ಟೂ ಅದರ ಅಭಿವ್ಯಕ್ತಿಯಲ್ಲಿ ಛಂದಸ್ಸು ಅನಿವಾರ್ಯವಾಗಿ ಪರಿಣಮಿಸುತ್ತದೆ. ಹಾಗೇ ಕಾವ್ಯ ಸುಲಭಗ್ರಾಹ್ಯವಾಗಿರಬೇಕು. ಅನುಭವದ ಹೊಸತನ ಮತ್ತು ಸಂವಹನದ ಗಹನತೆಗೆ ಕ್ಲಿಷ್ಟತೆಯೊಂದೇ ಒರೆಗಲ್ಲಲ್ಲ. "Depth of communication likewise is not necessarily connected with difficulty."

ಅಂತೂ ಕವಿಯಿಂದ ಅಭಿವ್ಯಕ್ತಿಗೊಂಡ ಅನುಭವ ಬೆಲೆಯುಳ್ಳದ್ದೂ, ಸುಲಭಗ್ರಾಹ್ಯವಾದದ್ದೂ, ಸಕಲ ಹೃದಯವೇದ್ಯವಾದದ್ದೂ ಆದಾಗ ಮಾತ್ರ ಅದು ಔಚಿತ್ಯಪೂರ್ಣವೆನಿಸುತ್ತದೆ. ಅನುಭವ ಮೌಲ್ಯರಹಿತವಾಗಿದ್ದರೆ ಎಷ್ಟೇ ಕಲಾತ್ಮಕವಾಗಿದ್ದರೂ ಅದು "ಕೆಟ್ಟ ಕಲೆ". ಅನುಭವ ಮೌಲೀಭೂತವಾಗಿದ್ದರೂ ಅಭಿವ್ಯಕ್ತಿ ದುರ್ಬಲವಾಗಿದ್ದರೆ ಆಗಲೂ ಕಲಾಕೃತಿ ಯಶಸ್ವಿಯಾಗುವದಿಲ್ಲ. ಅದನ್ನು "ದೋಷಪೂರ್ಣ ಕೃತಿ" ಎನ್ನುತ್ತಾನೆ ರಿಚರ್ಡ್ಸ್. ಯಾವ ಕೃತಿ ಮಾನವನ ಚಿರಕಾಲಿಕ ಸಮಸ್ಯೆಗಳನ್ನೆತ್ತಿಕೊಂಡು, ಎಲ್ಲರಿಗೂ ಸಮಾನವಾದ ಮತ್ತು ಎಲ್ಲ ಕಾಲಕ್ಕೂ ಉಳಿಯಬಲ್ಲ ಪ್ರಜ್ಞೆಯನ್ನು (ಪ್ರತಿಕ್ರಿಯೆಯನ್ನೂ) ಔಚಿತ್ಯಪೂರ್ಣವಾಗಿ ಒಳಗೊಂಡಿರುತ್ತದೆಯೋ ಆ ಕಾವ್ಯ ಶಾಶ್ವತವಾಗಿ ಉಳಿಯಲು ಅರ್ಹವಾಗುತ್ತದೆ.

ಖ್ಯಾತ ಕವಿ ಹಾಗೂ ವಿಮರ್ಶಕನಾದ **ಟಿ. ಎಸ್. ಇಲಿಯಟ್** "ವ್ಯಕ್ತಿನಿರಸನ ಸಿದ್ಧಾಂತವಾದಿ" ಈತ ತನ್ನ ವಿಮರ್ಶಾಸೂತ್ರಗಳಿಗೆ ಹಿನ್ನೆಲೆಯಾಗಿ ಕಾವ್ಯತತ್ತ್ವವನ್ನು ಚರ್ಚಿಸಿದ್ದಾನೆ. ಈತನ "Tradition and Individual Talent" ಎಂಬ ಲೇಖನ ಚಿಕ್ಕದಾದರೂ ಕಾವ್ಯವನ್ನು ಕುರಿತು ಅವನ ಮಹತ್ವಪೂರ್ಣ ಅಭಿಪ್ರಾಯಗಳನ್ನೊಳಗೊಂಡದ್ದು. ಈತ 'ಕವಿ ಅನುಕರಣಶೀಲನಲ್ಲ' ಅಥವಾ 'ಸಂಪ್ರದಾಯ ಪ್ರಿಯನಲ್ಲ' ಅರ್ಥವತ್ತಾದ ಪರಂಪರೆಯನ್ನು ಅರಗಿಸಿಕೊಂಡು ಅದರಿಂದ ಪುಷ್ಟಿಯನ್ನು ಪಡೆದು ಬೆಳೆಯುವಂಥವನು. ಕವಿಯಾದವನಿಗೆ 'Historical sense' ಅಂದರೆ 'ಚಾರಿತ್ರಿಕ ಪ್ರಜ್ಞೆ ಅಗತ್ಯ' ಎನ್ನುತ್ತಾನೆ.

ಕವಿ ಭೂತವನ್ನು ಅರಗಿಸಿಕೊಂಡು ಭವಿಷ್ಯತ್ತಿನತ್ತ ಕೈಚಾಚಿದ್ದರೂ ವರ್ತಮಾನದಲ್ಲಿ ಆಳವಾಗಿ ಬೇರುಬಿಟ್ಟು ಬೆಳೆಯುತ್ತಾನೆ. ಹಾಗಾದಾಗಲೇ ಅವನು ಇಂದಿನ ಪರಿಸರವನ್ನು ಔಚಿತ್ಯಪೂರ್ಣವಾಗಿ ಚಿತ್ರಿಸಬಲ್ಲ. ಆಗಲೇ ''ಸಾಹಿತ್ಯ ಸಮಾಜದ ದರ್ಪಣ ಜನಜೀವನದ ಪ್ರತಿಬಿಂಬ ಹಾಗೂ ಗತಿಬಿಂಬ'' ಎಂಬ ಮಾತು ಸಾರ್ಥಕವಾದೀತು. The Progress of an artist is a continual self-sacrifice, continual extinction of personality.'' ಕವಿ ತನ್ನ ಪರಿಮಿತ ವ್ಯಕ್ತಿತ್ವವನ್ನು ನಿರಸನಗೊಳಿಸಿಕೊಂಡು ಕೇವಲ ಮಾಧ್ಯಮವಾಗಿ ಪರಿಣಮಿಸುತ್ತಾನೆ. ಕವಿ ತನ್ನನ್ನು ಸಂಪೂರ್ಣವಾಗಿ ಕೃತಿಗೆ ನಿರ್ಮಿಸಿಕೊಳ್ಳುವ ಹೊರತು ಈ ನಿರಸನ ಸಾಧ್ಯವಿಲ್ಲ. ಇದು ಇಲಿಯಟ್ ಪ್ರತಿಪಾದಿಸಿದ ಬಹುಮುಖ್ಯತತ್ವ.

ಉಪಸಂಹಾರ :

ಅಂತೂ ಭರತನಿಂದ ಕ್ಷೇಮೇಂದ್ರನವರೆಗೆ ಅರಿಸ್ಟಾಟಲ್‌ನಿಂದ ಇಲಿಯಟ್‌ನವರೆಗೆ ಎಲ್ಲ ಕಾವ್ಯಮೀಮಾಂಸಕರು ಕಾವ್ಯದಲ್ಲಿ 'ಔಚಿತ್ಯಸಿದ್ಧಾಂತ'ಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಕವಿ ಪದ-ಪದದಿಂದ, ಭಾವ-ಭಾಗೀರಥಿಯನ್ನು ಧರೆಗಿಳಿಸಿದ ಕಲಾ-ಭಗೀರಥನಾಗಬೇಕಾದರೆ, ಕೃತಿವರ್ಣನೆ ಔಚಿತ್ಯಪೂರ್ಣವಾಗಿರಬೇಕು.

ಒಂದು ಕೃತಿ ಮಹತ್ಕೃತಿಯಾಗಿ ಜಗತ್ಕೃತಿಯಾಗಿ ಕವಿಯ ಕೀರ್ತಿ ಜಗದಗಲ-ಯುಗದಗಲವಾಗಬೇಕಾದರೆ ಕವಿಯು ವರ್ಣಪದ-ಗುಣ; ವಿಷಯ; ಪ್ರಬಂಧ, ಪ್ರಕರಣ, ರೀತಿ, ಭಾವ ಎಲ್ಲೆಡೆಯಲ್ಲೂ ಔಚಿತ್ಯಪೂರ್ಣವಾಗಿ ವರ್ತಿಸಬೇಕು. ತನ್ನ ಗ್ರಂಥ ರಚನೆಮಾಡುವಾಗ ಎಚ್ಚರಿಕೆಯಿಂದ ವರ್ತಿಸಿ 'ವಿಶ್ವತಶ್ಚಕ್ಷುವಾಗಿ ವಿಶ್ವತೋಮುಖವಾಗಿ ವಿಶ್ವತೋ ಕರ್ಣನಾಗಿದ್ದು', ಧ್ವನಿಪೂರ್ಣವಾದ ಉಚಿತ ಪದವನ್ನೇ ಬಳಸಬೇಕು. ''ಏಕಃ ಶಬ್ದಃ ಸಮ್ಯಕ್‌ಜ್ಞಾತಃ ಸುಷ್ಠುಪ್ರಯುಕ್ತಃ, ಸ್ವರ್ಗೇ ಲೋಕೇ ಕಾಮಧುಗ್ ಭವತಿ'' ಎಂಬ ಪತಂಜಲಿಗಳ ಹೇಳಿಕೆಯಂತೆ ''ಒಂದು ಶಬ್ದವನ್ನು ಸರಿಯಾಗಿ ಅರಿತು ಉಚಿತ ಸ್ಥಳದಲ್ಲಿ ಸರಿಯಾಗಿ ಪ್ರಯೋಗಿಸಿದರೆ ಅದು ಕಾಮಧೇನುವಿನಂತೆ ಇಷ್ಟಾರ್ಥ ಪೂರೈಸುತ್ತದೆ.'' ಇದು ಸಾಹಿತ್ಯದ ಅರ್ಥದಲ್ಲೂ ಸಮಂಜಸವಾಗಿ ಮೂಡಿ ಬರಬೇಕು. ಆದ್ದರಿಂದಲೇ ಕವಿಗೆ ಕಾವ್ಯಪ್ರಪಂಚದಲ್ಲಿ ಸೃಷ್ಟಿಕರ್ತನ ಸ್ಥಾನ; ''ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ'' ಎಂದು ಸೂಕ್ತಿ.

"ಬೆಲೆಯಿಂದಕ್ಕುಮೆ ಕೃತಿ ? ಗಾವಿಲ !
ಭುವನದ ಭಾಗ್ಯದಿಂದಮಕ್ಕುಂ ನೋಳ್ಪಂ !
ಬೆಲೆಗೊಟ್ಟು ತಾರ ಮಧುಮಂ ಮಲಯಾನಿಲನಂ
ಮನೋಜನಂ ಚಂದ್ರಿಕೆಯಂ"

ಎಂಬ ನೇಮಿಚಂದ್ರನ ಮಾತಿನಂತೇ ಸತ್ಕವಿಗಳು, ಸತ್ಕೃತಿಗಳು, ಭುವನದ ಭಾಗ್ಯದಿಂದ ಬರತಕ್ಕವೇ ವಿನಾ ಬೆಲೆಯಿಂದ ಬರತಕ್ಕವಲ್ಲ. "ಕಾಷ್ಠಮಂ ಕೊನರಿಪರ್,

ಕಲ್ಲೊಳ್ ನಾರೆತ್ತುವರ್. (ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ....) ಆದೇನಳ ವಗ್ಗಳವೋ ಕವೀಂದ್ರರಾ" ಎಂಬ ನೇಮಿಯ ಉಕ್ತಿಯಂತೆ ಕವಿಗಳು ನಿಯತಿಕೃತಿ ನಿಯಮರಹಿತರು; ನಿರಂಕುಶಮತಿಗಳು. ಅಂತಹ ಸ್ವಾತಂತ್ರ್ಯ ಹೊಂದಿ ಶಕ್ತಿ, ನಿಪುಣತೆ ಅಭ್ಯಾಸ ಬಲದಿಂದ ಕೂಡಿದ ಕ್ರಾಂತದರ್ಶಿ, ಪ್ರತಿಭಾಸಂಪನ್ನ ಕವಿಗಳ ಔಚಿತ್ಯಪೂರ್ಣ ಗ್ರಂಥವೇ ಮಹತ್‌ಕೃತಿಯಾಗಿ ಜಗತ್ಕೃತಿಯಾಗಿ ರಾರಾಜಿಸೀತು. ಅಂತಹ ಸಂತೋಷ ದಾಯಕವಾದ, ನವರಸರುಚಿರವಾದ ಕವಿ-ಭಾರತಿಯನ್ನು ಆಸ್ವಾದಿಸಿ ಬ್ರಹ್ಮಾನಂದ ಸದೃಶವಾದ ಕಾವ್ಯಾನಂದವನ್ನು ಹೊಂದಲು ಬಯಸದವರಾರು ? ಅಂತಹ ಉಚಿತ ವರ್ಣನೆಯಿಂದ ಕೂಡಿದ "ಕವಿ ವಿಭೂತಿಗೆ ನಮೋ" ಎಂದು ವಂದಿಸಿ ಈ ಪ್ರಬಂಧ ಮುಗಿಸಬಯಸುತ್ತೇನೆ.

ಆಧಾರಗ್ರಂಥಗಳು

Some Concepts of the Alankara Sastra
Dr. V. Raghavan P. 194–257

Bhoja's Sringar-Prakasha
Dr. V. Raghavan P. 184–188

Some Aspects of Literary Criticism in Sanskrit
A. Shankaran P. 146–147

Outlines of Sanskrit Poetics
Dr. G. Vijayavardhana P. 136–149

History of Sanskrit Poetics
P. V. Kane P. 264–266

History of Sanskrit Poetics
S. K. De P. 129–133 and P. 283–286

The Dhvani Theory in Sanskrit Poetics
Mukunda Madhava Sharma P. 56-59

Highways and Byways of Literary Criticism in Sanskrit
Prof. S. Kuppuswami Shastri

Sanskrit Poetics
Krishna Chaitanya

ಭಾರತೀಯ ಕಾವ್ಯಮೀಮಾಂಸೆ : ತಿ. ನಂ. ಶ್ರೀ. ಪ್ರ. ೩೩೨–೪೪

ಅಲಂಕಾರಶಾಸ್ತ್ರ : ಬಿ. ಕೆ. ಶಿವರಾಮಯ್ಯ ಪು. ೧೪–೧೫ ಮತ್ತು ೮೬–೯೩

ಕನ್ನಡ ಔಚಿತ್ಯ ವಿಚಾರ ಚರ್ಚೆ : ಡಾ. ಕೆ. ಕೃಷ್ಣಮೂರ್ತಿ

ಹೊರೇಸನ ಸಾಹಿತ್ಯವಿಮರ್ಶೆ : ಎಸ್. ಬಾಲಸುಬ್ರಹ್ಮಣ್ಯ ಪು. ೧೧೩-೧೧೪

ಕ್ಷೇಮೇಂದ್ರ ಲಘುಕಾವ್ಯಸಂಗ್ರಹ : ಇ. ವಿ. ವಿ. ರಾಘವಾಚಾರ್ಯ

ಅರಿಸ್ಟಾಟಲನ ಕಾವ್ಯ ಮೀಮಾಂಸೆ ಎಸ್. ಬಾಲಸುಬ್ರಹ್ಮಣ್ಯ

ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ : ವಿ. ಎಂ. ಇನಾಮದಾರ್

ಪಾಶ್ಚಾತ್ಯ ಕಾವ್ಯಚಿಂತನ : ಸಿ. ಪಿ. ಕೆ.

ಕನ್ನಡ ಧ್ವನ್ಯಾಲೋಕ ಮತ್ತು ಲೋಚನ ಸಾರ : ಡಾ. ಕೆ. ಕೃಷ್ಣಮೂರ್ತಿ

ರಸೋ ವೈ ಸಃ : ಕುವೆಂಪು. ಪು. ೩೩-೭೬.

• •

ಅಲ್ಲಮನ ಇನ್ನೂ ಎರಡು ಪುನರುಕ್ತವಚನಗಳು

• ಹ. ನಂ. ವಿಜಯಕುಮಾರ್

ಡಾ. ಎಲ್. ಬಸವರಾಜು ಅವರು ಅಲ್ಲಮನ ವಚನಚಂದ್ರಿಕೆಯನ್ನು ಅಚ್ಚುಕಟ್ಟಾಗಿ ಸಂಪಾದಿಸಿರುವರಷ್ಟೆ. ಆದರೆ ಇಲ್ಲಿ ವಚನಗಳ ಪುನರುಕ್ತದೋಷ ಉಳಿದುಕೊಂಡುಬಿಟ್ಟಿದೆ. ಅವರು ಸಂಪಾದಿಸಿರುವ ೧೩೨೧ ಅಲ್ಲಮನ ರಚನೆಗಳಲ್ಲಿ ವಚನಗಳು ೧೨೮೮ ಇವೆ. ಇಷ್ಟು ವಚನಗಳಲ್ಲಿ ಒಟ್ಟು ಇಪ್ಪತ್ತೆಂಟು ವಚನಗಳು ಪುನರುಕ್ತವಾಗಿವೆ. ಮೊದಲು ಗಮನಕ್ಕೆ ಬರದಿದ್ದ[1] ಎರಡು ಪುನರುಕ್ತವಚನಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

೧) ಅ. ಅ[2]ಱಿವಿ[2]ನ ಕುಱು[3]ಹಿ[3]ದೇನೊ? ಒಳಗೆ ಅನಿಮಿಷನಂದಿನಾಥನಿರಲು ಪೂಜಿಸುವ ಭಕ್ತನಾರೋ ಪೂಜೆಗೊಂಬ ದೇವನಾರೋ? ಮುಂದು ಹಿಂದು ಹಿಂದು ಮುಂದಾದರೆ ಗುಹೇಶ್ವರ [4]ನೀನು ನಾನು ನಾನು ನೀನಾದಡೆ[4]. ೩೦೦.

ಆ. ಕೆಱೆಯ ಮೋರೆಯ ಕುಱುಹೆಂಬುದೇನೋ?! ಒಳಗೆ ಅನಿಮಿಷನಂದಿನಾಥನಿರಲು ಪೂಜಿಸುವ ಭಕ್ತನಾರೊ ಪೂಜೆಗೊಂಬ ದೇವನಾರೋ? ಮುಂದು ಹಿಂದು ಹಿಂದು ಮುಂದಾಯಿತ್ತು ಗುಹೇಶ್ವರಲಿಂಗ ನಿಶ್ಚಿಂತನಿವಾಸಿಯಾದ ಬಳಿಕ. ೮೫೨.

೩೦೦, ೮೫೨ರಲ್ಲಿ ಸಂಖ್ಯೆಯ ನಿರ್ದೇಶನದಲ್ಲಿ ಎರಡು ವಚನವೆನ್ನುವಂತೆ ಒಂದೇ ವಚನ ಅಲ್ಪ ವ್ಯತ್ಯಾಸದಲ್ಲಿ ಕಾಣಬರುತ್ತದೆ. ೩೦೦ರ ವಚನದಲ್ಲಿ ಎರಡು ಸಣ್ಣ ಪಾಠಾಂತರವಿದ್ದರೆ ೮೫೨ರ ವಚನದಲ್ಲಿ ಅದೂ ಇಲ್ಲ (ಅಥವಾ ಸಂಪಾದಕರು ಕೊಟ್ಟಿಲ್ಲ?). ಎರಡೂ ಒಂದೇ ವಚನವಾಗಿರುವುದರಿಂದ ಸೂಕ್ತವಾದ ಒಂದು ವಚನವನ್ನು ಮಾತ್ರ ಉಳಿಸಿಕೊಳ್ಳಬಹುದು.

ಒಂದೇ ವಚನ ಎರಡುಕಡೆ ಕಾಣಬಂದರೂ ಮೇಲುನೋಟಕ್ಕೆ ಯಾವ ಅರ್ಥಹಾನಿಯೂ ಕಂಡುಬಠದು. ೩೦೦ರ ವಚನವನ್ನು ಪರಿಶೀಲಿಸಿದಾಗ ಏನೋ ಆತುರದಲ್ಲಿ ಮುಕ್ತಾಯವಾದಂತೆ, ಏನೋ ಕೊರತೆ ಇರುವಂತೆ ಭಾಸವಾಗುತ್ತದೆ. ೩೦೦ರ ವಚನದಲ್ಲಿ ‘ಅಱುವಿನ ಕುಱುಹಿದೇನೋ’ ಇದ್ದರೆ, ೮೫೨ರಲ್ಲಿ ‘ಕೆಱೆಯ ಮೋಱೆಯ

೧ ಇವು ಪುನರುಕ್ತವಚನಗಳು ಲೇಖನ (ಸಾಧನೆಯಲ್ಲಿ ಬರಲಿದೆ) ನೋಡಿ.
೨ ಱುಹಿ (ಲ). ೩ ಹ (ಟ). ೪ ನಾನು ನೀನು ನೀನು ನಾನಾದಡೆ (ವ).

ಕುಱುಹೆಂಬುದೇನೋ' ಎಂದಿದೆ. 'ಕೆಱೆ'ಪದ ಬೆಡಗಿನ ಪರಿಭಾಷೆಯಲ್ಲಿ ಪ್ರಯೋಗವಾಗಿದೆಯೆ? ಎಂದರೆ ಹಾಗೆ ಪ್ರಯೋಗವಾಗಿಲ್ಲ. ಸಂಪಾದಕರು ಕೂಡ ಬೆಡಗಿನ ಪರಿಭಾಷೆಯಲ್ಲಿ ಕೆಱೆಗೆ ಯಾವ ಅರ್ಥವನ್ನೂ ಸೂಚಿಸಿಲ್ಲ. 'ಅಱಿವಿನ ಮೇರೆಯು ಕುಱುಹಿದೇನೋ' ಎಂದರೆ ಪ್ರಶ್ನಾರ್ಥಕ ವಚನದ ಪರಿಸರದಲ್ಲಿ ಸಂಗತವಾಗಿ ಪ್ರಯೋಗವಾದಂತೆ ಕಾಣುತ್ತದೆ. ಇಷ್ಟಲಿಂಗ ಪರಾತ್ಪರದ ಪ್ರತೀಕ. ಶರಣರು ರೂಪಿಸಿಕೊಂಡ ಈ ಪ್ರತೀಕ, ಎಷ್ಟರಮಟ್ಟಿಗೆ ಸಮರ್ಥವಾಗಿ ಪ್ರತಿನಿಧಿಸುತ್ತದೆ ಎನ್ನುವುದು ಅನುಮಾನ. ಈ ದಿಸೆಯಲ್ಲಿ ಅಱಿವಿನ ಮೇರೆಯು ಕುಱುಹಿದೇನೋ ಎಂಬ ಅನುಮಾನಾಸ್ಪದ ಪ್ರಯೋಗ ಸಂಗತವಾಗಿ ಕಾಣುತ್ತದೆ. ಆದರೆ 'ಕೆಱೆ'ಗೆ ಪಾಠಾಂತರವಿಲ್ಲದ್ದರಿಂದ ಹೀಗೆ ನೇರವಾಗಿ ಸ್ವೀಕರಿಸುವಂತಿಲ್ಲ.

'ನೀನು ನಾನು ನಾನು ನೀನಾದಡೆ' ೩೦೦ರಲ್ಲಿದ್ದರೆ, ೮೦೦ರಲ್ಲಿ 'ನಿಶ್ಚಿಂತ ನಿವಾಸಿಯಾದ ಬಳಿಕ' ಪ್ರಯೋಗವಿದೆ. ನೀನು ನಾನು ನಾನು ನೀನಾದಡೆ ಪ್ರಯೋಗ ಅಸಂಗತವಾದದ್ದು. ಯಾಕಂದರೆ ಪೂಜೆಯಲ್ಲಿ ತೊಡಗುವವನು, ಅವಿರಳ ಸಮರಸದಲ್ಲಿ ಲೀನವಾಗುವವನು, ಸಮಾಧಿಸ್ಥನಾಗುವವನು ಭಕ್ತನೇ ಹೊರತು ಇಷ್ಟಲಿಂಗವಲ್ಲ. ಪೂಜಿಸುವ ಭಕ್ತ ಪೂಜೆಗೊಳ್ಳುವ ದೇವನಾಗುತ್ತಾನೆ. ಅರ್ಥಾತ್ ಪೂಜಿಸುವ ಪೂಜೆಗೊಳ್ಳುವ ಭಾವದ ದ್ವಂದ್ವವಿಲ್ಲದೆ ಬಯಲಾಗುತ್ತಾನೆ. ತಾನು ಏನನ್ನು ಸಾಧಿಸಬೇಕೆಂದುಕೊಂಡಿರುತ್ತಾನೋ ಅದನ್ನು ಸಾಧಿಸಿಕೊಳ್ಳುತ್ತಾನೆ. ಅಂದರೆ ಕ್ರಿಯೆಯಲ್ಲಿ ತೊಡಗುವವ ಭಕ್ತನೇ ಹೊರತು ಲಿಂಗವಲ್ಲ. ಆದ್ದರಿಂದ ಭಕ್ತ ನೀನು (ಗುಹೇಶ್ವರ ಲಿಂಗ) ಆಗುತ್ತಾನೆ; ಮತ್ತೊಂದಾಗುತ್ತಾನೆ. ಇದರಿಂದ ಗುಹೇಶ್ವರಲಿಂಗ ನಿಶ್ಚಿಂತ ನಿವಾಸಿಯಾದ ಬಳಿಕ ಪ್ರಯೋಗ ಸೂಕ್ತ. ಒಟ್ಟಾರೆ ವಚನವನ್ನು ಹೀಗೆ ಪರಿಗ್ರಹಿಸಿ ಇಟ್ಟುಕೊಳ್ಳಬಹುದು.

ಅಱಿವಿನ ಮೇರೆಯು ಕುಱುಹಿದೇನೋ?! ಒಳಗೆ ಅನಿಮಿಷನಂದಿನಾಥನಿರಲು ಪೂಜಿಸುವ ಭಕ್ತನಾರೋ ಪೂಜೆಗೊಂಬ ದೇವನಾರೋ? ಮುಂದು ಹಿಂದು ಹಿಂದು ಮುಂದಾಯಿತ್ತು ಗುಹೇಶ್ವರಲಿಂಗ ನಿಶ್ಚಿಂತನಿವಾಸಿಯಾದ ಬಳಿಕ.

೨) ಅ. ಗಗನವೇ ಗುಂಡಿಗೆ ಆಕಾಶವೇ ಅಗ್ಘವಣಿ! ಚಂದ್ರ ಸೂರ್ಯರಿಬ್ಬರೂ ಪುಷ್ಪ ⁽¹⁾ನೋಡಾ⁽¹⁾! ಬ್ರಹ್ಮಧೂಪ, ವಿಷ್ಣುದೀಪ, ರುದ್ರನೋಗರ ⁽²⁾ಸಯಧಾನ⁽²⁾ ನೋಡಾ! ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ. ೪೧೫.

ಆ. ಗಗನದ ಗುಂಡಿಗೆ, ಆಕಾಶದ ಗಂಗೆಯ ಅಗ್ಘವಣಿ, ಚಂದ್ರ ಸೂರ್ಯರಿಬ್ಬರೂ ಪುಷ್ಪ ನೋಡಾ! ಬ್ರಹ್ಮಧೂಪ ವಿಷ್ಣುದೀಪ ರುದ್ರನೋಗರ ಸಯುವು ನೋಡಾ! ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ. ೮೭೩.

---

೧. (ತಲ). ೨. ಸಯುವು(ವ).

೪೧೫–೮೭೩ರ ಸಂಖ್ಯೆಯ ನಿರ್ದೇಶನದಲ್ಲಿ ಎರಡು ವಚನಗಳಾಗಿ ಒಂದೇ ವಚನ ಕಾಣಬರುತ್ತದೆ. ೪೧೫ಕ್ಕೆ ಎರಡು ಸಣ್ಣಪಾಠಾಂತರವಿದ್ದರೆ, ೮೭೩ಕ್ಕೆ ಅದೂ ಇಲ್ಲ. ಅರ್ಥದೃಷ್ಟಿಯಿಂದಂತೂ ಯಾವ ವಚನವೂ ಕುಂದು ತಂದುಕೊಂಡಿಲ್ಲ. ಸಯ, ಸಯಧಾನಕ್ಕೆ ಅರ್ಥವ್ಯತ್ಯಾಸ ಪ್ರಯೋಗಕ್ಕೆ, ಪರಿಸರಕ್ಕೆ ಅನುಗುಣವಾಗಿ ಉಂಟಾಗುತ್ತದೆ. ಸಯಧಾನ ಕೊಡುವ ಅರ್ಥವನ್ನು ಸಯವು ಕೂಡ ಕೊಡುತ್ತದೆ. ಇದಕ್ಕೆ ಅನೇಕ ವಚನಗಳಲ್ಲಿ ಪುರಾವೆ ಇದೆ. ಪಾಠಾಂತರ ಸ್ವೀಕರಿಸುವಾಗ 'ಸಯ'ವು ಇದ್ದಾಗ್ಯೂ 'ಸಯಧಾನ' ಪಾಠವನ್ನು ಸಂಪಾದಕರು ಸ್ವೀಕರಿಸಿದ್ದಾರೆ. ಅಲ್ಲದೆ ಕಠಿಣ ಪದಕೋಶದಲ್ಲಿ ಸಯ, ಸಯವಾಗು, ಸಯಧಾನಕ್ಕೆ ಬೇರೆಬೇರೆ ಅರ್ಥಗಳನ್ನೇ ಕೊಟ್ಟಿದ್ದಾರೆ. ಸಯಧಾನಕ್ಕೆ ಮಾತ್ರ ಎಡೆ, ನೈವೇದ್ಯ, ಪದಾರ್ಥ ಎಂಬ ಅರ್ಥ ಕೊಟ್ಟಿದ್ದಾರೆ. ಈ ಅರ್ಥವನ್ನು ಸಯ ಶಬ್ದ ಕೂಡ ಕೊಡುತ್ತದೆಂದು ವಚನಗಳ ಅಧ್ಯಯನದಿಂದ ತಿಳಿದಿರುವೆ. ಏನೇ ಆದರೂ ಇಲ್ಲಿ ೪೧೫ನೆಯ ವಚನವನ್ನು ಸಂಪಾದಕರು ಕೊಟ್ಟಿರುವಂತೆಯೇ ಸ್ವೀಕರಿಸಿ, ೮೭೩ ರವಚನವನ್ನು ಬಿಡಬಹುದಾಗಿದೆ.

ಹುಟ್ಟಿನೊಡನೇ ಕಲೆಯು ಹೊತ್ತುತಂದವನು....

● ದೊಡ್ಡರಂಗೇಗೌಡ

ಇವನು ನೋಡಲಿಕ್ಕೆ ನಾಲ್ಕುವರ್ಷದ ಹುಡಗ
ಬಣ್ಣದೊಡನೆ ಆಟವಾಡುತ್ತ ಕೂತರೆ
ತೆರೆಯುತ್ತಾನೆ ಕಲೆಯು ಸೆರಗು;
ಇವನು ಕಲಾಶಾಲೆಯಲ್ಲಿ ಕಲಿತವನಲ್ಲ
ರಂಗಿನಧ್ಯಯನ ಗಳಿಸಿಕೊಂಡವನಲ್ಲ
ನಿಸರ್ಗ ಗುರುವಿನ ಜೊತೆ ಇವನೆಲ್ಲ ಬಲ್ಲ.
ಬಣ್ಣದ ಪೆಟ್ಟಿಗೆಯೊಂದಿಗೆ ಬ್ರಷ್ ಅಲುಗಿದರೆ
ಒಂದೊಂದು ಭಂಗಿ; ಗೀಚಿದಷ್ಟೂ ಶೈಲಿ;
ಗೆರೆಗೊಂದರ್ಥ ಕೊಡಬಲ್ಲ
ವರ್ಣಸೂತ್ರ ಬಿಡಿಸಬಲ್ಲ
ಇವನು ಕುಂಚ ನಿರತನಲ್ಲ
ಹವ್ಯಾಸಿಯೂ ಅಲ್ಲ-ಹುಟ್ಟಿನೊಡನೇ ಕಲಿತಿದ್ದಾನೆ ಸಕಲ
ಖುಷಿಯಲ್ಲಿದ್ದಾಗ ಸಲಿಲ
ಇವನ ಕಲಾಕೈ ಲೀಲಾಜಾಲ
ಗೋಡೆ ಪುಸ್ತಕ ಏನೊಂದೂ ಕ್ಯಾನವಾಸ್ ಆದೀತು
ಇವನ ಬೆರಳಾಡಿದಷ್ಟೂ ವರ್ಣಗಣಿ ತುಂಬ
ಒಂದೊಂದು ರತ್ನ...ಚಿತ್ರ ಶಾಶ್ವತ;
ಇವನು ಆಡಲಿಕ್ಕೆ ನಿಂತರೆ ನೂರಾರು ಸೋಜಿಗ
ಬೇರು ಬಿಟ್ಟರೆ
ಪಲ್ಲವಿಸುತ್ತಾನೆ ಸಾವಿರದ ಬೆರಗು.

● ●

ಕೆಲವು ಈಚಿನ ಗಮನಾರ್ಹ ಪುರಾತತ್ವಶೋಧನೆಗಳು

● ಅ. ಸುಂದರ

ಪ್ರಾಗೈತಿಹಾಸಿಕ ನೆಲೆಗಳು :

೧. ಐಹೊಳೆಯಲ್ಲಿ ಸ್ಥಳಿಕವಾಗಿ "ರಾಚಿಗುಡಿ" ಎಂದು ಕರೆಯಲಾದ ದೇವಾಲಯದ ಹತ್ತಿರ ಮಲಪ್ರಭಾ ನದಿಯ ಪಾತ್ರದಲ್ಲಿ ಕೆಲವೊಂದು ಆದಿ ಹಳೆಶಿಲಾಯುಗದ (Early Palaeolithic tools of Mid-upper Pleistocene Age ಸುಮಾರು ೨ ಲಕ್ಷ ವರ್ಷಗಳ ಹಿಂದಿನದು) ಕಲ್ಲಿನ ಕೈಗೊಡಲಿಗಳಿವೆ. ಪ್ರಪ್ರಥಮ ರಾಬರ್ಟ್ ಬ್ರೂಸ್ ಫುಟ್[೧]ರವರು ೧೮೭೩ರಲ್ಲಿ ಖ್ಯಾಡ್-ಥಾಣಕ್ ಶಿರೂರು ಬಳಿ ಈ ನದಿಯ ಪಾತ್ರದಲ್ಲಿ ಹೇರಳವಾಗಿ ಇಂಥ ಕಲ್ಲಿನ ಆಯುಧಗಳನ್ನು ಶೋಧಿಸಿದರು. ಆರ್. ವ್ಹಿ. ಜೋಶಿ[೨]ಯವರು ಈ ನದಿಯ ಮೇಲ್ಭಾಗದಲ್ಲಿಯ ಕಾತರಾಳ್ (ಬೈಲಹೊಂಗಲ ತಾ. ಬೆಳಗಾಂವ್ ಜಿ.) ದಿಂದ ಚೊಳಚಗುಡ್ಡ(ಬದಾಮಿ ತಾ. ವಿಜಾಪುರ ಜಿ.)ದ ವರೆಗೆ ನದಿಯ ಪಾತ್ರವನ್ನು ಕೂಲಂಕಷವಾಗಿ ಶೋಧಿಸಿ ಇಂಥ ಸುಮಾರು ೨೧ ನೆಲೆಗಳನ್ನು ಪರೀಕ್ಷಿಸಿ ಅಧ್ಯಯನ ಮಾಡಿದ್ದಾರೆ. ಅನಂತರ ಕೆಳಭಾಗದಲ್ಲಿರುವ ಪಟ್ಟದಕಲ್ಲಿ[೩]ನ ಬಳಿ ಮತ್ತೊಂದು ನೆಲೆ ಇರುವುದು ಶೋಧವಾಯಿತು. ಈ ನೆಲೆಯಿಂದ ಇನ್ನೂ ಕೆಳಗೆ ಇರುವ ಐಹೊಳೆಯಲ್ಲಿಯು ಇಂಥ ಅವಶೇಷಗಳು ದೊರೆತಿರುವುದು ಗಮನಾರ್ಹ.

೨. ಪಟ್ಟದಕಲ್ಲಿನಿಂದ ನೈರುತ್ಯಕ್ಕೆ ಸುಮಾರು ೫ ಕಿ. ಮೀ. ದೂರದಲ್ಲಿರುವ ಜಾಲಿಹಾಳದ ಉತ್ತರದಿಶೆಯಲ್ಲಿಯ ಗುಡ್ಡದ ಕಣಿವೆಯಿಂದ ಬರುವ ಒಂದು ಹಳ್ಳದ ಪಾತ್ರದಲ್ಲಿ ಈ ಶಿಲಾಯುಗಸಂಸ್ಕೃತಿಯ ಅವಶೇಷಗಳು ವಿರಳವಾಗಿ ಇವೆ. ಈ ನೆಲೆಯು ಮಹತ್ವದ್ದು. ಮಲಪ್ರಭಾ ನದಿಯಲ್ಲಿ ದೊರೆಯುವ ಅವಶೇಷಗಳನ್ನು ನೀರಿನ ಸೆಳೆತಕ್ಕೆ ಸಿಕ್ಕಿ ಸ್ಥಳಾಂತರವಾಗಿರುವುದರಿಂದ ಅವುಗಳ ಮೂಲಸ್ಥಾನಗಳನ್ನು ಗುರುತಿಸಲಾಗಿಲ್ಲ. ಹುಡುಕುವುದು ಕಷ್ಟಸಾಧ್ಯ. ಆದರೆ ಜಾಲಿಹಾಳದಂಥ ನೆಲೆಗಳಲ್ಲಿ ಈ ಅವಶೇಷಗಳು ಬಹುದೂರದ ವರೆಗೆ ಸ್ಥಾನಪಲ್ಲಟವಾಗಿಲ್ಲದ್ದರಿಂದ ಅಂಥ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಮೂಲನೆಲೆಗಳನ್ನು ಹುಡುಕಲು ಸಾಧ್ಯವಾದೀತು.

ಜೂನ್-ಜುಲೈ, ೭೬ರ ಸಮಯದಲ್ಲಿ ಕೈಕೊಂಡ ಪ್ರಾದೇಶಿಕ ಅನ್ವೇಷಣೆಯಲ್ಲಿ ಕಂಡುಬಂದ ಕೆಲವು ಗಮನಾರ್ಹವಾದ ಪುರಾತತ್ವಶೋಧನೆಗಳ ಮುಖ್ಯಾಂಶಗಳನ್ನೊಳಗೊಂಡಿದೆ, ಈ ಲೇಖನ.

೩. i) ಪಟ್ಟದಕಲ್ಲಿನಿಂದ ಉತ್ತರಕ್ಕೆ ಸುಮಾರು ೫ ಕಿ. ಮೀ. ದೂರದಲ್ಲಿರುವ ಆಕ್ಕರಗಲ್ಲಿನಲ್ಲಿರುವ ''ಶಂಕರಗುಂಡದ''ದ ಹತ್ತಿರ ಬೃಹತ್‌ಶಿಲಾಗೋರಿಗಳಿರುವುದನ್ನು ಹಿಂದೆ ಶೋಧಿ[೫]ಸಿದ್ದೆ. ಶಂಕರಗುಂಡದ ಮೇಲಿರುವ ಈಶ್ವರ ಗುಡಿಯ ಎಡಬದಿಗೆ ಸಮಕಟ್ಟಿನಲ್ಲಿ ನೂತನ ಶಿಲಾಯುಗ ಸಂಸ್ಕೃತಿ(ಕ್ರಿ. ಪೂ. ೧೮೦೦-೧೦೦೦)ಯ ಅವಶೇಷಗಳಿವೆ. ಈ ಸಂಸ್ಕೃತಿಯ ಮೃತ್‌ಪಾತ್ರೆಯ ಚೂರುಗಳು ಈ ನೆಲೆಯಲ್ಲಿ ಅಲ್ಲಲ್ಲಿ ಸಿಗುತ್ತವೆ.

ii) ಪಟ್ಟದಕಲ್ಲಿನಿಂದ ಸುಮಾರು ೧ ಕಿ.ಮೀ. ಪಶ್ಚಿಮಕ್ಕಿರುವ ಬಾಚನಮರಡಿ ಗುಡ್ಡದ ಪೂರ್ವದಂಚಿನಲ್ಲಿರುವ ವಿಸ್ತಾರವಾದ ಇತಿಹಾಸಪ್ರಾರಂಭಕಾಲದ ನೆಲೆ[೬] ಯನ್ನು ಕನ್ನಡ ಸಂಶೋಧನ ಸಂಸ್ಥೆಯು ಹಿಂದೆಯೇ ಬೆಳಕಿಗೆ ತಂದಿತ್ತು. ಇದರ ಸಮೀಪದಲ್ಲೇ ನನ್ನ ಶೋಧನೆಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಉಜ್ಜಿ ನಯ ಮಾಡಿದ ಎರಡು ಕಲ್ಲಿನ ಕೊಡಲಿಗಳು, ಕೆಲವು ಬೂದುಬಣ್ಣದ ಮೃತ್‌ಪಾತ್ರೆಯ ಅವಶೇಷಗಳು ದೊರೆತಿವೆ.

ಈ ಶೋಧನೆಗಳಿಂದ ಹೆಸರಾಂತ ಈ ಎರಡು ಸ್ಥಳಗಳಲ್ಲಿ ಆದಿ ಹಳೆಶಿಲಾಯುಗ ದಿಂದ ಹಿಡಿದು ಬಾದಾಮಿ ಚಾಲುಕ್ಯರ ಕಾಲದ ವರೆಗಿನ ಮಾನವಸಂಸ್ಕೃತಿ ಬೆಳವಣಿ ಗೆಯ ಎಲ್ಲ ಮುಖ್ಯ ಹಂತಗಳ ಅವಶೇಷಗಳು ದೊರೆತಂತಾಗಿವೆ.

iii) ಬಾದಾಮಿಯ ''ಉತ್ತರಗುಡ್ಡ''ದ ಉತ್ತರಕ್ಕೆ ಅನತಿ ದೂರದಲ್ಲಿ ವಿಶಾಲವಾದ ''ಬಾದಾಮಿಕೊಳ್ಳ''ದ ಒಂದು ಬದಿಯು ಗುಡ್ಡದ ಸಾಲು ಇದೆ. ಪೂರ್ವ-ಪಶ್ಚಿಮಾಭಿಮುಖವಾಗಿರುವ ಈ ಸಾಲಿನ ಬಾದಾಮಿಗೆದುರಾಗಿರುವ ಅಂಚಿ ನಲ್ಲಿ ಹಲವಾರು ಕಲ್ಲಾಸರೆಗಳಿವೆ. ನಾಲ್ಕರಲ್ಲಿ ವರ್ಣಚಿತ್ರಗಳಿವೆ. ಅ) ಒಂದರಲ್ಲಿ, ನಾಯಿ, ದನ-ಎಮ್ಮೆಯಂಥ ಒಂದು ಪಶು, ಒಂದು ವಿಚಿತ್ರ ತರಹದ ಪ್ರಾಣಿ ಮತ್ತು ಮೂರು ದೆವ್ವಗಳೆಂಬ ಭಾವನೆ ಕೊಡುವ ಮನುಷ್ಯರ ಚಿತ್ರಗಳು ಸ್ಪಷ್ಟವಾಗಿದ್ದು ಉಳಿದವು ಅಸ್ಪಷ್ಟವಾಗಿವೆ. ಅಲ್ಲದೆ ಈಚಿನ ಕಾಲದಲ್ಲಿ ಈ ಗವಿಯ ಒಳಮೈಯನ್ನು ಮಣ್ಣಿನಿಂದ ಬಳಿಯಲಾಗಿದೆ. ಆದ್ದರಿಂದ ಇದ್ದಿರಬಹುದಾದ ಮತ್ತೆ ಕೆಲವು ಚಿತ್ರಗಳು ಮುಚ್ಚಿಹೋಗಿವೆ.

ಮೇಲೆ ಹೇಳಿದ ವಿಚಿತ್ರ ಪ್ರಾಣಿಗೆ ಕಡ್ಡಿಯಂಥ ಉದ್ದನೆ ಕಾಲುಗಳು ಮತ್ತು ಮೈ. ತಲೆ ಆಯತಾಕಾರವಿದ್ದು ಎರಡು ಬದಿಗಳಲ್ಲೂ ಮತ್ತು ಮೇಲೆ ಎರಡೆರಡು ಉದ್ದನೆ ಮೊನೆಗಳು ಇವೆ. ವೃತ್ತಾಕಾರದ ದೊಡ್ಡ ಕಣ್ಣುಗಳು. ಚಿತ್ರಗಳು ಮಸುಕಾದ ಬಿಳಿಬಣ್ಣದಲ್ಲಿದ್ದು ಅದಕ್ಕೆ ಕರಿಬಣ್ಣದ ಗೆರೆಯಂಚಿದೆ. ಮನುಷ್ಯರ ಚಿತ್ರಗಳಲ್ಲಿ ಎರಡು ಕಾಡಿಗೆಯಂಥ ಕರಿಬಣ್ಣದಲ್ಲಿವೆ. ಮತ್ತೊಂದು ಮಸುಕಾದ ಬಿಳಿ-ಕರಿ ಬಣ್ಣದಲ್ಲಿದ್ದು ಇದರಂಚಿನಲ್ಲಿ ಕರಿಬಣ್ಣದ ಗೆರೆಯಿದೆ.

ಉತ್ತರಕರ್ನಾಟಕದಲ್ಲಿ ಕೆಲವೆಡೆಗಳಲ್ಲಿ ಇಂಥ ವರ್ಣಚಿತ್ರಿತಗವಿಗಳಿವೆ. ಇವುಗಳಲ್ಲಿ ಪರಿಚಿತ ಪ್ರಾಣಿಗಳ, ಪಕ್ಷಿಗಳ ಮತ್ತು ಮನುಷ್ಯರ ಹಾಗೂ ರೇಖಾಚಿತ್ರಗಳು ಹೆಚ್ಚಾಗಿ ಕೆಮ್ಮಣ್ಣಿನ ಬಣ್ಣದಲ್ಲೂ, ಕೆಲವು ಸುಣ್ಣದ ಬಣ್ಣದಲ್ಲೂ ಇವೆ. ಆದರೆ **ಬಾದಾಮಿ ಗವಿಯಲ್ಲಿರುವ ಚಿತ್ರಗಳು ಕೆಲವು ಅಪರೂಪ ಹಾಗೂ ವಿಚಿತ್ರವಾಗಿದ್ದು ದ್ವಿವರ್ಣದಲ್ಲಿವೆ. ಮೈಯೆಲ್ಲಾ ಒಂದು ಬಣ್ಣದಲ್ಲಿ, ಅದರಂಚನ್ನು ಮತ್ತೊಂದು ಬಣ್ಣದಲ್ಲಿ ಚಿತ್ರ ತೆಗೆಯುವ ತಂತ್ರ ಇದುವರೆಗೆ ಕಂಡು ಬಂದ ಗವಿಚಿತ್ರಗಳಲ್ಲಿಲ್ಲ. ಈ ತಂತ್ರ ಸುಪ್ರಸಿದ್ಧ ಸ್ಪೇನ್ ದೇಶದ ಅಲ್ಟಮೀರಾ ಗವಿವರ್ಣಚಿತ್ರಗಳನ್ನು ಜ್ಞಾಪಕಕ್ಕೆ ತರುತ್ತದೆ.** ಆದ್ದರಿಂದ ಇದೊಂದು ಮಹತ್ವದ ಗವಿಚಿತ್ರವೆಂದು ಹೇಳಬಹುದು. ಇದರ ಕಾಲಮಾನ ಸುಮಾರಾಗಿ ಊಹಿಸಿದಲ್ಲಿ ಅಂತ್ಯ ಹಳೆಶಿಲಾಯುಗ– ನೂತನ ಶಿಲಾಯುಗದ ಅಂತರದಲ್ಲಿ ಬರಬಹುದು.

ಐಹೊಳೆಯ ಕಲ್ಲುಗುಡ್ಡದಲ್ಲಿರುವ ದೊಡ್ಡದಾದ ಜೈನ ಲಯಣ ಮತ್ತು ರವಿಕೀರ್ತಿ ಕಟ್ಟಿಸಿದ ಜಿನೇಂದ್ರಾಲಯ(ಮೇಗುಡಿ)ದ ಅಂತರದಲ್ಲಿರುವ ಕಲ್ಲಾಸರೆಗಳ ಮೂರರಲ್ಲಿ ಮಾತ್ರ ಸರಳ ರೇಖಾಚಿತ್ರಗಳಿವೆ. ಇವುಗಳ ಹತ್ತಿರದಲ್ಲಿರುವ ಬೃಹತ್‌ಶಿಲಾ ಸಂಸ್ಕೃತಿಯ ಕಲ್ಗೋರಿಗಳಿಂದಲೂ, ಈ ಚಿತ್ರಗಳ ಲಕ್ಷಣಗಳ ಮೇಲೂ ಇವು ಈ ಸಂಸ್ಕೃತಿಗೆ ಸಂಬಂಧಪಟ್ಟದೆಂದು ತೋರುವುದು.

ವರ್ಣಚಿತ್ರಿತ ಗವಿಗಳು :

i) ಹೊಸ ಮಹಾಕೂಟಕ್ಕೆ ಬಾದಾಮಿಯ "ಉತ್ತರಗುಡ್ಡ"ದಿಂದ ಗುಡ್ಡದ ಸಾಲಿನ ಮೇಲೆಯೇ ಒಂದು ಒಳಹಾದಿಯಿದೆ. ಬಾದಾಮಿ ಚಾಲುಕ್ಯ ರಾಜವಂಶದವರು ಕೂಡಾ ಮಹಾಕೂಟಕ್ಕೆ ಹೋಗಲು ಈ ಒಳಹಾದಿಯನ್ನೇ ಅನುಸರಿಸುತ್ತಿದ್ದರೆಂಬುದಕ್ಕೆ ಗುಡ್ಡದ ಮೇಲೆ ಈ ಎರಡು ಸ್ಥಳಗಳಿಂದ ಸ್ವಲ್ಪ ದೂರದಲ್ಲಿರುವ ಕಲ್ಲಿನ ತೋರಣಗಳು, "ಉತ್ತರಗುಡ್ಡ"ದಿಂದ ಮುಂದೆ ೧ ಕಿ.ಮೀ. ದೂರದಲ್ಲಿರುವ ಗುಡ್ಡದ ಸಾಲಿನವರೆಗೆ ಮತ್ತು ಮುಂದೆ ಇಳುಕಲಿನಲ್ಲಿ ತುಂಡುಕಲ್ಲುಗಳನ್ನು ಹಾಕಿ ಕಟ್ಟಿದ ರಾಜಮಾರ್ಗದ ಅವಶೇಷಗಳು ಮತ್ತು ಅಲ್ಲಲ್ಲಿ ಹಾದಿಯ ಬದಿಯಲ್ಲಿರುವ ಆ ಕಾಲದ ಸಣ್ಣ ಸಣ್ಣ ಮಹಿಷಮರ್ದಿನಿಯ ಗುಡಿಗಳು, ಒಂದು ಕಟ್ಟಿದ ಕೊಳವು ಸೂಚಿಸುತ್ತವೆ. ಹೊಸ ಮಹಾಕೂಟದ ಹತ್ತಿರ ಇದ್ದ ತೋರಣ ಬಿದ್ದುಹೋಗಿ ಅದರ ಕಂಬಗಳ ಪೀಠಗಳು ಮಾತ್ರ ಉಳಿದಿವೆ. ಅಲ್ಲಿಂದ ಸ್ವಲ್ಪ ಮುಂದೆ ಎಡಬದಿಯಲ್ಲಿ ಒಂದು ದೊಡ್ಡ ಹಾಗೂ ದುರ್ಗಮವಾದ ಕಣಿವೆಯಿದೆ. ಈ ಕಣಿವೆಯ ಮೂಲೆಯಲ್ಲಿ ಒಂದು ಚಾಲುಕ್ಯ ಕಾಲದ ಸಣ್ಣದೇವಾಲಯವಿದೆ. ಇದರ ಹಿಂಬದಿಯ ಕಲ್ಲಾಸರೆಯ ಒಳಬದಿಯಲ್ಲಿ ಕೆಮ್ಮಣ್ಣಿನ ಬಣ್ಣದ ಹಲವಾರು ಸಣ್ಣಸಣ್ಣ ಚಿತ್ರಗಳಿವೆ. ಹೆಚ್ಚಾಗಿ ರೇಖಾಚಿಹ್ನೆಗಳಿವೆ. ಅವುಗಳ ಸಂಕೇತಾರ್ಥ ತಿಳಿಯಬೇಕಾಗಿದೆ. ದೇವಾಲಯವನ್ನು ಈ ಕಲ್ಲಾ

ಸರೆಗೆ ಸೇರಿಸಿ ಕಟ್ಟಲಾಗಿದೆ. ಪ್ರಾಯಶಃ ಈ ಚಿತ್ರಗಳು ಚಾಲುಕ್ಯಪೂರ್ವಕಾಲದವೆಂದು ತೋರುವುದು.

ಬಾದಾಮಿ ಗುಡ್ಡದ ಕಲ್ಲಾಸರೆಗಳ ನಾಲ್ಕರಲ್ಲಿ ಚಿತ್ರಗಳಿರುವುದೆಂದು ಅದರಲ್ಲಿ ಒಂದನ್ನು (2 iii) ಮೇಲೆ ವರ್ಣಿಸಿದೆಯಷ್ಟೆ. ಈ ಗವಿಚಿತ್ರದ ಪಶ್ಚಿಮಕ್ಕೆ ಇದೇ ಗುಡ್ಡದ ಸಾಲಿನಲ್ಲಿರುವ ಮತ್ತೊಂದು ಗವಿಚಿತ್ರವು ಸ್ವಾರಸ್ಯಕರವಾಗಿದೆ. ಇದು ಉಳಿದೆಲ್ಲ ಗವಿಚಿತ್ರಗಳಿಗಿಂತ ತಾಂತ್ರಿಕ ಪದ್ಧತಿ, ಶೈಲಿ ಮತ್ತು ಚಿತ್ರಗಳ ಸ್ವರೂಪದಲ್ಲಿ ಭಿನ್ನವಾಗಿದ್ದು ಸುಸಂಸ್ಕೃತ ಕಲಾಸಂಪ್ರದಾಯದ್ದಾಗಿದೆ. ಕಲ್ಲಾಸರೆಯ ಹಿಂಬದಿಯ ನೆಟ್ಟಗಿನ ಕಲ್ಲುಬಂಡೆಯ ಮೇಲೆ ತೆಳ್ಳಗೆ ಸ್ವಲ್ಪ ಹಳದಿಬಣ್ಣದ ಸುಣ್ಣದ ಲೇಪನ ಮಾಡಿ, ಇದರ ಮೇಲೆ ಕೆಂಪುಬಣ್ಣದಲ್ಲಿ ಚಿತ್ರಗಳ ರೇಖಾವಿನ್ಯಾಸವನ್ನು ಬಿಡಿಸ ಲಾಗಿದೆ. ಒಬ್ಬಳು ಗಣ್ಯಸ್ತ್ರೀ ಕುಳಿತಿದ್ದಾಳೆ. ಅವಳ ಬಲಬದಿಗೆ ಅಪೂರ್ಣವಾಗಿ ಬಿಡಿಸಿದ ಮತ್ತೊಬ್ಬ ವ್ಯಕ್ತಿ ಕುಳಿತಿದ್ದು ಮತ್ತು ಎಡಬದಿಗೆ ಇಬ್ಬರು ನಿಂತಿದ್ದಾರೆ. ಮತ್ತು ಗಣ್ಯವ್ಯಕ್ತಿಯ ಕಡೆಗೆ ಮೂರು ಸ್ತ್ರೀಯರು ಕಮಲ ಪುಷ್ಪವನ್ನು ಹಿಡಿದು ಬರು ತ್ತಿರುವ ಹಾಗಿದೆ. ಎಲ್ಲರೂ ಮಿತವಾಗಿ ಆಭರಣಗಳನ್ನೂ ತೊಟ್ಟಿದ್ದಾರೆ. ಪ್ರಾಯಶಃ ಗಣ್ಯಸ್ತ್ರೀಯ ಸಖಿಯರಿರಬಹುದು. ಇದು ಚಿತ್ರದ ವಿಷಯವಾಗಿದ್ದು ಸುಮಾರು ೨·೨೦ × ೧·೦೦ ಮೀ. ಕ್ಷೇತ್ರದಲ್ಲಿ ಬಿಡಿಸಲಾಗಿದೆ. ವ್ಯಕ್ತಿಗಳ ಮೈಮಾಟ, ಪ್ರಮಾಣ ಬದ್ಧತೆ, ಅಂಗಾಂಗಗಳನ್ನು ಬಿಡಿಸಿದ ಶೈಲಿ, ಸರಳ ಆಭರಣಗಳ ಅಲಂಕಾರ: ಇವೆಲ್ಲವೂ ಬಾದಾಮಿ ಊರೊಳಗಿನ ಮೂರನೆಯ ವಿಷ್ಣುಲಯಣದಲ್ಲಿರುವ ವರ್ಣಚಿತ್ರಗಳಿಗೆ ಸಮೀಪವಾಗಿದ್ದು, ಈ ಚಿತ್ರ ಒಬ್ಬ ನುರಿತ ಚಿತ್ರಕಾರನಿಂದ ಬಿಡಿಸಿದ್ದೆಂದು ಸೂಚಿಸು ವವು. ಇದರ ಕಾಲ ನಿಸ್ಸಂಶಯವಾಗಿ ಬಾದಾಮಿ ಚಾಲುಕ್ಯರ ಕಾಲದ್ದು. ವಿಷ್ಣುಲಯಣ ದಲ್ಲಿಯ ವರ್ಣಚಿತ್ರಗಳನ್ನು ಬಿಟ್ಟು ಈ ಕಾಲದ ಇಂಥ ಕಲಾಸಂಪ್ರದಾಯಕ್ಕೆ ಸಂಬಂಧ ಪಟ್ಟ ಚಿತ್ರಗಳು ಮತ್ತೆಲ್ಲಿಯೂ ಗೋಚರವಾಗಿಲ್ಲ. ಆದ್ದರಿಂದ ಈ ಬಂಡೆಚಿತ್ರವು ಮಹತ್ವದ್ದು.

ಕ) ಮೇಲೆ ಹೇಳಿದ ಎರಡು ಗವಿಚಿತ್ರಗಳ ಮಧ್ಯದಲ್ಲಿ ಒಂದು ಕಲ್ಲಾಸರೆಯಲ್ಲಿ ಒಂದು ಕರೇ ಮಂಗ (ಮುಶ್ಯ)ನ ಕೆಮ್ಮಣ್ಣಿನ ಬಣ್ಣದ ರೇಖಾಚಿತ್ರವಿದೆ.

ಡ) ಮೇಲೆ ವಿವರಿಸಿದ ಬಾದಾಮಿ ಚಾಲುಕ್ಯರ ಕಾಲದ ವರ್ಣಚಿತ್ರ ಗವಿ ಯಿಂದ ಮುಂದೆ ಪಶ್ಚಿಮಕ್ಕೆ ಇದೇ ಗುಡ್ಡದ ಸಾಲಿನಲ್ಲಿ ಒಂದು ಗವಿಯಲ್ಲಿ ಅರಳಿದ ಕಮಲದ ಹೂವಿನ ಮತ್ತು ಇತರ ಅಸ್ಪಷ್ಟ ಮೂರು ನಾಲ್ಕು ಕೆಮ್ಮಣ್ಣಿನ ಬಣ್ಣದ ಚಿತ್ರಗಳಿವೆ. ಪ್ರಾಯಶಃ ಬಾದಾಮಿ ಚಾಲುಕ್ಯ ಕಾಲದ್ದು.

ಗುಡ್ಡದ ಮೇಲಿನ ಹಲವಾರು ಗವಿಗಳು ಕಲ್ಲಾಸರೆಗಳಿದ್ದು ಎರಡರಲ್ಲಿ ಕುಣಿಯು ತ್ತಿರುವ ಒಬ್ಬ ವ್ಯಕ್ತಿಯ ಚಿತ್ರವಿದೆ. ಅಲ್ಲಲ್ಲಿ ತುಂಡುಕಲ್ಲುಗಳಿಂದ ಕಟ್ಟಿದ ಗೋಡೆ

ಗಳಿದ್ದು ಜನವಸತಿಯ ಕುರುಹುಗಳಿವೆ. ಗುಡ್ಡದ ಸಾಲಿನ ಎದುರಿನಲ್ಲಿ ಕೆಳಗೆ ಬಾದಾಮಿಯ ಉತ್ತರಗುಡ್ಡದ ಬದಿಯಲ್ಲಿ ಹತ್ತಾರು ಕಟ್ಟಿದ ತುಂಡುಕಲ್ಲಿನ ಮನೆಗಳ ಅವಶೇಷಗಳಿವೆ. ಈಗಿನ ಸ್ಥಿತಿಯಲ್ಲಿ ಇವೆಲ್ಲವೂ ಯಾವ ಕಾಲದ್ದೆಂದು ಸಧ್ಯಕ್ಕೆ ಹೇಳುವುದು ಕಷ್ಟ.

ವಾಸ್ತು ಮತ್ತು ಪ್ರತಿಮಾ ಶಿಲ್ಪ :

ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳು : ೧. ಹೊಸ ಮಹಾಕೂಟದ ವರ್ಣಚಿತ್ರಗಳ ಬಗ್ಗೆ ಮತ್ತು ಆ ಕಲ್ಲಾಸರಗೆ ಸೇರಿದ ಹಾಗೆ ಒಂದು ದೇವಾಲಯವಿದ್ದದ್ದು ಮೇಲೆ ಹೇಳಿದೆಯಷ್ಟೆ. ಬಾದಾಮಿ ಚಾಲುಕ್ಯರ ಕಾಲದ ಈ ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪದಿಂದ ಕೂಡಿದ್ದು ಮುಖ ಮಂಟಪವು ಕಾಲಾಂತರದಲ್ಲಿ ಬಿದ್ದುಹೋಗಿದೆ. ಗರ್ಭಗುಡಿಯ ಮಾಳಿಗೆ ಸಮ ತಲವಾಗಿದ್ದು ಮೇಲೆ ಶಿಖರವಿಲ್ಲ. ಇದರ ಅಧಿಷ್ಠಾನ ಮಂಚಬಂಧ ಶೈಲಿಯಲ್ಲಿದೆ. ಗರ್ಭಗುಡಿಯೊಳಗೆ ಗೋಡೆಗಳನ್ನು ಬಿಟ್ಟು ನಾಲ್ಕು ಕಂಬಗಳಿರುವುದು ಗಮನಾರ್ಹ. ಇದರಲ್ಲಿಯ ಪೀಠದಲ್ಲಿ ಈಗ ಲಿಂಗವಿದ್ದರೂ, ಮೂಲತಃ ಮೂರ್ತಿಯಿದ್ದಿತ್ತೆಂಬುದ ರಲ್ಲಿ ಪೀಠದಲ್ಲಿಯ ಗುಳಿಯ ಲಕ್ಷಣದಿಂದ ನಿಸ್ಸಂಶಯ. ಇಲ್ಲಿಯೇ ಒಡೆದು ಬಿದ್ದಿರುವ ಒಂದು ಮಹಿಷಮರ್ದಿನಿಯ ಮೂರ್ತಿಯಿದೆ, ಆದ್ದರಿಂದ ಇದು ದುರ್ಗಾದೇವಾಲಯ ವಿದ್ದಿರಬೇಕು.

೨. ಹಳೆ ಮಹಾಕೂಟದಲ್ಲಿರುವ ಗಜಪೃಷ್ಠಾಕೃತಿಯ ಈಶ್ವರ ದೇವಾಲಯ ದಲ್ಲಿ ಒಂದು ಅಪೂರ್ವ ಕಾರ್ತಿಕೇಯನ ಮೂರ್ತಿಯಿದೆ, ಈ ದೇವನು ದ್ವಿಭುಜ ನಾಗಿದ್ದು ಸಮಭಂಗದಲ್ಲಿದ್ದಾನೆ. ಬಲಗೈಯಲ್ಲಿ ತನ್ನಷ್ಟೇ ಎತ್ತರದ ವೇಲಾಯುಧ ವನ್ನು ಹಿಡಿದಿದ್ದು, ಎಡಗೈಯನ್ನು ಸೊಂಟದ ಮೇಲೆ ಇಟ್ಟಿದ್ದಾನೆ. ಕಿರೀಟ ಮುಕುಟ ವನ್ನು, ಕುಂಡಲಗಳನ್ನು, ಕಂಠಾಭರಣವನ್ನು, ನಾಗಮುರಿಗೆಯನ್ನು, ಬಳೆಗಳನ್ನು, ಯಜ್ಞೋಪವೀತವನ್ನು ಧರಿಸಿದ್ದಾನೆ. ಕಟಿಸೂತ್ರ ಮತ್ತು ಮಾಲಾಕಾರದಲ್ಲಿ ಧರಿಸಿದ ಧೋತ್ರ ಗಮನಾರ್ಹ. ಎಡಗಡೆ ಹಿಂಬದಿಯಲ್ಲಿ ಅವನ ವಾಹನ ನವಿಲು ಇದೆ. ಬಾದಾಮಿ ಚಾಲುಕ್ಯ ಶಿಲ್ಪದಲ್ಲಿ ನವಿಲನ್ನೇರಿ ಕುಳಿತ ಕಾರ್ತಿಕೇಯನ ಶಿಲ್ಪವೇ ಹೆಚ್ಚು.

೩. ಬಾಚಿನಗುಡ್ಡದ ದಕ್ಷಿಣದಂಚಿನಲ್ಲಿ ಇದೇ ಕಾಲದ ಒಂದು ದೇವಾಲಯ ವಿದೆ. ಗರ್ಭಗುಡಿ, ಅರ್ಧಮಂಟಪ ಮತ್ತು ಕಕ್ಷಾಸನವಿದ್ದ ಮುಖಮಂಟಪವಿದ್ದು ಈಗ ಅರ್ಧಮಂಟಪ ಮಾತ್ರವಿದೆ. ಇದರ ಸುತ್ತಮುತ್ತ ಬಿದ್ದಿರುವ, ಶಿಖರದ ನಟರಾಜನ ಶಿಲ್ಪವುಳ್ಳ ಶುಕನಾಸಿಯ ಮುಖಪಟ್ಟಿ, ಶಾಲ, ಮುಂತಾದ ಅವಶೇಷ ಗಳು ಈ ಗುಡಿಗೆ ವಿಮಾನಶೈಲಿಯ ಶಿಖರವಿದ್ದಿತ್ತೆಂದು ಸೂಚಿಸುವವು. ಈಗ ಉಳಿದಿದ್ದ ಅರ್ಧಮಂಟಪದ ಹಿಂಬದಿಗೆ ಹಾಸುಗಲ್ಲುಗಳನ್ನು ಅಡ್ಡ ಇಟ್ಟು ಮತ್ತೆ

ಗುಡಿಯಾಗುವ ಹಾಗೆ ಮಾಡಿ ಇದರೊಳಗೆ ಒಂದು ಅದೇ ಕಾಲದ ಬಹಳಷ್ಟು ಎಣ್ಣೆ ಗಪ್ಪಿನಿಂದ ಅಸ್ಪಷ್ಟವಾದ ಮಹಿಷಮರ್ದಿನಿಯ ಮೂರ್ತಿಯನ್ನಿಡಲಾಗಿದೆ. ಅರ್ಧ ಮಂಡಪದ ಸಮತಲಮಾಡಿನ ಮಧ್ಯದಲ್ಲಿ ಅನಂತಶಯನ ಮೂರ್ತಿಯ ಉಬ್ಬು ಶಿಲ್ಪವು, ದ್ವಾರದ ಎರಡು ಬದಿಗಳಲ್ಲಿ ದೊಡ್ಡ ಪ್ರಮಾಣದ ಚಾಮರ ಸೇವಕಿಯರ ಶಿಲ್ಪಗಳು ಇವೆ. ಅನಂತಶಯನ ಮೂರ್ತಿಯಲ್ಲಿ ಕಮಲಾಸನಸ್ಥ ಬ್ರಹ್ಮನ ಚಿತ್ರವಿಲ್ಲದೆ, ಐಹೊಳೆಯ "ಕೊಂತಿ ಗುಡಿಗಳು" ಎಂದು ಕರೆಯಲಾದ ಪೂರ್ವಾಭಿಮುಖವಾದ ಈಶ್ವರನ ಗುಡಿಯೊಳಗಿನ ಅನಂತಶಯನನ ಚಿತ್ರದಂತಿದೆ. ಇದರೊಳಗೆ ಮತ್ತೊಂದು ದೊಡ್ಡಪ್ರಮಾಣದ ಮಹಿಷಮರ್ದಿನಿ ಶಿಲ್ಪದ ಒಂದು ಭಾಗ ಮಾತ್ರ ಇದೆ. ಅದು ಹೆಚ್ಚು ಕಡಿಮೆ ದುಂಡುಶಿಲ್ಪದಲ್ಲಿರುವ ಮಹಿಷಾಸುರ. ತನ್ನ ಬಲವನ್ನೆಲ್ಲ ಉಪಯೋಗಿಸಿ ದೇವಿಗೆ ಹೊಡೆಯಲು ಆಯುಧ ಹಿಡಿದ ಬಲಗೈಯ ಭಂಗಿ ಮತ್ತು ಮುಖದಲ್ಲಿಯ ಆತ್ಮವಿಶ್ವಾಸ ಮತ್ತು ಅವನು ಧರಿಸಿದ ಹೆಣೆದು ಮಾಡಿದ ಎದೆ ಕವಚ (ಚಿತ್ರ 1;೩) ನಿಜವಾಗಿಯೂ ಹೊಗಳುವಂಥಾದ್ದು. ಒಂದು ಶ್ರೇಷ್ಠ ಕಲಾಕೃತಿ. ಇದರ ಪ್ರಮಾಣದಿಂದ ದೇವಿಮೂರ್ತಿಯು ನಿಜವಾಗಿಯೂ ಮನಸ್ಸಿಗೆ ಹಿಡಿಯುವಂಥ ಅಪರೂಪದ ಭವ್ಯ ಶಿಲ್ಪವಾಗಿದ್ದಿರಬೇಕು ಎಂದು ಹೇಳಬಹುದು. ಕಳೆದುಹೋದದ್ದು ವಿಷಾದನೀಯ. ಆದ್ದರಿಂದ ಮೂಲತಃ ಈ ದೇವಾಲಯವು ದುರ್ಗಾದೇವಾಲಯವಾಗಿರಬೇಕು. ಸಾಮಾನ್ಯವಾಗಿ ಚಾಲುಕ್ಯ ದೇವಾಲಯಗಳಲ್ಲಿ ಅದರಲ್ಲೂ ಮಧ್ಯಮ ಹಾಗೂ ಸಣ್ಣ ಪ್ರಮಾಣದ ಗುಡಿಗಳಲ್ಲಿ ಅರ್ಧಮಂಟಪವಿರುವ ದೇವಾಲಯಗಳು ಸ್ವಲ್ಪವೇ ಇವೆ. ಉದಾ : ಪಟ್ಟದಕಲ್ಲಿನ ಜಂಬುಲಿಂಗ, ಕಾಡಸಿದ್ಧೇಶ್ವರ ದೇವಾಲಯಗಳು, ಮೇಲಿನ ದೇವಿಯ ದೇವಾಲಯ ಈ ವಿಧದ ದೇವಾಲಯದ ಸಾಲಿಗೆ ಸೇರುತ್ತದೆ.

೩. i) ಪಟ್ಟದಕಲ್ಲಿನ ಸುಮಾರು ೫ ಕಿ. ಮೀ. ದೂರದಲ್ಲಿ ಪಶ್ಚಿಮಕ್ಕೆ ಜಾಲಿಹಾಳ ಎಂಬ ಊರಿದೆ. ಇದರ ಉತ್ತರಕ್ಕೆ ೧ ಕಿ. ಮೀ. ದೂರವಲ್ಲಿ ಪೂರ್ವ ಪಶ್ಚಿಮಾಭಿಮುಖವಾಗಿರುವ ಬೆಟ್ಟದ ಸಾಲಿದೆ. ಇದರಲ್ಲಿರುವ ಒಂದು ದೊಡ್ಡ ಕೊಳ್ಳವನ್ನು "ಹುಲಿಗವ್ವನ ಕೊಳ್ಳ"ವೆಂದು ಕರೆಯಲಾಗುತ್ತಿದೆ. ಇಲ್ಲಿ ಕಡಿದಾದ ಬೆಟ್ಟದಂಚಿನಿಂದ ಸದಾ ನೀರು ಬರುತ್ತಲೇ ಇರುತ್ತದೆ ಮತ್ತು ವಿಶಾಲವಾದ ಗವಿಯಿದೆ. ಕೊಳ್ಳದಲ್ಲಿ ಮತ್ತು ಗವಿಯ ಕಡೆ ಅಲ್ಲಲ್ಲಿ ಎರಿಸಲ್ಲಿ ಒಟ್ಟು ೧೧ ಸಣ್ಣ ಸಣ್ಣ ಕಲ್ಲಿನ ಗುಡಿಗಳು ಮತ್ತು ಗವಿಯೊಳಗೆ ಪೂರ್ವಾಭಿಮುಖವಾಗಿರುವ ಒಂದು ಶಕ್ತಿ ದೇವಾಲಯವು ಇದರ ಎದುರಿನಲ್ಲಿ ಸ್ವಲ್ಪ ಅಂತರ ಬಿಟ್ಟು ಒಂದು ಬೃಹತ್‌ಲಿಂಗವು, ನಂದಿ ಮತ್ತು ಗಣೇಶನ ಮೂರ್ತಿಗಳು ಮತ್ತು ಇವುಗಳ ಬಲಬದಿಗೆ ಬಂಡೆಯ ಮೇಲೆ ಕೆತ್ತಿದ ಬ್ರಹ್ಮ, ವಿಷ್ಣು. ಶಿವ-ಪಾರ್ವತಿ ಸಪ್ತಮಾತೃಕೆ ಉಬ್ಬು ಶಿಲ್ಪವಿದೆ.


ಈ ಗುಡಿಗಳಲ್ಲಿ ದೊಡ್ಡದ (ಚಿತ್ರ 2;೨) (೬.೮೫×೩.೫೦) ರಲ್ಲಿ ಗರ್ಭಗುಡಿ ಮತ್ತು ಹೆಚ್ಚು ಅಗಲದ ಅರ್ಧಮಂಡಪವಿದೆ. ಮಂಚಬಂಧಶೈಲಿಯ ಅಧಿಷ್ಠಾನ

ಚಿತ್ರ : 1



ಜಾಲಿಹಾಳ : ೧. ಜಯದುರ್ಗಾ; ೨. ಭೂತಮಾತ; ೪. ವಾಸುಕಿ

ಬಾಚಿನಗುಡ್ಡ : ೩. ಮಹಿಷಾಸುರ



ಬೇಲೂರು : ೧. ತ್ರೈಪುರುಷ ದೇವಾಲಯದ ತ್ರಿಮೂರ್ತಿಗಳು
ಜಾಲಿಹಾಳ : ೨. ಶಿವದೇವಾಲಯ, ಬೆನಕನವಾರಿ : ೩. ಜೈನಲಯಣ
ಸಿದ್ದನಕೊಲ್ಲ : ೪. ಗಣೇಶಾನುಗ್ರಹಮೂರ್ತಿ (?)

ಮತ್ತು ಅಡ್ಡಮಾಳಿಗೆ ಇದ್ದು ಶಿಖರವಿಲ್ಲ. ಮಾಳಿಗೆಯ ಕಪೋತದ ಕೆಳಗೆ ಗೋಡೆಯ ಮೇಲೆ ತೋರಣಮಾಲಿಕೆ ಚಿತ್ರವಿದೆ. ಅರ್ಧಮಂಟಪದ ಬಾಗಿಲಿನ ಚೌಕಟ್ಟಿನ ಬದಿಗಳಲ್ಲಿ ಶೈವ ದ್ವಾರಪಾಲಕರು, ಶಂಖನಿಧಿ, ಪದ್ಮನಿಧಿ, ಮೇಲೆ ಲಲಾಟಬಿಂಬದಲ್ಲಿ ಪಾರ್ವತಿ ಪರಮೇಶ್ವರನ ಶಿಲ್ಪಗಳಿವೆ. ಒಳಗೆ ಗರ್ಭಗುಡಿಯ ಬಾಗಿಲ ಚೌಕಟ್ಟಿನ ಬುಡದಲ್ಲಿ ಗಂಗೆ–ಯಮುನೆಯರ, ಇವುಗಳ ಬದಿಗಳಲ್ಲಿ ದ್ವಿಭುಜ ಗಣೇಶ ಮತ್ತು ಅಷ್ಟಭುಜ ಮಹಿಷಾಸುರಮರ್ದಿನಿಯ ಮತ್ತು ಹೂಬುಟ್ಟಿಯನ್ನು ಹಿಡಿದ ಪುರುಷರ ಚಿತ್ರಗಳಿವೆ. ಗರ್ಭಗುಡಿಯೊಳಗೆ ಪೀಠದಲ್ಲಿ ಲಿಂಗವಿದೆ. ದೇವಾಲಯದ ಮುಂಭಾಗದ ಬಲಬದಿಯ ಗೋಡೆಯ ಮೇಲೆ ಚಾಲುಕ್ಯ ೨ನೆಯ ವಿಕ್ರಮಾದಿತ್ಯ(೭೩೩–೪೪)ನ ಕಾಲದ ಮೂರು ಸಾಲಿನ ಶಾಸನವಿದೆ. ದೇವಾರಿಯ ಮಗ ಬೆನಮ್ಮನ ಧರ್ಮವೆಂದು ಹೇಳಲಾಗಿದೆ.

ಉಳಿದ ದೇವಾಲಯಗಳಲ್ಲಿ ಐದು. ಗರ್ಭಗುಡಿ ಮತ್ತು ಮುಖಮಂಟಪದಿಂದ ಕೂಡಿದ್ದು. ಗರ್ಭಗುಡಿಯ ಮೇಲೆ ಕದಂಬನಾಗರಶೈಲಿಯ ಶಿಖರವಿದೆ. ಕೆಲವು ಪೂರ್ವಾಭಿಮುಖವಾಗಿಯೂ ಮತ್ತೆ ಕೆಲವು ಪಶ್ಚಿಮಾಭಿಮುಖವಾಗಿಯೂ ಇವೆ. ಏಳು ಗುಡಿಗಳ ಗರ್ಭಗುಡಿಯೊಳಗೆ ಒಂದೊಂದು ಲಿಂಗವಿದ್ದು ಒಂದರಲ್ಲಿ ಉಮಾ–ಮಹೇಶ್ವರನ ಮೂರ್ತಿಯಿದೆ. ಅತ್ಯಂತ ಎತ್ತರದಲ್ಲಿರುವ ಪೂರ್ವಾಭಿಮುಖವಾಗಿರುವ ಒಂದು ಗುಡಿಯ ಹತ್ತಿರ ಪೀಠಸಹಿತ ಚೆಲುವಾದ ಅಪೂರ್ವ ನಾಗರಾಜ(?)ನ ಮೂರ್ತಿ ಮತ್ತು ಒಂದು ಲಜ್ಜಾಗೌರಿಯ ಶಿಲ್ಪವೂ ಇದೆ. ಇವುಗಳಿಗೂ ಪ್ರತ್ಯೇಕ ಸಣ್ಣ ಗುಡಿಗಳಿದ್ದು ಅವು ಹಾಳಾಗಿರಬೇಕು.

ii) ಗವಿಯೊಳಗಿರುವ ಪೂರ್ವಾಭಿಮುಖವಾಗಿರುವ ಗುಡಿಯೊಳಗಿನ ದುರ್ಗಾ ಮೂರ್ತಿ ಒಂದು ಅಪೂರ್ವ ಶಿಲ್ಪ[೮] (ಚಿತ್ರ 1;೨). ಗುಡಿಯು ಸಮತಲ ಅಡ್ಡಮಾಳಿಗೆಯುಳ್ಳ ಕೇವಲ ಒಂದು ಸರಳ ಗರ್ಭಗುಡಿ. ದ್ವಿಭುಜ ದೇವಿಯು (೨.೯೦ × ೬೦ ಸೆಂ. ಮೀ.) ವಾಮ ಲಲಿತಾಸನದಲ್ಲಿ ಭದ್ರಪೀಠದ ಮೇಲೆ (೬೦ ಸೆಂ.ಮೀ. ಅ. × ೪೦ ಸೆಂ. ಮೀ. ಎ.) ಕುಳಿತಿದ್ದು ಒಂದು ಕೈಯಲ್ಲಿ ಖಡ್ಗವು ಮತ್ತೊಂದರಲ್ಲಿ ಗುರಾಣಿಯು ಇವೆ. ಕಿರೀಟ ಮುಕುಟ, ಮಕರಕುಂಡಲ, ಹರಳಿನ ಕಂಠಾಭರಣ, ಮುತ್ತಿನ ಹಾರ, ಕೆಲವೇ ರುಂಡಗಳುಳ್ಳ ಯಜ್ಞೋಪವೀತ. ತೋಳ್ಬಂದಿ, ಕೈಬಳೆಗಳು, ಪದ್ಮ ಚಿಹ್ನೆಯುಳ್ಳ ಸೊಂಟದ ಪಟ್ಟಿ, ಕಾಲಡಗಗಳು ದೇವಿಯನ್ನು ಅಲಂಕರಿಸಿವೆ. ಈ ದೇವಿಯ ಶಿಲ್ಪದಲ್ಲಿ ಕುತೂಹಲ ಕೆರಳಿಸುವ ಎರಡು ಅಪೂರ್ವ ಲಕ್ಷಣಗಳಿವೆ: ದೇವಿಗೆ ರೆಕ್ಕೆಗಳುಂಟು ಮತ್ತು ದೇವಿಯ ಎಡಬದಿಯಲ್ಲಿ ಗೂಬೆಯಿದೆ. ದ್ವಿಭುಜ ದುರ್ಗಾ ಮೂರ್ತಿಯಲ್ಲಿ ಸಾಮಾನ್ಯವಾಗಿ ಖಡ್ಗ ಮತ್ತು ಪಾನಪಾತ್ರೆಯನ್ನು ಕೈಗಳಲ್ಲಿ ತೋರಿಸಲಾಗುತ್ತದೆ. ಆದರೆ ಈ ಮೂರ್ತಿಯಲ್ಲಿ ಪಾನಪಾತ್ರೆಯ ಬದಲು ಖೇಟಕವಿದೆ. ಈ ಮೂರ್ತಿಗೆ ಪ್ರತ್ಯೇಕ ಸಿಂಹಪ್ರಭಾವಳಿ ಇದೆ. ಇದರ ಮೇಲಿನ ಪಟ್ಟಿಯಲ್ಲಿ ಶಂಖ

ಮತ್ತು ಪದ್ಮನಿಧಿಗಳ ಚಾಮರಸೇವಿಕೆಯರ ವಿದ್ಯಾಧರರ ಮಧ್ಯದಲ್ಲಿಛತ್ರಿಯ ಚಿತ್ರಗಳಿವೆ. ಆದರೆ ಮೇಲಿನ ಗವಿ ಬಂಡೆಯ ಕಾರಣದಿಂದ ದೇವಾಲಯದ ಎತ್ತರ ಹೆಚ್ಚು ಮಾಡಲು ಸಾಧ್ಯವಾಗದ್ದರಿಂದ ಒಳಗಿನ ಮೂರ್ತಿಗೆ ಪ್ರಭಾವಳಿಯನ್ನು ಸರಿಯಾದ ಎತ್ತರದಲ್ಲಿ ಜೋಡಿಸಲಾಗಲಿಲ್ಲ. ಆದ್ದರಿಂದ ಅದರ ಮೇಲಿನ ಚಿತ್ರಿತ ಕಮಾನು ಪಟ್ಟಿಕೆಯನ್ನು ಮೂರ್ತಿಯ ಮೇಲ್ಭಾಗ ಮುಚ್ಚಿದೆ.

ಈ ದೇವಿಮೂರ್ತಿಯ ವಿಶಿಷ್ಟ ಲಕ್ಷಣಗಳು ಇದುವರೆಗೆ ಬೇರೆ ಯಾವ ವಿಧದ ದುರ್ಗಾ ಮೂರ್ತಿಯಲ್ಲೂ ಕಂಡುಬಂದಿಲ್ಲ.

ಈ ಮೂರ್ತಿ **ವಿಷ್ಣುಧರ್ಮೋತ್ತರ ಪುರಾಣ**ದಲ್ಲಿ ವರ್ಣಿತವಾಗಿರುವ ಹಲವು ದೇವಿಮೂರ್ತಿ ಶಿಲ್ಪಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆ ''ಭೂತಮಾತಾ'' ದೇವಿಯಂತಿದೆ.

''ಶ್ಯಾಮವರ್ಣಾ ವಿಶಾಲಾಕ್ಷೀ ಕ್ಷೀರಾರುಣ ನಿಭಾನನಾ ।
ದ್ವಿಭುಜಾ ಬಿಭ್ರತೀ ಲಿಂಗಂ **ಚರ್ಮ ಶಸ್ತ್ರಂ** ತು ದಕ್ಷಿಣೇ ॥
ಸಿಂಹಾಸನೋಪವಿಷ್ಟೇಯಂ ಮುಕ್ತಾಭರಣ ಮೂರ್ಧಜಾ ।
ಭೂತಪ್ರೇತ ಪಿಶಾಚಾದ್ಯೈಸ್ಸೇವಿತಾ ತು ವಿಶೇಷತಃ ॥
ಇಂದ್ರಯಕ್ಷೈಶ್ಚ ಗಂಧರ್ವೈ ಸಿದ್ಧವಿದ್ಯಾಧರಾಭಿಃ ।
ಅಶ್ವತ್ಥಸ್ಯಾಪ್ಯಥೋ ದೇವಿ **ಭೂತಮಾತೇತಿ** ವಿಶ್ರುತಾ ॥''

ಭೂತ-ಪ್ರೇತಗಳಿಂದಲೂ ಸೇವಿಸಲ್ಪಡುವ ಈ ದೇವಿಯ ಮೂರ್ತಿಶಿಲ್ಪದಲ್ಲಿ ಗೂಬೆಯನ್ನು ತೋರಿಸಿರುವುದು ಸಮಂಜಸವಾಗಿದೆ. ಆದರೆ ಯಾವ ದೇವಿಮೂರ್ತಿಯನ್ನೂ ರೆಕ್ಕೆ ಇರುವ ಹಾಗೆ ಪ್ರತಿಮಾಲಕ್ಷಣಗ್ರಂಥಗಳಲ್ಲಿ ವರ್ಣಿಸಿಲ್ಲ. ಸುಮಾರು ೩–೪ ನೆಯ ಶತಮಾನದಿಂದ ಪಾಶುಪತಶೈವರ ಧಾರ್ಮಿಕಕೇಂದ್ರವಾಗಿದ್ದ ಮಹಾಕೂಟಕ್ಕೆ ಈ ಕೊಳ್ಳವು ಸಮೀಪವಾಗಿರುವುದರಿಂದ, ಈ ಧರ್ಮಸಂಪ್ರದಾಯಕ್ಕೆ ಸಂಬಂಧಿಸಿದ ಯಾಮಲಗಳಿಗೆ ಅಧಿದೇವತೆಗಳಾದ ಶಕ್ತಿಗಳಲ್ಲಿ ಒಂದನ್ನು ಈ ಮೂರ್ತಿಯು ಪ್ರತಿಬಿಂಬಿಸುವುದೇ ಎಂಬುದನ್ನು ವಿಮರ್ಶಿಸಬೇಕಾಗಿದೆ. ಪಾಶುಪತಶೈವರಲ್ಲಿ ಶಿವಲಿಂಗವನ್ನು ಮೈಮೇಲೆ ಧರಿಸುವ ಪದ್ಧತಿ ಇತ್ತು. ದೇವಿಮೂರ್ತಿಗಳಲ್ಲಿ ಭೂತಮಾತೆ ಮಾತ್ರ ಲಿಂಗವನ್ನು ಧರಿಸಬೇಕೆಂಬ ನಿಯಮವಿದೆ. ಆದರೆ ಮೇಲಿನ ಮೂರ್ತಿಯಲ್ಲಿ ಈ ಲಕ್ಷಣವಿಲ್ಲ. ಒಟ್ಟಿನಲ್ಲಿ ಇಂಥ ಮೂರ್ತಿಯು ಬೇರೆ ಎಲ್ಲಿಯೂ ಇದುವರೆಗೆ ಕಂಡುಬರದೆ ಅಪೂರ್ವವಾಗಿದೆ.

iii) ಈ ದೇವಾಲಯದ ಸ್ವಲ್ಪ ಮುಂದೆ, ಒಂದು ಗೂಡಿನಲ್ಲಿ ಮತ್ತೊಂದು ದೇವಿಮೂರ್ತಿ (೧.೪೦ × ೦೭.೫) ಇದೆ. ಈ ದೇವಿ(ಚಿತ್ರ 1:೧)ಯನ್ನು ಸ್ಥಳೀಕರು ''ಹುಲಿಗೆವ್ವ'' ಎಂದು ಕರೆಯುತ್ತಾರೆ. ಆದ್ದರಿಂದ ಈ ಕೊಳ್ಳಕ್ಕೆ ''ಹುಲಿಗೆವ್ವನ ಕೊಳ್ಳ'' ಎಂದು ಕರೆಯಲಾಗಿದೆ. ಈ ಮೂರ್ತಿಗೆ ಕಂತಿ ಮಾಡಿದ್ದರಿಂದ ಮೂಲ

ಲಕ್ಷಣಗಳು ಸ್ವಲ್ಪ ಅಲ್ಲಲ್ಲಿ ವಿರೂಪಗೊಂಡಿವೆ. ಆದರೂ ಲಕ್ಷಣ ಮತ್ತು ಕಾಲಮಾನವನ್ನು ಗುರುತಿಸಲಾಗದಷ್ಟು ಅಸ್ಪಷ್ಟವಾಗಿಲ್ಲ. ಈ ಚತುರ್ಭುಜದೇವಿಯು ಪೀಠದ ಮೇಲೆ ವಾಮಲಲಿತಾಸನದಲ್ಲಿ ಕುಳಿತಿದ್ದು, ಕೈಗಳಲ್ಲಿ ಖಡ್ಗ, ಪ್ರಯೋಗಚಕ್ರ ಮತ್ತು ಶಂಖವನ್ನು ಹಿಡಿದಿದ್ದು ಕೆಳಗಿನ ಎಡಗೈಯನ್ನು ಎಡತೊಡೆಯ ಮೇಲೆ ಇರಿಸಲಾಗಿದೆ. ಕೆಳಗೆ ಇಳಿಬಿಟ್ಟ ಎಡಗಾಲನ್ನು ಅರಳಿದ ಕಮಲದ ಮೇಲೆ ಇರಿಸಲಾಗಿದೆ. ಕಿರೀಟ ಮುಕುಟ, ಚಕ್ರಕುಂಡಲ, ಕಂಠಾಭರಣ, ಹಾರ, ನಾಗಮುರಿಗೆ, ಕೈಬಳೆ, ಉದರಪಟ್ಟಿ, ರತ್ನಖಚಿತ ಸೊಂಟಪಟ್ಟಿ, ಕಾಲ್ಬಳೆ ದೇವಿಯನ್ನು ಅಲಂಕರಿಸಿವೆ. ಹಿಂಬದಿಯಿಂದ ಬಲಗಡೆಗೆ ಅವಳ ವಾಹನ ಸಿಂಹವು ಕಾಣಿಸಿಕೊಂಡಿದೆ. **ಶಾರದಾತಿಲಕ** ಗ್ರಂಥದ ಪ್ರಕಾರ ಇದನ್ನು "ಜಯದುರ್ಗಾ" ಎಂದು ಗುರುತಿಸಬಹುದು.

iv) ಬಂಡೆಯ ಮೇಲೆ ಕೆತ್ತಿದ ಸಪ್ತಮಾತೃಕೆಯರ ಬಲಬದಿಯಲ್ಲಿ ಬ್ರಹ್ಮ, ವಿಷ್ಣು, ವೃಷಭವಾಹನ ಸಹಿತ ಪಾರ್ವತಿ- ಪರಮೇಶ್ವರರು ಮತ್ತು ಎಡಬದಿಯಲ್ಲಿ ದ್ವಿಭುಜ ಗಣೇಶನು ಇದ್ದಾರೆ. ಬ್ರಾಹ್ಮೀ ಪದ್ಮಾಸನದಲ್ಲಿಯೂ, ಮಹೇಶ್ವರಿ ಮತ್ತು ಉಳಿದ ಐದು ದೇವಿಯರು ವಾಮಲಲಿತಾಸನದಲ್ಲೂ ಚಾಮುಂಡಿ ಪ್ರಲಂಬಪಾದ ಪದ್ಮಾಸನದಲ್ಲೂ ಅವರವರ ವಾಹನದೊಡನೆ ಕುಳಿತಿದ್ದಾರೆ. ಪರಮೇಶ್ವರನು ತನ್ನ ಹಿಂಬದಿಯಲ್ಲಿ ಲಿಂಗವನ್ನು ಧರಿಸಿರುವುದು, ವಾರಾಹಿ ಮೇಲಿನ ಬಲಗೈಯಲ್ಲಿ ಗದೆಯನ್ನು ಮೇಲ್ಮುಖವಾಗಿ ಹಿಡಿದಿರುವುದು ಗಮನಾರ್ಹ. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ದಕ್ಷಿಣದ ಹೊರಗೋಡೆಯ ಮೇಲೂ ಬೆನ್ನು ಬದಿಯಲ್ಲಿ ಲಿಂಗವನ್ನೂ ಧರಿಸಿದ ಶಿವ ಮತ್ತು ಪಾರ್ವತಿಯ ಒಂದು ಸಣ್ಣ ಉಬ್ಬುಶಿಲ್ಪವಿದೆ. ಈ ವಿಧದ ಶಿವನ ಶಿಲ್ಪ ಅಪರೂಪವಾದದ್ದು. ಸಪ್ತಮಾತೃಕೆಯರೊಡನೆ ಸಾಮಾನ್ಯವಾಗಿ ಕೇವಲ ಶಿವನ (ಕಾಲಕ್ರಮೇಣ ವೀಣಾಧರ ವೀರಭದ್ರನ) ಚಿತ್ರವಿರುತ್ತದೆ. ಆದರೆ ಈ ಪಟ್ಟಿಕೆಯಲ್ಲಿ ವೃಷಭವಾಹನ ಉಮಾ-ಮಹೇಶ್ವರ ಮತ್ತು ಬ್ರಹ್ಮ, ವಿಷ್ಣುವನ್ನು ತೋರಿಸಲಾಗಿದೆ. ತ್ರಿಮೂರ್ತಿಗಳನ್ನು ಮತ್ತು ಸಪ್ತಮಾತೃಕೆಯರನ್ನು ಒಂದೆಡೆಯಲ್ಲಿ ತೋರಿಸುವ ಉದ್ದೇಶವಷ್ಟೆ ಹೊರತು ಆ ಕಾಲದ ಪ್ರತಿಮಾವಿಧಿಯ ವೈಶಿಷ್ಟ್ಯವೇನಿಲ್ಲ.

v) ಮೇಲೆ ಹೇಳಿದ ನಾಗರಾಜನ ಮೂರ್ತಿ (೬೫ × ೩೭ ಸೆಂ. ಮೀ.) ನಿಜವಾಗಿಯೂ ಅಪರೂಪವಾದದ್ದು. ಬಾದಾಮಿ ಚಾಲುಕ್ಯ ಶಿಲ್ಪದಲ್ಲಿ ಚೆಲುವಾದ ನಾಗರಾಜನ ಚಿತ್ರ ಸರ್ವೇಸ್ಸಾಮಾನ್ಯ. ದೇವಾಲಯಗಳ ಛತ್ತಿನಲ್ಲಿ ಈ ಶಿಲ್ಪ ಬಹಳಮಟ್ಟಿಗೆ ಇದ್ದೇ ಇರುತ್ತದೆ. ಇಂಥ ಶಿಲ್ಪದಲ್ಲಿ ನಾಗರಾಜನು ಮೇಲ್ಭಾಗ ರತ್ನಸಹಿತ ಐದು ಹೆಡೆಯ ಛತ್ರಿಯುಳ್ಳ ಮನುಷ್ಯಾಕೃತಿಯಲ್ಲೂ ಸೊಂಟದಿಂದ ಕೆಳಭಾಗ ಇರಿಕೆ ಹಾಕಿದ ಹಾವಿನ ಸ್ವರೂಪದಲ್ಲೂ ಇರುತ್ತಾನೆ. ಕೈಯಲ್ಲಿ ಹೂಮಾಲೆಯನ್ನೊ, ಗುಚ್ಛವನ್ನೊ ಹಿಡಿದಿದ್ದು ಗರ್ಭಗೃಹದಲ್ಲಿರುವ ದೇವರಿಗೆ ಅರ್ಪಿಸಲು ಬಂದಂತಿರುತ್ತಾನೆ. ಆದರೆ ಈ ಸ್ಥಳದ ಶಿಲ್ಪದಲ್ಲಿ ನಾಗರಾಜನು (ಚಿತ್ರ 1;೪) ಚತುರ್ಭುಜನಾಗಿದ್ದು ಮೇಲಿನ

ಕೈಗಳಲ್ಲಿ ಚಕ್ರ, ಶಂಖಗಳನ್ನು ಕೆಳಬಲಗೈಗಳಲ್ಲಿ (ಮುರಿದು ಹೋಗಿದೆ) ಪ್ರಾಯಶಃ ಪದ್ಮವನ್ನು ಹಿಡಿದಿದ್ದು ಎಡಗೈಯನ್ನು ಇರಿಕೆಹಾಕಿದ ತನ್ನ ಹಾವಿನ ಮೈಮೇಲೆ ಇಟ್ಟಿದ್ದಾನೆ. ಕರಂಡಮುಕುಟ, ಚಕ್ರಕುಂಡಲ, ಪದಕದ ಸರ, ಮಣಿಬಂಧವುಳ್ಳ ಯಜ್ಞೋಪವೀತ, ನಾಗಮುರಿಗೆ, ಕೈಬಳೆ, ಉದರಪಟ್ಟಿ ಇವನ್ನು ಅಲಂಕರಿಸಿವೆ. ಇವನು ಒಬ್ಬ ಸಾಮಾನ್ಯ ನಾಗನಾಗಿರದೆ. ವಿಷ್ಣುವಿಗೆ ಆಸನ ಅಥವಾ ಹಾಸಿಗೆಯಾಗಿರುವ "ಅನಂತ" ಅಥವಾ "ವಾಸುಕಿ"ಯಾಗಿರಬೇಕು. ಆದ್ದರಿಂದ ವಿಷ್ಣುವಿನ ಅಂಶವಾದ ಚಕ್ರ, ಶಂಖಧಾರಿಯಾದ ಮತ್ತೆರಡು ಹಸ್ತಗಳನ್ನು ತೋರಿಸಲಾಗಿದೆ. ಇಂಥ ಶಿಲ್ಪ ಇದುವರೆಗೆ ತಿಳಿದಮಟ್ಟಿಗೆ ಇದೊಂದೇ.

vi) ಇದರ ಸಮೀಪದಲ್ಲೇ ಎರಡು ಲಜ್ಜಾಗೌರಿ (ಅಥವಾ ಭವಾನಿ)ಯ ಮೂರ್ತಿ(೮೨ × ೫೬ ಸೆಂ. ಮೀ., ೫೫ × ೩೧ ಸೆಂ. ಮೀ.)ಗಳು ಬಿದ್ದಿವೆ.

೪. ಪಟ್ಟದಕಲ್ಲು ಗ್ರಾಮದ ಹೊಲಗಳಲ್ಲಿ ಅಲ್ಲಲ್ಲಿ ಇರುವ ಮೂರ್ತಿಗಳಲ್ಲಿ ಎರಡು ಗಮನಾರ್ಹ. ಒಂದು ಸವ್ಯಲಲಿತಾಸನದಲ್ಲಿ ಸಿಂಹಾಸನ(೦.೬೦ × ೦.೧೫ ಸೆಂ. ಮೀ.)ದಲ್ಲಿ ಕುಳಿತ ದ್ವಿಭುಜ ಚಾಮುಂಡಿ (೧·೦೩ × ೦·೬೦ ಸೆಂ.ಮೀ.) : ಜಟಾಮುಕುಟ, ಕೋರೆಯುಳ್ಳ ಭೀಕರ ಮುಖ, ಜೋಲುಬಿದ್ದ ಸ್ತನಗಳು, ಒಡೆದುಹೋದ ಕೈಗಳಲ್ಲಿ ಸರ್ಪ (?) ಮತ್ತು ಪಾನಪಾತ್ರವಿದ್ದಿರಬೇಕು. ರುಂಡಮಾಲೆಯು ಯಜ್ಞೋಪವೀತದ ರೀತಿಯಲ್ಲಿದೆ. ಇಳಿಬಿಟ್ಟ ಬಲಗಾಲು ಕತ್ತರಿಸಿಟ್ಟ ಮನುಷ್ಯನ ತಲೆಯ ಮೇಲಿದೆ. ಸ್ವಲ್ಪ ಹೆಚ್ಚುಕಡಿಮೆ ಇದೇ ರೀತಿಯ ಇನ್ನೊಂದು ಭಗ್ನಶಿಲ್ಪ (೦·೬೬ × ೦·೫೮ಸೆಂ. ಮೀ.) ಜೇರೆಡೆಯಲ್ಲಿದೆ. ಅಲ್ಲಿಯೇ ಒಂದು ದ್ವಿಭುಜ ಮೂರ್ತಿಯೂ (೧·೧೦ × ೦·೬೫ ಸೆಂ. ಮೀ.) ವಾಮಲಲಿತಾಸನದಲ್ಲಿದ್ದು, ಬಲಗೈಯಲ್ಲಿ ಬಹುಬೀಜ ಫಲವಿದೆ. ಎಡಗೈ ಮುರಿದು ಹೋಗಿದೆ. ಮತ್ತೊಂದು ವೈಷ್ಣವಿ (೦·೮೭ × ೦·೪೯ ಸೆಂ.ಮೀ.) ವಾಮಲಲಿತಾಸನದಲ್ಲಿ ಕುಳಿತಿದ್ದು ಕ್ರಮವಾಗಿ ಮೇಲ್ಮುಖವಾಗಿರುವ ಗದೆ, ಚಕ್ರ ಮತ್ತು ಶಂಖವನ್ನು ಕೈಗಳಲ್ಲಿ ಹಿಡಿದಿದ್ದಾಳೆ. ಕೆಳ ಎಡಗೈ ಮುರಿದುಹೋಗಿದೆ. ಈ ಎಲ್ಲ ಮೂರ್ತಿಗಳು ಒಡೆದೆದ್ದು ಕಾಣುವ ಉಬ್ಬು ಶಿಲ್ಪದಲ್ಲಿವೆ.

೫. ಬಾದಾಮಿ ಊರಿನ ದಕ್ಷಿಣಕ್ಕೆ ಸುಮಾರು ೩ ಕಿ. ಮೀ. ದೂರದಲ್ಲಿ ಬನಶಂಕರಿಗೆ ಹೋಗುವ ರಸ್ತೆಯ ಎಡಬದಿಗಿರುವ ಗುಡ್ಡದಲ್ಲಿ ವಿಜಯನಗರಕಾಲದ ರಂಗನಾಥನ ಕಲ್ಲಿನ ಗುಡಿಯಿದೆ. ಈ ಗುಡಿಗೆ ಏರಿ ಹೋಗುವ ಗುಡ್ಡದ ಹಾದಿಯ ಬಲಬದಿಯಲ್ಲಿರುವ ಒಂದು ಕಲ್ಹಾಸರೆಯಲ್ಲಿ ದೇವಿಯ ಒಂದು ವಿಗ್ರಹವನ್ನು ಇಡಲಾಗಿದೆ. ಬಹಳಷ್ಟು ಎಣ್ಣೆ ಜಿಡ್ಡಿನಿಂದ ಇದರ ಲಕ್ಷಣಗಳು ಸ್ವಲ್ಪಮಟ್ಟಿಗೆ ಅಸ್ಪಷ್ಟವಾಗಿವೆ. ಪದ್ಮಾಸನದಲ್ಲಿ ಕುಳಿತಿದ್ದು ಚತುರ್ಭುಜಳಾದ ಈ ದೇವಿಯ ಕೆಳಬಲಗೈಯು ಅಭಯ ಮುದ್ರೆಯದ್ದು, ಕೆಳಎಡಗೈಯಲ್ಲಿ ಫಲವಿದೆ. ಮೇಲಿನ ಕೈಗಳಲ್ಲಿರುವುದು ಜಿಗುಟಿನಿಂದ

ಅಸ್ಪಷ್ಟವಾಗಿವೆ. ಯಜ್ಞೋಪವೀತ ರೀತಿಯಲ್ಲಿ ರುಂಡಮಾಲೆ(?) ಇರುವ ಹಾಗೆ ಕಾಣುತ್ತದೆ.

೬. ಪಟ್ಟದಕಲ್ಲು – ಐಹೊಳೆ ಮಧ್ಯದಲ್ಲಿರುವ ಸಿದ್ಧನಕಲ್ಲಿನಲ್ಲಿರುವ ರೇಖಾ ನಾಗರಶೈಲಿಯ ಈಶ್ವರ ದೇವಾಲಯ ಮತ್ತು ಸಪ್ತಮಾತೃಕೆಪಟ್ಟಿ ಈಗಾಗಲೆ ಪ್ರಸಿದ್ಧವಿವೆ. ಈ ದೇವಾಲಯದಲ್ಲಿ ಒಂದು ಸೂರ್ಯನ ಮೂರ್ತಿಯಿದೆ. ಕೆಳಗೆ ಝುರಿ ಬದಿಯಲ್ಲಿರುವ ಕಲ್ಲಾಸರೆಯಲ್ಲಿ ಬಂಡೆಯ ಮೇಲೆ ಕೆತ್ತಿರುವ ಒಂದು ಲಜ್ಜಾ ಗೌರಿಯ ಚಿತ್ರವು ಪ್ರತ್ಯೇಕವಾಗಿ ಇಟ್ಟ ಒಂದು ಪ್ರಾಚೀನ ಶೈಲಿಯ ಲಿಂಗವೂ ಇದೆ. ಇವುಗಳ ಬಲಬದಿಗೆ ೧೧–೧೨ನೆಯ ಶತಮಾನದ ಕಲ್ಯಾಣ ಚಾಲುಕ್ಯ ಶೈಲಿಯ ಒಂದು ದೇವಾಲಯವಿದೆ· ಇದರ ಮುಂಬದಿಯಲ್ಲಿ ಹೊರಗಡೆ ಇಟ್ಟ ಎರಡು ಶಿಲ್ಪಗಳಲ್ಲಿ ಒಂದು ಗಮನಾರ್ಹ. ಶಿವನು ವಾಮಲಲಿತಾಸನದಲ್ಲಿ ಕುಳಿತಿದ್ದು ವೀಣೆಯನ್ನು ಬಾರಿಸುತ್ತಿದ್ದಾನೆ. ಕೆಳಗೆ ದ್ವಿಭುಜ ಗಣೇಶನು ವೀಣಾನಾದದಿಂದ ಹುರುಪುಗೊಂಡಿರುವನೊ ಎನ್ನುವ ಹಾಗೆ ಸೊಂಡಿಲನ್ನು ಮೇಲಕ್ಕೆತ್ತಿದ್ದಾನೆ. "ಗಣೇಶಾನುಗ್ರಹ ಮೂರ್ತಿ" ಯೆಂದು ತೋರುವುದು. ಸುಳಿಸುಳಿಯಾಗಿ ಬಿಡಿಸಿದ ಜಟಾಮುಕುಟ, ಚಕ್ರ, ಮಕರ, ಕುಂಡಲ, ನಾಗಮುರಿಗೆ, ರತ್ನಹಾರ, ಕೈಬಳೆ, ಧರಿಸಿದ್ದಾನೆ (ಚಿತ್ರ 2;೪)

೭. ಐಹೊಳೆಯಲ್ಲಿ ಸ್ಥಳಿಕವಾಗಿ ಹುಚ್ಚಪ್ಪಯ್ಯನಮಠ ಎಂದು ಕರೆಯಲಾದ ಈಶ್ವರ ದೇವಾಲಯದಿಂದ ದಕ್ಷಿಣಕ್ಕೆ ಕೋಟೆ ಗೋಡೆಯಿಂದ ಆಚೆ ಹೊಲದಲ್ಲಿ ಒಂದು ಹಾಳುಬಿದ್ದ ಅಡ್ಡಮಾಳಿಗೆಯುಳ್ಳ ದೇವಾಲಯವಿದೆ. ಮಂಚಬಂಧ ಅಧಿಷ್ಠಾನ ಮತ್ತು ಸರಳಗೋಡೆಗಳುಳ್ಳ ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ಪಡಸಾಲೆ ಇದೆ. ಎರಡೂ ಆಯತಾಕಾರವಾಗಿವೆ. ಮುಂಭಾಗದಲ್ಲಿ ಮುಖಮಂಟಪ ವಿದ್ದಿತ್ತು. ಗರ್ಭಗೃಹಕ್ಕೆ ಮೂರು ಬಾಗಿಲುಗಳಿರುವುದು ವಿಶೇಷ. ಇದರ ಹೊರಬದಿಯಲ್ಲಿ ಗಣೇಶನ ಒಂದು ಸುಂದರ ದುಂಡುಶಿಲ್ಪ ಬಿದ್ದಿದೆ. ಪದ್ಮಪೀಠದ ಮೇಲೆ ಕುಳಿತ ಚತುರ್ಭುಜ ಗಣೇಶನು ತನ್ನ ಕೆಳ ಬಲಗೈಯಲ್ಲಿ (ನೇರಳೆ ?) ಹಣ್ಣಿನ ಗೊಂಚಲಿನ ಹಣ್ಣನ್ನು ಹಿಡಿದಿರುವುದು ಗಮನಾರ್ಹ. ಉಳಿದ ಕೈಗಳಲ್ಲಿ ಪರಶು, ಜಪಸರ ಮತ್ತು ಮೋದಕಪಾತ್ರೆ ಇವೆ. ಬಹುಶಃ ಗರ್ಭಗುಡಿಯಲ್ಲಿ ಗಣೇಶ, ಲಿಂಗ ಮತ್ತು ಮಹಿಷಮರ್ದಿನಿ ಒಂದೇ ಸಾಲಿನಲ್ಲಿದ್ದುದರಿಂದ ಗರ್ಭಗೃಹಕ್ಕೆ ಮೂರು ಬಾಗಿಲುಗಳಿವೆ.

೮. ಐಹೊಳೆ ಹತ್ತಿರ ಬೆನಕನವಾರಿ ಎಂಬ ಗ್ರಾಮದಲ್ಲಿಯ ಬೆಟ್ಟದ ಸಾಲಿನ ಒಂದು ಕಡಿದಾದ ಇಳುಕಲಿನ ತುದಿಯಲ್ಲಿರುವ ದೊಡ್ಡಬಂಡೆಯಲ್ಲಿ ಒಂದು ಜೈನ ಲಯಣ(ಗವಿ)ವಿದೆ (ಚಿತ್ರ 2;೨). ಇದು ೧.೬೦ ಮೀ. ಎತ್ತರ, ೨.೦೦ ಮೀ. ಅಗಲ ಮತ್ತು ೧.೦೦ ಮಿ. ಒಳಗೆ ಕೊರೆದು ಮಾಡಿದ ಲಯಣ. ಮುಂಭಾಗದಲ್ಲಿ

ಪ್ರವೇಶದ್ವಾರ ಬಿಟ್ಟು ಎಡಬದಿಯಿಂದ ಸುಮಾರು ೮೦ ಸೆ.ಮಿ.ನಷ್ಟು ಎತ್ತರದ ೨೦ ಸೆ.ಮಿ ಅಗಲದ ಗೋಡೆಯನ್ನು ಬಿಡಿಸಲಾಗಿದೆ. ಹಿಂಬದಿಯ ಗೋಡೆಯಲ್ಲಿ ಒಂದು ಗೂಡ (ಸು. ೦.೯೫×೦.೬೦ ಮೀ.)ನ್ನು ಮಾಡಿ ಅದರಲ್ಲಿ ಪದ್ಮಾಸನದಲ್ಲಿ ಕುಳಿತ ತೀರ್ಥಂಕರನ ಮೂರ್ತಿಯನ್ನು ಮೇಲ್ಗಡೆ ಮುಕ್ಕೊಡೆಯನ್ನು ಮತ್ತು ಎರಡೂ ಬದಿಗಳಲ್ಲಿ ಚಾಮರ ಹಿಡಿದ ರಾಜಪುರುಷರನ್ನು ಕೆತ್ತಲಾಗಿದೆ. ಇದು ಐಹೊಳೆಯಲ್ಲಿ ರುವ ದೊಡ್ಡದಾದ ವರ್ಧಮಾನ ಲಯಣಕ್ಕೆ ಎದುರಾಗಿದ್ದು ಸುಮಾರು ೧೪ ಕಿ. ಮಿ. ಅಂತರದಲ್ಲಿದೆ. ಶಿಲ್ಪಲಕ್ಷಣದ ಮೇಲೆ ಇದು ಬಾದಾಮಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೯. ಗದಗದ ಹತ್ತಿರ ಹುಯಿಲಗೋಳಿನಲ್ಲಿ ಬಾದಾಮಿ ಚಾಲಕ್ಯರ ಕಾಲದ ಎರಡು ಶಿಲ್ಪಗಳಿವೆ. ಒಂದು ಚಾಮರ ಸೇವಕ, ದೊಡ್ಡ ದೇವರ ಮೂರ್ತಿಯು ಪೀಠದ ಬದಿಗೆ ಸಿಗಿಸುವ ಹಾಗೆ ರೂಪಿಸಲಾಗಿದೆ. ಶಿಲ್ಪದಲ್ಲಿ ತೊಡೆಯಿಂದ ಮೇಲ್ಭಾಗ ಮಾತ್ರ ತೋರಿಸಲಾಗಿದ್ದು ಕೆಳಭಾಗ ಪೀಠಕ್ಕೆ ಸೇರಿಸಲು ತ್ರಿಕೋಣದ ಬೂಚಿನ ಹಾಗಿದೆ. ಮತ್ತೊಂದು ಕರೆಶಿಲೆಯ ನಾಗರಾಜನ ದುಂಡುಶಿಲ್ಪ. ಮೇಲ್ಭಾಗ ರತ್ನ ವುಳ್ಳ ಐದು ಹೆಡೆಯ ಛತ್ರಿಯುಳ್ಳ ಮನುಷ್ಯಾಕಾರ, ಸೊಂಟದಿಂದ ಕೆಳಭಾಗ ಹಾವಿನ ಮೈ, ಎರಡೇ ಕೈಗಳು. ಕಮಲದ ಮೊಗ್ಗುಗಳಿವೆ. ಕಿರೀಟಮುಕುಟ, ರತ್ನ ಮತ್ತು ಹರಳಿನ ಹಾರಗಳು, ಹರಳಿನ ಹಿಡಿಕೆಯುಳ್ಳ ಯಜ್ಞೋಪವೀತ, ತೋಳ್ಬಂದಿ, ಕೈಬಳೆಗಳು ಉದರಪಟ್ಟಿ ಇವನ ಆಭರಣಗಳು. ಒಂದು ಆಕರ್ಷಕ ಸುಂದರ ಮೂರ್ತಿ. ಬಾದಾಮಿ ಪಟ್ಟದಕಲ್ಲಿನ ಪ್ರದೇಶದಲ್ಲಿ ಇಂಥ ಒಂದೆರಡು ದುಂಡುಶಿಲ್ಪಗಳಿವೆ. ಆದರೆ ಯಾವುವೂ ಇದರಷ್ಟು ಸ್ಪಷ್ಟ ಹಾಗು ಸುಂದರವಾಗಿಲ್ಲ.

ರಾಷ್ಟ್ರಕೂಟರ ಕಾಲದ ದೇವಾಲಯ ಮತ್ತು ಶಿಲ್ಪಗಳು :

೧. ಬಾದಾಮಿಯಿಂದ ದಕ್ಷಿಣಕ್ಕೆ ಸುಮಾರು ೧೨ಕಿ.ಮಿ. ದೂರದಲ್ಲಿ ಬೇಲೂರು ಎಂಬ ಗ್ರಾಮವಿದೆ. ಇಲ್ಲಿ ರಾಷ್ಟ್ರಕೂಟರ ಕಾಲದ ಒಂದು ತ್ರೈಪುರುಷದೇವಾಲಯ ಹಾಳುಬಿದ್ದಿದೆ. ಅಷ್ಟೇ ಅಲ್ಲದೆ ಅದು ಕಾಣದಷ್ಟು ಸುತ್ತಲೂ ಹಾಳುಬಿದ್ದ ಒಂದು ಗುಡ್ಡದ ಹಾಗೆ ಕಾಣುತ್ತಿತ್ತು. ಇತ್ತೀಚೆಗೆ ಸುದೈವದಿಂದ ಗ್ರಾಮಸ್ಥರು ತಮ್ಮ ಮನೆಯ ಕೆಲಸಕ್ಕೋಸ್ಕರ ಇಲ್ಲಿಯ ಹಾಳುಮಣ್ಣನ್ನು ಒಯ್ದುದ್ದರಿಂದ ದೇವಾಲಯವು ಬಹ ಳಷ್ಟು ಹೊರನೋಟಕ್ಕೆ ಕಾಣುತ್ತದೆ. ಇದರ ಮುಖಮಂಟಪ ಬಿದ್ದುಹೋಗಿದೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ದೇವಾಲಯವು ಯಾವ ವಿಧವಾದ ಚಿತ್ರ ಶಿಲ್ಪಗಳಿಲ್ಲದೆ ಸರಳವಾಗಿದ್ದು, ಈಗ ಇದ್ದಷ್ಟು ಒಳಗೆ ೨೫ ಮಿ. ಉದ್ದ ೩ ಮಿ. ನಿಂದ ೬.೨೫ ಮಿ.ರವರೆಗೆ ಅಗಲವಾಗಿದ್ದು ತುಂಬ ವಿಶಾಲವಾಗಿದೆ. ೧೬ ಕಂಬಗಳುಳ್ಳ

ಸಭಾಮಂಡಪ (೧೨.೫೦ ಮಿ. ಚದುರ), ನಾಲ್ಕು ಕಂಬಗಳುಳ್ಳ ಅರ್ಧಮಂಡಪ (೬.೨೫ ಮಿ. ಚದುರ), ಅಂತರಾಳ (೩.೦೮ ಮಿ. ಚದುರ) ಮತ್ತು ಗರ್ಭಗೃಹ (೪.೧೫×೩.೦೦ ಮಿ.)ಇವಿಷ್ಟು ಇದರ ಭಾಗಗಳು. ಮುಂದಿನ ಎರಡು ಮಂಡಪಗಳಲ್ಲಿಯು ಕಂಬಗಳು ವಿವಿಧ ರೀತಿಯಲ್ಲಿವೆ. ಅರ್ಧಮಂಡಪ ಮತ್ತು ಗರ್ಭಗೃಹದ ಬಾಗಿಲು ಚೌಕಟ್ಟಿನಲ್ಲಿ ಐದೈದು ಶಾಖೆಗಳಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿಯಿದೆ.

ಗರ್ಭಗೃಹದಲ್ಲಿಯ ದೇವರ ಪೀಠವು ೩.೦೦ ಮಿ. ಉದ್ದ. ೦.೩೨ ಮಿ. ಅಗಲ ವಿದ್ದು ಇದರ ಮೇಲೆ ಒಂದೇ ಅಳತೆಯ (೧.೦೫×೦.೬೭ ಮಿ.) ಬ್ರಹ್ಮ, ವಿಷ್ಣು ಮತ್ತು ಈಶ್ವರನ ಸುಂದರ ಮೂರ್ತಿಗಳು ದುಂಡುಶಿಲ್ಪದಲ್ಲಿವೆ (ಚಿತ್ರ 2;೧). ಅವರ ವಾಹನ ಗಳನ್ನು ಕ್ರಮವಾಗಿ ಪೀಠದ ಮುಂಬದಿಯಲ್ಲಿ ಬಿಡಿಸಲಾಗಿದೆ. ಚತುರ್ಮುಖಬ್ರಹ್ಮನು ಸೌಟು, ಪಾಶ, ತುಪ್ಪದ ಪಾತ್ರೆಯನ್ನು; ವಿಷ್ಣುವು ಜನಾರ್ಧನನ ರೂಪದಲ್ಲಿದ್ದು ಚಕ್ರ, ಶಂಖ ಮತ್ತು ಗದೆಯನ್ನು; ಜಟಾಧಾರಿ ಶಿವನು ತ್ರಿಶೂಲ, ಪರಶು(?), ಬಹುಬೀಜ ಫಲವನ್ನು ಕ್ರಮವಾಗಿ ಮೇಲಿನ ಎರಡು ಕೈಗಳಲ್ಲಿ ಮತ್ತು ಕೆಳಗಿನ ಎಡಗೈಯಲ್ಲಿ ಹಿಡಿದಿದ್ದಾರೆ. ಎಲ್ಲರ ಬಲಗೈಯಲ್ಲಿ ಜಪಮಾಲೆಯಿದ್ದು ಅಭಯಮುದ್ರೆಯಲ್ಲಿದೆ, ಸಮಭಂಗದಲ್ಲಿದ್ದಾರೆ. ಅವರವರ ಬದಿಗಳಲ್ಲಿ ಸಾವಿತ್ರಿ (ಅಥವಾ ಸರಸ್ವತಿ), ಭೂದೇವಿ ಮತ್ತು ಶ್ರೀದೇವಿ, ಗೌರಿ ಮತ್ತು ಗಂಗೆ (?) ಕಮಲ ಪುಷ್ಪವನ್ನು ಹಿಡಿದುನಿಂತಿದ್ದಾರೆ. ಎಲ್ಲ ಮೂರ್ತಿಗಳಿಗೂ ಅಂಡಾಕಾರದ ಸರಳ ಪ್ರಭಾವಳಿ ಇದೆ.

ಈ ದೇವಾಲಯದ ಪದವಿನ್ಯಾಸವೂ ಪಟ್ಟದಕಲ್ಲಿನ ಪಾಪನಾಥ ದೇವಾಲಯ ವನ್ನು ಸ್ಥೂಲವಾಗಿ ಹೋಲುತ್ತದೆ. ವಿನ್ಯಾಸ, ಕಂಬಗಳ ಲಕ್ಷಣಗಳು ಮತ್ತು ಶಿಲ್ಪ ಲಕ್ಷಣಗಳ ಆಧಾರದಿಂದ ಈ ದೇವಾಲಯವು ಸುಮಾರು ೯ನೆಯ ಶತಮಾನದ ಆದಿ ಭಾಗದ್ದೆಂದು ಹೇಳಬಹುದು.

ಸವಡಿ(ರೋಣ ತಾ. ಧಾರವಾಡ ಜಿ.)ಯಲ್ಲಿ ಸ್ಥಳಿಕವಾಗಿ "ಬ್ರಹ್ಮೇಶ್ವರ"ವೆಂದು ಕರೆಯಲಾದ ದೇವಾಲಯವು ತ್ರೈಪುರುಷದೇವಾಲಯವಾಗಿದ್ದು ಗರ್ಭಗೃಹದಲ್ಲಿ ಬ್ರಹ್ಮ, ಲಿಂಗ ಮತ್ತು ವಿಷ್ಣುವಿನ ಮೂರ್ತಿಗಳಿವೆ. ಇದರಲ್ಲಿ ಶಿವನು ಕೇಂದ್ರಸ್ಥಾನ ದಲ್ಲಿರುವುದರಿಂದ ಲಿಂಗರೂಪದಲ್ಲೂ, ಮೇಲಿನ ದೇವಾಲಯದಲ್ಲಿ ವಿಷ್ಣುವು ಪ್ರಧಾನ ಸ್ಥಾನದಲ್ಲಿರುವುದರಿಂದ, ಮೂರ್ತಿಸ್ವರೂಪದಲ್ಲೂ ತೋರಿಸಿರಬೇಕು. ಈ ದೇವಾಲಯದ ಅನತಿ ದೂರದಲ್ಲಿ, ಒಂದು ಬಹು ಸುಂದರವಾಗಿ ಕೆತ್ತಿದ ಸರಸ್ವತಿ ದುಂಡುಶಿಲ್ಪವಿದೆ. ದೇವಿಯು ಪದ್ಮ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದು ಕೆಳಬಲಗೈಯ ಜಪಮಾಲೆ ಸಹಿತ ಅಭಯಮುದ್ರೆಯಲ್ಲಿದೆ. ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳ ಎಡಗೈಯಲ್ಲಿ ಪುಸ್ತಕ ಇವೆ. ಕೈಗಳಲ್ಲಿ ವಸ್ತುಗಳನ್ನು, ಆಭರಣಗಳನ್ನು ಸೊಂಟದ ಮೇಲಿನ ಮೇಖಲೆ ಯನ್ನು ಸೂಕ್ಷ್ಮವಾಗಿ ಮನೋಹರವಾಗಿ ಬಿಡಿಸಲಾಗಿದೆ. ಮೈಮಾಟ ಆಕರ್ಷಕವಾಗಿದೆ.

ಪೀಠದ ಮೇಲೆ ಹಂಸದ ಚಿತ್ರವಿದೆ. ತಲೆಯುಭಾಗ ಒಡೆದುಹೋಗಿದೆ. ಕಾಲ, ಸುಮಾರು ೧೧–೧೨ನೆಯ ಶತಮಾನ.

೨. ಹೊಸಮಹಾಕೂಟದ ದೇವಾಲಯ ಸಮೂಹದಿಂದ ಸುಮಾರು ½ ಕಿ. ಮೀ. ದೂರದಲ್ಲಿ ಎರಡು ಹಾಳುಬಿದ್ದ ದೇವಾಲಯುಗಳಿವೆ. ಒಂದು ರಾಷ್ಟ್ರಕೂಟರ ಕಾಲದ್ದು, ಮತ್ತೊಂದು ಕಲ್ಯಾಣ ಚಾಲುಕ್ಯರ ಕಾಲದ್ದು, ರಾಷ್ಟ್ರಕೂಟರ ಕಾಲದ್ದು. "ಅಡಕೇಶ್ವರ" ಎಂದು ಹೆಸರು. ಇದರಲ್ಲಿ ಚದುರಾಕಾರದ ಗರ್ಭಗೃಹ (೪ ಮೀ.) ಆಯತಾಕಾರದ ಅರ್ಧಮಂಟಪ (೪ ಮೀ. × ೧·೭೦ ಮೀ.), ಸಭಾಮಂಟಪ (೫·೬೦ ಮೀ. ಚದುರ) ಗರ್ಭಗೃಹದ ಮೇಲೆ ನಾಗರವಿಮಾನ ಶೈಲಿಯ ದ್ವಿತಳ ವಿಮಾನವಿದೆ. ಗರ್ಭಗೃಹದಲ್ಲಿ ಗೋಡೆಗಳ ಅರ್ಧಗಂಬಗಳನ್ನು ಸೇರಿಸಿ ಗೋಡೆಗೆ ಸೇರಿಸಿದ ಹಾಗೆ ಸುತ್ತಲೂ ಕಟ್ಟೆಯಿದೆ. ಮಧ್ಯದಲ್ಲಿ ಈಚಿನ ಕಾಲದಲ್ಲಿ ಸ್ಥಾಪಿಸಲಾದ ಪೀಠಸ್ಥ ಲಿಂಗ ವಿದೆ. ಸಭಾಮಂಟಪದ ಎಡಭಾಗದಲ್ಲಿ ಸಪ್ತಮಾತೃಕೆಪಟ್ಟಿಕೆಯಿದೆ. ಇದರಲ್ಲಿ ಈ ದೇವಾಲಯ ಕಾಲದ ಸಮಭಂಗದಲ್ಲಿರುವ ವಿಷ್ಣುವಿನ ಸುಂದರ ಹಾಗೂ ಅಪರೂಪದ ಮೂರ್ತಿ(೧·೦೦ × ೦·೭೦ ಮೀ.)ಯನ್ನು ಇಡಲಾಗಿದೆ. ಮೇಲಿನ ಬಲಗೈಯಲ್ಲಿ ಗದೆ ಯಿದೆ. ಉಳಿದ ಕೈಗಳು ಮುರಿದುಹೋಗಿವೆ. ಶ್ರೀಕೃಷ್ಣ ಅಥವಾ ಅಧೋಕ್ಷಜ, ಅಥವಾ ತ್ರಿವಿಕ್ರಮನ ರೂಪವಾಗಿದ್ದಿರಬೇಕು. ಎರಡೂ ಬದಿಗಳಲ್ಲಿ ಪ್ರಭಾವಳಿಯ ಮೇಲೆ ನರಸಿಂಹ ಮತ್ತು ಭೂವರಾಹನ ಚಿತ್ರಗಳು, ಮೇಲೆ ಬೇರೆಬೇರೆ ಚಿತ್ರಗಳಿವೆ. ಈ ಮೂರ್ತಿಯೇ ದೇವಾಲಯದ ಮೂಲವಿಗ್ರಹವಾಗಿರಬೇಕು. ವಿಷ್ಣುವಿನ ಮೂರ್ತಿ ಯನ್ನು ಆದಿಕೇಶವನೆಂದು ತಿಳಿದು ಮುಂದೆ ಅಡಕೇಶ್ವರವಾಯಿತೇನೊ ಎನಿಸುತ್ತದೆ. ಇದರ ವಾಯುವ್ಯ ಮೂಲೆಯ ಹತ್ತಿರ ಒಂದು ಕಟ್ಟಿದ ಕಲ್ಲಿನ ಕೊಳವಿದೆ. ಬಲ ಬದಿಯಲ್ಲಿರುವ ಶಿವದೇವಾಲಯವು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ.

೩. ಬಾಚಿನಗುಡ್ಡದ ಊರಿನ ಬಳಿ ಇರುವ ಗುಡ್ಡದ ಮೇಲೆ ರಾಷ್ಟ್ರಕೂಟರ ಕಾಲದ ಒಂದು ದೇವಾಲಯವಿದೆ. ಕೇವಲ ಗರ್ಭಗೃಹ (೬·೦೦ × ೩·೮೦ ಮೀ.) ಮಾತ್ರ ಉಳಿದಿದೆ. ಇದರ ವಾಸ್ತುಶಿಲ್ಪ ಲಕ್ಷಣಗಳು : ಪದ್ಮಬಂಧಶೈಲಿಯ ಅಧಿ ಷ್ಠಾನ, ಸಮಾನಾಂತರದಲ್ಲಿರುವ ಅರ್ಧಗಂಬಗಳುಳ್ಳ ಗೋಡೆ, ಕಪೋತ ಮತ್ತು ಅಡ್ಡ ಮಾಳಿಗೆ, ಸರಳ ಶಾಖೆಗಳಿಂದ ಕೂಡಿದ ದ್ವಾರ ಮತ್ತು ಒಳಗೆ ಅಷ್ಟಭುಜದ ಛತ್ತು. ಸುಮಾರು ೧೦–೧೧ ನೆಯ ಶತಮಾನದ ಮಧ್ಯನಾಡಿ ಪಾರ್ಶ್ವಸೂತ್ರಗಳಿಂದ ಕೂಡಿದ ಲಿಂಗವು (೬೩ ಸೆಂ. ಮೀ. ಎತ್ತರ ೧·೫೬ ಸೆಂ· ಮೀ· ಸುತ್ತಳತೆ) ಭವ್ಯವಾಗಿದೆ. ಹೊರ ಗೋಡೆಯಲ್ಲಿ ದಕ್ಷಿಣ, ಪಶ್ಚಿಮ ಮತ್ತು ಉತ್ತರದಿಕ್ಕಿಗೆದುರಾಗಿ ಮೂರು ದೇವಕೋಷ್ಠ ಗಳಿವೆ. ಪಶ್ಚಿಮ ಮತ್ತು ಉತ್ತರದ ದೇವಕೋಷ್ಠಗಳಲ್ಲಿ ಉಗ್ರನರಸಿಂಹ ಮತ್ತು

ಬ್ರಹ್ಮನ ಶಿಲ್ಪಗಳಿವೆ. ಆದ್ದರಿಂದ ಮೂಲತಃ ಇದು ತ್ರೈಪುರುಷ (ಬ್ರಹ್ಮ, ಶಿವ ಮತ್ತು ವಿಷ್ಣುವಿನ) ದೇವಾಲಯವಾಗಿದ್ದು ನಂತರ ಕೇವಲ ಶೈವದೇವಾಲಯವಾಗಿ ಉಳಿದಿರುವ ಹಾಗೆ ಕಾಣುವುದು.

ಐಹೊಳೆ ಊರಿನ ದಕ್ಷಿಣಕ್ಕೆ ಸುಮಾರು ೧೨ ಕಿ. ಮೀ. ದೂರದಲ್ಲಿ ಮಲಪ್ರಭಾ ಎಡದಂಡೆಯ ಮೇಲೆ ರಾಮಲಿಂಗವೆಂದು ಕರೆಯಲಾದ ೧೦–೧೧ ನೆಯ ಶತಮಾನದ ನಾಲ್ಕು ದೇವಾಲಯಗಳ ಗುಂಪಿದೆ. ಪಶ್ಚಿಮಾಭಿಮುಖವಾಗಿರುವ ರಾಮಲಿಂಗ ದೇವಾಲಯದ ದಕ್ಷಿಣದ ಗರ್ಭಗೃಹದಲ್ಲಿ ಕರೇ ಶಿಲೆಯ ದೇವೀವಿಗ್ರಹ (೧·೨೦ ಮೀ. ಎತ್ತರ × ೦·೭೮ ಮೀ. ಅಗಲ) ಪಾರ್ವತಿ(?) ದೇವಿಯೆಂದು ಪೂಜೆಗೊಳ್ಳುತ್ತಿದ್ದಾಳೆ. ಆದರೆ ಇದು ನಿಜಕ್ಕೂ ಜೈನ ಯಕ್ಷಿ ಪದ್ಮಾವತಿದೇವಿಯ ಅತ್ಯಂತ ಚೆಲುವಾದ ಅಪ ರೂಪ ಮೂರ್ತಿ. ಪ್ರಮಾಣಬದ್ಧ ಮೈಮಾಟ, ಆಕರ್ಷಕ ತ್ರಿಭಂಗಿ, ಅಷ್ಟಭುಜಗಳು, ಕೈಗಳಲ್ಲಿ ಪದ್ಮ, ಖಡ್ಗ, ವಜ್ರ, ಅಂಕುಶ, ಪಾಶ, ಗುರಾಣಿ ಮತ್ತು ಫಲ ಇವೆ. ಜಿನ ಬಿಂಬವುಳ್ಳ ಕಿರೀಟಮುಕುಟ, ಚಕ್ರಕುಂಡಲ, ಹರಳಿನ ಎದೆಹಾರ, ಯಜ್ಞೋಪವೀತ ರೀತಿಯ ಹಾರ, ಕೈಬಳೆಗಳು, ಮಣಿಗಳ ಮಾಲಿಕೆಗಳುಳ್ಳ ಮೇಖಲೆ, ಕಾಲ್ಬಳೆ, ಕಾಲ್ಗೆಜ್ಜೆ ನೆರಿಗೆಯ ಉಡಿಗೆಗಳು ಮೂರ್ತಿಯ ಚೆಲುವನ್ನು ಹೆಚ್ಚುಮಾಡಿವೆ. ಕಿರೀಟಮುಕುಟದ ಮೇಲೆ ಸರ್ಪ ತನ್ನ ಹೆಡೆಯನ್ನು ಬಿಚ್ಚಿ ಹಿಡಿದಿದೆ. ಮೂರ್ತಿಗೆ ಪ್ರಭಾವಳಿಯಿದ್ದು ಎರಡೂ ಬದಿಯಲ್ಲಿ ಒಬ್ಬೊಬ್ಬ ಸೇವಿಕೆಯರಿದ್ದಾರೆ. ಪ್ರಭಾವಳಿಯ ಮೇಲ್ಭಾಗದಲ್ಲಿ ಸ್ತ್ರೀಯರ ಎಂಟು ಚಿತ್ರಗಳಿವೆ.

ಜಾಲಿಹಾಳದಲ್ಲಿಯ ಅವಶೇಷಗಳಿಂದ ಪಾಶುಪತಶೈವ ಕೇಂದ್ರವಾದ ಮಹಾ ಕೂಟ–ಪಟ್ಟದಕಲ್ಲು ಪ್ರದೇಶದಲ್ಲಿ ತಾಂತ್ರಿಕ ಶಾಕ್ತಧರ್ಮವೂ ಪ್ರಭಾವಶಾಲಿಯಾಗಿ ತ್ತೆಂದು ತೋರುವುದು. ಈ ಸ್ಥಳವು ಮೊದಲು ಕೇವಲ ಶಾಕ್ತಧರ್ಮದ ನೆಲೆಯಾಗಿದ್ದು ಕ್ರಮೇಣ ಪೌರಾಣಿಕ ಶೈವಧರ್ಮಕ್ಕೂ ಆಶ್ರಯವಾಗಿದ್ದಿರಬೇಕು. ಎರಡನೆಯದಾಗಿ ಶೈವ ಮತ್ತು ವೈಷ್ಣವ ಧರ್ಮಗಳ ದೇವಾಲಯಗಳೇ ಹೆಚ್ಚಾಗಿವೆ. ಐಹೊಳೆಯಲ್ಲಿ ಸ್ಥಳಿಕವಾಗಿ ಕರೆಯಲಾದ "ಗೌಡರಗುಡಿ"ಯನ್ನು ಅದರಲ್ಲಿಯ ಶಾಸನದಂತೆ "ದುರ್ಗಾ ಭಗವತಿ" ಎಂದು ಕರೆಯಲಾಗಿದೆ. ಆದರೆ ಗರ್ಭಗುಡಿಯಲ್ಲಿದ್ದ ಮೂರ್ತಿ ಎಂದೋ ಹಾಳಾಗಿದೆ. ಬಾದಾಮಿ ಹತ್ತರವಿರುವ ಬನಶಂಕರಿಯ ದೇವಾಲಯ ವಿಜಯನಗರ ಕಾಲದ್ದು. ಇದರ ಎಡಬದಿಯಲ್ಲಿರುವ ಅರ್ಧಮುಚ್ಚಿದ ರಾಷ್ಟ್ರಕೂಟರ ಕಾಲದ ಹಾಳು ಬಿದ್ದ ನೀರಿನಿಂದ ತುಂಬಿದ ಒಂದು ದೇವಾಲಯವಿದೆ. ಇದರಲ್ಲಿ ಒಂದು ದೇವಿ ಮೂರ್ತಿಯಿದೆಯೆಂದು ಸ್ಥಳಿಕರ ಹೇಳಿಕೆ. ಹೀಗೆ ಬಾದಾಮಿ ಚಾಲುಕ್ಯರ ಕಾಲದ ಶಕ್ತಿ ದೇವಾಲಯಗಳ ಬಗ್ಗೆ, ಪೂಜೆಗೊಳ್ಳುತ್ತಿದ್ದ ದೇವಿಶಿಲ್ಪದ ಬಗ್ಗೆ ಸ್ಪಷ್ಟವಾಗಿ ತಿಳಿದಿರ ಲಿಲ್ಲ. ಮೇಲೆ ಹೇಳಿದ ಹೊಸಮಹಾಕೂಟ, ಬಾಚಿನಗುಡ್ಡ ಹೆಚ್ಚಾಗಿ ಜಾಲಿಹಾಳ

ದಲ್ಲಿಯ ಹಾಗೂ ಪಟ್ಟದಕಲ್ಲಿನ ಶಕ್ತಿದೇವಾಲಯಗಳು ಮತ್ತು ಮೂರ್ತಿಗಳು ಈ ದಿಶೆಯಲ್ಲಿ ಹೆಚ್ಚು ಬೆಳಕು ಚೆಲ್ಲುತ್ತವೆ.

ಶಾಸನ :

ಜಾಲಿಹಾಳದಲ್ಲಿ ಈಶ್ವರ ದೇವಾಲಯದ ಮುಂಭಾಗದ ಬಲಗೋಡೆಯ ಮೇಲೆ ಕನ್ನಡ ಶಾಸನವಿರುವುದನ್ನು ಮೇಲೆ ಹೇಳಿದೆಯಷ್ಟೆ. ಅದರ ಪಾಠ ಹೀಗಿದೆ :

೧. ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಸತ್ಯಾಶ್ರೀಯ
೨. ದೇವಾರಿಯ ಮಗನು ಬೆನಮ್ಮ ಕರಡದ
೩. ಪರದನಕೆ ಸೀದಮ್ಮರ್ಗ

ಅಡಿಟಿಪ್ಪಣಿಗಳು

೧. ರಾಬರ್ಟ್ ಬ್ರೂಸ್ ಫುಟ್; ೧೯೧೬: ದಿ ಫುಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರೀ ಹಿಸ್ಟಾರಿಕ್ ಆ್ಯಂಡ್ ಪ್ರೋಟ್ ಹಿಸ್ಟಾರಿಕ್ ಆ್ಯಂಟಿಕ್ವೀಟಿಸ್ (ನೋಟ್ಸ್ ಆನ್ ದೇರ್ ಏಜಸ್ ಆ್ಯಂಡ್ ಡಿಸ್ಟ್ರಿಬ್ಯೂಶನ್), ಮದ್ರಾಸ್, ಪುಟಗಳು ೧೩೧-೩೩.

೨. ಜೋಶಿ, ಆರ್. ವಿ., ೧೯೫೫: ಪ್ಲೀಸ್ಟೋಸೀನ್ ಸ್ಟಡೀಸ್ ಇನ್ ದಿ ಮಲಪ್ರಭಾ ಬೇಸಿನ್, ಧಾರವಾಡ ಮತ್ತು ಪುಣೆ.

೩. ಇಂಡಿಯನ್ ಆರ್ಕಿಯಾಲಜಿ, ಎ ರಿವ್ಯೂ. ೧೯೫೬-೫೭.

೪. ಸುಂದರ ಅ., ೧೯೭೫: ದಿ ಅರ್ಲಿ ಛೇಂಬರ್ ಟೂಂಬ್ಸ್ ಆಫ್ ಸೌತ್ ಇಂಡಿಯಾ, ದೆಹಲಿ, ಪುಟ ೩೧-೩೪.

೫. ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ ವಾರ್ಷಿಕ ವರದಿ ೧೯೪೧-೪೬, ಪುಟ ೪.

೬. ಸುಂದರ. ಅ., ೧೯೭೪: "ಕರ್ನಾಟಕದಲ್ಲಿಯ ಪ್ರಾಗೈತಿಹಾಸಿಕ ವರ್ಣಚಿತ್ರಗಳು, ಸವಿ ಸಂಚಯ, ಚೌಡಯ್ಯದಾನಪುರ, ಪುಟಗಳು ೧೯೮-೨೦೭.

ಸುಂದರ, ಅ; ೧೯೭೪: "ಫರ್‌ದರ್ ನೋಟಿಸಸ್ ಆಫ್ ರಾಕ್ ಪೇಂಟಿಂಗ್ಸ್ ಇನ್ ಬೆನಕಲ್" ಜರ್ನಲ್ ಆಫ್ ಇಂಡಿಯನ್ ಹಿಸ್ಟ್ರಿ, ಸಂಪುಟ Lii, ಭಾಗ ೧, ಪುಟ ೨೧-೩೩,

೭. ೧೯೬೪ ರಲ್ಲಿ ಈ ಭಾಗದಲ್ಲಿಯ ಬೃಹತ್‌ಶಿಲಾಸಂಸ್ಕೃತಿಯ ಅವಶೇಷಗಳನ್ನು ಶೋಧಿಸುವಾಗ ಜಾಲಿಹಾಳದ ಹುಲಿಗೆವ್ವನ ಕೊಳ್ಳದಲ್ಲಿರುವ ಶಿಲ್ಪಾವಶೇಷಗಳನ್ನು ಪ್ರಥಮಬಾರಿಗೆ ನೋಡಿದ್ದೆ. ಆಗ ಈ ಪ್ರದೇಶವು ನಿರ್ಜನ ಮತ್ತು ಅರಣ್ಯಮಯ. ಸಪ್ತಮಾತೃಕೆ ಮತ್ತು ಕೆಲವು ದೇವಾಲಯಗಳ ಛಾಯಾಚಿತ್ರಗಳನ್ನು ತೆಗೆದುಕೊಂಡಿದ್ದೆ, ಸುಮಾರು ಹತ್ತು ವರ್ಷ

ಗಳಿಂದೀಚೆಗೆ ಇಲ್ಲಿ ಒಬ್ಬ ಸಜ್ಜನ ಸಾಧುಗಳು ನೆಲೆಸಿ, ಜನಪ್ರಿಯರಾಗಿ ದೇವೀ ದೇವಾಲಯದ ಹಿಂಬದಿಯಲ್ಲಿ ಮತ್ತು ಕೆಳಬದಿಯಲ್ಲಿ ಇವರ ನೇತೃತ್ವದಲ್ಲಿ ಕೆಲವು ಧಾರ್ಮಿಕ ಆಚರಣೆಗೆ ಅನುಕೂಲವಾಗುವ ಹಾಗೆ ಕಟ್ಟಡಗಳ ನಿರ್ಮಾಣವಾಗಿದೆ/ಗುತ್ತಲಿದೆ. ಭಕ್ತಾದಿಗಳು ವಿದ್ಯುಚ್ಛಕ್ತಿ ಒದಗಿಸಿದ್ದಾರೆ. ಸಪ್ತಮಾತೃಕೆಗೆ, ನಂದಿಗೆ ಬಣ್ಣ ಬಳಿಯಲಾಗಿದೆ. ಜಯದುರ್ಗಾ ಮೂರ್ತಿಗೆ ಕಂತಿ ಮಾಡಿಸಲಾಗಿದೆ.

೮. ನನ್ನ ಟಿಪ್ಪಣಿಪುಸ್ತಕದಲ್ಲಿ ಈ ಮೂರ್ತಿಯ ಈಗಿನ ಸ್ಥಳಿಕ ಹೆಸರು ಬರೆದುಕೊಂಡಿಲ್ಲ, ಸರಿಯಾಗಿ ನೆನಪಿಲ್ಲ,

೯. ಸುಂದರ, ಅ; ೧೯೭೩ : ಸಮ್ ಟೆಂಪಲ್ಸ್ ಆಫ್ ನಾರ್ಥ್ ಧಾರವಾರ್ ಡಿಸ್ಟ್ರಿಕ್ಟ್ ಆ್ಯಂಡ್ ದಿ ಹೊಯ್ಸಳ ಆರ್ಕಿಟೆಕ್ಚರ್" ಜರ್ನಲ್ ಆಫ್ ಕರ್ನಾಟಕ ಯುನಿವರ್ಸಿಟಿ, (ಸೋಷಿಯಲ್ ಸೈನ್ಸ್) ಸಂ. ix, ಧಾರವಾಡ, ಪುಟಗಳು, ೧೦೨–೧೧೨.

ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ಉತ್ತರಕರ್ನಾಟಕದಲ್ಲಿಯ ಬಂಡೆ–ಗವಿ ಚಿತ್ರಗಳು ಎಂಬ ಒಂದು ಸಂಶೋಧನ ಗ್ರಂಥವನ್ನು ಬರೆಯುವ ಸಲುವಾಗಿ ನಡೆಸಿದ ಪ್ರಾದೇಶಿಕ ಅನ್ವೇಷಣೆಯಲ್ಲಿ ಕಂಡುಬಂದವುಗಳನ್ನು ಮೇಲೆ ನಿರೂಪಿಸಲಾಗಿದೆ. ಶ್ರೀಮತಿ ಭಾಗ್ಯ ಲಕ್ಷ್ಮಿಸುಂದರ ಹಸ್ತಪ್ರತಿಯನ್ನು ಸಿದ್ಧಪಡಿಸಿದ್ದಾರೆ. ಇವರಿಗೆ ನನ್ನ ಕೃತಜ್ಞತೆಗಳು.

• •

ಕೇಳ ನಿನ ಮಗನಾಟವ

● ಸಂ : ಎಂ. ಎಸ್. ಸುಂಕಾಪುರ

ಕೇಳ ನಿನ ಮಗನಾಟ, ಹೇಳಿದರ ನಗಿಪಾಟ
ಗೌಳ ಮಾಡಿದ ಮಾಟವ್ವ ಗೋಪ್ಯಿ
ಕೇಳ ನಿನ ಮಗನಾಟವ ॥ಪಲ್ಲ॥

ದೊಡ್ಡದೊಡ್ಡ ಸೀರಿ. ಅಡ್ಡಮೇಲು ಜರತಾರ
ಕೊಂಬಂಚಿನ ಜರದ ಸೀರಿ, ಗಂಭೀರ ಹೊರುವಂಥ
ದಟ್ಟಿ ಪೀತಾಂಬರ ತಾಬೂತಿ ಸರವೂತಿ
ಆಮೇಲೆ ಗೊಂಬಿಪಟ್ಟೋಳಿಸೀರಿ
ಭಾವಕಿರಣವೆಲ್ಲ ಬಗಿಬಗಿ ಈ ಸೀರಿ
ಸೆಡಗರಲೆ ಉಟಗೊಂಡೇವ, ಗೋಪ್ಯಿ
ಕೇಳ ನಿನ ಮಗನಾಟವ ೧

ಹೂವಿನ ಕುಪ್ಪುಸ ಹುಲಿಯುಗುರ ಕುಪ್ಪಸ
ಚಾಬೂತಿ ಕುಬಸಗೋಳ
ನಮಗ ಬೇಕಾದಂಥ ಕಮರಿಮಗ್ಗಿಯ ಕುಬಸ
ಬಿಳಿಹೊಲಿಗಿ ಕುಬಸಗೋಳ
ಭಾವಕಿರಣವೆಲ್ಲ ಬಗಿಬಗಿ ಈ ಕುಬಸ
ಸೆಡಗರಲೆ ತೊಟಗೊಂಡೇವ, ಗೋಪ್ಯಿ
ಕೇಳ ನಿನ ಮಗನಾಟವ ೨

ಮಸರು ಕಲಸಿದ ಬುತ್ತಿ, ಎಸಳು ಸೂಸದ ಬುತ್ತಿ
ಹಸಿ ಎಣ್ಣಿ ಬ್ಯಾರೆ ಕಟ್ಟ
ಬಿಸಿಯ ಹೋಳಿಗಿ ಕಲಸುಮೇಲೋಗರ
ಮ್ಯಾಲ ಎಸಳ ಉಪ್ಪಿನಕಾಯಿ
ಭಾವಕಿರಣವೆಲ್ಲ ಬಗಿಬಗಿ ಈ ಬುತ್ತಿ
ಸೆಡಗರಲೆ ಕಟಿಗೊಂಡೇವ, ಗೋಪ್ಯಿ
ಕೇಳ ನಿನ ಮಗನಾಟವ ೩

ಉಡುವ ಸೀರಿಯು ಕಳದು, ತೊಡುವ ಕುಪ್ಪಸ ಕಳದು
ಗಂಗಿ ದಡದಲ್ಲಿ ಕಟ್ಟಿಟ್ಟು
ಎದಿಮಟಾ ನೀರಾಗ, ಧಡಮುರಸಿ ಹಾರೇವ
ನಾವೆಲ್ಲ ನೀರು ಬಡಿದು ಈಸೇವ
ನೀರಿನ ತೆರೆಯಾಗ ಹರೆಯ ಹಾಸು ಹೊಚ್ಚ
ನಮ್ಮಾ ಟದಾಗ ನಾವಿದ್ದಾಗ ನೋಡ, ಗೋಪ್ಯಿ
ಕೇಳ ನಿನ ಮಗನಾಟವ ೪

ಎಲ್ಲಿ ಕುಂತಿದ್ನೊ ನನ ಕಳ್ಳ ಕೃಷ್ಣರಾಯ
ಓಡಓಡುತ ಅಲ್ಲಿ ಬಂದ
ಆಚೀಚೆ ನೋಡಿದಾ ಪಕ್ಕಾ ಕಳ್ಳಕುಳ್ಳನವ್ವ
ಎಲ್ಲರುಡುವ ಸೀರಿ ಮೆಲ್ಲಕ ಸೆಳದೋದ
ಸರಸರ ಕರಿಯಾಲ ಮರವೇರಿ
ಸೀರಿಗಂಟ ಮ್ಯಾಲಿಟ್ಟು ಕೆಳಗಿಳಿದ, ಗೋಪ್ಯಿ
ಕೇಳ ನಿನ ಮಗನಾಟವ ೫

ಒಂದು ಕೈಯಲಿ ಎದಿಯು, ಒಂದು ಕೈಯಲಭಿಮಾನ
ಚಂದದಲಿ ನಾಚಿ ಅಪಿಗೊಂಡು
ಜೀವ ಕೈಯಲಿ ಹಿಡಿದು ಪಕಪಕ ಬಾಯ್ಬಿಡುತ
ಭಾವರತಿಗೆದುರು ನಿಂತು ಬವಳಿ ಬಂದೀತ
ಆಗ ಪಕಪಕ ನಗುತಿದ್ದನು ನೋಡ, ಗೋಪ್ಯಿ
ಕೇಳ ನಿನ ಮಗನಾಟವ ೬

ಉಪಭಾಷಾಕ್ಷೇತ್ರ ವ್ಯಾಸಂಗದ ಉದ್ದೇಶ ಮತ್ತು ವಿಧಾನ

● ವಿ. ಶಿವಾನಂದ

ಭಾಷಾವಿಜ್ಞಾನಿಗೆ ಒಂದು ಶಿಷ್ಟಭಾಷೆಯ ಅಭ್ಯಾಸವೇ ಆಗಲಿ ಅಥವಾ ಉಪಭಾಷೆಯ ವಿವೇಚನೆಯೇ ಆಗಲಿ ಅದರ ತಾಂತ್ರಿಕತೆ ಮತ್ತು ಮೌಲ್ಯವಿವಕ್ಷೆ ಒಂದೇ ತೆರನಾಗಿರುತ್ತದೆ. ಹಾಗಿದ್ದರೂ ಭಾಷೆ ಮತ್ತು ಉಪಭಾಷೆಗಳ ಅಂತರ ಗಮನಾರ್ಹವಾಗಿಯೇ ಉಳಿಯುತ್ತದೆ.[೧] ಅನೇಕ ಉಪಭಾಷೆಗಳ ಮೊತ್ತವು ಸೇರಿ ಸಾಮಾನ್ಯವಾಗಿ ಒಂದು ಪ್ರದೇಶದ ಶಿಷ್ಟಭಾಷಾ ನಿರ್ಮಿತಿಗೆ ಕಾರಣವಾಗುತ್ತದೆ. ಹಾಗೆ ನಿರ್ಮಿತಗೊಂಡ ಒಂದು ಭಾಷೆಯ ವಿಕಾಸದ ವಿಭಿನ್ನ ಅಂತರ್ವಲಯಗಳಿಂದ ಉಪಭಾಷೆಗಳ ಜನನವಾಗುತ್ತದೆ. ಉಪಭಾಷೆಗಳ ಸಂಘಟನೆಯಿಂದ ಶಿಷ್ಟಭಾಷೆ, ಆ ಶಿಷ್ಟಭಾಷೆಯ ಸಂಘಟನೆಯಿಂದ ಉಪಭಾಷೆ– ಹೀಗೆ ಭಾಷೆ ಮತ್ತು ಉಪಭಾಷೆಗಳ ಕೊಳು–ಕೊಡೆ ಪರಸ್ಪರ ಪ್ರೇರಕ–ಪೋಷಕವಾಗಿ ನಿಲ್ಲುತ್ತದೆ.

ಶಿಷ್ಟಭಾಷೆ ಮತ್ತು ಉಪಭಾಷೆಗಳ ಅಂತರ :

ಉಪಭಾಷಾ ಅಧ್ಯಯನ, ಒಂದು ಪ್ರದೇಶಕ್ಕೆ ಇಲ್ಲವೆ ಆ ಪ್ರದೇಶದ ಒಂದು ಸಾಮಾಜಿಕ ವರ್ಗಪ್ರಭೇದಕ್ಕೆ ಇಲ್ಲವೆ ಒಂದು ಕಾಲಪರಿಮಿತಿಗೆ ಸೀಮಿತವಾದುದು. ಶಿಷ್ಟಭಾಷೆ ಎಲ್ಲ ಉಪಭಾಷೆಗಳನ್ನು ಒಳಗೊಂಡು ನಿಂತ ಒಂದು ಪ್ರದೇಶದ ಸರ್ವಾಂಗೀಣ ಭಾಷಾಘಟಕ. ಒಂದೇ ಪ್ರದೇಶದಲ್ಲಿನ ಶಿಷ್ಟಭಾಷೆ ಮತ್ತು ಅದರ ಆಂತರಿಕಪ್ರಭೇದಗಳೆನ್ನಿಸುವ ಉಪಭಾಷೆಗಳ ಅಂತರ ಅಳಿಯಲು ಅವೆರಡರಲ್ಲಿನ ಪರಸ್ಪರ ಅರಿವಿನ ಮಟ್ಟ ಪ್ರತಿಶತ ಎಷ್ಟಿದೆ? ಎಂಬುದನ್ನು ಪರಿವೀಕ್ಷಿಸಬೇಕಾಗುತ್ತದೆ. ಇಲ್ಲಿ ಮಾದರಿಗಾಗಿ ಆ ಮಟ್ಟದ ಪ್ರತಿಶತ ಸಂಖ್ಯಾಪ್ರಮಾಣದ ಸ್ಥೂಲಕಲ್ಪನೆಯನ್ನು ಮಾಡಿಕೊಟ್ಟಿದೆ.

೧. ಅರಿವಿನ ಮಟ್ಟ ೧೦೦% ಸೊನ್ನೆ :

ಇಲ್ಲಿ ಎರಡು ಭಾಷೆಗಳು ಸ್ವತಂತ್ರವಾಗಿವೆಯೆಂದು ತಿಳಿಯಬೇಕು. ಯಾವ

೧. Every Dialect is a Language but every Language is not a Dialect.
E. Haugen, 1964.

ಐತಿಹಾಸಿಕ, ಭೌಗೋಲಿಕ ಸಂಬಂಧವಿಲ್ಲದಂತಹ ಕನ್ನಡ–ಅರಬ್ಬಿ ಮುಂತಾದವನ್ನು ಇದಕ್ಕೆ ಉದಾಹರಿಸಬಹುದು.

೨. ಅರಿವಿನ ಮಟ್ಟ ೧೦% ಇರುವುದು :

ಇಲ್ಲಿ ದೂರದ ಸಂಬಂಧ ಪರಸ್ಪರ ಭಾಷೆಗಳಲ್ಲಿ ಏರ್ಪಟ್ಟಿರುವುದು. ಉದಾ : ಕನ್ನಡ–ಇಂಗ್ಲೀಷ, ಕನ್ನಡ–ಸಂಸ್ಕೃತ.

೩. ಅರಿವಿನ ಮಟ್ಟ ೨೫% ಇರುವುದು :

ಇಲ್ಲಿ ಪರಸ್ಪರ ಐತಿಹಾಸಿಕ, ಸಾಂಸ್ಕೃತಿಕ ಸಂಬಂಧ ಒಂದು ಕಾಲಕ್ಕಿದ್ದು ಈಗ ಆ ಸಂಬಂಧವಿಲ್ಲದಿರುವುದು. ಉದಾ : ಫ್ರೆಂಚ–ಇಂಗ್ಲೀಷ.

೪. ಅರಿವಿನ ಮಟ್ಟ ೨೫% ರಿಂದ ೫೦% ಇರುವುದು :

ಇಲ್ಲಿ ಐತಿಹಾಸಿಕ, ಸಾಂಸ್ಕೃತಿಕ ಸಂಬಂಧಗಳು ಗಾಢವಾಗಿದ್ದು, ಪ್ರತ್ಯೇಕ ಮತ್ತು ಪುನಃ ಪ್ರಭಾವವಿರುವದು. ಉದಾ: ಕನ್ನಡ–ತಮಿಳು, ಕನ್ನಡ–ತೆಲುಗು ಮೊದಲಾದ ದ್ರಾವಿಡಭಾಷಾಕುಟುಂಬ ಅಥವಾ ಸಂಸ್ಕೃತ–ಪ್ರಾಕೃತ, ಸಂಸ್ಕೃತ–ಹಿಂದಿ–ರಾಜಸ್ಥಾನಿ ಮೊದಲಾದ ಕೌಟುಂಬಿಕ ಭಾಷಾವರ್ಗ.

೫. ಅರಿವಿನ ಮಟ್ಟ ೫೦% ರಿಂದ ೭೫% ಇರುವುದು ;

ಇಲ್ಲಿ ಐತಿಹಾಸಿಕಸಂಬಂಧವಿರುವದು. ಪ್ರತ್ಯೇಕವಾಗಿದ್ದರೂ ಗಾಢ ಮತ್ತು ವ್ಯಾಪಕಪ್ರಭಾವ. ಉದಾ : ಬ್ರಜಭಾಷೆ ಮತ್ತು ಬುಂದೇಲಿ, ಕನ್ನಡ– ಹವ್ಯಕ ಭಾಷೆಗಳೂ ಆಗಬಹುದು, ಉಪಭಾಷೆಗಳೂ ಆಗಿರಬಹುದು.

೬. ಅರಿವಿನ ಮಟ್ಟ ೯೦% ಇರುವುದು :

ಇಲ್ಲಿ ಐತಿಹಾಸಿಕ ಮತ್ತು ಭೌಗೋಲಿಕ ಸಂಬಂಧ ಅನ್ಯೋನ್ಯವಾಗಿರುವುದಾದರೂ ಗಡಿಪ್ರದೇಶದಲ್ಲಿ ಕಾಣಿಸಿಕೊಳ್ಳುವ ಅಂತರ ಮಾತ್ರ ಕಂಡುಬರುವದು. ಇಲ್ಲಿ ನಿಶ್ಚಿತವಾಗಿ ಒಂದೇ ಭಾಷೆಯ ಹಲವು ಪ್ರಭೇದಗಳನ್ನು ನಾವು ಕಾಣುತ್ತೇವೆ. ಇವು ನಿಜಕ್ಕೂ ಉಪಭಾಷೆಗಳಾಗಿರುತ್ತವೆ. ಉದಾ: ಮೈಸೂರು ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ, ಗುಲಬುರ್ಗಾ ಕನ್ನಡ ಇತ್ಯಾದಿ.

೭. ಅರಿವಿನ ಮಟ್ಟ ೧೦೦% ಇರುವುದು :

ಇಲ್ಲಿ ಒಂದೇ ಭಾಷೆ ಅಥವಾ ಶಿಷ್ಟಭಾಷೆಗೆ ಮನ್ನಣೆ ಹೆಚ್ಚಿರುತ್ತದೆ. ಮೇಲಿನ ಭಾಷೆಯ ಧ್ವನಿ, ಪದ, ವ್ಯಾಕರಣ, ಶಬ್ದರೂಪ ಮತ್ತು ವಾಕ್ಯರಚನೆಗಳ ಸಾಮ್ಯ–ವೈಷಮ್ಯಗಳ ಮೇಲಿಂದ ನಾವು ಗ್ರಹಿಸಬೇಕಾಗುತ್ತದೆ. ಎಷ್ಟೇ ಸಾಮ್ಯತೆ ಏಕರೂಪವಾದ ಭಾಷೆ ಇದೆಯೆಂದಾದರೂ ಭಾಷೆಗಳಲ್ಲಿನ ಅಂತರ ಅನಿವಾರ್ಯವಾದುದು.

ಭಿನ್ನಭಾಷೆಗಳಲ್ಲಿಯೇ ಏಕೆ ? ಒಂದೇ ಭಾಷೆಯನ್ನಾಡುವ ಒಂದೇ ಊರಿನಲ್ಲಿ ಎರಡು ಜಾತಿಯವರು ಉದಾ : ಬ್ರಾಹ್ಮಣ, ಲಿಂಗಾಯತ ಪರಸ್ಪರ ಮಾತನಾಡುವ ಭಾಷೆಯಲ್ಲಿ ಎಷ್ಟೋ ವ್ಯತ್ಯಾಸವಿರುತ್ತದೆ. ಅನೇಕ ಸಂದರ್ಭಗಳಲ್ಲಿ ಒಬ್ಬನ ಮಾತಿನಲ್ಲೇ ಒಂದೊಂದು ಸಂದರ್ಭ. ಸನ್ನಿವೇಶಕ್ಕನುಗುಣವಾಗಿ ಭಾಷೆ ಬದಲಾಗುತ್ತಿರುತ್ತದೆ. ಇವುಗಳ ಬೆಳವಣಿಗೆಯಿಂದಲೇ ಉಪಭಾಷೆಗಳ ಅಸ್ತಿತ್ವವನ್ನು ನಾವು ಒಂದು ಶಿಷ್ಟ ಭಾಷೆಯಲ್ಲಿ ಅವುಗಳ ಪ್ರಭಾವವನ್ನು ಗಮನಿಸಬೇಕಾಗುತ್ತದೆ.

ಉಪಭಾಷೆಗಳು ನಶಿಸುತ್ತಿವೆ :


ಹಿಂದೆ ಒಂದು ಕಾಲವಿತ್ತು, ಪ್ರತಿ ವ್ಯಕ್ತಿಗೆ ತಾನಿದ್ದ ನೆಲ ಅಲ್ಲಿನ ವಾಯುಗುಣ ಜಲದ ರುಚಿ, ಅದರಂತೆಯೇ ಅವನಾಡುವ ಮಾತಿನ ರೀತಿಗಳ ಬಗ್ಗೆ ಹೆಚ್ಚಿನ ಅಭಿಮಾನವಿತ್ತು. ಅವರು ಅಶಿಕ್ಷಿತರಾಗಿದ್ದರೂ ತಮ್ಮ ಭಾಷೆಯ ಬಗ್ಗೆ ಹೆಚ್ಚು ಆಸಕ್ತಿವಹಿಸುತ್ತಿದ್ದರು. ಪರಿಸ್ಥಿತಿ ಅವರನ್ನು ಬದಲುಮಾಡಿದರೂ ತಮ್ಮ ಭಾಷೆಯ ರೀತಿಯಲ್ಲಿ ಅವರು ಬದಲಾಗಿರುತ್ತಿದ್ದಿಲ್ಲ. ಇಂದು ಸಾರಿಗೆಸಂಪರ್ಕ ಹೆಚ್ಚಿದೆ. ಪ್ರತಿಯೊಬ್ಬ ಮಾನವನಿಗೂ ಆಧುನಿಕ ನಾಗರಿಕತೆಯ ಸಂಪರ್ಕಗಳಾದ ರೇಡಿಯೋ, ವರ್ತಮಾನ ಪತ್ರ, ಅಂಚೆಮನೆ, ಸೌಲಭ್ಯಗಳು ಹೆಚ್ಚಿವೆ. ರಾಷ್ಟ್ರೀಯ ಮನೋಭಾವ ಹೆಚ್ಚುತ್ತಿದೆ. ರಾಷ್ಟ್ರೀಯ ಆಡಳಿತಪದ್ಧತಿ, ರಾಜನೀತಿ, ನ್ಯಾಯಾಲಯ, ಆಡಳಿತ ಭಾಷೆ ಇವುಗಳ ಸಂಪರ್ಕದಿಂದ ಮೂಲದ 'ಉಪಭಾಷೆಗಳು' ಕೇಂದ್ರಭಾಷೆಯೊಡನೆ ವಿಲೀನವಾಗುತ್ತಿದ್ದು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತ ನಡೆದಿವೆ. ಒಂದು ಉಪಭಾಷೆ ಇನ್ನೊಂದು ಭಾಷೆಯೊಡನೆ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಹಿತ್ಯಿಕವಾಗಿ, ರಾಜಕೀಯವಾಗಿ ಹೆಚ್ಚುಹೆಚ್ಚು ಸಂಪರ್ಕ ಪಡೆಯುತ್ತ ನಡೆದಂತೆಲ್ಲ ಅವುಗಳ ನಡುವಿನ ಅಂತರ ಸುಲಭವಾಗಿಯೇ ಅಳಿಯುತ್ತದೆ. ಇಂದು ಪ್ರಾಂತ ಪ್ರಾಂತಗಳ ಭೇದ ಅಳಿಯುತ್ತಿದೆ. ಅಂತರ್ಜಾತಿಯ ವಿವಾಹಗಳ ಸಂಖ್ಯೆ ಹೆಚ್ಚಿದೆ. ಹಿಂದೆ ಶತಾಬ್ದಿಯಲ್ಲಿ ಬದಲಾಗುತ್ತಿದ್ದ ಒಂದು ಧೋರಣೆ, ಇಂದು ದಶಾಬ್ದಿಯಲ್ಲಿ ಬದಲಾಗುತ್ತಿದೆ.

ಉಪಭಾಷಾ ವಿಘಟನೆ (Dialectal divergence) :


ಯಾವುದೇ ಭಾಷೆಯು ಮೂಲಮಾತೃಕೆ ಒಂದು ಜನಾಂಗದವರಾಡುವ ಉಪಭಾಷೆಯೇ ಆಗಿರುತ್ತದೆ. ಆದರೆ ಆ ಉಪಭಾಷೆ ವಿಸ್ತಾರಗೊಂಡು, ವಿಕಾಸಗೊಂಡು ಸರ್ವಸಮಾನ್ಯವಯೀಭೂತವಾದ ಲಕ್ಷಣಗಳಿಂದ ಬರವಣಿಗೆ ರೂಪಪಡೆದು, ಸಾಹಿತ್ಯಿಕವಾಗಿ ಬೆಳೆದು ಸಾಂಸ್ಕೃತಿಕವಾಗಿ ಸಂವರ್ಧನೆಗೊಂಡು, ಆಡಳಿತ ಭಾಷೆಯೆಂದು ಮನ್ನಣೆಪಡೆದು ರೇಡಿಯೋ, ಸಮಾಚಾರ ಪತ್ರಗಳ ಮಾಧ್ಯಮದಲ್ಲಿ ಹರಿದು ಅತ್ಯಂತ ಜನಪ್ರಿಯವಾಗುತ್ತದೆ. ಒಂದು ಪ್ರದೇಶದ ಶಿಷ್ಟಭಾಷೆ (Standard Language) ಎಂದು ಮನ್ನಣೆ

ಪಡೆಯುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ನಾಗರಿಕರೀತಿಯಲ್ಲಿ ಕೃಷಿಗೊಳಗಾಗದ ಭಾಷೆ ಒಂದು ಮೂಲೆಯಲ್ಲಿ ಒಂದೇ ಬುಡಕಟ್ಟಿನವರಾಡುವ ನೈಸರ್ಗಿಕಪ್ರಭೇದವಾಗಿಯೇ ಉಳಿಯಬೇಕಾಗುತ್ತದೆ. ಎಷ್ಟೋ ಸಂದರ್ಭದಲ್ಲಿ ಮುಖ್ಯವಾಗಿ ರಾಜ್ಯಕ್ರಾಂತಿ, ಸಾಮಾಜಿಕ ವಿಪ್ಲವ, ಭೂಕಂಪ, ಮಹಾಪೂರ ಇತ್ಯಾದಿ ಪ್ರಕೋಪಗಳಿಂದ ಒಮ್ಮೊಮ್ಮೆ ಒಂದು ಜನಾಂಗದ ಸಂಪರ್ಕ ನಾಗರಿಕ ಜಗತ್ತಿನಿಂದ ಕಡಿದುಹೋಗುತ್ತದೆ. ಒಮ್ಮೊಮ್ಮೆ ಅನ್ನ, ವಸತಿಗಾಗಿ ವ್ಯಾಪಾರೋದ್ಯೋಗಕ್ಕಾಗಿ ಒಂದು ಪ್ರದೇಶದ ಜನತೆ ಇನ್ನೊಂದು ಕಡೆಗೆ ವಲಸೆಹೋಗುತ್ತದೆ. ಇದರಿಂದಾಗಿ ಒಂದು ಭಾಷೆಯು ವಾಸ್ತವಿಕ ಕೇಂದ್ರದಿಂದ ದೂರಾಗಿ ಈ ಜನತೆಯ ಭಾಷೆ ಬೇರೊಂದು ಪ್ರಭೇದವಾಗಿ ನಿಲ್ಲುತ್ತದೆ. ಅಥವಾ ಬೇರೊಂದು ಭಾಷಾಕೇಂದ್ರದ ಪ್ರಭಾವಕ್ಕೊಳಗಾಗಿ ಸ್ವಂತಿಕೆಯನ್ನು ಕಳೆದುಕೊಳ್ಳುತ್ತದೆ. ಇಲ್ಲಿ ಒಂದು ಭಾಷೆ ಮತ್ತು ಅದರ ಉಪಭಾಷೆಗಳ ಸ್ವರೂಪವನ್ನು ಮತ್ತು ಕೇಂದ್ರಭಾಷೆಯಿಂದ ಅದರ ಸಂಪರ್ಕ ಕಡಿದುಹೋಗುವ ಬಗೆಯನ್ನು ಎರಡು ಚಿತ್ರಗಳ ಮೂಲಕ ಈ ಕೆಳಗೆ ತೋರಿಸಲಾಗಿದೆ :

I. ಎಡಗಡೆ ಕೇಂದ್ರಭಾಷೆ, ಬಲಗಡೆಗೆ ಅದರ ಅಂತರ್ಗತ ಭಾಷೆಗಳು ಮತ್ತು ನೆರೆಹೊರೆ ಭಾಷೆಗಳೊಡನೆ ಭಾಷಾಸಂಪರ್ಕವನ್ನು ತೋರಿಸುವ ಚಿತ್ರ:




II. ನದಿ, ಪರ್ವತಗಳಿಂದಾಗಿ ಕೇಂದ್ರಭಾಷೆಯ ಸಂಪರ್ಕ ಕಡಿದುಹೋಗುವ ರೀತಿ :



ಪರಸ್ಪರ ಬಾಹ್ಯಕಾರಣಗಳಿಂದಾಗಿ, ಕೆಲವೊಮ್ಮೆ ಆಂತರಿಕ ಪ್ರತಿಕ್ರಿಯೆಯಿಂದಾಗಿ ಉಪಭಾಷೆಗಳಲ್ಲಿ ವಿಭಿನ್ನತೆ, ವೈವಿಧ್ಯತೆ ಕಾಣಿಸಿಕೊಳ್ಳುತ್ತದೆ. ನಿದರ್ಶನಕ್ಕೆ ಒಂದು ಕ್ಷೇತ್ರದಲ್ಲಿ ಕ, ಖ, ಗ, ಘ, ಙ ಎಂಬಿವು ಶುದ್ಧ ಉಪಭಾಷೆಗಳಿವೆಯೆಂದು ಭಾವಿಸೋಣ. ಬೇರೊಂದು ಕ್ಷೇತ್ರದಿಂದ ಯಾವುದೋ ಮಹಾಪೂರ ಅಥವಾ ಯುದ್ಧ ಹಾಗೂ ಇತರ ನೈಸರ್ಗಿಕ ಪ್ರಪೀಡೆಯಿಂದ ಬೇರೊಂದು ಕ್ಷೇತ್ರದ ಒಂದು ಲಕ್ಷಜನ ಈ ಕ್ಷೇತ್ರದಲ್ಲಿ ಬಂದು ನೆಲೆಸಿದ ಮೇಲೆ ಅವರದೇ ಆದ ಭಾಷೆ 'ಬ' ಎಂಬುದು ಇಲ್ಲಿ ಬೆಳೆಯತೊಡಗುತ್ತದೆ. ಶುದ್ಧ ಉಪಭಾಷೆಗಳ ಸಂಪರ್ಕ ಇದರೊಡನೆ ಉಂಟಾಗಿ ಇನ್ನೊಂದು ಹೊಸಉಪಭಾಷೆ ಇಲ್ಲಿ ನಿರ್ಮಾಣಗೊಳ್ಳುತ್ತದೆ. ಇವುಗಳ ಸಂಖ್ಯೆ ಸಂಪರ್ಕ ಹೆಚ್ಚಿದಂತೆ ಹೆಚ್ಚುತ್ತ ಹೋಗುತ್ತದೆ. ಇದನ್ನು ಈ ಕೆಳಗಿನ ಆಕೃತಿಯಲ್ಲಿ ಕಾಣಿಸಿದೆ.

ಉಪಭಾಷೆಗಳು ಅಭಿವೃದ್ಧಿಗೊಳ್ಳುವ ರೀತಿ :



ವಿವರಣೆ : ಇಲ್ಲಿ 'ಬ'ದ ದಕ್ಷಿಣ-ಪಶ್ಚಿಮ ದಿಕ್ಕಿನಲ್ಲಿ ನದಿ ಹರಿದಿದೆ. ಓ ದ ಪಶ್ಚಿಮಕ್ಕೆ ಪರ್ವತ ಹರಡಿದೆ. ಮತ್ತು ನದಿ ಇದೆ. ಈ ನದಿಯನ್ನು ಸುಲಭವಾಗಿ ದಾಟಲು ಬರುತ್ತಿದ್ದರೆ ಅಥವಾ ಪರ್ವತದಲ್ಲಿ ಕಣಿವೆಮಾರ್ಗವಿದ್ದರೆ ಭಾಷೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಸಾರವಾಗುತ್ತದೆ. ಇಲ್ಲಿ 'ಬ' ನದಿ ಅನುಕೂಲವಿರುವುದರಿಂದ 'ಫ' ಮತ್ತು 'ಜ' ಉಪಭಾಷೆಗಳು ಒಂದನ್ನೊಂದು ಸೇರಲು ಸಾಧ್ಯವಾಗುತ್ತದೆ. ಹೀಗೆ ಒಂದೊಂದರ ಸಂಪರ್ಕದಿಂದ ಬೇರೊಂದು ಉಪಭಾಷೆಗಳು ನಿರ್ಮಾಣಗೊಳ್ಳುತ್ತವೆ. ಅವುಗಳ ಸಾಧ್ಯತೆ ಇಂತಿದೆ:

ಶುದ್ಧ ಉಪಭಾಷೆಗಳು :	೧	ಕ, ಖ, ಗ, ಫ, ಜ	= ೫
ಸಾಧಿತ ಉಪಭಾಷೆಗಳು :	೨	ಕ + ಖ	= ೧
	೩	ಕ + ಗ	= ೧
	೪	ಕ + ಗ + ಬ	= ೧
	೫	ಗ + ಬ	= ೧
	೬	ಗ + ಫ + ಬ	= ೧
	೭	ಕ + ಗ + ಫ + ಬ	= ೧
	೮	ಕ + ಗ + ಫ	= ೧
	೯	ಕ + ಫ + ಬ	= ೧
	೧೦	ಕ + ಫ	= ೧
	೧೧	ಕ + ಫ + ಜ	= ೧
	೧೨	ಕ + ಜ	= ೧

ಮೇಲಿನ ಅನ್ವೇಷಣೆಯಿಂದ ಐದು ಉಪಭಾಷೆಗಳು ಪರಸ್ಪರ ಸಂಪರ್ಕದಿಂದ ಒಟ್ಟು ೧೨ ಪ್ರಭೇದಗಳಲ್ಲಿ ಪರಿವರ್ತಿತವಾಗಬಹುದೆಂಬುದನ್ನು ತಿಳಿಯಬಹುದು.

ಉಪಭಾಷಾ ಅಧ್ಯಯನದ ಮಹತ್ವ :

ಐತಿಹಾಸಿಕ ಭಾಷಾವಿಕಾಸಕ್ಕೆ (Historical Linguistics) ಉಪಭಾಷೆಯ ಅಭ್ಯಾಸ ಅತ್ಯಗತ್ಯವಾಗಿರುತ್ತದೆ. ಒಂದು ಭಾಷೆಯು ಒಂದು ಶಬ್ದದ ವ್ಯುತ್ಪತ್ತಿಯನ್ನು ಹೇಳುವ ಸಂದರ್ಭದಲ್ಲಿ (Etymology) ಆ ಭಾಷೆಯ ಧ್ವನಿವಿಕಾಸಗಳನ್ನು ಗುರುತಿಸುವಲ್ಲಿ (Phonology) ಅದರ ರಚನೆಯನ್ನು ಅಭ್ಯಸಿಸುವಲ್ಲಿ (Morphology) ನಾವು ಆ ಭಾಷೆಯ ಅಂತರ್ಗತವಾದ ಉಪಭಾಷೆಯನ್ನೇ ವಿಶ್ಲೇಷಿಸಬೇಕಾಗುತ್ತದೆ. ನಿದರ್ಶನಕ್ಕೆ ಸಂಸ್ಕೃತದಿಂದ ಪಾಲಿ, ಪಾಲಿಯಿಂದ ಪ್ರಾಕೃತ, ಪ್ರಾಕೃತದಿಂದ ಅಪಭ್ರಂಶ,

ಅಪಭ್ರಂಶದಿಂದ ಇಂದಿನ ಆಧುನಿಕ ಆರ್ಯಭಾಷೆಗಳು ವಿಕಾಸವಾಗಿರುವುದನ್ನು ನೋಡಿದರೆ, ಉಪಭಾಷೆಗಳು ಒಂದು ಭಾಷೆಯ ನಿರ್ಮಾಣಕ್ಕೆ ಎಷ್ಟೊಂದು ವಿಧದಲ್ಲಿ ನೆರವಾಗುತ್ತವೆ ಎಂಬುದು ವೇದ್ಯವಾಗುತ್ತದೆ. ಎಲ್ಲ ಸಂದರ್ಭದಲ್ಲಿಯೂ ಈ ಮಾತು ನಿಜವಾಗಲಿಕ್ಕಿಲ್ಲ. ಆದರೆ ಇವುಗಳ ತೌಲನಿಕ ಅಧ್ಯಯನದಿಂದ ಆ ಭಾಷೆಯ ಪ್ರಭಾವ, ಅವುಗಳ ಮೂಲವನ್ನು, ಬೆಳವಣಿಗೆಯ ಘಟ್ಟಗಳನ್ನು ಗುರುತಿಸುವುದು ಸುಲಭವಾಗಿರುತ್ತದೆ. ಇಂದು ಸರಕಾರವು ಬುಡಕಟ್ಟು ಜನಾಂಗದವರ ಭಾಷೆ ಮತ್ತು ಲಿಪಿಗಳನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದರೆ ಭಾಷಾವಿಜ್ಞಾನ, ಸಾಹಿತ್ಯಾಭ್ಯಾಸಗಳ ಜೊತೆಗೆ ಲೋಕಭಾಷೆಗಳ ಅಭ್ಯಾಸಕ್ಕೂ ಇಂದು ಮಹತ್ವ ದೊರೆಯುತ್ತಲಿದೆ.

ಉಪಭಾಷೆಗಳ ಅಧ್ಯಯನದಿಂದ ಲೋಕಸಂಸ್ಕೃತಿಯ ಶ್ರೇಷ್ಠತೆ ನಮಗೆ ಗೊತ್ತಾಗುತ್ತದೆ. ಕನ್ನಡದಲ್ಲಿ ಒಬ್ಬೊಬ್ಬ ಮಹಾಕವಿಗಳು ತಮ್ಮ ಕಾಲದ ತಮ್ಮ ಪ್ರಾಂತದ ಭಾಷೆಯನ್ನು ಕಾವ್ಯದಲ್ಲಿ ಬಳಸಿದ್ದಾರೆ. ಇಂದು ಅವುಗಳನ್ನು ಅಭ್ಯಸಿಸುವುದು ಮಹತ್ವದ ವಿಷಯವಾಗಿದೆ.

ಕ್ಷೇತ್ರಅಧ್ಯಯನ ಪದ್ಧತಿ :

ಜಗತ್ತಿನ ಭಾಷಾವಿಜ್ಞಾನದಲ್ಲಿ ಉಪಭಾಷೆಗಳ ಅಭ್ಯಾಸವನ್ನು ಕ್ರಮಬದ್ಧವಾಗಿ ವೈಜ್ಞಾನಿಕರೀತಿಯಿಂದ ಕೈಗೆತ್ತಿಕೊಂಡ ಶ್ರೇಯಸ್ಸು ಸರ್ ಜಾರ್ಜ್ ಗ್ರೀಯರಸನ್ ಅವರದು. ಅವರ 'Linguistic Survey of India'ದ ಬೃಹತ್ ಸಂಪುಟಗಳು ಇದಕ್ಕೆ ನಿದರ್ಶನವಾಗಿವೆ. ಇವರ ಗ್ರಂಥಗಳ ಸೂಕ್ಷ್ಮಾವಲೋಕನದಿಂದ ಉಪಭಾಷಾ ಪರಿವೀಕ್ಷಣೆಯ ಕಾರ್ಯ ಈ ಕೆಳಗಿನ ಮೂರು ವಿಧದಲ್ಲಿ ನಡೆಯಬೇಕೆಂದು ತಿಳಿದು ಬರುತ್ತದೆ:

೧ ಸಂಕಲನ.

೨ ಸಂಪಾದನ.

೩ ವಿಶ್ಲೇಷಣ-ಸಂಶ್ಲೇಷಣ ಅಥವಾ ವೈಜ್ಞಾನಿಕ ಅಧ್ಯಯನ.

ಗ್ರೀಯರಸನ್‌ರು ಈ ದಿಸೆಯಲ್ಲಿ ಮಹತ್ವದಕಾರ್ಯಕ್ಕೆ ಕೊಂಡರಾದರೂ ಅವರ ಅಧ್ಯಯನದ ಕ್ಷೇತ್ರ ಬಹುಮಟ್ಟಿಗೆ ವಿಶಾಲವಾಗಿದ್ದರಿಂದಲೋ ಏನೋ ಅದು ಹೆಚ್ಚು ಸಶಾಸ್ತ್ರೀಯವೂ ಸೂಕ್ಷ್ಮವೂ ಆಗಲಿಲ್ಲ. ಅವರ ಸಮ್ಮುಖದಲ್ಲಿ ಒಂದೊಂದು ಭಾಷೆಯ ಲಿಖಿತ ಸಾಮಗ್ರಿ ಸಾಕಷ್ಟಿತ್ತು. ಉಚ್ಚಾರಸಾಮಗ್ರಿಯನ್ನು ಅವರು ಸೂಕ್ಷ್ಮವಾಗಿ ಕಲೆಹಾಕಲಿಲ್ಲ. ಯಾವುದೇ ಲಿಪಿಯಲ್ಲಿ ಉಚ್ಚಾರಣೆಯನ್ನು ಹಿಡಿದಿಡುವುದು ಕಷ್ಟಸಾಧ್ಯ. ಒಂದು ಭಾಷೆಯಲ್ಲಿ ದೊರಕುವ ಅಪೂರ್ವಪದಗಳು, ಪ್ರತ್ಯಯಗಳ ವಿಚಾರ ಮತ್ತು ಪ್ರಕೃತಿಸ್ಥರೂಪ ಇತ್ಯಾದಿಗಳ ಅಭ್ಯಾಸವನ್ನು ಉಪಭಾಷೆಯಲ್ಲಿ ನಾವು ಮಾಡಬೇಕಾಗುತ್ತದೆ.

ವೈಜ್ಞಾನಿಕ ರೀತಿ :

ಇಂದು ಭಾಷಾವಿಜ್ಞಾನದ ವಿವಿಧ ಶಾಖೆಗಳು ಹೆಚ್ಚು ವಿಕಾಸಗೊಂಡಿವೆ. ಅದರ ಎಲ್ಲ ಲಕ್ಷಣಗಳನ್ನು ಸಮನ್ವಯಿಕರಿಸಿಕೊಂಡು ಉಪಭಾಷೆಗಳನ್ನು ಹೆಚ್ಚು ಸ್ವಾಭಾವಿಕ ರೀತಿಯಲ್ಲಿ ಅಭ್ಯಸಿಸುವುದು ಸಾಧ್ಯವಾಗುತ್ತದೆ. ಭೌತ ಅಧ್ಯಯನದ ಶೋಧಾಗಾರ ವಾದ ಧ್ವನಿಯಂತ್ರ (Tape Recorder) ದಲ್ಲಿ ಮನುಷ್ಯನು ಉಪಯೋಗಿಸುವ ಯಾವುದೇ ಭಾಷೆಯ ಧ್ವನಿ ಉಚ್ಚಾರಣೆಯ ಏರಿಳಿತಗಳನ್ನು ಸಂಗ್ರಹಿಸಿಕೊಳ್ಳಬಹು ದಾಗಿದೆ. ನಾವು ಪೆನ್ನು ಕಾಗದದಿಂದ ಹಳ್ಳಿಯವರಲ್ಲಿಗೆ ಹೋಗಿ ಅವರು ನಿತ್ಯಬಳಸುವ ಯಾವುದೇ ವೃತ್ತಿಯ ಪದಗಳನ್ನು ಉಚ್ಚರಿಸಲು ಹೇಳಿದರೆ, ಬಹುಶಃ ತಮ್ಮ ವೃತ್ತಿಗೆ ಅಡ್ಡಿಯಾದೀತೆಂದು ಹೆದರುತ್ತಾರೆ. ಮನೆಯ ಸಾಮಾನುಗಳ ಹೆಸರು ಕೇಳಿದರೆ ಇವನ್ನು ಎಲ್ಲಿ ಒಯ್ಯುವರೋ ಎಂಬ ಭೀತಿಯಿಂದ ಶಂಕಿಸುತ್ತಾರೆ. ಒಮ್ಮೊಮ್ಮೆ ಅವರು ಹೇಳುವ ಶಬ್ದಗಳಲ್ಲಿ ಕೃತ್ರಿಮತೆ ತಲೆದೋರುತ್ತದೆ. ಕಾರಣ ಪರಸ್ಪರವಾಗಿ ಅವ ರಲ್ಲಿ ನಡೆಯುವ ಮಾತುಕತೆಗಳನ್ನು ಅವರಿಗರಿಯದಂತೆ ತುಂಬಿಕೊಂಡರೆ ನಿಜಕ್ಕೂ ಅವರ ಭಾಷೆಯ ನೈಸರ್ಗಿಕಧಾಟಿಯನ್ನು ನಾವು ಪತ್ತೆಹಚ್ಚುವುದು ಸುಲಭವಾಗುತ್ತದೆ. ಒಟ್ಟಿನಲ್ಲಿ ಅವರ ಪರಿಚಯ ನಮಗಿದ್ದು, ನಮ್ಮ ಉದ್ದೇಶ ಅವರಿಗೆ ತಿಳಿದಿದ್ದರೆ ಇದು ಯಶಸ್ವಿಯಾಗುತ್ತದೆ. ಮೊದಲು ಭಾಷಾಸಾಮಗ್ರಿಯನ್ನು ಕಲೆಹಾಕುವಾಗ ನಾವು ಹಳ್ಳಿಯವರಲ್ಲಿಗೆ ಹೋಗಿ ಧ್ವನಿಮುದ್ರಿಕೆಯಲ್ಲಿ ಒಂದೆರಡು ಜಾನಪದಗೀತೆಗಳನ್ನು ಅವರಿಗೆ ಕೇಳಿಸಬೇಕು. ಆಮೇಲೆ ಯಾವುದಾದರೂ ಒಂದೆರಡು ಕಥೆಗಳನ್ನು ಹೇಳಿ ಕಾರ್ಯಾರಂಭ ಮಾಡಿದರೆ, ನಾವು ಈ ಕಾರ್ಯವನ್ನು ಮನೋರಂಜನೆಗೆ ಮಾಡುತ್ತಿರುವೆ ವೆಂಬ ವಿಶ್ವಾಸ ಹುಟ್ಟುತ್ತದೆ. ಅಲ್ಲಿಂದ ಅವರ ಸಂಪರ್ಕ ಹೆಚ್ಚಿ ಅವರ ಭಾಷೆಯ ರೀತಿಯನ್ನು ತಿಳಿಯಲು ಅನುಕೂಲವಾಗುತ್ತದೆ. ಭಾಷಾನ್ವೇಷಕ ತುಂಬ ಪ್ರವೀಣ ನಾಗಿದ್ದರೆ ಈ ಕಾರ್ಯವನ್ನು ಹಳ್ಳಿಗೆ ಹೋಗದೆ ತಾನಿದ್ದ ನಗರದಲ್ಲಿಯೇ ಹಳ್ಳಿಗರು ಸೇರುವ ಕಚೇರಿ, ಆಸ್ಪತ್ರೆ, ಬಸ್ ನಿಲ್ದಾಣ, ರೈಲುನಿಲ್ದಾಣಗಳಲ್ಲಿಯೂ ಕೂಡ ಧ್ವನಿ ಯಂತ್ರದ ಸಹಾಯದಿಂದ ಈ ಕಾರ್ಯವನ್ನು ಮಾಡಬಹುದು. ಆದರೆ ಹಳ್ಳಿಯಲ್ಲಿ ಗೊತ್ತಾಗುವ ಪೂರ್ಣ ಮಾಹಿತಿ ಈ ಕಡೆಗಳಲ್ಲಿ ದೊರೆಯುವುದು ಕಷ್ಟಸಾಧ್ಯ.

ಉಪಭಾಷೆಗಳ ಪರಿವೀಕ್ಷಣೆ (Dialect Survey) :

ಅನ್ವೇಷಕನು (Field worker) ಒಂದು ಹಳ್ಳಿಯಲ್ಲಿ ಬಹುಕಾಲದಿಂದಲೂ ವಾಸಮಾಡಿದ, ಬೇರೆ ಸ್ಥಳಗಳಿಗೆ ಹೆಚ್ಚು ಸಂಚರಿಸದ ಸ್ಥಾಯಿ ವ್ಯಕ್ತಿಯನ್ನು ಸೂಚಕ (Informant)ನೆಂದು ಆರಿಸಿಕೊಳ್ಳಬೇಕು. ಇಲ್ಲಿ ಗಮನಿಸಬೇಕಾದ ಕೆಲವು ಅಂಶ ಗಳಿವೆ. ವೃದ್ಧರು ಸೂಚಕರಾದರೆ ಅವರಲ್ಲಿ ಪುನರುಚ್ಚಾರದೋಷ ಹೆಚ್ಚಾಗಿ ಕಾಣಿ ಸುತ್ತದೆ. ಯುವಕರಾದರೆ ಅವರಲ್ಲಿ ಹೊಸಶಬ್ದಗಳ ರೂಪ ಹೆಚ್ಚು ಸಿಕ್ಕುತ್ತವೆ

ಪುರುಷ-ಸ್ತ್ರೀಯರಲ್ಲೂ ಸಹ ಭಾಷೆಯ ಬಳಕೆ ವ್ಯತ್ಯಾಸವಾಗಿರುತ್ತದೆ. ಪುರುಷರು ಉದ್ಯೋಗ, ವ್ಯಾಪಾರಕ್ಕಾಗಿ, ನೌಕರಿಗಾಗಿ, ಬೇರೆಬೇರೆ ಕಡೆಗೆ ಸಂಚರಿಸಿದವರಿರುತ್ತಾರೆ. ಸ್ತ್ರೀಯರು ತವರುಮನೆ ಬಿಟ್ಟು ದೂರ ಬಂದವರಾಗಿದ್ದರೆ, ಅವರು ನಾವು ಆರಿಸಿಕೊಂಡ ಪ್ರದೇಶದ ಭಾಷೆಯನ್ನು ಯಥಾವತ್ತಾಗಿ ಪ್ರತಿನಿಧಿಸಲಾರದೆ ಹೋಗುತ್ತಾರೆ. ಬ್ರಾಹ್ಮಣ, ಲಿಂಗಾಯತ, ಹೊಲೆಯ ಹಾಗೂ ಇನ್ನಿತರ ಜಾತಿ, ಉದ್ಯೋಗದ ಜನಗಳಾಡುವ ಭಾಷೆಯೂ ಕೂಡ ಸಾಮಾಜಿಕ ಅವಾಂತರಗಳನ್ನು ಪಡೆದಿರುತ್ತದೆ. ಒಟ್ಟಿನಲ್ಲಿ ಅನ್ವೇಷಕನು ಒಂದು ಊರಿನಲ್ಲಿ ಒಂದೇ ವರ್ಗದ ಜನರು ಹೆಚ್ಚು ವಾಸವಾಗಿರುವ ಕಡೆ ಹತ್ತೆಂಟು ಸೂಚಕರನ್ನು ಆರಿಸಿಕೊಂಡು ಭಾಷೆಯನ್ನು ಸಂಗ್ರಹಿಸಿದರೆ ಅವರಾಡುವ ಮಾತಿನಲ್ಲಿ ಏಕರೂಪತೆಯನ್ನು ಕಾಣಬಹುದು.

ಪರಿವೀಕ್ಷಣೆಯ ಪ್ರಶ್ನಾವಳಿಪಟ್ಟಿಕೆ :

ಯಾವುದೇ ಒಂದು ವಸ್ತುವನ್ನು ಕುರಿತು ತಿಳಿದುಕೊಳ್ಳುವಾಗ ಅನ್ವೇಷಕನು ಸಿದ್ಧಪಡಿಸುವ ಪ್ರಶ್ನಾವಳಿಯಲ್ಲಿ ಹೀಗೆಂದರೇನು? ಇದರ ಉಪಯೋಗವೇನು? ಇದರ ಸ್ವರೂಪವೇನು? ಇದು ಎಲ್ಲಿ ಸಿಕ್ಕುತ್ತದೆ? ಎಂಬಂತಹ ಮಾದರಿಯ ಪ್ರಶ್ನಾವಳಿಪಟ್ಟಿಕೆಯೊಂದನ್ನು ಸಿದ್ಧಮಾಡಿಕೊಳ್ಳಬೇಕಾಗುತ್ತದೆ.* ಈ ಪಟ್ಟಿಕೆಯಲ್ಲಿ ಯಾವ ಯಾವ ಸಂಗತಿಗಳು ಮುಖ್ಯವಾಗಿರಬೇಕೆಂಬ ಬಗೆಗೆ ಇಲ್ಲಿ ಹೇಳಲಾಗಿದೆ :

೧ ಸೂಚಕನ ಹೆಸರು / ವಯಸ್ಸು / ವಿಳಾಸ, ಇತ್ಯಾದಿ.

೨ ಉದ್ಯೋಗ, ಉದ್ಯೋಗದ ಉಪಕರಣದ ಹೆಸರುಗಳು.

೩ ಉಡಿಗೆ–ತೊಡಿಗೆಗಳು : ಅವುಗಳ ಹೆಸರುಗಳು.

೪ ಭೋಜ್ಯ–ಪಾನಿಯ ವಸ್ತುಗಳು : ಅವುಗಳ ಹೆಸರುಗಳು ಮತ್ತು ವೈವಿಧ್ಯತೆ ಮತ್ತು ಪಾತ್ರೆಗಳು, ತರಕಾರಿ ಪದಾರ್ಥಗಳು.

೫ ಶರೀರದ ಅಂಗಗಳು.

೬ ಸಂಬಂಧವಾಚಕಗಳು : ಬಂಧುಮಿತ್ರರು, ಆಪ್ತೇಷ್ಟರನ್ನು ಕರೆಯುವ ಹೆಸರುಗಳು.

೭ ಭೂಗೋಲಕ್ಕೆ ಸಂಬಂಧಿಸಿದ ಮಾಹಿತಿ : ಭೂಮಿಯ ಪ್ರಕಾರ ಅದನ್ನು ಅಳೆಯುವ ಕ್ರಮ, ಆಕಾರ, ಬೆಳೆಗಳು, ಇತ್ಯಾದಿ. ನಕ್ಷತ್ರ, ದಿಕ್ಕುಗಳು ತಿಥಿ, ವಾರ.

---

* ಮಾದರಿಗಾಗಿ ಅಣ್ಣಾಮಲೈ ವಿಶ್ವವಿದ್ಯಾಲಯದವರು ಸಿದ್ಧಪಡಿಸಿರುವ 'A Questionnaire, Socio-Linguistic Survey of South Arcot District by Dr. S. Agesthilingom', 1974, ನೋಡಬಹುದು.

೮ ಪ್ರಾಣಿ–ಪಶುವರ್ಗ–ಮಾನವಸಮಾಜದ ಸ್ನೇಹದಲ್ಲಿರುವ ಪ್ರಾಣಿಗಳು, ಕಾಡುಪ್ರಾಣಿಗಳು ಇತ್ಯಾದಿ.

೯ ಸಾಮಾನ್ಯ ಕ್ರಿಯಾರೂಪಗಳು : ಸಂಯುಕ್ತ ಕ್ರಿಯಾರೂಪಗಳು, ಪ್ರೇರಣಾರ್ಥಕ ಕ್ರಿಯಾರೂಪಗಳು.

೧೦ ಸರ್ವನಾಮಗಳು, ವಿಶೇಷಣಗಳು.

೧೧ ಸಂಖ್ಯಾವಾಚಕಗಳು, ಗುಣಿಸುವ ಎಣಿಸುವ ವಿಧಾನಗಳು.

೧೨ ಕ್ರಿಯಾವಿಶೇಷಣ ಮತ್ತು ಅವ್ಯಯಗಳು.

೧೩ ಪ್ರತ್ಯಯಗಳು ಪೂರ್ವ–ಪರ ಪ್ರತ್ಯಯ ಭೇದಗಳು.

೧೪ ಲಿಂಗ / ವಚನ / ವಿಭಕ್ತಿ ಪ್ರತ್ಯಯ ರೂಪಗಳು.

೧೫ ಪುರುಷ / ಕಾಲ / ಆಖ್ಯಾತಪ್ರತ್ಯಯ ರೂಪಗಳು.

೧೬ ಶಬ್ದಭಂಡಾರಕ್ಕೆ ಸೇರುವ ಪದಗಳು :


ಇದರಲ್ಲಿ ಸಾಮಾನ್ಯಶಬ್ದಗಳು ಮಾತ್ರವಲ್ಲದೆ ಸಂಧಿಪದಗಳನ್ನೂ, ಸಮಾಸಪದಗಳನ್ನೂ ಸಂಗ್ರಹಿಸಬೇಕು.

೧೭ ನಾಣ್ನುಡಿಗಳು ಮತ್ತು ನಾಡಪದಗಳ ಸಂಗ್ರಹ ಅಲ್ಲದೆ ಸಾಮಾಜಿಕ ಜೀವನ, ಸಂಸ್ಕೃತಿ, ಧರ್ಮ, ಕಲೆ, ಇತ್ಯಾದಿ ಕ್ಷೇತ್ರಕ್ಕೆ ಸೇರಿದಶಬ್ದಗಳೂ ವಾಕ್ಯಗಳೂ ಸೇರಿರಬೇಕು. ಇದು ವಾಕ್ಯಶಾಸ್ತ್ರ (syntax) ಅಧ್ಯಯನಕ್ಕೆ ಅನುಕೂಲ.

ಮೇಲಿನ ಎಲ್ಲ ಸಂಗತಿಗಳನ್ನು ಸಂಗ್ರಹಿಸಿಕೊಳ್ಳುವಾಗ ಅನ್ವೇಷಕನು ಅವರು ಹೇಳುವ ಶಬ್ದಗಳನ್ನು ಧ್ವನಿಲಿಪಿ (Phonetic Script)ಯಲ್ಲಿ ಬರೆದುಕೊಳ್ಳಬೇಕು. ನಾವು ಬಳಸುವ ಲಿಪಿಯಲ್ಲೇ ಕೆಲವು ಹೊಸಸಂಕೇತಗಳನ್ನು ಸೇರಿಸಿ ಅದನ್ನು ರೂಢಿಯಲ್ಲಿ ತಂದರೆ ಉಪಭಾಷೆಯಲ್ಲಿನ ಧ್ವನಿಯ ಸೂಕ್ಷ್ಮಭೇದಗಳನ್ನು ಸ್ವರಾಪಾತಗಳನ್ನು ಧ್ವನಿಸಂಯೋಜನೆಯ ಪ್ರಕ್ರಿಯೆಗಳನ್ನು ಯಥಾವತ್ತಾಗಿ ಪಡೆಮೂಡಿಸಲು ಸಾಧ್ಯವಾಗುತ್ತದೆ. ತಾನು ಸಂಗ್ರಹಿಸಿರುವ ಪದಗಳು ಅವುಗಳ ಉಚ್ಚಾರದ ರೀತಿ ಎಲ್ಲಿಂದ ಎಲ್ಲಿಯವರೆಗೆ ಒಂದೇ ವಿಧವಾಗಿದೆ. ಎಲ್ಲಿ ವ್ಯತ್ಯಾಸವುಂಟಾಗುತ್ತದೆಂಬುದನ್ನು ತಿಳಿಯಲು ಉಪಭಾಷಾ ಅಭ್ಯಾಸಿ ಕೆಲವೊಂದು ದಿಕ್ಕುಗಳಲ್ಲಿ ಸಂಚರಿಸಿ ಅವುಗಳ ಸೀಮಾರೇಖೆಯನ್ನು ಗುರುತುಮಾಡಿಕೊಳ್ಳಬೇಕು. ಎಲ್ಲಿ ಪದಗಳ ಸಮ್ಮಿಶ್ರಣ ಬಳಕೆ ಹೆಚ್ಚಿದೆ ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ. ಇದನ್ನು ಭಾಷಾಭೂಗೋಲ (Linguistic geography)ವೆನ್ನುತ್ತಾರೆ.

ಉಪಭಾಷಾ ಭೂಗೋಲ (Dialect geography) :

ಉಪಭಾಷಾ ವ್ಯಾಸಂಗಕ್ಕೆ ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ನಿದರ್ಶನಕ್ಕೆ ಒಂದು ಭಾಷಾಕ್ಷೇತ್ರವನ್ನು (Dialect area) ನಿರ್ದಿಷ್ಟಪಡಿಸಿಕೊಳ್ಳೋಣ. ಧ್ವನಿ, ಪದ, ಅರ್ಥ ಇತ್ಯಾದಿ ಅಂಶಗಳ ಮೇಲಿಂದ ಆ ಪ್ರದೇಶದ ಭಾಷೆಯನ್ನು ಪರೀಕ್ಷಿಸಲು ಹೊರಟ ಅನ್ವೇಷಕನು ತಾನು ಅದೇ ಅಂಶಗಳ ಆಧಾರದ ಮೇಲೆ ಸಿದ್ಧಪಡಿಸಿಕೊಂಡ ಪ್ರಶ್ನಾವಳಿಯ ಮೇಲಿಂದ ಅಲ್ಲಿನ ಧ್ವನಿ, ಪದ, ಅರ್ಥಗಳನ್ನು ತೌಲನಿಕವಾಗಿ ಪರೀಕ್ಷಿಸುತ್ತ ಆ ಕ್ಷೇತ್ರದಲ್ಲಿ ಪ್ರವಾಸ ಕೈಕೊಳ್ಳಬೇಕು. ಉದಾ : **'ಹರ್ಯಾಗ'** ಎಂಬ ಪದ ವಿಜಾಪೂರ ಜಿಲ್ಲೆಯಲ್ಲಿ 'ಬೆಳಿಗ್ಗೆ' ಎಂಬ ಶಿಷ್ಟಭಾಷಾರೂಪಕ್ಕೆ ಸಂವಾದಿಯಾಗಿ ಬಳಕೆಯಾಗುತ್ತದೆ. ವಿಜಾಪೂರದಿಂದ ರಾತ್ರಿ ಪಯಣ ಹೊರಟ ವ್ಯಕ್ತಿ ಕಲಬುರ್ಗಿಗೆ ಬಂದಾಗ ಬೆಳಕುಹರಿದಿರುತ್ತದೆ. ಅಲ್ಲಿ ಅವನಿಗೆ **'ಮುಂಜಾನೆ'** ಎಂಬ ಪದ ಕೇಳಿಬರುತ್ತದೆ. 'ಹರ್ಯಾಗ' ಮಾಯವಾಗಿರುತ್ತದೆ. ಇಲ್ಲಿ ವಿಜಾಪೂರ ಸ್ಥಳದಿಂದ ಎಲ್ಲಿಯವರೆಗೆ ಆ ಜಿಲ್ಲೆಯಲ್ಲಿ ಆ ಪದ ಕೇಳಿಸುತ್ತದೆ ? 'ಮುಂಜಾನೆ' ಎಲ್ಲಿಂದ ಆರಂಭವಾಯಿತು ? ಎಂಬುದನ್ನು ಗಮನಿಸಿ ಆ ಭಾಷೆಯ ಸೀಮಾರೇಖೆಯನ್ನು ಅಳೆಯಬೇಕು (ಆಕೃತಿ ನೋಡಿರಿ). ಹೀಗೆ ಪ್ರಾಂತಿಕಭೇದಗಳುಂಟಾಗಲಿ, ಪ್ರಾಕೃತಿಕ



ವಾಗಿ ಗುಡ್ಡ–ನದಿಗಳು, ಬಯಲುಪ್ರದೇಶ, ತಪ್ಪಲುಪ್ರದೇಶ ಹಾಗೂ ಆ ಭಾಷೆಯ

ಜನಸಮುದಾಯದ ವಿಘಟನೆಗೆ ಕಾರಣವಾಗುವ ಇನ್ನಿತರ ಕಾರಣಗಳಿಂದ ಭಾಷಾ ಭೂಗೋಲನ್ನು ಸಿದ್ಧಪಡಿಸಬೇಕಾಗುತ್ತದೆ.* ಒಂದೊಂದು ಶಬ್ದದ ಸಮಾನರೂಪ–ಪ್ರತ್ಯೇಕತೆಯ ರೂಪ ಇವುಗಳ ನಡುವಿನ ಅಂತರವನ್ನು ಸೀಮಾರೇಖೆಗಳನ್ನೆಳೆದು ಆ ಭಾಷೆಯ ಪರಿವೇಷ್ಠಿತ (standard) ಪ್ರದೇಶದ ನಕಾಶೆಯನ್ನು ಸಿದ್ಧಪಡಿಸುವುದೇ ಭಾಷಾಭೂಗೋಲದ ಮುಖ್ಯ ಉದ್ದೇಶವಾಗಿರುತ್ತದೆ. ಇಂತಹ ಭಾಷಾಭೂಗೋಲಿನಿಂದ ಒಂದು ಉಪಭಾಷೆಯ ವೈಶಿಷ್ಟ್ಯವೇನು ? ಅದರ ನಿರ್ಮಿತಿಗೆ ಕಾರಣಗಳೇನು? ಅಲ್ಲಿನ ಉಚ್ಚಾರದ ವಿಶೇಷತೆ, ವೈಶಿಷ್ಟ್ಯಗಳೇನು ? ಅಲ್ಲಿ ಯಾವ ಸಮ್ಮಿಶ್ರಣಶಬ್ದಗಳು ಕೇಳಿಬರುತ್ತವೆ? ಇದರಿಂದ ಒಂದು ಕಡೆಯ ಉಪಭಾಷೆಯ ಮೇಲೆ ಅನ್ಯಭಾಷಾ ಪ್ರಭಾವವೆಷ್ಟು ? ಇತ್ಯಾದಿ ಸಂಗತಿಗಳನ್ನು ತಿಳಿಯುವುದು ಸುಲಭವಾಗುತ್ತದೆ. ಭಾಷಾಭೂಗೋಲಿನಿಂದ ಒಂದು ಭಾಷೆಯಲ್ಲಿ ಉಂಟಾಗಿರುವ ಉಪಭಾಷೆಗಳಲ್ಲಿನ ಸಂಬಂಧ, ಮಹತ್ವ, ಸಮರೂಪತ್ವ ಮತ್ತು ವಿಷಯ ತತ್ವಗಳ ಸೂಕ್ಷ್ಮ ಪರಿಚಯವಾಗುತ್ತದೆ. ಭಾಷೆಯ ಐತಿಹಾಸಿಕ, ವರ್ಣನಾತ್ಮಕ, ತೌಲನಿಕ, ಯಾವುದೇ ಹಂತದ ವ್ಯಾಸಂಗಕ್ಕಾಗಿ ಭಾಷಾಭೂಗೋಲ ನೆರವು ನೀಡುತ್ತದೆ.

* ಮೇಲಿನ ಪದಗಳ ಸೀಮಾರೇಷೆಯ ಭಾಷಾಭೂಪಟವನ್ನು ಇಲ್ಲಿ ನಿದರ್ಶನಕ್ಕೆ ಕೊಟ್ಟಿದೆ.

ಕೊಂಡಗುಳಿ ಕೇಶಿರಾಜನ 'ನವರತ್ನಮಾಲೆ'

● ವೀರಣ್ಣ ರಾಜೂರ

ಶರಣ, ಕವಿ ಮತ್ತು ದಂಡನಾಯಕನಾಗಿ ಪ್ರಸಿದ್ಧಿಯನ್ನು ಪಡೆದ 'ಕೊಂಡಗುಳಿ ಕೇಶಿರಾಜ' ಶಿವಶರಣರಿಂದ, ಶಿವಕವಿಗಳಿಂದ ಸ್ತುತಿಸಿಕೊಂಡು ವೀರಶೈವ ಕವಿಗಳಲ್ಲಿ ಪ್ರಥಮನೆಂಬ ಕೀರ್ತಿಗೆ ಭಾಜನನಾಗಿದ್ದಾನೆ; ಅಗ್ರಗಣ್ಯನೆನಿಸಿದ್ದಾನೆ. ಶಾಸನ, ಕಾವ್ಯಗಳಲ್ಲಿ ವರ್ಣಿತನಾದ ಇವನ ಬಗೆಗೆ ವಿದ್ವಾಂಸರಿಂದ ಈವರೆಗೆ ಹಲವು ನಿಟ್ಟಿನಲ್ಲಿ ಸಂಶೋಧನೆ ನಡೆದು ಈಗ ಒಂದು ಸ್ಪಷ್ಟ ಚಿತ್ರ ಮೂಡಿದಂತಾಗಿದೆ.

ಆರ್. ನರಸಿಂಹಾಚಾರ್ ಅವರು ಕವಿಚರಿತೆಯಲ್ಲಿ ಇವನನ್ನು ಪರಿಚಯಿಸುತ್ತ "ಕೊಂಡಗುಳಿ ಕೇಶಿರಾಜ. ಸು. ೧೧೬೦. ಈತನು ಷಡಕ್ಷರಕಂದವನ್ನು ಬರೆದಿದ್ದಾನೆ; ವಚನಗಳನ್ನೂ ಬರೆದಿರುವಂತೆ ತಿಳಿಯುತ್ತದೆ. ಇವನು ವೀರಶೈವಕವಿ... ಶಿಕಾರಿಪುರದ ೧೧೯ ನೆಯ ಮತ್ತು ೧೨೩ ನೆಯ ಶಾಸನಗಳಿಂದ ಈತನ ವಿಷಯವಾಗಿ ಈ ಅಂಶಗಳು ತಿಳಿಯುತ್ತವೆ: ಈತನು ಭಾರದ್ವಾಜ ಗೋತ್ರದವನು. ಇವನ ತಂದೆ ಹೊಳಲಮರಸ; ತಾಯಿ ದುರ್ಗಾದೇವಿ. ಈತನು ಬಿಜ್ಜಳರಾಜನ (೧೧೫೬-೧೧೬೭) ಕೈಕೆಳಗೆ ದಂಡನಾಯಕನಾಗಿ ಬನವಸೆ ಪನ್ನಿರ್ಛಾಸಿರವನ್ನು ಆಳುತ್ತ ಬಲಿಪುರದಲ್ಲಿ ಇದ್ದನು. ಬಿಜ್ಜಳನ ಕಾಲವಾದಮೇಲೆ ಇವನ ಮಗ ರಾಯಮುರಾರಿ ಸೋಯಿದೇವನ ಕಾಲದಲ್ಲಿಯೂ ಇದ್ದನು. ಇವನು ಬಹಳ ಪರಾಕ್ರಮಿ" ಎಂದು ಹೇಳಿದ್ದಾರೆ.[೧] ಇಲ್ಲಿ ಕವಿಚರಿತ್ರೆಕಾರರು ಶಿಕಾರಿಪುರ ಶಾಸನದಲ್ಲಿ ಉಕ್ತವಾದ 'ಕೇಶವದಂಡಾಧೀಶ'ನನ್ನು ಕೊಂಡಗುಳಿ ಕೇಶಿರಾಜನೆಂದು ಊಹಿಸಿದ್ದಾರೆ. ಇವರ ಅಭಿಪ್ರಾಯವನ್ನು ಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಅವರು ಒಪ್ಪಿ ಇದೇ ಶಾಸನದಲ್ಲಿ ಬರುವ 'ಕೇಶವದೇವ' ಎಂಬವನನ್ನು ಕೊಂಡಗುಳಿ ಕೇಶಿರಾಜನ ಪಿತಾಮಹ ಎಂದು ನಿರ್ಧರಿಸಿದ್ದಾರೆ.[೨] ಅದರಂತೆ ಅಬ್ಬಲೂರ ಶಾಸನ[೩]ದಲ್ಲಿ ಉಕ್ತವಾದ ಇಬ್ಬರು ಕೇಶಿರಾಜರಲ್ಲಿ ಶಾಸನದ ಮಧ್ಯ ಕಾಣಿಸಿಕೊಂಡ 'ಕೇಶವರಾಜ'ನನ್ನು ಆರ್. ನರಸಿಂಹಾಚಾರ್ ಅವರು ಕೊಂಡಗುಳಿ ಕೇಶಿರಾಜನೆಂದೂ ಬಿ. ಶಿವಮೂರ್ತಿಶಾಸ್ತ್ರಿಗಳು ಕೊಂಡಗುಳಿ ಕೇಶಿರಾಜನ ಪಿತಾಮಹನೆಂದೂ,

---

೧ ಕ. ಕ. ಚ. ಸಂ. ೧. ಪು. ೧೮೬.

೨ ಮಂತ್ರಮಹತ್ವದಕಂದ ಮುನ್ನುಡಿ.

೩ Epi. Ind. V. 245.

ಕೊನೆಯಲ್ಲಿ ಬರುವ 'ಕೇಶವರಾಜ ಚಮೂಪ'ನನ್ನು ಆಚಾರ್ಯರು ಕೊಂಡಗುಳಿ ಕೇಶಿರಾಜನಿಂದ ಭಿನ್ನನೆಂದೂ ಶಾಸ್ತ್ರಿಗಳು ಕೊಂಡಗುಳಿ ಕೇಶಿರಾಜನೆಂದೂ ಅಭಿಪ್ರಾಯಪಟ್ಟಿದ್ದಾರೆ. ಆದರೆ ಡಾ. ಎಂ. ಎಂ. ಕಲಬುರ್ಗಿ ಅವರು ತಮಗೆ ದೊರೆತ ಕೊಂಡಗುಳಿ ಶಾಸನ[೪]ದ ಆಧಾರದಿಂದ ಶಿಕಾರಿಪ್ಪುರ ಮತ್ತು ಅಬ್ಬಲೂರ ಶಾಸನಗಳಲ್ಲಿ ಉಕ್ತವಾದ ನಾಲ್ಕುಜನ ಕೇಶಿರಾಜರಲ್ಲಿ ಅಬ್ಬಲೂರ ಶಾಸನದ ಮಧ್ಯೆ ಬರುವ ಕೇಶಿರಾಜನೇ ಕೊಂಡಗುಳಿ ಕೇಶಿರಾಜನೆಂದೂ ಉಳಿದ ಮೂವರು ಕೊಂಡಗುಳಿ ಕೇಶಿರಾಜನಿಂದ ಭಿನ್ನರೆಂದೂ ಹೇಳಿ ಅವನ ನಿಚ್ಚಳವಾದ ಚರಿತ್ರೆಯನ್ನು ಬೆಳಕಿಗೆ ತಂದಿದ್ದಾರೆ.[೫]

ಕೊಂಡಗುಳಿ ಶಾಸನೋಕ್ತ ಕೇಶಿರಾಜನ[೬] ವಿಷಯ ಹೀಗಿದೆ :

ಇವನ ತಂದೆ ನಿಂಬಣಯ್ಯ. ಅವನು ಆರನೆಯ ವಿಕ್ರಮಾದಿತ್ಯನ ದಂಡಾಧಿಪನಾಗಿದ್ದ. ಸ್ಥಳ ಕೊಂಡಗುಳಿ, ಮತ ವಾಜಿಕುಲ, ಇಷ್ಟದೈವ ಸೋಮನಾಥ, ಕಾಲ ಕ್ರಿ. ಶ. ೧೧೦೭. ಈತನು ಶಿವೋಪಾಸಕ, ದಂಡನಾಥ ಮತ್ತು ಕವಿ ಆಗಿದ್ದನೆನ್ನಲು ಶಾಸನದಲ್ಲಿ ಬರುವ ' ಸತ್ಯಸತ್ಯಬ್ರತ, ಹರಚರಣರಜೋರಂಜಿತೋತ್ತಮಾಂಗಂ ' 'ವಾಜಿಕುಳಾರ್ಣವ ಪಾರಿಜಾತ' ' ಅಯ್ಯನ ಸಿಂಗ ' 'ಸುಕವಿಶುಕಚೂತಬಂಧುವನವಸಂತವಚಶ್ರೀವಧೂಕಾಂತ ಸಾಹಿತ್ಯಸರೋರುಹಮಧುವ್ರತ' ಎಂಬ ಮಾತುಗಳು ನಿದರ್ಶನವೆನಿಸಿವೆ.

ಇದು ವೀರಶೈವ ಪುರಾಣಗಳಲ್ಲಿ ಬರುವ ಕೊಂಡಗುಳಿ ಕೇಶಿರಾಜನ ಚರಿತ್ರೆಗೆ ಹೊಂದಿಕೆಯಾಗಿದೆ. ಇದಲ್ಲದೆ ಪುರಾಣಗಳು ಹೇಳುವ ಇತರ ಸಂಗತಿಗಳು ಹೀಗಿವೆ :

ಇವನ ಸ್ಥಳ ಕೊಂಡಗುಳಿ (ತಾ. ಸಿಂದಗಿ, ಜಿ. ವಿಜಾಪೂರ), ಸತಿ ಗಂಗಾದೇವಿ, ವಿರೂಪಾಕ್ಷ ಗುರು; ಸೋಮನಾಥ ಇಷ್ಟದೈವ, ಕಲ್ಯಾಣದ ಪೆರ್ಮಾಡಿಯಲ್ಲಿ ದಂಡನಾಯಕನಾಗಿದ್ದ. ತೆಲುಗು ಜೊಮ್ಮಣ್ಣ, ವಂಶವರ್ಧನರು ಇವನ ಸಮಕಾಲೀನರು. ಮಂತ್ರಮಹತ್ವದ ಕಂದ ಮುಂತಾದ ಕೃತಿಗಳನ್ನು ರಚಿಸಿದ್ದಾನೆ.

ಕವಿ ಕೇಶಿರಾಜ :

ಕೊಂಡಗುಳಿ ಕೇಶಿರಾಜ ಒಬ್ಬ ಶ್ರೇಷ್ಠ ವೀರಶೈವ ಕವಿಯಾಗಿದ್ದನೆಂಬುದಕ್ಕೆ ಶಾಸನ ಮತ್ತು ಪುರಾಣಗಳಲ್ಲಿ ಉಲ್ಲೇಖ ದೊರೆಯುತ್ತದೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು :

೪ SII Vol. XX No. 69.

೫ ಕೊಂಡಗುಳಿ ಕೇಶಿರಾಜ : ಒಂದು ಹೊಸ ಶಾಸನ, ಒಂದು ಹೊಸಕೃತಿ. (ಪ್ರ. ಕ. ೫೦–೩ ಪು. ೧೦೫–೧೨೭); ಶಾಸನಗಳಲ್ಲಿ ಶಿವಶರಣರು. ಪು. ೪೧–೪೩.

೬ ಮರಡಿಪುರ ಶಾಸನ (E. C III–i ಮಂಡ್ಯ ೮೩.) ದಲ್ಲಿ ಉಕ್ತವಾದ 'ಕೇಶಿರಾಜದಣ್ಣಾಯಕ' ಕೊಂಡಗುಳಿ ಕೇಶಿರಾಜನೇ ಆಗಿದ್ದಾನೆಂದು ಡಾ. ಎಂ. ಎಂ. ಕಲಬುರ್ಗಿ ಅವರ ಅಭಿಪ್ರಾಯ.

೧. ಕೊಂಡಗುಳಿ ಶಾಸನದಲ್ಲಿ :

"ಸುಕವಿಶುಕಚೂತಬಂಧುವನವಸಂತ ವಚಶ್ರೀವಧೂಕಾಂತ ಸಾಹಿತ್ಯ ಸರೋ-ರುಹ ಮಧುವ್ರತ."

೨. ಹರಿಹರನ ಕೇಶಿರಾಜದಣ್ಣಾಯಕರ ರಗಳೆಯಲ್ಲಿ :

"ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ
ಅಚ್ಚರಿಮಿಗಲ್ಕೆ ಪೇಳ್ವಂ ಶಿವಾನಾಥಂಗೆ
ಪಂಚಾಕ್ಷರಾನುಬಂಧಂ ಛಂದವನುವಾಗೆ
ಪಂಚಮುಖನಾಮದಭಿದಾನ ಬುದ್ಧಿಯದಾಗೆ
ಶಿವವಾಕ್ಯ ಶಬ್ದಶುದ್ಧಿ ವ್ಯಾಕರಣವಾಗೆ
ಶಿವಭಕ್ತಿವೃತ್ತಕ್ಕಲಂಕಾರದಂತಾಗೆ
ಪದ್ಯಂಗಳಂ ಶಿವಂಗನುದಿನಂ ಪೇಳುತಂ
ಚೋದ್ಯವೆನೆ ಶಂಕರಸ್ತೋತ್ರದೊಳೆ ಬಾಳುತಂ"[೭]

೩. ಶಾಂತಲಿಂಗದೇಶಿಕನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ :

"ಕೇಶಿರಾಜಯ್ಯಗಳು ಗುರುಲಿಂಗಜಂಗಮದ ಭಕ್ತಿಯ ಮಾಡುತಿರ್ದು ವಸ್ತುಕ ವರ್ಣಕದಿಂದ ಮಂತ್ರಮಹತ್ವವ ನುತಿಗೆಯ್ಯುತ್ತ ಶಿವಪೂಜೆಯಮಾಡುತಿರ್ದು."[೮]

"ಕೊಂಡಗುಳಿ ಎಂಬ ಪುರದಲ್ಲಿ ಕೇಶಿರಾಜ ದಣ್ಣಾಯಕರಿರ್ದು ಮಂಗಳೂರ ಪುರಕ್ಕೆ ಬಂದು ಜಂಗಮಾರ್ಚನೆಯಮಾಡುತ್ತ ಶಿವಪೂಜೆಯಂ ಮಾಡುವಾಗ ಕಂದ ವೃತ್ತ ಗ್ರಂಥ ತ್ರಿವಿಧಿ ರಗಳೆ ವಚನ ಪದ ಪದ್ಯಗದ್ಯ ದಂಡಕ ಅಷ್ಟಕ ಇವು ಮೊದಲಾದವರಿಂದ ಲಿಂಗವ ದಿನಂಪ್ರತಿಯಲ್ಲಿ ನುತಿಸುವಲ್ಲಿ ಎಂಬತ್ತೆಂಟು ಶ್ಲೋಕಂಗಳಿಂದ ಷಡ-ಕ್ಷರಿಯ ಮಂತ್ರದ ಮಹಿಮೆಯನು ನವರಸಾರ್ಥಯುಕ್ತಮಾಗಿ ತಪ್ಪದೆ ಹೊಸ ಹೊಸತಾಗಿ ಸ್ತೋತ್ರಮಂ ಮಾಡಲಿತ್ತಲ್."[೯]

ಈ ಹೇಳಿಕೆಗೆ ನಿದರ್ಶನವಾಗಿ ಈಗ ಇವನ ಮೂರು ಕೃತಿಗಳು ಬೆಳಕು ಕಂಡಿವೆ.

೧. ಮಂತ್ರಮಹತ್ವದಕಂದ[೧೦]

---

೭ ನೂತನ ಪುರಾತನರ ರಗಳೆಗಳು. ಸಂ. ಡಾ. ಎಂ. ಎಸ್. ಸುಂಕಾಪುರ. ಪು. ೧೯೪.

೮ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ. ಸಂ. ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ. ಸಂ. ೩, ಪು. ೧೪೧.

೯ ಅದೇ ಸಂಧಿ ೪, ಪು. ೨೮೦.

೧೦ ಶ್ರೀ ಬಿ. ಶಿವಮೂರ್ತಿಶಾಸ್ತ್ರಿ, ಪ್ರ. ಕನ್ನಡ ಸಾಹಿತ್ಯಪರಿಷತ್.

೨. ಲಿಂಗಮಹತ್ವದಕಂದ-೧[೧೧]
೩. ಲಿಂಗಮಹತ್ವದಕಂದ-೨[೧೨]

ಮಂತ್ರಮಹತ್ವದಕಂದಕ್ಕೆ ಷಡಕ್ಷರಮಂತ್ರಮಹಿಮೆಯೆಂದೂ ಕರೆಯಲಾಗುತ್ತದೆ. ಇದರಲ್ಲಿ ೧೧೦ ಕಂದಗಳಿದ್ದು ಷಡಕ್ಷರ ಮಂತ್ರದ ಮಹತ್ವವನ್ನು ಸಾರುತ್ತವೆ. ಲಿಂಗ ಮಹತ್ವದಕಂದ-೧ ರಲ್ಲಿ ೧೦೦, ಲಿಂಗಮಹತ್ವದಕಂದ-೨ ರಲ್ಲಿ ೧೦೮ ಕಂದಪದ್ಯಗಳಿದ್ದು ಲಿಂಗದ ಮಹತ್ವವನ್ನು ಬೀರುತ್ತವೆ. ಮೂರೂ ಕೃತಿಗಳು ಸ್ತೋತ್ರರೂಪವಾಗಿವೆ.

ಈ ಮಾಲಿಕೆಗೆ ಸೇರುವ ಇನ್ನೊಂದು ಕೃತಿ 'ನವರತ್ನಮಾಲೆ.' ಇದರಿಂದ ಕೇಶಿರಾಜನ ಕೃತಿಸಂಖ್ಯೆ ನಾಲ್ಕಕ್ಕೇರಿದಂತಾಯಿತು. ಇಲ್ಲಿಯ ವರೆಗೆ ಉಪಲಬ್ಧ ವಾಗಿರದ ಈ ಕೃತಿ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಾಂಡಾರದ ತಾಳೆಯಗರಿ ಪ್ರತಿ ನಂ. ೧೪೧೩/೧೧ (ಗರಿ ೧೩೮-೧೪೦) ರಲ್ಲಿ ದೊರೆತಿದೆ.

ಇದು ೯ ಮಹಾಸ್ರಗ್ಧರಾ ವೃತ್ತಗಳಿಂದ ಕೂಡಿದ ಪುಟ್ಟಕೃತಿ. ಇದರ ವಸ್ತು ಶಿವಸ್ತುತಿ. ಪ್ರತಿಯೊಂದು ಪದ್ಯದಲ್ಲಿ ಭಕ್ತಿನಿರ್ಭರತೆ ಎದ್ದುಕಾಣುತ್ತದೆ. ಶೈಲಿ ಬಂಧುರವಾಗಿದೆ.

ಸಧ್ಯ ಒಂದೇ ಪ್ರತಿ ದೊರೆತಿರುವುದರಿಂದ ಪಾಠಾಂತರಗಳನ್ನು ಗುರುತಿಸಲಾಗಿಲ್ಲ. ಪ್ರತಿಕಾರರ ಕೈತಪ್ಪಿಹೋದ ಅಕ್ಷರಗಳನ್ನು ಊಹಿಸಿ ಕಂಸಿನಲ್ಲಿಡಲಾಗಿದೆ; ಲಿಪಿದೋಷ ವನ್ನು ಪರಿಷ್ಕರಿಸಲಾಗಿದೆ.

ನವರತ್ನಮಾಲೆ

ಸ್ಫುಟಿತಬ್ರಹ್ಮಾಂಡಖಂಡಂಗಳೊಳಿದೆ ಮಿಗಿಲೆಂಬಂತೆ ಕಾಪಾಲಧಾಮಂ
ನಿಟಿಲೋಪಾಂತಕ್ಕೆ ಚೆಲ್ವಿಂ ತಳೆಯಲೆಸೆವ ದೇವೇಶನಂ ತ್ರೈಜಗತ್ಪ್ರಾ
ಕಟತೇಜಃಪುಂಜ ನೇತ್ರತ್ರಯನನಸದೃಶೋಲ್ಲಾಸನಂ ಬಾಲಲೀಲೋ
ತ್ಕಟ ನಾಟ್ಯಾಡಂಬನಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೧

ಬೆಳ್ಪಿ[ನಿ]ಂದಂ ಜೋತ್ಸ್ನೆಮೂರ್ತಿಂಬಡೆದುದೆನಿಸುವೀ ಚಂದ್ರಲೇಖಾಂಶುವಿಂ ಪ್ರ
ಜ್ವಲಿಸುತ್ತಿರ್ಪ ಜಟಾಜೂಟನನಮರ ಕುಜೋದ್ಯಾನ ಸೌಗಂಧ ಪುಷ್ಪಂ
ಗಳ ಕಂಪಿಂ ಬ[1][ರ್ಪ]ಮಂದಾನಿಳನೊಳೆಳಸುತ್ತುಂ ಭೋರನೈತರ್ಪ ಗಂಗಾ
ಜಳಧಾರಾಪೂರನಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೨

ಹೃದಯಾಂಭೋಜಾತರಂಗಕ್ಕವತರಿಸಿ ಸುಖಾಸೀನನಾಗಿರ್ದ ಸೌಖ್ಯಾ
ಸ್ಪದನಂ ಮಜ್ಜೀವಿತಾಧೀಶ್ವರನನುಪಮ[ನ]ಂ ಮನ್ಮನೋವಲ್ಲಿಯುತ್ತಂ

೧೧ ಡಾ. ಎಂ. ಎಂ. ಕಲಬುರ್ಗಿ, ಕೊಂಡಗುಳಿ ಕೇಶಿರಾಜ: ಒಂದು ಹೊಸ ಶಾಸನ ಒಂದು ಹೊಸ ಕೃತಿ. (ಪ್ರ. ಕ. ೫೦-೩ ಪು. ೧೦೫-೧೨೭).

೧೨ ಡಾ. ಎಂ. ಎಂ. ಕಲಬುರ್ಗಿ, ಕೊಂಡಗುಳಿ ಕೇಶಿರಾಜ: ಇನ್ನೊಂದು ಶಾಸನ ಇನ್ನೊಂದು ಕೃತಿ (ಚಿತ್ರಭೆ. ಪು. ೬೨೩-೬೪೯)

1 ಲ್ಪಪೂ (ಮೂಲ)

ಪದಪಿಂ ಪರ್ಬಲ್ಕಡರ್ಪಾದಮರ ಕುಜನನರ್ಕೇಂದು ಕೋಟಿಪ್ರಭಾ ಸಂ
ಪದನಂ ಪ್ರತ್ಯಕ್ಷನಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೩

ಎಸೆವೀ ದುಗ್ಧಾಬ್ಧಿ ಲೋಕತ್ರಯ ಗಗನದಿಶಾಚಕ್ರದೊಳ್ ಕೂಡಿ ಕಾಂತಿ
ಪ್ರಸರಂ ಕೈಕೊಂಡು ಪರ್ಬಿತ್ತೆನಿಸುವ ಧವಲಶ್ರೀಯುಮೊಪ್ಪಿರ್ಪ ಮಾಣಿ
ಕ್ಯಶರೀರಪ್ರೋಕ್ತನಂ ತಳ್ತೆಡರ್ದೆಡೆಗುಡುತುಂ ತೀವಿರಲ್ತ್ರೋಜುತಿರ್ಪಂ
ತೆಸೆವತ್ಯುದ್ದಾಮನಂ ಕಂಡೆರ್ದೆ ದಣಿದು ಕುಳಿರ್ಕೊಂಡಿತೆನ್ನಂತರಂಗಂ. ೪

ಹಿಮವತ್ಸೈಲೇಂದ್ರ ಪುತ್ರೀನಯನ ಕುಮುದಿನೀಶ್ರೀವಿಭಾವೈಕವಾಕ್ಚಂ
ದ್ರ[ಮ]ನಂ ಗೌರೀಮುಖಾಂಬೋರುಹ ವಿಕಸಿತ ಸತ್ಸಾರ ಸೌಗಂಧಲುಬ್ಧ
ದ್ಭ್ರಮರವ್ಯಾಪಾರನಂತರ್ಭ್ರಮಣನಗ[2][ಜೆಯು][2]ತ್ತುಂಗ ಪೀನಸ್ತನದ್ವಂ
ದ್ವಮಣಿ ಪ್ರಾರಂಭನಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೫

ಕನಕಾಂಶುತ್ಕೇಶಬಂಧಂ ರವಿಶಶಿ ಫಣಿಭೃತ್ಕುಂಡಲಂ ಭಾಳನೇತ್ರಂ
ದ್ಯುನದೀಶ್ರೀನೀಲಕಂಠಂ ದಶಭುಜಮುರಗೇಂದ್ರಾಂತ ಶೂಲಂ ಕಪಾಲಂ
ಅನಲಂ ಖಟ್ವಾಂಗಹಸ್ತಂ ಡಮರುಗವರದಂ ಶೋಭೆಯಿಂ ತನ್ನೊಳೊಪ್ಪಿ
ರ್ಪನಿಮೇಷಾಧೀಶಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೬

ಪದಪಿಂದೀರೇಳು ಲೋಕಂಗಳನತಿ ಮುದದಿಂ ರಕ್ಷಿಸಲ್ತಾಂ ಪೃಥುವ್ಯಾ
ಳದೊಳರ್ಕಂ ಮಾರುತಂ ಚಂದ್ರಮನವನೀ ನಭಂ ವಹ್ನಿತೋಯಾತ್ಮಕಂ ತಾಂ
ಮೊದಲೆಂಬೈಕಸ್ವಭಾವಂ ನಿಜಮೆನಿಸಿದ ಸರ್ವೇಶನಂ[3][ಶ][3]ರ್ವನಂ ಸಂ
ಪದನಂ ಪ್ರತ್ಯಕ್ಷನಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೭

ಮದ ರಾಗದ್ವೇಷ ಜನ್ಮಂ ಜರೆ ರುಜೆ ಮರಣಂ ಶ್ವೇದಂ ಭೇದಂ ವಿವಾದಂ
ಪುದಿದಿರ್ದಾಕಾಂಕ್ಷೆ ನಿದ್ರಾ ಭ್ರಮೆ ಪಸಿವು ತೃಷಾ ಚಿಂತೆ ಸಂಕ್ಲೇಶ ಮೋಹಂ
ಪದಿನೆಂಟುಂ ದೋಷದಿಂದಂ ತೊಲಗಿದನನಘಂ ದೇವದೇವೇಶನಪ್ಪೀ
ಮದನಪ್ರಧ್ವಂಸಿಯಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೮

ತಿಲದೊಳ್ತೈಲಂ ಮಹೀಜಪ್ರಕರದೊಳನಲಂ ಕ್ಷೀರದೊಳ್ಸರ್ಪಿ ಭೂತಂ
ಗಳೊಳೆಲ್ಲಾ ಭೂತತಂತ್ರಗಳೊಳೆ[ಸೆ]ವಸಿತೋರ್ಪಾತ್ಮನಂ ಸೂಕ್ಷ್ಮನಂ ನಿ
ರ್ಮಳನಂ ನಿರ್ಭೇದ್ಯನಂ ನಿಃಕಳನನನುಪಮ[ನ]ಯ್ಯನಂ ಭಕ್ತವಾಂಛೋ
ತ್ಪಳ ಕಲ್ಪೋರ್ವೀಜನಂ ಕಂಡೆರ್ದೆದಣಿದು ಕುಳಿರ್ಕೊಂಡಿತೆನ್ನಂತರಂಗಂ. ೯

ಇತಿ ಕೇಶಿರಾಜ ದಂಡನಾಥ ಚೂಡಾಮಣಿ ನಿರೂಪಿಸಿದ
ನವರತ್ನಮಾಲೆಗೆ ಸಂತೋಷಮಸ್ತು.

• •

2 ಜೋ (ಮೂಲ)   3 ಸ (ಮೂಲ)

ಜನಪದ ಕವಿಚರಿತೆ

● ಎಂ. ಎಸ್. ಲಕ್ಮೆ

೩. ಶಿವಲಿಂಗ ಕವಿ (೧೯೦೦-೧೯೫೫) :

ಕ್ರಿ. ಶ. ಸು. ೧೯೦೦ ರಲ್ಲಿ ರಾಮಲಿಂಗೇಶ್ವರನ ಕೃಪೆಯಿಂದ ರಾಚಯ್ಯ ಮತ್ತು ವೀರಮ್ಮ ದಂಪತಿಗಳಿಗೆ ರುದ್ರಯ್ಯ ಮಗುವಾಗಿ ಹುಟ್ಟುತ್ತಾನೆ. ಚಿಕ್ಕಂದಿನಿಂದಲೂ ನಿಸರ್ಗಸೌಂದರ್ಯಕ್ಕೆ ಮಾರುಹೋದ ರುದ್ರಯ್ಯನು ವಯಸ್ಸಾದಂತೆ ಲೋಕಾನು ಭಾವಿಯಾಗಿ- ಸಹಜ ಕವಿಯಾಗುತ್ತಾನೆ. ಕಲಿತದ್ದು ಕೇವಲ ನಾಲ್ಕನೆಯ ಈಯತ್ತೆ. ಆದರೇನು ?.... ಪ್ರತಿಭೆ ಉಕ್ಕಿ ಹರಿಯುತ್ತದೆ. ವರಕವಿಯೆನಿಸುತ್ತಾನೆ. ಕಲೆಯ ಸಂಪ್ರದಾಯವನ್ನು ಮೀರಿ, ಲೋಕಬಾಹಿರನಾಗಿ, ತನ್ನನ್ನು ಸುತ್ತುವರಿದ ಜನತೆಗೆ ನಿಧಿಯಾಗಿ, ಕವಿಯಾಗಿ, ರಸಿಕನಾಗಿ, ವೈದ್ಯನಾಗಿ ಕಂಗೊಳಿಸುತ್ತಾನೆ. 'ಶಿವಲಿಂಗ' ಎನ್ನುವ ಅಂಕಿತದಲ್ಲಿ ನೂರಾರು ಲಾವಣಿ, ಗೀಗೀ, ಡೊಳ್ಳಿನಹಾಡು ರಚಿಸಿ 'ಶಿವಲಿಂಗಕವಿ' ಎಂದೇ ಕೀರ್ತಿಶೇಷನಾಗುತ್ತಾನೆ. 'ಹುಲಕುಂದ ಹಿರೇಮಠ' ಎಂಬ ಅಂಕಿತವೂ ಕೆಲಹಾಡುಗಳಲ್ಲಿ ಬರುತ್ತದೆ. ಹಲವಾರು ಬೈಲಾಟಗಳನ್ನೂ ರಚಿಸಿದ್ದಾನೆ. ಅದರಲ್ಲಿ ವೇಷತೊಟ್ಟು ಕುಣಿದಾಡಿದ್ದಾನೆ. ಅಧ್ಯಾತ್ಮದಲ್ಲೂ ಅಷ್ಟೇ ನಿಷ್ಣಾತ. ಶ್ರೀಸಾಮಾನ್ಯರಿಗೂ ಅರ್ಥವಾಗುವಂತೆ ಅಧ್ಯಾತ್ಮದನುಭವವನ್ನು ತತ್ತ್ವಪದಗಳಲ್ಲಿ ಎರಕಹೊಯ್ಯುತ್ತಾನೆ. ಹುಲಕುಂದ ಹಿರೇಮಠದ ಪಟ್ಟಾಧಿಕಾರಿಯಾಗಿ, ಕವಿತ್ವಶಕ್ತಿಗೆ ಮಾರುಹೋಗಿ ಕಲಾಕಾರರನ್ನು ಗೌರವಿಸುತ್ತಿದ್ದನಂತೆ. ಗಂಡು- ಹೆಣ್ಣು ಎರಡೂ ಕಡೆಯ ಹಾಡುಗಳನ್ನು ಅಂದರೆ 'ಕಲ್ಗಿ-ತುರಾಯಿ' ಪದಗಳನ್ನು ರಚಿಸುವಲ್ಲಿ ಕೈಹಿಡಿಯು ವವರು ಯಾರೂ ಇದ್ದಿರಲಿಲ್ಲವಂತೆ.

ಸ್ವಾತಂತ್ರ್ಯಸಂಗ್ರಾಮದಲ್ಲಿ ಈ ಕವಿ ಸಲ್ಲಿಸಿದ ಸೇವೆ ಅಪ್ರತಿಮವಾದುದು. ಭಾರತೀ ಯರಲ್ಲಿ ರಾಷ್ಟ್ರಪ್ರೇಮ ಉಕ್ಕಿಬರುವಂತೆ ಹಾಡುರಚಿಸಿ ಮಹದುಪಕಾರಮಾಡಿದ್ದಾನೆ. ಆಯುರ್ವೇದಶಾಸ್ತ್ರದಲ್ಲೂ ಪಾರಂಗತನಾದ ಈತನ ವೈದ್ಯಕೀಯ ಸೇವೆ ಆ ನಾಡಜನ ತೆಗೆ ಉಚಿತವಾಗಿತ್ತು. ಮನದ, ಮೈಯ ರೋಗಗಳನ್ನೆಲ್ಲಾ ಸಲೀಲವಾಗಿ ಬಿಡಿಸುವ ಕಲಾಕೌಶಲ್ಯ ಇವನದು. ಆ ವಿಷಯ- ಈ ವಿಷಯ ಯಾವುದೇ ವಿಷಯವಿರಲಿ ತತ್‌ಕ್ಷಣ ಹಾಡು ರಚಿಸಿಕೊಡುವ ಆಶುಕವಿತ್ವಶಕ್ತಿ ಇವನದಾಗಿತ್ತು. ಹೆಬ್ಬಾಳದ ಹನು

ಮಂತ ಮತ್ತು ಫಕೀರವ್ವ; ಮುಸಿಕಟ್ಟಿ ಗಂಗಪ್ಪ; ಬಾಡಗಿ ಗಂಗವ್ವ; ಹೊಸೂರ ಸೋಮಲಿಂಗ ಮೊದಲಾದವರು ಈಗಲೂ ಶಿವಲಿಂಗ ಕವಿಗಳ ಹಾಡುಗಳನ್ನು ಸುಶ್ರಾವ್ಯ ವಾಗಿ ಹಾಡುವುದನ್ನು ಸ್ವತಃ ನಾನೂ ಕೇಳಿದ್ದೇನೆ. ಚಿಕ್ಕುಂಬಿಯ ಮೇಳವೂ ಪ್ರಸಿದ್ಧಿ ಪಡೆದಿತ್ತು.

ಶಿವಲಿಂಗಕವಿ ಅಷ್ಟೇ ಜಿದ್ದಿನವ, ಶಾಸ್ತ್ರಪಾರಂಗತ. ಏನೇ ಬರೆದರೂ ಅದಕ್ಕೆ ಆಧಾರವಿರುತ್ತಿತ್ತು. ಹರದೇಶಿ–ನಾಗೇಶಿ ಹಾಡುಗಳಲ್ಲಂತೂ ತತ್ತ್ವದ ಹೊನಲನ್ನೇ ಹರಸಿದ್ದಾನೆ. ಅಲ್ಲದೆ ರಾಷ್ಟ್ರನಾಯಕರ, ಧರ್ಮಧುರಂಧರರ, ಸಾಮಾಜಿಕ, ರಾಜ ಕೀಯ ವಿಷಯುಗಳ ಮೇಲೆ ಸಾವಿರಾರು ಹಾಡು ರಚಿಸಿದ್ದಾನೆ. ಮೊದಮೊದಲು ಹುಲ ಕುಂದದ ರಾಮಲಿಂಗೇಶ್ವರ ಗುಡಿಯಲ್ಲಿ ಕುಳಿತುಕೊಂಡು ಹಾಡು ರಚಿಸುತ್ತಿದ್ದುದನ್ನು ಅಲ್ಲಿಯ ಹಿರಿಯರು ಈಗಲೂ ನೆನೆಸಿಕೊಳ್ಳುತ್ತಾರೆ. ಕೆಲಕಾಲದ ನಂತರ ಹುಲಕುಂದ ಬಿಟ್ಟು ಚಿಕ್ಕುಂಬಿಯಲ್ಲಿ ನೆಲೆಸಿದ್ದನೆಂದೂ ತಿಳಿದುಬರುತ್ತದೆ. ಅಲ್ಲಿಯೂ ಒಂದು ಮಠ ಇದೆ. ೨೦–೮–೧೯೫೫ರಲ್ಲಿ ಲಿಂಗೈಕ್ಯರಾದದ್ದು ತಿಳಿದುಬರುತ್ತದೆ.

ಶಿವಲಿಂಗಕವಿಯ ಖ್ಯಾಲಿಗಳು, ಎಲ್ಲಮ್ಮನ ಹಾಡುಗಳಂತೂ ಅತ್ಯಂತ ಜನಪ್ರಿಯ ಹಾಡುಗಳಾಗಿವೆ.

ಹೋಗೂನ ನಡಿ ಎಲ್ಲಮ್ಮನ ಗುಡ್ಡಕ ।
ಜಗದಂಬಿ ಜಾತ್ರಿ ಬಹಳ ಖಡಕ ॥ ಪ ॥

ಏಳುಕೊಳ್ಳ ಜೋಗತೇರ ಮ್ಯಾಳ । ಚೌಡಕಿಯ ತಾಳ
ನುಡಿತ ಗುಡಗುಡಕ । ಸೌದತ್ತಿ ಉಗುರಗೋಳ ನಡಕ
ತುಪ್ಪ ಕರ್ಪೂರ ದೀಪದ ಬೆಳಕ । ಉರಿಯುವುದು ಹಗಲಿ ಬೆಳತನಕ ।
....

ಆದಿಶಕ್ತಿ ಮಾಡೊ ಆಕಿ ಸ್ತುತಿ । ಪಾದಕಾರತಿ ಕುಡಿಯೊ ಪಾದೋದಕ ।
'**ಶಿವಲಿಂಗ**' ಶಂಕರಿಯ ಸೇವಕ । ಹೋಗೋನು ಎಲ್ಲವ್ವನ ಗುಡ್ಡಕ ।
ಜಗದಂಬಿ ಜಾತ್ರಿ ಬಹಳ ಖಡಕ। ಹೋಗೋನು ನಡಿ ಎಲ್ಲವ್ವನ ಗುಡ್ಡಕ।

ಚಟಗಳಿಂದ ದೂರಿರಬೇಕೆಂದು ಒಂದು ಮಠದ ಪಟ್ಟಾಧಿಕಾರಿಯಾಗಿ ಕಳಕಳಿಯಿಂದ ಜನತೆಗೆ ಕೇಳಿಕೊಂಡಿದ್ದಾನೆ.

ತರುಣವೃದ್ಧರಿಗೆ ನಾನು ಶರಣಮಾಡಿ ಹೇಳತೀನಿ
ಕರುಣದಿಂದ ಕೇಳಬೇಕ ಚಂದ ಪದಾ
ಸರಾಯಿ ಕುಡಿವಂಥವರೆಲ್ಲಾ ಸರಸವಾದ ಕತಿ ಕೇಳಿ
ಹರುಷದಿಂದ ಬಿಡಬೇಕ ಕುಡಿಯುವದಾ........

೪. ಭೀಮಕವಿ (೧೯೦೯–೧೯೭೦) :

ಹುಲಕುಂದ 'ಭೀಮಕವಿ' ಎಂದು ಹೆಸರಾದ ಕವಿಯ ನಿಜವಾದ ಹೆಸರು ಬಸಪ್ಪ ಸಂಗಪ್ಪ ಬೆಟಗೇರಿ. ಹುಟ್ಟಿದ್ದು ೩–೨–೧೯೦೯ ರಲ್ಲಿ, ತೀರಿಕೊಂಡದ್ದು ೨೨–೬–೧೯೭೦ರಲ್ಲಿ. ಕಲಿತದ್ದು ಕನ್ನಡ ೬ನೆಯ ಈಯತ್ತೆ. ಉದ್ಯೋಗ ನೇಕಾರಿಕೆ. ಇವರ ಮನೆಯ ಸಮೀಪವೇ ಭೀಮ ಎಂಬ ಸಾಧುವಿನ ಗದ್ದಿಗೆಯೊಂದಿದೆ. ಆ ಗದ್ದುಗೆಯ ದರ್ಶನ ಪಡೆದೇ ತನ್ನ ಕಾರ್ಯ ಕೈಕೊಳ್ಳುತ್ತಿದ್ದ ಈ ಬಸಪ್ಪನಿಗೆ ಕಾವ್ಯ ರಚಿಸುವ ಶಕ್ತಿ ಬಂದದ್ದು– ಆ ಸಾಧುವಿನ ಕೃಪೆಯಿಂದೇ ಬಗೆದು ಆತನನ್ನೇ ಹಾಡು ಗಳಲ್ಲಿ ಸ್ಮರಿಸಿದ್ದಾನೆ. ತಂದೆಯೂ ಕವಿ ಇದ್ದ ಎನ್ನುವುದನ್ನು ಮರೆಯುವಂತಿಲ್ಲ. ಹರಿಶ್ಚಂದ್ರ, ಮಾರ್ಕಂಡೇಯ, ಸಿರಿಯಾಳ ಮೊದಲಾದ ಬಯಲಾಟದ ಕತೆಗಳನ್ನು ಭೀಮಕವಿಯ ತಂದೆ ಸಂಗಪ್ಪ ರಚಿಸಿದ್ದಾನೆ. ತಂದೆಯ ಪ್ರಭಾವವೂ ಈತನ ಮೇಲೆ ಬಿದ್ದುದನ್ನು ನೆನೆಯಬಹುದು. 'ಭೀಮಕವಿ' ಎಂಬುದು ಈತನ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ಭೀಮೇಶ, ಭೀಮ, ಭೀಮರಾಯ, ಭೀಮಸಿಂಗ– ಮೊದಲಾದ ಹೆಸರುಗಳೂ ಬರುತ್ತವೆ.

ಭೀಮಕವಿ ಸ್ವತಃ ಹಾಡುಗಾರ. ಹೊಸೂರಲ್ಲಿ ಮೇಳ ಕಟ್ಟಿಕೊಂಡು ನಾಡಿನ ತುಂಬೆಲ್ಲಾ ಹಾಡುಗಳ ಮುಖಾಂತರ ರಾಷ್ಟ್ರಾಭಿಮಾನ ಹೆಚ್ಚಿಸಿದವನು. ಸ್ವತಃ ಕವಿಯೂ ಹೌದು. ಸಾವಿರಾರು ಲಾವಣಿ ರಚಿಸಿದ್ದಾನೆ. ಸರಕಾರದ ಪ್ರಚಾರಕ್ಕೆ ಮೀಸಲಾದ ಹಾಡುಗಳಿಗಂತೂ ಲೆಕ್ಕವಿಲ್ಲ. ಸರ್ವೋದಯ ಪ್ರಚಾರದ ಹಾಡುಗಳೂ ಸಾಕಷ್ಟು ರಚಿತವಾಗಿವೆ. ೧೯೪೨ ರಲ್ಲಿ ಜೇಲೂ ಕಂಡುಬಂದ ಈ ಕವಿಗೆ ಸಾಯುವ ವರೆಗೂ ಸರಕಾರದ ಸಹಾಯಧನ ದೊರೆಯುತ್ತಿತ್ತು. ತನ್ನ ಅರವತ್ತು ವರುಷಗಳ ತುಂಬುಜೀವನದಲ್ಲಿ ಕವಿ ಉಂಡದ್ದು ಹೆಚ್ಚಾಗಿ ಬಡತನದ ಕಹಿಯನ್ನೇ, ಮಗನಿಗೂ ಇದರಲ್ಲಿ ಪಾಲು. ಕವಿಯ ಬಗ್ಗೆ ಮಾಹಿತಿ ಪಡೆಯಬೇಕೆಂದು ಹುಲಕುಂದ ಗ್ರಾಮಕ್ಕೆ ಸ್ನೇಹಿತ ಪ್ರೊ. ಎ. ಆರ್. ಪಾಟೀಲರೊಂದಿಗೆ ಹೋದಾಗ ಪ್ರತ್ಯಕ್ಷ ಕಂಡದ್ದು, 'ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು' ಎನ್ನುವುದನ್ನು. ಮಗ ಸಂಗಪ್ಪನೂ ಕವಿ. ಆದರದಿಂದ ಬರಮಾಡಿಕೊಂಡು, ರಾತ್ರಿಯಾದರೂ, ಹೊಟ್ಟೆ–ನೆತ್ತಿ ತುಂಬಿದ ಅವನ ವಿಶಾಲಹೃದಯಕ್ಕೆ ನಮೋ ನಮೋ ಎಂದೆವು. ಭೀಮಕವಿ ಹಣ ಗಳಿಸದಿದ್ದರೂ ಹಾಡು ರಚಿಸಿ ಹೆಸರು ಗಳಿಸಿದರು. ಅದರಿಂದ ಆ ಊರಿಗೂ–ನಾಡಿಗೂ ವಿಶೇಷವಾಗಿ ಜಾನಪದಕ್ಷೇತ್ರಕ್ಕೆ ದೊಡ್ಡ ಹೆಸರು.

ಭೀಮಕವಿಯು ಆಕಾಶವಾಣಿಯಲ್ಲಿ ಹಾಡಿದ ಹಾಡುಗಳು ಧ್ವನಿಮುದ್ರಿಕೆಯಲ್ಲಿ (ಟೇಪ ರೆಕಾರ್ಡ) ಇರುವವಲ್ಲದೆ, ಕೆಲವು ಮುದ್ರಣಗೊಂಡಿರುತ್ತವೆ. ಮುದ್ರಣಗೊಂಡ ಕೃತಿಗಳು ಇಂತಿವೆ :

೧. ಜಾನಪದ ರಗಳೆಗಳು. ಸಂ· ತಲ್ಲೂರ ರಾಯನಗೌಡರು–೧೯೪೭.
೨. ಸರ್ವೋದಯ ಗ್ರಾಮೀಣ ಜನಪದಗೀತೆಗಳು–೧೯೬೭.
೩. ಗ್ರಾಮದಾನ ಭೂದಾನ ಪದ್ಯಾವಳಿ–೧೯೬೪, ೧೯೬೭.
೪. ಗೀಗೀ ಪದ್ಯಸಂಗ್ರಹ–೧೯೫೫.

ಇನ್ನೂ ಅಚ್ಚಾಗದೇ ಇದ್ದ ಸಾವಿರಾರು ಹಾಡುಗಳನ್ನು ಸಂಗಪ್ಪ ಅವರಿಂದ ಸಂಗ್ರಹಿಸಲಾಗಿದೆ.

ಭೀಮಕವಿಯ 'ಎಂಥಾ ಶಾಣ್ಯಾ ಮಹಾತ್ಮಾ ಗಾಂಧಿ' ಎಂಬ ಹಾಡು ಅತ್ಯಂತ ಜನಪ್ರಿಯವಾದುದು. ಪ್ರಾಸ ಜೋಡಿಸುವುದರಲ್ಲಿ ಕವಿಯ ಜಾಣ್ಮೆ ಎದ್ದು ಕಾಣುತ್ತದೆ.

ಕೂಡಿದ ಜನರೊಳು ಹಾಡಿದ ಪದಗಳು ।
ಪೇಡೆ ತಿಂದಂತೆ ಇರಬೇಕು ಸಂವಿ ।
ಕೂಡದ ಪ್ರಾಸ ಗುದ್ಯಾಡಿ, ಜೋಡಸಾಂವ ।
ರೂಢಿಯೊಳಗ ಶತಮೂಢ ಕವಿ ।

ಹಾಲುಮತದ ಪುರಾಣ ಕುರುಬರ ಸಮಾಜಕ್ಕೊಂದು ಬೈಬಲ್ಲ ಇದ್ದಹಾಗೆ. ಆ ತತ್ತ್ವಕ್ಕಂಟಿಕೊಂಡ ನೂರಾರು ಡೊಳ್ಳಿನ ಹಾಡುಗಳನ್ನು ಈ ಕವಿ ರಚಿಸಿದ್ದಾನೆ. ಅಲ್ಲಲ್ಲಿ ಹಾಡುವ ತೋಡಿಯ, ಖ್ಯಾಲಿಯ ಹಾಡುಗಳಿಗಂತೂ ಲೆಕ್ಕವಿಲ್ಲ. 'ನಾಡಿನ ಜನರು ಬೇಡಿದ ಪದ್ಯ ಮಾಡಿ ಹಾಡಾಂವ ಹುಲಕುಂದ ಭೀಮಕವಿ' ಎಂಬ ಕವಿಯ ನುಡಿಯಲ್ಲಿ ಯಾವ ಅತಿಶಯೋಕ್ತಿಯಿಲ್ಲ ಎನಿಸುತ್ತದೆ.

ಕೈಯಾಗ ರೊಕ್ಕಯಿಲ್ಲ ಮೈಯಾಗ ರಕ್ತಯಿಲ್ಲ ।
ಕಾಲಾಗ ಶಕ್ತಿಯಿಲ್ಲ ಈಗಿನ ಗಂಡಸರಾ ।
ಚಹಾ ಕುಡದ ಆಗ್ಯಾರ ಭಾಳ ಹಗರಾಽ । ಗೀ–ಗೀ

ಖರ್ಚ ಕಡ್ಮಿ ಮಾಡುದಿಲ್ಲ ಹೇಳಿದರ ಕೇಳುದಿಲ್ಲ ।
ತಮ್ಮದ ನಡಸ್ಯಾರ ಭಾಳ ಟೊಪ್ಪಿಗಿಯವರ್ನ ಕಂಡ್ರ ।
ಕಂಡ್ಹಂಗ ಮಾತಾಡಸ್ತಾರ ಇವರಾ । ಗೀ–ಗೀ

ಗಾಂಧಿ ಟೋಪಿ ಹಾಕುದಿಲ್ಲ ಹಾಕಿದವರ್ಗಿ ಸೇರುದಿಲ್ಲ ।
ಒಲ್ಲೀವ ಅಂತಾರ ಅರಣ್ಯಪಂಡಿತರಾ ।
ಇಂತಾವ್ರ ನೋಡಿ ಹಿಂದೂಸ್ತಾನ ಕಳ್ಯಾವರಾ । ಗೀ–ಗೀ

ದೇಶಸೇವಾ ಮಾಡುದಿಲ್ಲ ಸ್ವರಾಜ್ಯದ ಗರಜಿಲ್ಲ
ಗಾಂಧಿಯವ್ರ ದರಜಿಲ್ಲ ಇವರೆಂಥಾ ಲಫಂಗರಾ
'ಭೀಮೇಶಗ' ವಿರುದ್ಧ ನುಡಿಯುವರಾ । ಗೀ–ಗೀ

ಎಂಬ ಈ ಹಾಡಿನಲ್ಲಿ ಅವರು ದೇಶಾಭಿಮಾನಕ್ಕಾಗಿ ಹೋರಾಡಿದುದನ್ನು ಅರಿತುಕೊಳ್ಳ ಬಹುದಾಗಿದೆ.

ಒಕ್ಕಲಿಗನಿಗೆ ಅತ್ಯಂತ ಪ್ರೀತಿಯ, ಸಂತಸದ, ಉಬ್ಬಿನ ಹಾಡುಗಳೆಂದರೆ ಹಂತಿಯ ಹಾಡುಗಳು. ದುಡಿದ ದಣಿವಾರಿಸಿಕೊಳ್ಳಲು ಹೊರಬಂದ ಅಂತರಂಗದ ಹಾಡುಗಳವು. ಅಂಥ ನೂರಾರು ಪದ್ಯಗಳನ್ನು ರಚಿಸಿದ್ದುಂಟು.

ಎಂಟ ಎತ್ತಿನೊಳಗ ಬಂಟ ಮೂಡಲ ಎತ್ತ
ಗಂಟಿ ಸರಪಳಿ ಕೊರಳಾಗ । ಕಟಗೊಂಡ
ರಂಟೆಯು ಹೊಡೆದು ಉಣತಾವೊ ।

ಬಂಗಾರ ಕೊಂಬಣಸ ಬೆಳ್ಳಿಯ ಹಣೆಪಟ್ಟಿ
ಜಂಗ ಸರಗೆಜ್ಜಿ ಸರಪಳ್ಯೊ । ನಮ್ಮ ತ್ತಾ
ಮುಂಗಾರಿ ಬಿತ್ತಿ ಬರತಾವೊ ।

ಹಾದಿಯ ಹೊಲದಾಗ ನಮ್ಮ ತ್ತಾ
ಕಾಧ್ಹಿಡದ ಡರಕಿ ಹೊಡದಾವೊ । ದಾದಿಲ್ದ
ಗೋದಿಯು ಬಿತ್ತಿ ಬರತಾವೊ ।

ಸೋಬಾನದ ಹಾಡು, ಕೋಲಿನ ಹಾಡು 'ಜೋ ಜೋ' ಮಂಗಳಾರತಿ ಮೊದಲಾದ ಪಗದಳಿಗೂ ಕೊರತೆಯಿಲ್ಲ. ಕರ್ನಾಟಕದಲ್ಲೆಲ್ಲ ಜಯಭೇರಿ ಹೊಡೆದ ಕವಿಯೀತ.

ಹುಲಕುಂದದಲ್ಲಿ ಓಣಿಓಣಿಗೂ ಜನಪದ ಕವಿಗಳು ಇದ್ದರೆಂದು ತಿಳಿದು ಬರುತ್ತದೆ. ಹಾಡಿನ ರಚನೆಯಲ್ಲೂ-ಹಾಡುಗಾರಿಕೆಯಲ್ಲೂ ಸ್ಪರ್ಧೆಯೇ ನಡೆಯು ತ್ತಿತ್ತಂತೆ. ಗುರುಪಾದಪ್ಪ, ಪ್ಯಾಟಿಶೆಟ್ರು, ಪಾಂಡಪ್ಪಗೌಡ್ರು ಮೊದಲಾದ ಕವಿ ಗಳನ್ನು ಗುರುತಿಸಬಹುದಾಗಿದೆ. ಜನಪದ ಕವಿಯ ಹಾಡಿನಲ್ಲೇ ಇವರ ಹೆಸರುಗಳನ್ನು ತಿಳಿದುಕೊಳ್ಳಬಹುದಾಗಿದೆ. "....ಘನಪಂಡಿತರು ಪುರಾಣಕಾರರು । ಹನಮು ಕವಿ ಪಾಂಡಪ್ಪ ಪಾಟೀಲರು । ಚನ್ನಬಸಪ್ಪ ಪ್ಯಾಟಿಶೆಟ್ಟರು। ಜನಪದ ಕವಿ ಸಿದ್ಧರಾಯರು। ಸಣ್ಣಕವಿ ಗಿರಿಮಲ್ಲ........। ಹೆಣ್ಣ-ಗಂಡಿನ ಪದಾ ಬರಿದವರು ।"

೫. ಗುರುಪಾದಪ್ಪ (೧೮೫೨-೧೯೩೨) :

ಹುಲಕುಂದದ ಬಸಪ್ಪ ಸತ್ತಿಗೇರಿ ಅವರ ಮಗ ಗುರುಪಾದಪ್ಪನೂ ಜನಪದ ಕವಿ. ಆತ ತೀರಿಕೊಂಡು ಈಗ ೪೫ ವರುಷಗಳಾಗಿರಬೇಕು. ಉದ್ಯೋಗ ಒಕ್ಕಲುತನ, ಲಿಂಗವಂತ; ಮಕ್ಕಳಿರಲಿಲ್ಲ. ಕಲಘಟಗಿ ತಾಲೂಕ ಬೆಳ್ಳಿಗಟ್ಟಿಯಲ್ಲಿ ತೀರಿಕೊಂಡನಂತೆ. ಆಗ ಅವನಿಗೆ ೮೦ ವರುಷಗಳಿರಬೇಕೆಂದು ಆ ಊರ ಜನ ಹೇಳಿದ್ದು. ರಿವಾಯತ, ಹೋಳಿಪದ, ಮೊದಲಾದ ಹಾಡುಗಳನ್ನು ರಚಿಸಿದ್ದನಂತೆ. 'ಗುರುಪಾದ' ಅಂಕಿತ

ಬರುತ್ತದಂತೆ. ಈತನ ಹಾಡುಗಳು ದೊರಕುವುದು ಮಾತ್ರ ಅಪರೂಪವಾಗಿದೆ. ಹಾಡೊ ಗುರುಪಾದಪ್ಪ ಎಂಬ ಹೆಸರಿನವನೊಬ್ಬನಿಗೂ ಇವನಿಗೂ ಯಾವ ಸಂಬಂಧ ವಿಲ್ಲ. ಅವರಿಬ್ಬರೂ ಬೇರೆ-ಬೇರೆಯೆಂದೂ ಹೇಳುತ್ತಾರೆ.

೬. ಪ್ಯಾಟಿ ಶೆಟ್ಟರು (೧೮೭೭-೧೯೩೭) :

ಹುಲಕುಂದ ಪ್ಯಾಟಿಯಲ್ಲಿದ್ದ ಚನಬಸಪ್ಪನು ಬಣಜಿಗನಾದುದರಿಂದಲೂ ಪ್ಯಾಟಿ ಶೆಟ್ಟರು ಎಂದೇ ಜನ ಕರೆಯುತ್ತ ಬಂದಿದ್ದಾರೆ. ಈತನು ತೀರಿಕೊಂಡು ಸುಮಾರು ೪೦ವರುಷಗಳಾಗಿದೆಯೆಂದು ಹೇಳುತ್ತಾರೆ. ಆಗ ಅವನಿಗೆ ೬೦ವರುಷಗಳಿದ್ದ ವಂತೆ. ಅಂದರೆ ಈಗ ಸುಮಾರು ೧೦೦ ವರುಷಗಳ ಹಿಂದೆ ಜನ್ಮವೆತ್ತಿದ್ದು. ಊರ ಮಾರುತಿಯುನ್ನು ಹಾಡಿನಲ್ಲಿ ಸ್ಮರಿಸಿದ್ದಾನೆ. ಆತ್ಮೀಯ ಸ್ನೇಹಿತ 'ಸಿದ್ದಪ್ಪ'ನನ್ನೇ ತನ್ನ ಹಾಡುಗಳಲ್ಲಿ ಉಲ್ಲೇಖಿಸಿ 'ಸಿದ್ಧರಾಯ' 'ಸಿದ್ದಣ್ಣ' ಎನ್ನುವ ಮುದ್ರಿಕೆ ಹಾಕಿಕೊಂಡಿದ್ದಾನೆ. ಈತ ರಿವಾಯತ, ಶಾಹಿರಕಿ ಹಾಡು ರಚಿಸಿದ್ದಾನೆ. 'ಸ್ಟೇಶನ್ನ ಮಾಸ್ತರ' ಎಂಬ ಬಯಲಾಟ ಬರೆದಿದ್ದರಂತೆ. ಹೊನ್ನಮ್ಮ ಮೊದಲಾದ ಕದನ ಕವನಗಳನ್ನೂ 'ಬಕಾಸುರ' ಮೊದಲಾದ ಲಾವಣಿಗಳನ್ನೂ ರಚಿಸಿದ್ದಾನೆ. ಅದೇ ಊರಿನ ಸೈದೂ ಸಾಹೇಬನಂತೂ ಈ ಹಾಡನ್ನು ಅತ್ಯಂತ ಅಭಿಮಾನದಿಂದ ಉಬ್ಬಿ, ಕೊಬ್ಬಿ ಹಾಡುತ್ತಾನೆ,

ಏಕ ಚಕ್ರದಲ್ಲಿ ಪಂಚಪಾಂಡವರು ಇದ್ರ ತಾವು ವಸ್ತಿ ।
ಅರ್ಜುನ ಧರ್ಮ ಭೀಮ ಕುಂತಿ ವೇಷ ಹಾಕಿ ।
ಬಡಬ್ರಾಹ್ಮಣರ ಧರತಿ. . . . .
ನಾಡ ಒಳಗ ಬಹುಪಾಡ ಹುಲಕುಂದವರು ಹಾಡುವಲ್ಲಿ
ಚಡತಿ ವೈರಿಗಳು ಕೊಡಲೆಂಗ್ಹಂತಾರ ಜಡತಿ
ಸಿದರಾಯಗ ಒಲಿದಾನ ಮಾರುತಿ......

೭. ಪಾಂಡಪ್ಪಗೌಡ್ರು (೧೮೭೭-೧೯೪೭) :

ಹುಲಕುಂದದ ಪಾಂಡಪ್ಪಗೌಡ್ರು ತೀರಿಕೊಂಡು ಇಂದಿಗೆ ೩೦ ವರ್ಷ ಕಳೆದಿವೆ. ಆಗ ಆತ ೭೦ ವರುಷದವನಿದ್ದನಂತೆ. ಬಿರಾದಾರ ಪಾಟೀಲನೀತ-ರಡ್ಡಿ. ಉದ್ಯೋಗ ಒಕ್ಕಲುತನ. ದೇವರ ಮೇಲೆ ನೂರಾರು ಹಾಡು ರಚಿಸಿದ್ದಾನೆ 'ಹನಮುಕವಿ' ಎಂಬ ಮುದ್ರಿಕೆ ಇಟ್ಟುಕೊಂಡಿದ್ದಾನೆ.

೮. ಕಂದ ಭೀಮುಕವಿ (ಜನನ ೧೯೩೧) :

ಹುಲಕುಂದದಲ್ಲಿ ಜನಪದ ಕಾವ್ಯಸೆಲೆ ಇನ್ನೂ ಬತ್ತಿಲ್ಲ ಎನ್ನುವುದಕ್ಕೆ ಈ 'ಕಂದಭೀಮುಕವಿ' ಸಾಕ್ಷಿ. ಭೀಮುಕವಿಯ ಕಂದನೇ ಅಂದರೆ ಬೆಟಗೇರಿ ಬಸಪ್ಪನ

ಮಗನೇ ಈ ಸಂಗಪ್ಪ. ಇವನು ಹುಟ್ಟಿದ್ದು ೫-೧-೧೯೩೧ ರಲ್ಲಿ. ಕನ್ನಡ ೭ನೆಯ ಈಯತ್ತೆ ವರೆಗೆ ಅಭ್ಯಾಸವಾದರೂ ಮುಂದೆ ಕಲಿಯುವ ಭಾಗ್ಯ ದೊರಕಲಿಲ್ಲ. ತಂದೆ-ತಾಯಿಗಳಂತೆ ತಾನೂ ಹಾಡಲು, ಅಂಥ ಹಾಡು ರಚಿಸಲು ಮಾತ್ರ ಕಲಿತುಕೊಂಡ. ತಂದೆಯ ಜೊತೆಗೆ ಊರೂರು ಅಡ್ಡಾಡಿದ. ತನ್ನದೇ ಆದ ಮೇಳವೊಂದನ್ನು ಕಟ್ಟಿಕೊಂಡು ಕೈಯಲ್ಲಿ ಡಪ್ಪು ಹಿಡಿದು ಕುಣಿಯುತ್ತ ಈಗಲೂ ಹಾಡು ಹೇಳುತ್ತಾನೆ. ಹಾಗೆಯೆ ಹೊಸಹೊಸ ಹಾಡೂ ಕಟ್ಟುತ್ತಾನೆ. ಡೊಳ್ಳು, ಸೋಬಾನ, ಜೋಜೋ, ಲಾವಣಿ- ಹೀಗೆ ಸಾವಿರ ಮೇಲ್ಪಟ್ಟು ಹಾಡುಗಳನ್ನೂ ರಚಿಸಿದ ಶ್ರೇಯಸ್ಸು ಈ ಕವಿಗಿದೆ.

ಹೊಟ್ಟೆಯಪಾಡಿಗಾಗಿ ಮೂಲ ಉದ್ಯೋಗ ನೇಕಾರಿಕೆಯನ್ನು ಬಿಟ್ಟು ಖಾದಿ ಗ್ರಾಮೋದ್ಯೋಗ ಸಂಘದಲ್ಲಿ ಕಾರಕೂನನಾಗಿ ಸೇವೆಸಲ್ಲಿಸುತ್ತಿದ್ದಾನೆ. ಅದೇ ಊರ ಭೀಮನ ಗದ್ದುಗೆಯ ದರ್ಶನದ ಭಾಗ್ಯವಿಶೇಷ- ತಂದೆಯಂತೆ ಈತನಿಗೂ. ಅಂತೆಯೇ 'ಕಂದಭೀಮಕವಿ' ಈತನ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ.

ನಾಡವಳಗ ಹುಲಕುಂದ ಹುಡುಗರ ।
ಜೋಡಿಲೆ ಇರುವರ ಹಾಡ ಹಾಡುವರ ।
ಕಂದ ಭೀಮನ ಪದಗೋಳ

ಅವರ ಹತ್ತಾರು ಹಾಡುಗಳಲ್ಲಿ ನನ್ನನ್ನು ಆಕರ್ಷಿಸಿದ ಹಾಡು ಇಂತಿದೆ :

ಏ ಯವ್ವ ಹ್ಯಾಂಗ ಮಾಡಲ್ಯಾ ।
ಇಂಥವ್ರ ಕೂಡ ಏಸ್ದಿನ ಬಾಳೆ ಮಾಡಲ್ಯಾ ॥ಪ॥

ಕುರ್ಪಿಯ ಹಿಡಿಲಿಲ್ಲ ಹಿಡಿಮೇಂವ ತರಲಿಲ್ಲ ।
ಕಡದ ಮಜ್ಜಿಗಿಸೆಲ್ಲಾ ಕುಡದೇನಂತsತೆವ್ವ ॥೧॥

ಬುಟ್ಟ್ಯಾಗ ಜ್ವಾಳಿಲ್ಲ ತಟ್ಯಾಗ ರೊಟ್ಟಿಲ್ಲ ।
ಮಾಟಾ ಮಾಡಾವ್ರಕೂಡ ಸೆಟದಾಡತsತೆವ್ವ ॥೨॥

ಬಾಯಾಗ ಹಲ್ಲಿಲ್ಲ ಬಾಗಲಕ ತೋಳಿಲ್ಲ ।
ಬಾದಾಮಿ ತೇರ ಎಳದೇನಂತsತೆವ್ವ ॥೩॥

ದುಡಿಲಾಕೆ ಬರಲಿಲ್ಲ ಸಡುವ ಮಾತ್ರ ಬಿಡಲಿಲ್ಲ ।
ಕಣ್ಣ ಕೊಣದಕ ಎಡಎಡವಿ ಬೀಳತsತಿ ॥೪॥

ಇರಲಾಕ ಮನಿಯಿಲ್ಲ ಉಡಲಾಕ ಸೀರಿಲ್ಲ ।
ಬೆಂಕಿ ಹಚ್ಚಲಿ ನನ್ನ ಬಾಳ್ವೆಕೆಲ್ಲಾ ॥೫॥

ಹುಟ್ಟಿಬಂದ ಮ್ಯಾಲ ಘಟ್ಟಿಯಾದೆ ಇದಕೆಲ್ಲಾ ।
ಹುಲಕುಂದ ಕಂದಭೀಮನ ವರವ ಇದ್ರ ಸಾಕ ॥೬॥

ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಒಂದುಹಳ್ಳಿ ದೇಗಾವ. ಅದನ್ನು ದೇಗಾಯಿ ಎಂದೇ ಕರೆಯುವರು. ಯಾವ ದಿಕ್ಕಿನಿಂದ ಹೋದರೂ ಕಾಲುನಡಿಗೆಯಿಂದಲೇ ಈ ಊರು ಸೇರಬೇಕು. ಹಳ್ಳಿಯೆಂದರೆ- ಹಳ್ಳಿ, ಸಣ್ಣಹಳ್ಳಿ. ಗುಡ್ಡದ ಓರೆಯ ಬದಿಗೆ, ಬೆಣ್ಣೆತೊರೆಯ ಮಗ್ಗುಲಲ್ಲಿ ನಿಸರ್ಗರಮ್ಯವಾಗಿದೆ; ತೋಟಪಟ್ಟಿಗಳಿಂದ ಸಮೃದ್ಧವಾಗಿದೆ. ಅನೇಕ ಕಲಾಕಾರರಿಗೂ, ಕವಿಗಳಿಗೂ, ಕುಸ್ತಿಪಟುಗಳಿಗೂ ಜನ್ಮಭೂಮಿಯಾಗಿದೆ. ಜನಪದಕವಿಗಳಿಗಂತೂ ನೆಲೆವೀಡು. ಅವರಲ್ಲಿ ಮಹಾಲಿಂಗಪ್ಪ ಈತನ ಶಿಷ್ಯರಾದ ಗುಂಡಪ್ಪ ಮತ್ತು ಹಜರತರು ಪ್ರಖ್ಯಾತಿ ಪಡೆದವರು.

೯. ಮಹಲಿಂಗ (೧೮೪೨-೧೯೩೨) :

ದೇಗಾವದ ಅಚಲೇರಿ ಮನೆತನದ ಬಸಪ್ಪನ ಹೊಟ್ಟೆಯಿಂದ ಈ ಮಹಲಿಂಗ ಕವಿ ಹುಟ್ಟಿದ್ದು; ಸುಮಾರು ೧೮೪೨ರಲ್ಲಿ. ಉದ್ಯೋಗ ಒಕ್ಕಲುತನ; ಲಿಂಗವಂತ. ಕಲಿತದ್ದು ಒಂದೆರಡಕ್ಷರ ಮಾತ್ರ- ಅದೂ ದನಕಾಯುತ್ತ. 'ಎಮ್ಮಿ ಡುಬ್ಬದ ಮ್ಯಾಗ ಕುತ್ತ ಕಲತವರ್ರಿ ನಮ್ಮ ಗುರಗೋಳು' ಎಂದು ಅವರ ಶಿಷ್ಯ ಹಜರತ ಹೇಳಿದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆದರೂ ಮಹಲಿಂಗನ ಪಾಂಡಿತ್ಯಕ್ಕೆ ಕೊರತೆ ಇದ್ದಿರಲಿಲ್ಲವಂತೆ. ಆಳವಾದ ಅನುಭವದೊಂದಿಗೆ, ಅಲ್ಲಲ್ಲಿ ವಿಷಯಗಳನ್ನರಿತುಕೊಂಡವನಾಗಿದ್ದರಿಂದಲೂ, ಸಹಜಪ್ರತಿಭೆಯಿದ್ದುದರಿಂದ ಸಾವಿರಾರು ಹಾಡು ಕಟ್ಟಿದ್ದನ್ನು ನೆನೆಸಿಕೊಂಡಾಗ 'ಕುಱಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂಬ ಮಾತಿನ ಸತ್ಯತೆಗೆ ಈಗಲೂ ಸಾಕ್ಷಿ ನೀಡಬಹುದಾಗಿದೆ. ಜನಪದ ಧಾಟಿ ಹುಟ್ಟಿದಾರಭ್ಯವೇ ಲಭಿಸಿದ್ದುದರಿಂದ ಮಹಲಿಂಗಪ್ಪ ಸ್ವತಃ ಹಾಡುಗಾರನೂ ಇದ್ದನಂತೆ. ತನ್ನ ಜೊತೆಗೆ ಹಾಡುತ್ತಿದ್ದ ಮಹಾರುದ್ರಪ್ಪನೂ ಅಷ್ಟೇ ಕೋಮಲಕಂಠದವನಿದ್ದುದರಿಂದ ತಾನು ರಚಿಸಿದ ಹಾಡುಗಳಲ್ಲಿ 'ಮಹಾಲಿಂಗ-ಮಹಾರುದ್ರ' ಎಂಬ ಮುದ್ರಿಕೆ ಹಾಕಿಕೊಂಡು ಆ ಮಹಾರುದ್ರನನ್ನೂ ಸ್ಮರಿಸಿದ್ದಾನೆ. ಮಹಲಿಂಗಪ್ಪನ ಚಿಗವ್ವನ ಮಗನೇ ಈ ಮಹಾರುದ್ರ. ಸೊಲ್ಲಾಪುರ ಜಿಲ್ಲೆಯ ಕೆಸರಜಾವಳಗಿ ಗ್ರಾಮದವನೆಂದು ತಿಳಿದು ಬರುತ್ತದೆ. ಮಹಲಿಂಗಪ್ಪ ಯಾವಾಗಲೂ ತನ್ನ ಜೊತೆಗೆ ಹಲವಾರು ಶಿಷ್ಯರನ್ನು ತರಬೇತಿಗೆಂದು ಇಟ್ಟುಕೊಂಡಿರುತ್ತಿದ್ದನಂತೆ. ಇದರಿಂದಾಗಿ ಅದೇ ಊರ ಗುಂಡಪ್ಪ ಮತ್ತು ಹಜರತ ಎನ್ನುವವರು ಅಂಥ ಶಿಷ್ಯರಲ್ಲಿ ಅತ್ಯಂತ ಪ್ರಸಿದ್ಧಿಪಡೆದವರಾಗಿದ್ದಾರೆ.

'ಹರದೇಶಿ' ಹಾಡು ರಚಿಸುವಲ್ಲಿ ಮಹಲಿಂಗಪ್ಪನ ಜಾಣ್ಮೆ ಎದ್ದುಕಾಣುತ್ತದೆ. ರಿವಾಯತ ಪದಗಳನ್ನೂ ಸೃಷ್ಟಿಸಿದ್ದುಂಟು. ಈ ಭಾಗದಲ್ಲಿ ಇಂಥ ಹಾಡುಗಳನ್ನು ಸೃಷ್ಟಿಸಿದವರಲ್ಲಿ ಈತನೇ ಮೊದಲಿಗನೆಂದು ಜನ ಹೇಳುತ್ತಾರೆ. ತುರ್ಕರ ಗುರು 'ಮುರ್ಶದ' ಎನ್ನುವವರು ಮೋಹರಮ್ ಪದಗಳಿಗೆ ಬೇಕಾದ ಶಾಸ್ತ್ರವನ್ನೂ, ಕಥೆಯನ್ನೂ ಈ ಮಹಲಿಂಗಪ್ಪನಿಗೆ ಹೇಳಿಕೊಡುತ್ತಿದ್ದರಂತೆ. ಸಾವಿರಾರು ಜನಪದ

ಹಾಡುಗಳಲ್ಲದೆ ದಪ್ಪಿನಾಟಗಳನ್ನೂ ಬರೆದಿದ್ದಾನೆ. ಈಗಲೂ ಈ ಭಾಗದಲ್ಲಿ ಅವುಗಳನ್ನು ಆಡುತ್ತಾರೆ. ಅನಸೂಯಾ, ಸಿವಮ್ಮ, ಗೋರಖಮಚ್ಛೇಂದ್ರ, ಮೇಶಾ ಮೊದಲಾದ ಸಣ್ಣಾಟಗಳು ಪ್ರಮುಖವಾದವುಗಳು. ಇವರ ಹಾಡುಗಳಿಂದು ದೊರಕುವುದು ಅಪರೂಪವಾಗಿದೆ.

ಶ್ರೀಗುರುರಾಯರ ಅರಮನಿಯಾ ।
ಕಷ್ಟಮಾಡಿ ಮನಿಕಟ್ಟಲು ಕೆದರ್‍ಯಾರ ।
ಎಷ್ಟ ಗುಂಭ ಪಾಯಾ ।
ಪೃಥ್ವಿ ಅಪ್ ತೇಜ ವಾಯು ।
ನಿಶ್ಚಲಮನಿ ನೋಡಿ ನಿರ್ಮಲ ಕುತ್ತೇನು ।
ನಿರ್ಧಾರ ನಿರ್ಭಯಾ ॥ ಜೀ-ಜೀ
ಸದ್ಗುರು ವಿದ್ವಾಂಸಿಕ ಪ್ರಿಯಾ ॥
ಸತ್ಯೇದಕ ಉತ್ತಮ ಸವಿ ಅಮೃತ ।
ಆನಂದ ಉದಯಾ ।
'ನೂಲಿಂಗ-ನೂರುದ್ರ' ಕವಿಯಾ ।
ಗುರುತೆರನರಿ ಪರಿಪೂರ್ಣದಿ ।
ಭಜಿಸುವೆ ಅರುಣೋದಯಾ ॥ ಜೀ-ಜೀ

೧೦. ಗುಂಡಪ್ಪ (೧೮೭೭-೧೯೨೭) :

ದೇಗಾವದ ಮಹಲಿಂಗಪ್ಪನ ಶಿಷ್ಯರಲ್ಲೆಲ್ಲ ಹೆಚ್ಚು ಪ್ರಸಿದ್ಧಿಪಡೆದ ಕವಿಯೆಂದರೆ ಈ ಗುಂಡಪ್ಪ. ಗುರುವಿನನ್ನೂ ಮೀರಿಸಿದ ಕಾವ್ಯಶಕ್ತಿ ಇವನದಾಗಿತ್ತು ಎಂದು ಈ ಭಾಗದ ಜನ ಅಭಿಮಾನದಿಂದ ಹೇಳುತ್ತಾರೆ. ಗುಂಡಪ್ಪನಿಂದಾಗಿ ದೇಗಾವ ಇನ್ನೂ ಪ್ರಸಿದ್ಧಿ ಪಡೆಯಿತು. ಗುರುವಿನಲ್ಲಿ ಅಗಾಧ ಶ್ರದ್ಧೆಯನ್ನಿಟ್ಟ ಕವಿಯೀತ.

ದೇಗಾವದ ಹೆಬ್ಬಾಳಮನೆತನದ ಪರ್ವತಪ್ಪನ ಮಗನೇ ಈ ಗುಂಡಪ್ಪ. ಕಲಿತದ್ದು ಗ್ರಾಂವಠಿ ಇನೇ ಇಯತ್ತೆ— ಅದೂ ಮೋಡಿ. ಮರಾಠಿ, ಉರ್ದು ಭಾಷೆಗಳನ್ನು ಬಲ್ಲವನು, ಲಿಂಗವಂತ. ಷಟ್‌ಸ್ಥಲಶಾಸ್ತ್ರದಲ್ಲಂತೂ ಆಳವಾದ ಜ್ಞಾನಪಡೆದು ಕೊಂಡಿದ್ದನು. ಪುರಾಣ ಪುಣ್ಯಕಥೆಗಳನ್ನಲ್ಲದೆ ಸರ್ವಧರ್ಮದ ತತ್ತ್ವಗಳ ತಿಳುವಳಿಕೆ ಮಾಡಿಸಿಕೊಂಡಿದ್ದನು. ಇವೆಲ್ಲವುಗಳ ಹಿನ್ನೆಲೆಯಲ್ಲಿ ಸಾಮಾಜಿಕನೀತಿ ಬೋಧಿಸುವ ನೂರಾರು ಹಾಡು ರಚಿಸಿ ಕೃತಕೃತ್ಯನಾಗಿದ್ದಾನೆ. 'ಹರದೇಶಿ' ಹಾಡುಗಳಿಗಂತೂ ಲೆಕ್ಕವಿಲ್ಲ. ನೂರಾರು ಲಾವಣಿ, ಭಜನಿ ಪದಗಳನ್ನೂ ರಚಿಸಿದ್ದಾನೆ. ರಿವಾಯತ ಬರೆದಿದ್ದಾನೆ. 'ಅಮೃತರಾಜ' ಎಂಬ ಆಟವನ್ನು ಬರೆದಿದ್ದು— ಅದು ಈ ಭಾಗದಲ್ಲಿ

ಜನಪ್ರಿಯ ಸಣ್ಣಾಟವಾಗಿದೆ. ಈತನ ಉದ್ಯೋಗ – ವ್ಯಾಪಾರ. ಚಿಕ್ಕದಾದ ಕಿರಾಣಿ ಅಂಗಡಿಯೊಂದನ್ನು ಹಾಕಿಕೊಂಡು ಹೊಟ್ಟೆ ನೋಡಿಕೊಂಡು ತನ್ನ ಅನುಭವದ ನುಡಿಗಳನ್ನು ಹಾಡಿನಲ್ಲಿ ಹೊಸೆಯುತ್ತಿದ್ದನು. ಗುರುವಿನ ಸಮ್ಮುಖದಲ್ಲಿಯೇ ಕಾಲ ಕಳೆಯುತ್ತಿದ್ದನಂತೆ. ಆತನ ಹಾಗೆಯೇ ತನ್ನ ಹಾಡುಗಳ ಕೊನೆಗೆ 'ಗುಂಡು-ಭದ್ರ' ಎಂಬ ಮುದ್ರಿಕೆ ಹಾಕಿಕೊಂಡದ್ದುಂಟು. ಕೆಲ ಹಾಡುಗಳಲ್ಲಿ ಗುಂಡಪ್ಪ ಎಂದೂ ಇದೆ. ಭದ್ರಪ್ಪ ಈ ಗುಂಡಪ್ಪನ ಅಣ್ಣನಂತೆ. ಅವನ ಕಂಠವೂ ಕೋಮಲವಿತ್ತಂತೆ. ಈತನ ಜೊತೆಗೆ ಹಾಡುತ್ತಿದ್ದುದರಿಂದ ಕವಿ 'ಗುಂಡು–ಭದ್ರ' ಎಂದು ಮುದ್ರಿಕೆ ಹಾಕಿಕೊಂಡಿದ್ದಾನೆ.

ಗುಂಡಪ್ಪ ಹುಟ್ಟಿದ್ದು ನೂರುವರುಷಗಳ ಹಿಂದೆ. ಆತ ತೀರಿಕೊಂಡೇ ಈಗ ೫೦ ವರುಷಗಳಾದವಂತೆ. ಆಗ ಅವನು ೫೦ ವರುಷದವನಿದ್ದನೆಂದು ಹೇಳುತ್ತಾರೆ. ಅಂದಾಗ ಸುಮಾರು ೧೮೭೭ ರಲ್ಲಿ ಕವಿ ಹುಟ್ಟಿರಬೇಕು. ಅಣ್ಣ ಸತ್ತ ೬–೭ ವರುಷಕ್ಕೆ ಈತ ಸತ್ತನಂತೆ. ಈ ಭಾಗದಲ್ಲಿ ಎಲ್ಲ ಹಾಡುಗಾರರೂ ಗುಂಡಪ್ಪನ ಹಾಡುಗಳನ್ನು ಬಲ್ಲವರು. ತತ್ತ್ವದಲ್ಲಿ, ಪ್ರಾಸದಲ್ಲಿ, ಏರು-ಇಳುವುಗಳ ಹೊಂದಾಣಿಕೆಯಲ್ಲಿ, ಪದಗಳ ಬೆಡಗಿನಲ್ಲಿ, ವಿಷಯನಿರೂಪಣೆಯಲ್ಲಿ ಈತನ ಹಾಡುಗಳು ತಮ್ಮದೇ ಆದ ವೈಶಿಷ್ಟ್ಯ ಮೆರೆದಿವೆ. ಖ್ಯಾಲಿಗಳಂತೂ ಅಪ್ರತಿಮವಾಗಿವೆ.

ಕತ್ತಲಾಗಿ ಆಯೆ ನೀ ಜ್ವಾಳದ ಒಳಗಿನ ಕೊಚ್ಚ ।
ಹಸನಾಗಲ್ದರ ನಿನ ಮೂಗಿಗಿ ಹಾಕ್ತೇನಿ ಕಚ್ಚ ।
ನಿಮ್ಮ ಹೆಂಗ್ಸರ ಕುಲಾನS ಹುಚ್ಯSS ।
ನೆಟ್ಗ ಅಡಲಾಕ ಬರುದುಲ್ಲ ನುಚ್ಚS ।
ತಲಿಬೋಳ್ಸಿ ಹಚ್ಚೇನ ಬೆಚ್ಚS ।
ಕದ್ದತಿಂದ ಬಂದಾವ ಪುಚ್ಚ ॥ ೧ ॥

ಸಾಕು ಸಾಕು ಈ ಭವ ಇನ್ಯಾತಕೊ । ಪ
ಪಂಚಕಲ್ಯಾಣಿ ಘೋಡಾ ದೇಖೊ ।
ರಜತಮಸತ್ವ ಗುಣಕ ಗೆರೆ ಹಾಕೊ ।
....
ಪಯಿಲೆ ಪ್ರತಮ ಹುಟ್ಟಿದೆ ಏಕೊ ।
ಏಕಕ ಮುಂದ ಆಗೇದ ಲಾಖೊ ।
ಲಾಕ ಏಕಕೂಡಿ ಲೋಕ ಗೆದಿಯುವಾಗ
ಇದ್ದ ಮಂದಿಯನು ಉದ್ದ ಹುರಿಲಾಕೊ ।
ಗುರು ಶಿಷ್ಯರದು ಒಂದೆ ತೂಕೊ ।
ದೀಕ್ಷವಾಗಿ ಮೋಕ್ಷಕ ಹೋಗುದಕೊ ।

> 'ಗುಂಡು-ಭದ್ರ'ನ ಅನುಭವ ಖ್ಯಾಲಿ ।
> ಸಾಲಬರದು ನೀ ಸಮಾಜ ತಿಳಕೊ ।

ಕವಿ ಖ್ಯಾಲಗಳನ್ನು ನಿಂತನಿಂತಲ್ಲಿಯೇ ರಚಿಸುತ್ತಿದ್ದನಂತೆ. ಅಲ್ಲಿಯ 'ಒಗಟು' ಅರ್ಥದ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ.

> ನಮ್ಮ ಮಾವ ಕೊಟ್ಟಿದ ಮಾವಿನಕಾಯಿ ।
> ಬಲೇ ಸ್ವಾಮಿ ತಿಲ್ಲಕವಿಲ್ಲಾ ಬಾಯಿ ।
> ನಮ್ಮ ಮಾವ ಹಂಗೆ ಇಟ್ಟ ಮನಿಯಾಗ ಒಯ್ದು ।
> ಇಟ್ಟಲ್ಲೆ ಆದುವು ಅವು ಒಂದಕ ಐಯ್ದು ।
> ನನ್ನಗಂಡ ಅಂದ ಚಲೊ ಎಣಿಸು ।
> ಎಣಿಸಿದರ ಆದುವು ಪಂಚವೀಸು ।
> ಬುಟ್ಟಿ ತುಂಬಿ ಇಟ್ಟಿದ ವೋಸು ।
> ಅವ್ಯಾಲೆ ಭಾವದೇರ ।
> ತುಂಬಿದ ಬುಟ್ಟಿ ಬರಕಿದರ ।
> ಎಣಿಸಿದರ ಮೂವತ್ತಾರ ।
> ....

೧೧. ಆನಂದರಾಯ (೧೮೮೭-೧೯೩೭) :

ದೇಗಾವದ ಕೌಲಗಿ ಆನಂದರಾಯನೂ ಜನಪದಕವಿ ಇದ್ದದ್ದು ತಿಳಿದುಬರುತ್ತದೆ. ಮಾಲಿಂಗ ಹಾಗೂ ಗುಂಡಪ್ಪ ಇವರ ಸಮಕಾಲೀನನಾಗಿದ್ದನಂತೆ. ಒಕ್ಕಲುತನ ಮಾಡುತ್ತಿದ್ದ ಲಿಂಗವಂತಕವಿ- ಮೊಹರಮ್ ಹಾಡು ರಚಿಸಿದ್ದು ತಿಳಿದುಬರುತ್ತದೆ. ಸತ್ತು ೪೦ ವರುಷಗಳಾದವೆಂದೂ ಆಗ ೫೦ ವರುಷದವನಿದ್ದನೆಂದೂ ಗೊತ್ತಾಗುವುದು. ಈತನ ಹಾಡುಗಳನ್ನು ಇನ್ನೂ ದೊರಕಿಸಬೇಕಾಗಿದೆ.

೧೨. ಹಜರತಸಾಹೇಬ (ಜನನ ೧೯೦೩) :

ಕವಿ ಹಜರತ ಹುಟ್ಟಿದ್ದು ಈ ದೇಗಾವದಲ್ಲಿಯೇ. ೧೯೦೩ ರಲ್ಲಿ ಇಮಾಮ ಸಾಹೇಬ ಮತ್ತು ಮೀರಾಬಾಯಿ ಎಂಬ ಮುಸಲ್ಮಾನ ದಂಪತಿಗಳಿಗೆ ಮಗನಾಗಿ ಹುಟ್ಟಿದವನು. ಅಡ್ಡ ಹೆಸರು ಮುಜಾವರ ಎಂದಿದ್ದರೂ ಕವಿಗಾರಾ ಎಂದೇ ಕರೆಯುತ್ತಾರೆ. ಉದ್ಯೋಗ ಒಕ್ಕಲುತನವಿದ್ದರೂ ಹಾಡು ಹಾಡುತ್ತ, ರಚಿಸುತ್ತ ಊರೂರು ಅಡ್ಡಾಡುತ್ತಾನೆ. ಬಡತನದಲ್ಲಿಯೇ ಜೀವನ ಸಾಗಿಸುತ್ತಬಂದಿದ್ದಾನೆ. ಸಹವಾಸವೆಲ್ಲ ಹಿಂದುಗಳ ಕೂಡ. ಗುರು ಮಹಲಿಂಗಪ್ಪನ ಶಿಷ್ಯನಾಗಿ ಯಾವಾಗಲೂ

ಅವನ ಜೊತೆಗೆ ಇದ್ದುಕೊಂಡು ಹಾಡು ಕಲಿತುಕೊಂಡವನು. ತನ್ನ ಹಾಡುಗಳಲ್ಲಿ ಗುರು ಮಾಲಿಂಗನನ್ನು ಸ್ಮರಿಸುತ್ತಾನೆ. ಇತ್ತೀಚೆಗೆ ಅದೇ ಊರ ಶೇಖಸಾಬನನ್ನೂ ಸ್ಮರಿಸಿದ್ದಾನೆ.

ಹಜರತ ಕಲಿತದ್ದು ಮೋಡಿ. ಹಿಂದಿ-ಮರಾಠಿ-ಉರ್ದು ಮಾತನಾಡಬಲ್ಲನು. ಭಾಷೆಯೆಲ್ಲ ಕನ್ನಡ, ಲಿಪಿ ಮಾತ್ರ ಮೋಡಿ. ತನ್ನ ವಯಸ್ಸಿನ ೨೫ರಲ್ಲೇ ಹಾಡು ಕಟ್ಟಲು ಪ್ರಾರಂಭಿಸಿದನಂತೆ. ಇಂದು ೭೪ರ ಇಳಿವಯಸ್ಸಿನಲ್ಲೂ ಹೊಸಹೊಸ ಹಾಡು ರಚಿಸುತ್ತಾನೆ. ಅಷ್ಟೇ ಸಂತೋಷದಿಂದ ಹಾಡುತ್ತಾನೆ. 'ಹರದೇಶಿ' ಹಾಡುಗಳನ್ನೇ ಹೆಚ್ಚಾಗಿ ಬರೆದಿದ್ದಾನೆ. 'ಸಜೀವ ಸತ್ವಪರೀಕ್ಷಾ' ಎಂಬ ಡಪ್ಪಿನಾಟವನ್ನು ರಚಿಸಿದ್ದಾನೆ. ರಿವಾಯತ, ಹಂತಿಹಾಡು, ಲಾವಣಿ, ಡೊಳ್ಳಿನ ಹಾಡು ಹೀಗೆ ಜನಪದದ ಹಲವಂದದ ಹಾಡು ರಚಿಸಿ 'ಕವಿಗಾರ' ಎಂದು ಪ್ರಸಿದ್ಧಿಪಡೆದಿದ್ದಾನೆ. ಇಷ್ಟಾದರೂ ಆತ ಕಷ್ಟದಿಂದಲೇ ಬಾಳುವಂತಾಗಿದೆ. ಇದು ಕಲಾಕಾರರಿಗೆ ಅಂಟಿಕೊಂಡು ಬಂದಿರುವ ರೋಗ ಎನಿಸುತ್ತದೆ. ಆಳಂದ ತಾಲೂಕಿನ ಬಾಧನಕ್ಕೆ ಇಳಿದು ೭-೮ ಮೈಲು ನಡೆದುಕೊಂಡೇ ಈತನ ಊರು ಮುಟ್ಟಿದೆವು. ಹಜರತನ ಮನೆ ಹೊಕ್ಕಾಗ ನಮ್ಮ ವಿಷಯ ಕೇಳಿ ಹೊರಬಂದ ಕವಿಗೆ ಎಲ್ಲಿಲ್ಲದ ಆನಂದ, ಕಣ್ಣೀರು ಸುರಿಸಿ ತನ್ನ ಬಾಳಿನ ಗೋಳನ್ನು ತೋಡಿಕೊಂಡರೂ, ಸಂತೋಷಭರಿತನಾಗಿ ಹಾಡು ಹಾಡಿ, ಮಾಹಿತಿ ನೀಡಿ ನಮ್ಮನ್ನು ತಣಿಸಿದ. ಅದೇ ಊರ ಅಬ್ದುಲ್‌ಸಾಹೇಬ, ಹನುಮಂತಪ್ಪ, ಆಳಂದ ಶಿವಾಜಿ, ಹಿಪ್ಪರಗಿ ಶಾಣಪ್ಪ, ತಂಬಾಕವಾಡಿ ಶಿವಮ್ಮ ಮೊದಲಾದವರು ಈ ದೇಗಾವಿ ಕವಿಗಳ ಹಾಡುಗಳನ್ನು ಹಾಡುತ್ತಾರೆ.

ಶ್ರೀಗಣಪದ ಹಾಡುವೆ ಸುರುವಿಗೆ
ಶ್ರೀಗಣಪದಗನಂತ ಪದ ಹಾಡಂತ ಹೇಳ್ಯಾನ ಗುರುವೇ ಜೀ-ಜೀ
ಗುರುವೆ ಗತಿಯೆಂದು ಶ್ರುತಿ ಸಾರುತಿವೆ
ಗುರುವಿನ ಹೊರತ ಇನ್ನ್ಯಾರ ನಮ ನಿಮಗ ಪರೋಪಕಾರವೇ ಜೀ-ಜೀ
ಮಾಲಿಂಗ ಮಾರುದ್ರನ ಅರುವೆ ।
ಗುರ್ತು ತಿಳಿದು '**ಹಜರತ**' ಹಿಡದ ಗುರುಜ್ಞಾನದ ಹತ್ಯಾರವೇ ಜೀ-ಜೀ

ಮಟಕಾ ಮೊದಲಾದ ವ್ಯಸನಗಳಿಗೆ ಬಿದ್ದು ಜನ ಹೇಗೆ ಹಾಳಾಗುತ್ತಾರೆ ಎನ್ನುವುದನ್ನು ಕವಿ ಮಾರ್ಮಿಕವಾಗಿ ಹಾಡಿದ್ದಾನೆ.

ಆಡ್ತ್ಯೋ ಮಟಕಾ । ಅಮೃತ ಘಟಕಾ ॥ಪ॥
ತೇರೆ ತಕದೀರ ಹೈರೆ ಘುಟಕಾ ।
ಪೈಲೆನೆ ಬಾಹತ್ರಿ ಖೋಡಿ ತಿರವ್ಯಾತ್ರಿ ।
ನಂಬರ ತಿರಗಿ ಕುಂತಾದೊ ಖಟಕಾ ॥೧॥

ರಾತ್ರಿ ಲಾಟ್ರಿ ಹೊಡ್ದು ಲಾಕಿಟ ಹಾಕಬೇಕಂದಿ ।
ಮುಂಜಾನೆದ್ದ ಜಾಕೀಟ ಘಡೀ ಮಾರಿ ।
ಕುಡದೀದಿ ಚಹಾದೊಂದ ಘುಟಕಾ ॥೨॥

ನಿಶಾಬಾಜಿ ರಂಡಿಬಾಜಿ ಜುವಾಬಾಜಿಗ ।
ಚಪ್ಪಲ ಬಡಿರೊ ಚಟಕ ಜಂಪಾಮೂರ ಬಾಜಿದಾಗ ।
ಹೊಲಾ–ಮನಿ ಹೊಂಟಹ್ವಾದುವೊ ॥೩॥

ಹೊಟಲ್ದಾಗ ಮುಸುರಿ ಬಳದ್ರ ಅನ್ನ ಸಿಕ್ಕಿಲ್ರ್ಯ್ರ ತಟಕ ।
ಹೊನ್ನ-ಹೆಣ್ಣ-ಮಣ್ಣ ತಿಳಿದ ನೋಡ್ರ್ಯ್ರ ಘಟಕ ।
ಹಣ ಹೋದವ್ಯಾಲ ಗುಣಾನೇ ಹೋಯಿತು ॥೪॥

ಹೆಣದ ಮುಂದ ನೊಣಾ ಹೊಡಿಕೊಂತೊ ಮಟಕಾ ॥
ಗಂಡಹೆಣ್ಣಿಗಿ ಮಟಕಾ ಗಂಡದೆವ್ವ ಬಡಕೊಂಡು ॥
ಉಂಡುಳದುದ್ದ ಒಡ್ದ ಹೋಗೋದ್ರಿ ಚಟಕಾ ॥೫॥

ಪುಂಡ ದ್ಯಾಗಾಯಿ ಹಜರತ ಕವಿ ಹೇಳ್ತಾರ
ತಿರಂಗಿ ಝೇಂಡಾ ಒಯ್ದು ಹಚ್ಚೀರಿ –ವಿರಕ್ತಮಟಕ ॥೬॥

೧೩. ಅಂಬಾರಾಯ (ಜನನ ೧೯೩೭) :

ದೇಗಾವದ ಕೊಡ್ಲಹಂಗರಗಿ ಮನೆತನದ ಭೀಮಣ್ಣ ಮತ್ತು ಸಿದ್ದಮ್ಮ ಅವರ ಏಕಮಾತ್ರ ಪುತ್ರ, ಈ ಅಂಬಾರಾಯ. ಅವನಿಗೀಗ ೪೦ವರುಷಗಳು. ಉದ್ಯೋಗ ಒಕ್ಕಲುತನ. ಶಿಕ್ಷಣವಂತೂ ಇಲ್ಲ. ಹಾಡಿನ ಗತ್ತು, ತಾಳ, ಲಯ ರೂಢಿಸಿಕೊಂಡು ಆ-ಈ ಮೇಳಗಳಲ್ಲಿ ಹೊಕ್ಕಾಡಿ ಹಾಡು ಕೇಳಿ ಕೇಳಿ ತಾನೂ ಅಂಥ ಹಾಡು ರಚಿಸಹತ್ತಿದನು. ಆ ಊರ ಪರಿಸರವೂ ಅಂತಹದು. ಅಲ್ಲಿ ಹಾಡು ಕಲಿಸುವವರಿಗೂ ಕಲಿಯುವವರಿಗೂ ಕೊರತೆಯಿಲ್ಲ. ತನ್ನ ೨೫ನೆಯ ವಯಸ್ಸಿನಲ್ಲಿ ಹಾಡು ರಚಿಸಹತ್ತಿದನಂತೆ.

ಅಂಬಾರಾಯನನ್ನು ಪ್ರತ್ಯಕ್ಷ ನೋಡಿದವರಿಗೆ ಈತ ಕವಿ ಎಂದರೆ ಯಾರೂ ನಂಬಲಾರರು. ಅಷ್ಟು ಸರಳ. ಸಾದಾಜೀವಿ. ಸ್ವಸಂತೋಷಕ್ಕಾಗಿ, ದುಡಿದ ದಣಿವು ಆರಿಸಿಕೊಳ್ಳಲು ಈ ಹಾಡು ರಚಿಸುತ್ತಿರುವೆ ಎನ್ನುತ್ತಾನೆ. ಈತನ ಹಾಡುಗಳನ್ನು ಅದೇ ಊರ ಭಾಗಪ್ಪ ಮತ್ತು ೧೧ವರುಷದ ರಾಜಾ ಸುಶ್ರಾವ್ಯವಾಗಿ ಹಾಡುತ್ತಾರೆ. ಭಜನೆ, ಮೊಹರಮ್, ಲಾವಣಿ ಹಾಗೂ ಹರದೇಶಿ ಹಾಡುಗಳನ್ನು ರಚಿಸಿದ್ದಾನೆ. ಶರಣರ ಚರಿತ್ರೆಗಳನ್ನೂ, ಹಲವಾರು ಖ್ಯಾಲಗಳನ್ನೂ ರಚಿಸುವಲ್ಲಿ ಅಪಾರ ಶ್ರದ್ಧೆ. 'ಹುಚ್ಚ ಅಂಬಾರಾಯ' 'ಕೂಸ ಅಂಬಾರಾಯ' ಎಂಬ ಮುದ್ರಿಕೆ ಈತನ ಹಾಡುಗಳಲ್ಲಿ ಬರುತ್ತವೆ.

ಬಂಬಯಿ ಮಟಕ ಎಂತಾ ಘಟಕ । ಜಗ ಎಲ್ಲ ಮಾಡ್ಯಾದ ಅಟಕ ।
ಚಹಾ ಕುಡಿಲಾಕ ಸಿಗಲಿಲ್ಲ ಗುಟಕ । ಜೀ–ಜೀ....

ಹೊಲಮನಿ ಅಂತು ಉಳಿಲಿಲ್ಲ ತಟಕ । ಮೆಂಬ್ರಾಗಿ ನಂಬ್ರ
ಹಚ್ಚಲಾಕ ಓಡ್ಯಾಡಿ ।
ಬಂದು ಒಯ್ತಾರ ಮಟಕ ಎಂಥ ಘಟಕ । ಜೀ–ಜೀ....

ಕೇಳಿಕೇಳಿ ತೆಲಿಹಿಡದದ ಚಿಟಕ । ಬರ್‍ರಂಗೆ ಬರ್‍ತಾರ ಮಧ್ಯಾಹ್ನ ಊಟಕ ।
ಮಡದಿ ಕೊಳ್ಳಾಂದ ಗುಳ್ಳ ಮತ್ತಿಯಿಟ್ಟ । ಜೀ–ಜೀ....

ತಿಂಬವಗ ಅನಬೇಕ ಕುರುಸಾಲ ಕಟುಕ । ಕಿಸೆ ಖಾಲಿ ಆಗ್ಯಾದ ಪಟಪಟಕ।
ತಲಿಮ್ಯಾಗಿನ ಟೊಪ್ಪಿಗಿ ಇಲ್ಲೊ ಹಟಕ । ಜೀ- ಜೀ....

ಆಡೊ ಸೂಳಿಮಗನ ಕೈಯಾಗ । ಒಂದಿನಾ ಬರ್‍ತದ ಕಟಬಾನ ಸೊಟಗ ।
ದ್ಯಾಗಾಯಿ ಕವಿಗೋಳು ಆವ ಚುಟಮುಟಕ । ಜೀ–ಜೀ....

ಕುಡದಂಗ ಆಗಬೇಕು ಅಮೃತ ಗುಟಕ ।
'ಹುಚ್ಚ ಅಂಬಾರಾಯು' ಸ್ವಚ್ಛ ಹೇಳತಾರ ।
ಆಸೆವಳಗ ದೇಶ ಹೊಯಿತಲ್ಲ ಜೂಟಕ್ । ಜೀ–ಜೀ....

• •

ಅನ್ವೇಷಣ

• ಲೀಲಾವತಿ ತೋರಣಗಟ್ಟಿ

ಡಾ. ಭೈರಪ್ಪನವರ ಅನ್ವೇಷಣದ ಕಥಾತಂತ್ರ, ಅವರ ಹಿಂದಿನ ಎಲ್ಲ ಕಾದಂಬರಿಗಳಿಗಿಂತ ಭಿನ್ನವಾಗಿದೆ. ಅನ್ವೇಷಣದಲ್ಲಿ ಕಥಾನಾಯಕನನ್ನು ಕಾದಂಬರಿಯಲ್ಲಿ ಎಲ್ಲೂ ಪ್ರತ್ಯಕ್ಷತರದೆ ಅವನ ಜೀವನದಲ್ಲಿ ನಿಕಟರಾದ ಕೆಲ ವ್ಯಕ್ತಿಗಳ ಮೂಲಕ, ಅವನ ಕಥೆಯನ್ನು ಹೇಳಿಸುತ್ತಾ ಹೋಗುತ್ತಾರೆ. ಬರಿ ಕಥೆ ಹೇಳಿಸುತ್ತಾ ಹೋಗುವದಲ್ಲ, ಜೊತೆಗೆ ಆ ವ್ಯಕ್ತಿಗಳೂ ತಮ್ಮ ಕಥನವನ್ನು ಕಂಡುಕೊಳ್ಳುತ್ತಾ ಹೋಗುವುದು 'ಅನ್ವೇಷಣ'ದ ಹೊಸತಂತ್ರ.

'ಗೃಹಭಂಗ'ದ ನಂಜಮ್ಮ ಎಷ್ಟು ಜಾಣ್ಮೆಯಿಂದ ಗೃಹ ನಿರ್ವಹಿಸಿದರೂ ಅದು ಭಂಗವಾಗುತ್ತದೆ. ನುಂಗುತ್ತೇನೆಂದರೆ ಪಾರಾಗುತ್ತೇನೆಂಬ ಆತ್ಮವಿಶ್ವಾಸವುಳ್ಳ ನಂಜಮ್ಮನನ್ನೂ, ನುಂಗುತ್ತೇನೆಂಬುದರ ಕೈಯೇ ಮೇಲಾಗಿ ನಂಜಮ್ಮನ ಹಿರಿಯ ಮಗ ರಾಮನನ್ನೂ ಅಕ್ಕರೆಯ ಮಗಳು ಪಾರ್ವತಿಯನ್ನೂ ಕೊನೆಗೆ ನಂಜಮ್ಮನನ್ನೂ ನುಂಗಿ, ಕಡೆಯ ಮಗ ವಿಶ್ವನಾಥನನ್ನೂ ಮಹಾದೇವಯ್ಯನವರ ಕೈಯಲ್ಲಿ ಕೊಟ್ಟು ಕೊನೆಯ ಅಂಕದ ತೆರೆ ಎಳೆಯುತ್ತದೆ.

ಆ ವಿಶ್ವನಾಥ ಏನಾದ, ಎಂತಾದ ಎಂದು ಹುಡುಕುತ್ತ ಹೋಗುವದೇ ಅನ್ವೇಷಣ. ಅನ್ವೇಷಣದ ತೆರೆ ಏಳುವದು ಕಂಠಿಜೋಯಿಸರ ರಾಜಘಣೆಯ ಹೊಡೆತದಿಂದ. ಕಂಠಿಜೋಯಿಸರು ನಂಜಮ್ಮನ ತಂದೆ ಅರ್ಥಾತ್ ವಿಶ್ವನಾಥನ ಅಜ್ಜ. ಕಂಠಿಜೋಯಿಸರಿಗೆ ಮಾನವಸಹಜವಾದ ಮಾರ್ದವತೆ ಕಡಿಮೆ. ಏರಿಕೆಯ ದಿನಗಳಲ್ಲಿ ಯಾವುದನ್ನೂ ಲೆಕ್ಕಿಸದ ಕಠೋರಾತ್ಮ, ಸಾವು ಸಮೀಪಿಸಿದಾಗ ಮೃದುವಾಗುತ್ತದೇನೊ! ಅಯ್ಯೋ ಅನ್ನಬೇಕಾದರೆ ತಾಯಿ ಇರಬೇಕು ಅಥವಾ ಹೊಟ್ಟೆಯಲ್ಲಿ ಹುಟ್ಟಿದ ಮಗಳಿರಬೇಕು. ಆ ಮಗಳ ನೆನಪು ವಿಶ್ವನಾಥನನ್ನು ಹುಡುಕಲು ಹೊರಡುತ್ತದೆ. ತನ್ನ ಕರುಳಿನ ಕುಡಿಯಾಗಿ ಉಳಿದವನೆಂದರೆ ವಿಶ್ವನಾಥನೊಬ್ಬ. ಮಗ ಕಲ್ಲೇಶನಿಗೆ ಮಕ್ಕಳಿಲ್ಲ. ಅವನ ಹೆಂಡತಿ ಮಾರಿ. ಕೊನೆಗಾಲದಲ್ಲಿ ವಿಶ್ವನಾಥನಾದರೂ ಹತ್ತಿರವಿದ್ದರೆ ಎಂಬ ಬಯಕೆ ಅವರನ್ನು ಮಗಳ ಮನೆಗೆ ಬರಿಸುತ್ತದೆ. ಸರಸಿ ಆ ಊರಲ್ಲಿ ಒಂದು ಸಣ್ಣ ಅಂಗಡಿಯಿಟ್ಟುಕೊಂಡಿರುವ ಒಬ್ಬ ಸೂಳೆ. ಅವಳಿಗೆ ವಿಶ್ವನಾಥನೆಂದರೆ ನಂಜಮ್ಮ ಬದುಕಿದಾಗಿನಿಂದಲೂ ಪ್ರೀತಿ. ಪ್ಲೇಗಿನಲ್ಲಿ ತನ್ನ ಎರಡೂ ಮಕ್ಕಳು ಸತ್ತಾಗ,

ನಂಜಮ್ಮ ವಿಶ್ವನನ್ನು ಸರಸಿಗೊಪ್ಪಿಸಿ ನನಗೆ ದೈವ ಮುನಿದಿದೆ ನೀನಾದರೂ ಉಳಿಸಿಕೋ ಎಂದಿರುತ್ತಾಳೆ. ಅವಳಿಚ್ಛೆಯ ಹಾಗೆ ಸರಸಿಯ ಉಪಚಾರದಲ್ಲಿ, ಮಹಾದೇವಯ್ಯನವರ ನಿಗಾದಲ್ಲಿ ವಿಶ್ವ ಬದುಕುತ್ತಾನೆ. ವಿಶ್ವ ತಿಪಟೂರಿನಲ್ಲಿ ಹಾವುಗಾರ ಹಾವು ಆಡಿಸುವಾಗ ಅದು ವಿಷವಿಲ್ಲದ್ದು ಎಂದು ಹೇಳಿದ್ದ. ಅವಕ್ಕೆ ಹಾವುಗಾರನ ಕೋಪ. ವಿಶ್ವನ ಕೊರಳಲ್ಲಿ ಹಾವು, ಅವನು ಕದಲದೆ ನಿಂತದ್ದೂ ಎಲ್ಲ ಹೇಳುತ್ತಾಳೆ. ಸರಸಿಗೆ ವಿಶ್ವ ಮಗನಂತೆ. ತನ್ನ ಲೇವಾದೇವಿಗೆ ಅವನನ್ನು ಒಡೆಯನನ್ನಾಗಿ ಮಾಡುವ ಆಶೆ. ಅವನಿಗೆ ತಾಯಿ ತೀರಿದ ವಿಷಯ ತಿಳಿದದ್ದೂ ಅವಳಿಂದ. ವಿಶ್ವನಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಬಯಕೆ. ತನ್ನೂರಿಗೆ ಬಂದು ತಾಯಿಯಿಲ್ಲವೆಂದು ಖಚಿತಮಾಡಿಕೊಂಡು, ತನ್ನನ್ನು ತಾಯಿ ಮಾವನ ಮನೆಗೆ ಕಳಿಸಲು, ತಾನು ಹಾವು ಹೊಡೆದ ಕಾರಣ. ತಾನಲ್ಲಿಗೆ ಹೋಗುವ ಪ್ರಮೇಯವಿರಲಿಲ್ಲ. ಇಲ್ಲಿಯೇ ಇದ್ದಿದ್ದರೆ ತಾಯಿ ಸಾಯುತ್ತಿರಲಿಲ್ಲ. ಆ ಬಾಲಮನಸ್ಸಿನ ನೋವು ಹಾವು ಕಚ್ಚಿಸಿಕೊಂಡು ಸಾಯಬಯಸುತ್ತದೆ. ಹಾವೂ ಬರಲಿಲ್ಲ. ಆತ್ಮಹತ್ಯೆ ಮಾಡಿಕೊಂಡರೆ ತಾಯಿ ಹತ್ತಿರ ಸೇರಿಸಿಕೊಳ್ಳಲಿಕ್ಕಿಲ್ಲವೆಂಬುದು ಅದನ್ನು ತೊಡೆದುಹಾಕುತ್ತದೆ. ಧೈರ್ಯ, ಸಾಹಸ ವಿಶ್ವನಿಗೆ ಅಜ್ಜನಿಂದ ಬಳುವಳಿಯಾಗಿ ಬಂದವು. ಹಾವು, ನೀರು, ಸಾವು ಒಂದೂ ಭಯವಿಲ್ಲದ ಗಂಡು ವ್ಯಕ್ತಿತ್ವ. ಈಸುವುದರಲ್ಲಿ ಅಜ್ಜನಂತೆ ಪ್ರವೀಣ. ಗಂಟೆಗಟ್ಟಲೆ ನೀರಿನಲ್ಲಿ ಮುಳುಗಿ, ತೇಲಿ ಈಸಬಲ್ಲವನಾಗಿದ್ದ. ವಿಶ್ವನಿಗೆ ಅಜ್ಜನೆಂದರೆ ಹೆಮ್ಮೆ. ಅವರು ಕಟ್ಟಿದ ದೊಡ್ಡ ಕುದುರೆ ಅವನಿಗೆ ಬಲು ಪ್ರೀತಿ. ಅಜ್ಜನಂತೆ ಬಾಳಬೇಕೆಂಬ ಬಯಕೆ. ಗೆಳೆಯ ಶರಭಣ್ಣನ ಮುಂದೆ "ನಮ್ಮಜ್ಜಯ್ಯ, ನಮ್ಮಜ್ಜಯ್ಯ" ಎಂದು ಹೇಳಿಕೊಳ್ಳುತ್ತಿದ್ದ. ಅದನ್ನು ಕೇಳಿ ಕಂಠಿಜೋಯಿಸರಿಗೆ ಅಪರಿಮಿತ ಆನಂದ. ತಮ್ಮ ಹೆಸರು ಹೇಳಿಕೊಳ್ಳಲು ತಮ್ಮ ಚಿಗುರು ಇದೆಯಲ್ಲ ಎಂಬ ಸಂತೋಷ ಉಕ್ಕಿಬರುತ್ತದೆ. ಬರಿ ಹೆಮ್ಮೆಯಿಂದ ಹೇಳಿಕೊಂಡ. ಒಮ್ಮೆಯೂ ಅಜ್ಜನನ್ನು ನೋಡಲು ಬರಬಾರದೆ ಎನಿಸದೆ ಇರಲಿಲ್ಲ ಅವನಿಗೆ. ಮೂಗತಿಹಳ್ಳಿಯ ರಾಮದಾಸಪ್ಪನವರಿಂದ ವಿಶ್ವ ಚಂದಾ ವಸೂಲಿ ಮಾಡಿದ್ದೂ ಅವನು ಕೆಲಸಮಾಡುತ್ತಿದ್ದ ನಾಟಕ ಕಂಪನಿ ಸುಟ್ಟದ್ದೂ ತಿಳಿಯುತ್ತದೆ. ಶರಭಣ್ಣನ ತಂದೆ ತಾಯಿಗಳಿಂದ ವಿಶ್ವ ವಾರದಮನೆ ಊಟ ಮಾಡುತ್ತಿದ್ದುದೂ ಅದು ಒಬ್ಬ ಲಾಯರನಿಂದ ತಪ್ಪಿದ್ದೂ ಅಲ್ಲಿಂದ ಅರಸೀಕೆರೆಗೆ ಹೋದದ್ದೂ ಅಲ್ಲೂ ಅವನು ಶನಿಯಂತೆ ಬೆನ್ನತ್ತಿ ವಾರದಮನೆ ತಪ್ಪಿಸಿದ್ದೂ ತಿಳಿಯುತ್ತದೆ. ಪಾಠ ಹೇಳಿಕೊಂಡು ಹೇಗೋ ಓದುತ್ತಿದ್ದ ವಿಶ್ವನಿಗೆ ದೇವರಯ್ಯ ತಾಯಿಯಂತೆ ಕಾಡಿದ್ದು, ಕಂಠಿಜೋಯಿಸರಿಗೆ ರೋಷ ಬರಿಸುತ್ತವೆ. ಇಷ್ಟಾಗಿ ವಿಶ್ವ ದೇವರಯ್ಯನನ್ನು ಥಳಿಸದೇ ಬಿಟ್ಟನೆ? ಎಂದು ಕೇಳುತ್ತಾರೆ. ಕಂಠಿಜೋಯಿಸರ ಮೇಲೆ ಸುಳ್ಳು ಕೇಸು ಹಾಕಿಸಿ ಕೋರ್ಟಿಗೆ ಹೋಗುವಂತೆ ಮಾಡಿದ ಶಾಮಣ್ಣನನ್ನು ಕೇಸು ಖುಲಾಸಾಗಿ ಹೊರಗೆ ಬಂದಮೇಲೆ, ರಕ್ತಕಾರುವಂತೆ ಜಜ್ಜಿ ಸತ್ತನೆಂದು ತಿಳಿದು ಅಪಾದನೆ ತಪ್ಪಿಸಲು ದೇಶಾಂತರ ಹೋಗಿದ್ದರು. ವಿಶ್ವನೂ ದೇವರಯ್ಯನ ಕಥೆ

ಮುಗಿಸಬೇಕೆಂದು ಒಂದು ಕೊನೆಗತ್ತಿ ಕೊಂಡುಕೊಳ್ಳಬಯಸಿರುತ್ತಾನೆ. ವಿಶ್ವನದೂ ಅಜ್ಜನದೇ ಮನೋವೃತ್ತಿ ಮತ್ತು ಮೊಂಡು ಧೈರ್ಯ. ದೇವರಯ್ಯನ ಕಥೆ ಮುಗಿಯುವುದರಲ್ಲಿತ್ತು. ಯಾರೋ ಶನಿ ಮಹಾರಾಯ ಹೆಗಲು ಹತ್ತಿದ್ದಾನೆ, ಅವನ ಫೋಟೊ ಪೂಜಿಸು ಎಂದಾಗ ಏನೊ ಮನಸ್ಸು ಬದಲಿಸಿ ಸುಮ್ಮನಾಗುತ್ತಾನೆ. ಕಂಠಿಜೋಯಿಸರ ಮೇಲೆ ಸುಳ್ಳು ಕೇಸು ಹಾಕಿಸಿ ಕೋರ್ಟಿಗೆ ಒಯ್ದ ಶಾಮಣ್ಣ. ಕೇಸು ಮುಗಿದ ಮೇಲೆ ಅವನು ಸತ್ತನೆಂದು ಓಡಿಹೋದ ಕಂಠಿಜೋಯಿಸರು ಕಾಶಿಯಲ್ಲಿರುತ್ತಾರೆ. ಮಹಾದೇವಯ್ಯನವರಿಂದ ಕೇಸು ಗದ್ದಿದೆ, ಶಾಮಣ್ಣ ಸತ್ತಿಲ್ಲವೆಂದು ತಿಳಿದು ಊರಿಗೆ ಮರಳುತ್ತಾರೆ. ನಾಲ್ಕುಜನರ ಮಧ್ಯ ಮನುಷ್ಯ ಅಮೇಧ್ಯವನ್ನು ಶಾಮಣ್ಣನ ತಲೆಯ ಮೇಲೆ ಸುರುವುತ್ತಾರೆ. ಮುಂದೆ ವಿಶ್ವ ಹೋಟೆಲ್ ಮಾಲಿಕ, ಅವನನ್ನು ಪೋಲಿಸರ ವಶಕ್ಕೆ ಕೊಟ್ಟ ಸೇಡಿಗಾಗಿ ಹೋಟೆಲ್ ಮಾಲಿಕನ ತಲೆಯ ಮೇಲೆ ಉಚ್ಚೆ ಸುರಿಸುತ್ತಾನೆ. ಊಟವಿಲ್ಲದ್ದರಿಂದ ಪಾಯಖಾನೆ ಬರಲಿಲ್ಲ, ಇಲ್ಲದಿದ್ದರೆ ಅದನ್ನೇ ತಲೆಯ ಮೇಲೆ ಸುರಿಯುತ್ತಿದ್ದೆ ಎನ್ನುವ ವಿಶ್ವನ ಗುಣಗಳೆಲ್ಲಾ ಅಜ್ಜನಿಂದ ಬಳುವಳಿಯಾಗಿ ಬಂದವುಗಳು.

ವಿಶ್ವನ ಬಾಲ್ಯಕ್ಕೂ ಧರ್ಮಶ್ರೀಯ ಸತ್ಯನ ಬಾಲ್ಯಕ್ಕೂ ಬಹಳಷ್ಟು ಸಾಮ್ಯವಿದೆ. ವಿಶ್ವನಂತೆ ಸತ್ಯನೂ ಮಾವನ ಮನೆಯಲ್ಲಿರುತ್ತಾನೆ. ಅವಳತ್ತೆಯೂ ಹಾಸನದ ಮುಂಡೆಯಂಥವಳು. ಹಿಂದೂಸಂಪ್ರದಾಯದಲ್ಲಿ ಗಂಡುಮಕ್ಕಳ ಕೈಯಿಂದ ಮಾಡಿಸಲಾರದ ಮುಸುರೆ ಎತ್ತುವದು, ಬಟ್ಟೆ ಒಗೆಯುವಂತಹ ಕೆಲಸಗಳನ್ನೂ ಮಾಡಿಸಿರುತ್ತಾಳೆ. ಕಲ್ಲೇಶನಂತೆ ಅವನ ಮಾವನೂ ಕಲ್ಲೆದೆಯವ. ಸತ್ಯನನ್ನು ಮಾವನ ಮನೆಯಿಂದ ಬಿಡಿಸಿಕೊಂಡು ಹೋದವರು ಒಬ್ಬ ಲಿಂಗಾಯತ ಸ್ಕೂಲ ಮೇಸ್ತ್ರ. ವಿಶ್ವನನ್ನು ಅವನ ತಾಯಿ ಸತ್ತನಂತರ ಭಿಕ್ಷೆಮಾಡಿ ಸಾಕುತ್ತಿದ್ದವರು ಒಬ್ಬ ಅಯ್ಯ ಮಹಾದೇವಯ್ಯನವರು. ವಿಶ್ವನಂತೆ ಸತ್ಯನಿಗೆ ವಾರದಮನೆಗಳಲ್ಲಿ ಉಣ್ಣುವ ಪ್ರಸಂಗ. ಲಿಂಗಾಯತರ ಆಶ್ರಯದಲ್ಲಿದ್ದನೆಂದು ಬ್ರಾಹ್ಮಣರು, ಬ್ರಾಹ್ಮಣನಾದರೂ ಜಾತಿಗೆಟ್ಟು ಲಿಂಗಾಯತರ ಬೋರ್ಡಿಂಗನಲ್ಲಿ ಉಣ್ಣುತ್ತಾನೆಂದು ಲಿಂಗಾಯತರು ಅಸಡ್ಡೆಯಿಂದ ನೋಡುತ್ತಿದ್ದರು. ಸತ್ಯನಿಗೂ ವಿಶ್ವನಿಗೂ ಈಸುವದೆಂದರೆ ಪ್ರಾಣ. ಸತ್ಯನದೂ ವಿಶ್ವನಂತೆ ಸಾಹಸೀ ಮನೋಭಾವ.

ವಿಶ್ವನ ಇನ್ನೊಬ್ಬ ಸ್ನೇಹಿತ ಗಂಗಣ್ಣನಿಂದ ಕಂಠಿಜೋಯಿಸರಿಗೆ ಇನ್ನಷ್ಟು ವಿಷಯ ತಿಳಿಯುತ್ತದೆ. ರೈಲಿಗೆ ತಲೆಕೊಟ್ಟು ಸಾಯಬಯಸಿದ್ದು, ವಿಶ್ವ–ಗಂಗಣ್ಣ ಇಬ್ಬರೂ ಸಿನಿಮಾ ಟಾಕೀಜಿನಲ್ಲಿ ಕೆಲಸಮಾಡುತ್ತಿದ್ದುದು, ನಾಟಕಕಂಪನಿಯವರ ಸಹವಾಸ, ಚೆಲುವಮ್ಮನಂಥ ಸೂಳೆಯ ಮನೆಯ ಸಮೀಪದಲ್ಲಿದ್ದುದು ಗೊತ್ತಾಗುತ್ತದೆ. ಹುಡುಗ ಹಾಳಾಗಿರುವನೇ ಎಂಬ ಶಂಕೆ. ಹೇಗಾದರೂ ಸಿಕ್ಕರೆ ಸಾಕು ಕರೆದೊಯ್ದು ಒಳ್ಳೇ ಮನೆತನದ ಹೆಣ್ಣು ತಂದು ಮದುವೆ ಮಾಡುವುದಾಗಿ ಯೋಚಿಸು

ತ್ತಾರೆ. ತಮ್ಮ ಉಳಿತಾಯದ ೫೦೫೦ ರೂ. ವಿಶ್ವನಿಗೆ, ಅವನು ಬಂದರೆ. ತಮ್ಮ ಬಳಿಗೆ ಕರೆತರಲು ಹೇಳಿ ಹೋಗುತ್ತಾರೆ. ಹಣದ ವಿಷಯವಾಗಿಯೂ ವಿಶ್ವನಿಗೆ ಅಜ್ಜನದೇ ನಿರ್ಲಕ್ಷತನ. ಬೇಕಿದ್ದರೆ ಕಂಠಿಜೋಯಿಸರು ಇನ್ನೂ ಹೆಚ್ಚು ಹಣ ಸಂಪಾದಿಸಬಹುದಿತ್ತು. ವಿಶ್ವ ನಾಟಕಕಂಪನಿಯಲ್ಲಿ ಕೆಲಸಮಾಡಿದರೂ ತನ್ನ ಸಂಬಳ ಕೇಳುವುದಿಲ್ಲ. ತಾನು ಸಂಪಾದಿಸಿ ತಂದ ಹಣವನ್ನು ರಂಗಸ್ವಾಮಿಯವರ ಬಳಿಯೇ ಬಿಟ್ಟು ಬಗ್ಗೈಯಿಂದ ಹೊರಟುಹೋಗುತ್ತಾನೆ. ಮುಂದೆ ರಾಜಘಣೆಗೆ ತುತ್ತಾಗಿ ಅಜ್ಜ ಸತ್ತನೆಂದು ತಿಳಿದಾಗ ದೆವ್ವದ ಮನೆ ಚನ್ನರಾಯಪಟ್ಟಣಕ್ಕೆ ಹೋಗಿಬರುತ್ತಾನೆಯೇ ಹೊರತು, ಅಜ್ಜ ಅವನಿಗಾಗಿ ಇಟ್ಟ ಐದುವರೆ ಸಾವಿರ ರೂಪಾಯಿಗಳನ್ನು ಮುಟ್ಟುವುದಿಲ್ಲ.

ಕಾದಂಬರಿಗೆ ಬಳಸಿದ ತಂತ್ರದಲ್ಲಿಯೂ ಎರಡು ವಿಧ. ಇಲ್ಲಿ ವಿಶ್ವನ ಬಗ್ಗೆ ಅಪ್ರತ್ಯಕ್ಷವಾದ ಹೇಳಿಕೆಯಿದೆ. ಅದು ಮುಂದೆ ವಿಶ್ವ ಏನಾದ ಎಂಬ ಕುತೂಹಲವನ್ನು ಹೆಚ್ಚಿಸುತ್ತ ಹೋಗುತ್ತದೆ. ಈ ಕಂಠಿಜೋಯಿಸರ ಪ್ರಸಂಗದಲ್ಲಿ ಬಳಸಿದ ಭಾಷೆ ಅಲ್ಲಿಯ ಪ್ರಾದೇಶಿಕಭಾಷೆ.

> "ತೋಳ್ ಈಚಿಗ್ ಎಳಕಂಡು ಎದ್ದು ತಿಪಟೂರಿಗೆ ನಡೆದು ಹೋಗಾಕೆ ಹ್ವಂಟಿತ್ತು. ಓಟರಾಗೆ ನಾನು ಕಂಡೆ."
>
> 'ತುಟಿ ಇಡದು, ತುಪ್ಪ ಕುಡಿಸಿ ಸಾಕ್ತಿದ್ದೆ'
> ಶಾನೆ ಜನ ತಿರುಗಾಡೂ ತಾವ ಗರಿಕೆ ಬೆಳಿತದಾ ?'
> 'ಸತ್ತಾಗ ಅದೆಲ್ಲಿತ್ತು, ಪೋಲಿ ತಿರಕ್ಕಂಡು ಹ್ವಂಟೋಗಿತ್ತು ದಾಸರಳ್ಳಿ ನಾಟಕದೋರ ಹಿಂದೆ.'
> 'ಇಷ್ಟಾಯ್ತು, ಇನ್ನು ದೊಡ್ಡ ರುದ್ರಪ್ಪನಿಗೆ ಕುಜದೋಷ ಸ್ವಲ್ಪ ಜಾಸ್ತಿ.
> 'ಪಿಚ್ಚರ ತರುಕ್ಕೆ ಅಂತ ಬೆಂಗಳೂರಿಗೆ ಹೋದ್ರೆ'....
> ಇನ್ನೂ ಎಲ್ಡು ಎಲ್ಡುವರೆ ಗಂಟೆ. ಸುಮ್ಮನೆ ಕುಂತಕಂಡು ಏನು ಮಾಡ್ತಾನೆ ?
> 'ಅಲ್ಲ ಅಲ್ಲ, ರಾಜಘಣೆ ನನ್ನ ತಗಾಳುತ್ತೆ ಇದು.".......

ಭಾಷೆಯ ವೈವಿಧ್ಯತೆ 'ಅನ್ವೇಷಣ' ತಂತ್ರದ ಇನ್ನೊಂದು ವಿಶಿಷ್ಟಗುಣ.

ಕಾದಂಬರಿಗೆ ಕಳೆಬರುವದು ದೇಶಪಾಂಡೆ ವಕೀಲರ ಪ್ರವೇಶದ ನಂತರ. ವಿಶ್ವನಾಥ ಹೋಟೆಲ್ ಮಾಲಿಕರ ಅಸಹನೆಗೆ ಗುರಿಯಾದ. ಅದರ ಪರಿಣಾಮ ಅವನನ್ನು ಅನ್ಯಾಯವಾಗಿ ಪೋಲಿಸರ ಅವಮಾನುಷತೆಗೆ ಗುರಿಮಾಡಿತು. ವಿಶ್ವನಾಥನ ಗುರುತಿನವರಾದ ಸಾರಂಗಿ, ಎಳವಟ್ಟಿಯೆಂಬವರು ರಾಣೆಬೆನ್ನೂರ ಖ್ಯಾತ ವಕೀಲರಾದ ದೇಶಪಾಂಡೆ ವಕೀಲರ ಸಹಾಯ ಕೋರುತ್ತಾರೆ. ವಕೀಲವೃತ್ತಿಯಲ್ಲಿ ನುರಿತ ದೇಶಪಾಂಡೆ ವಕೀಲರು ವಿಶ್ವನಾಥನನ್ನು ಪೋಲೀಸರಿಂದ ಬಿಡಿಸುತ್ತಾರೆ.

ವಿಧುರ ದೇಶಪಾಂಡೆ ವಕೀಲರಿಗೆ ವಿಶ್ವನಾಥನ ಬಗ್ಗೆ ಆಸಕ್ತಿ ಹುಟ್ಟುತ್ತದೆ. ಚೂಟಿ ಹುಡುಗ, ಅಧಿಕಾರಿಗಳಿಗೆ ಅಂಜದ ಧೃಡಮನಸ್ಸಿನವ. ಆದರೆ ಅನ್‌ಕಲ್ಚರ್ಡ್. ಕಾರಣ ಹೋಟೆಲ್ ಮಾಲಿಕನ ತಲೆಯ ಮೇಲೆ ಮೂತ್ರ ಸುರುವಿದ್ದು. ವಿಶ್ವನಾಥ ಕೃತಜ್ಞತೆ ಸಲ್ಲಿಸಲು ವಕೀಲರ ಬಳಿ ಬರುತ್ತಾನೆ. ವಕೀಲರು ಅವನೇಕೆ ಒಮ್ಮೆ ತನ್ನನ್ನು ಭೆಟ್ಟಿಯಾಗಬಾರದೆಂದು ಬಯಸುತ್ತಿರುವಾಗಲೇ ವಿಶ್ವನಾಥನ ಆಗಮನ. ವಕೀಲರ ಮುಂದೆ ವಿಶ್ವನಾಥ ಅಲ್ಲಿಯವರೆಗಿನ ತನ್ನ ಜೀವನವೃತ್ತಾಂತವನ್ನೆಲ್ಲ ಹೇಳುತ್ತಾನೆ. ದೇಶಪಾಂಡೆ ವಕೀಲರಲ್ಲಿ ಅವನಿಗೆ ಯಾವುದೋ ಆತ್ಮೀಯತೆ. ಅದು ಅವನ ವೃತ್ತಾಂತ ಹೇಳಹಚ್ಚುತ್ತದೆ.

ವಿಶ್ವ, ಮಹಾದೇವಯ್ಯನವರು ತೀರಿದ ನಂತರ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಚಂದಾ ವಸೂಲಿ ಮಾಡುವಾಗಿನ ಅಪಮಾನ, ರೈಲಿಗೆ ತಲೆ ಕೊಡುವ ಯೋಚನೆಗೆ ಪ್ರೇರಣೆಯನ್ನೀಯುತ್ತದೆ. ಟಿಕೆಟ್ ಇಲ್ಲದೆ ಪ್ರಯಾಣ, ಟಿ.ಸಿ ಯಿಂದ ಆದ ಅಪಮಾನ, ತುಮಕೂರಿನಿಂದ ರಾಣೆಬೆನ್ನೂರವರೆಗೆ ನಡೆಯಲು ಪ್ರೇರೇಪಿಸುತ್ತದೆ. ಹಾಗೆ ನಡೆದುಬರುವಾಗ ಒಂದು ಹಳ್ಳಿಯಲ್ಲಿ ಕಾಹಿಲೆಯಿಂದ ಮಲಗಿದಾಗ ಯಾರೋ ಒಬ್ಬರು ಉದ್ಯೋಗಕ್ಕೆ ಯಾವ ಊರಾದರೇನು ! ಎನ್ನುತ್ತಾರೆ. ಅವನಿಗೆ ಉದ್ಯೋಗಕ್ಕಾಗಿ ಮುಂಬಯಿಗೆ ಹೋಗುವ ವಿಚಾರ. 'ರಾಣೆಬೆನ್ನೂರ ಹೋಟೆಲ್ ಮಾಲಕರು ಹಿಂದೆ ಒಂದುಬಾರಿ ಕಷಾಯಿ ಹಿಡಿದುಕೊಂಡು ಬಂದವರು' ಎಂಬ ಮಾತು ವಿಶ್ವನಿಗೆ ಹೋಟೆಲ್‌ನಲ್ಲಿ ಕೆಲಸ ಮಾಡಲು ಪ್ರೇರೇಪಿಸುತ್ತದೆ. ಮುಂಬಯಿಯ ಕಾರ್ಮಿಕರ ಮುಷ್ಕರ ಮತ್ತು ಗೆಲುವುಗಳನ್ನು ಪೇಪರಿನಲ್ಲಿ ಓದಿದ ವಿಶ್ವ, ಕಾರ್ಮಿಕರ ಸಂಘ ಕಟ್ಟಬಯಸುತ್ತಾನೆ. ಅದಕ್ಕೆ ಹೋಟೆಲ್ ಕೆಲಸಗಾರರು ಬೆಂಬಲಕೊಟ್ಟು ಹುಬ್ಬಳ್ಳಿಯವರೆಗೂ ಸಂಘಟನೆಗಾಗಿ ಹೋಗಿಬಂದಿರುತ್ತಾನೆ. ಇದರ ವಾಸನೆ ತಿಳಿದ ಹೋಟೆಲ್ ಮಾಲಕ, ಇತರ ಮಾಲಕರ ಪ್ರೋತ್ಸಾಹದಿಂದ ಮುಂಜಾಗ್ರತೆಯೆಂದು ವಿಶ್ವನನ್ನು ಪೋಲೀಸರ ವಶಕ್ಕೆ ಕೊಟ್ಟಿರುತ್ತಾರೆ. ದೇಶಪಾಂಡೆ ವಕೀಲರು ಅವನನ್ನು ಬಿಡಿಸಿದ್ದು ಆ ಪ್ರಸಂಗದಲ್ಲಿ. ಹಿಂದಿನ ಪ್ರಕರಣದಲ್ಲಿ ವಿಶ್ವನಾಥನ ಬಗ್ಗೆ ಎಲ್ಲ ಅಪ್ರತ್ಯಕ್ಷ ಹೇಳಿಕೆಗಳು. ಇಲ್ಲಿ ಪ್ರತ್ಯಕ್ಷ ಹೇಳಿಕೆ. ಇದು 'ಅನ್ವೇಷಣ' ತಂತ್ರದ ಎರಡನೆಯ ವಿಧಾನ.

'ಇದೆಲ್ಲ ನಾನು ಮತ್ತೆ ಯಾರಿಗೂ ಹೇಳಿರಲಿಲ್ಲ.

'ಯಾಕೆ ?' ವಕೀಲರ ಪ್ರಶ್ನೆ. 'ಅರ್ಥವಾಗಬೇಕಲ್ರೀ ಹೇಳಿದರೂ'.

ವಿಶ್ವನಾಥನ ಈ ನುಡಿ ದೇಶಪಾಂಡೆ ವಕೀಲರನ್ನು ಇಪ್ಪತ್ತು ವರ್ಷಗಳ ಹಿಂದೆ ತಳ್ಳುತ್ತದೆ. ಇನ್ನೊಬ್ಬರ ದುಃಖದಲ್ಲಿ ತನ್ನ ದುಃಖವನ್ನು ಸ್ಮರಿಸಿಕೊಳ್ಳುವದು, ಇನ್ನೊಬ್ಬರ ಸುಖದಲ್ಲಿ ತನ್ನ ಸುಖಾನುಭವವನ್ನೂ ಮೆಲುಕುಹಾಕುವದು ಮನುಷ್ಯನ ಸಹಜ

ಸ್ವಭಾವ. ಇನ್ನೊಬ್ಬರ ಮನೆಯ ಮಗು ಸತ್ತಾಗ ತಾಯಿ ತನ್ನ ಕಳೆದ ಮಗುವನ್ನು ಸ್ಮರಿಸಿ ಕಣ್ಣೀರಿಡುತ್ತಾಳೆ. ನವದಂಪತಿಗಳನ್ನು ಕಂಡಾಗ ಮನುಷ್ಯ ತನ್ನ ಜೀವನದ ವಸಂತ ಕಾಲದ ಸ್ಮೃತಿಯಲ್ಲಿ ಮತ್ತೊಮ್ಮೆ ವಿಹರಿಸಿ ಬರುತ್ತಾನೆ. ಮಗುವಿನ ಬಾಲ್ಯದಲ್ಲಿ ಬರುತ್ತಾನೆ. ಮಗುವಿನ ಬಾಲ್ಯದಲ್ಲಿ ತನ್ನ ಎಳೆತನವನ್ನು ನೆನೆಸಿಕೊಂಡು ಸುಖಿಸು ತ್ತಾನೆ. ದೇಶಪಾಂಡೆ ವಕೀಲರು ತಾವು ಇಪ್ಪತ್ತು ವರ್ಷಗಳ ಹಿಂದೆ ಬರೆದ ದಿನಚರಿ ಯನ್ನು ಕೈಗೆತ್ತಿಕೊಳ್ಳುತ್ತಾರೆ.

ತಮ್ಮದು ತಮಗರ್ಥವಾಗುತ್ತದಲ್ಲದೆ ಇನ್ನೊಬ್ಬರಿಗೆ ಅದು ಅರ್ಥವಾಗುವ ದಿಲ್ಲವೆಂಬ ತೀರ್ಮಾನಕ್ಕೆ ಬಂದು, ಅವರಿಗೆ ಇಪ್ಪತ್ತು ವರ್ಷಗಳಾಗಿದ್ದವು. ಈಗ ವಿಶ್ವನೂ ಅದನ್ನೇ ಹೇಳಿ ಹೋಗಿದ್ದ. "ನಮ್ಮ ಮನಸ್ಸಿನಲ್ಲಿರುವ ವಿಷಯವನ್ನು ಯಾರಿಗೂ ಬಿಡಿಸಿ ಹೇಳಲಿಕ್ಕೆ ಶಕ್ಯವಿಲ್ಲ. ಮುಂದಿಗೆ ತಿಳಿಯುವದೂ ಇಲ್ಲ. ವಿಚಿತ್ರ ಅಂದರೆ ಮತ್ತೊಬ್ಬರಿಗೆ ಹೇಳುವಾಗ ನಾವೇ ನಮ್ಮ ವಿಷಯವಾಗಿ ಉತ್ಪ್ರೇಕ್ಷೆ ಮಾಡಿಕೊತ್ತೀವಿ, ಇಲ್ಲಾ ಗೌಣ ಮಾಡಿಕೊತ್ತೀವಿ. ಆ ಕೇಳುವವನ ಸಹಾನುಭೂತಿ ಗಳಿಸಲಿಕ್ಕೆ, ಅವನ ಕಣ್ಣಿನಲ್ಲಿ ನಾವು ಯೋಗ್ಯರು ಅನಸಿಕೊಳ್ಳಲಿಕ್ಕೆ, ಬೇಕಾದ ಹಂಗೆ ನಮ್ಮ ಚಿತ್ರವನ್ನು ತಿದ್ದಿತಿದ್ದಿ ವಿಷಯವನ್ನು ನಿರೂಪಿಸ್‌ತೀವಿ. ತೀರ ಆತ್ಮೀಯ ಸ್ನೇಹಿತನ ಹತ್ತಿರ ನಿಮ್ಮ ದೌರ್ಬಲ್ಯವನ್ನು ಹೇಳಿಕೊಳ್ಳಬಹುದು. ಆದರೆ ಅದು ಕೂಡಾ ಅವನ ಅಂತಃಕರಣವನ್ನು ಗೆಲ್ಲುವ ಒಳ ಉದ್ದೇಶದಿಂದ ಕೂಡಿರುತ್ತದೆ. ಹೊರಗಿನೋರಿಗೆ ನಾವು ನಿಜ ಹೇಳಲಿಕ್ಕೆ ಸಾಧ್ಯವಿಲ್ಲ. ಅದೇನಿದ್ದರೂ ನಮಗೆ ನಾವು ಮಾತ್ರ ಹೇಳಿಕೊಳ್ಳಬಹುದು. ಅದ್ದರಿಂದ ಒಳಗಿನಿಂದ ಏನಾದರೂ ಕಲಕಿದಾಗ ಒಂದು ಪುಸ್ತಕದಲ್ಲಿ ಬರೆದಿಟ್ಟು ಒತ್ತಡ ಕಳೆದುಕೊಂಡು ಬಿಡೂದು ಸೂಕ್ತ. ದಿನಚರಿ ಮುಂದೆ ಪ್ರಕಟವಾಗದೆ ಮತ್ತೊಬ್ಬರ ಕೈಲಿ ಬೀಳ್ತದೆ, ಬೀಳಲಿ ಅಂಬೋ ಆಶೆಯಿದ್ದರೆ ಮತ್ತೆ ಅದು ಸುಳ್ಳಿನ ಸುರುಳಿಯಾಗುತ್ತದೆ. ಡೈರಿಯನ್ನು ಯಾರೂ ಎಂದು ಪ್ರಕಟ ಮಾಡತಕ್ಕದ್ದಲ್ಲ. ಸಾಯುವ ಮುಂಚೆ ಗುಟ್ಟು ಭಸ್ಮ ಮಾಡಿ ಬೂದಿಯನ್ನು ನೀರಿನಲ್ಲಿ ಕಲಕಿ ಬಿಡತಕ್ಕದ್ದು." –ಇದು ದೇಶಪಾಂಡೆ ವಕೀಲರು ಬರೆದ ದಿನಚರಿ. ಆಗ ಅವರಿಗೆ ನಾಲ್ವತ್ತು ವರ್ಷ. ಮಗಳು ಸರಳಾಳಿಗೆ ಎಂಟು ವರ್ಷ. ಪಕ್ಷಗಾರರ ಸಂದಣಿ. ರಾಣೆಬೆನ್ನೂರ-ಧಾರವಾಡ ಕೋರ್ಟುಗಳಿಗೆ ಬಿಡುವಿಲ್ಲದ ಓಡಾಟ. ತುಂಬಾ ಓದಿದವ ರೆಂದು ಹೆಸರು ಪಡೆದ ವಕೀಲರು. ಆದರೂ ಅವರನ್ನು ಅರ್ಥಮಾಡಿಕೊಂಡವರಿಲ್ಲ. ಹೆಂಡತಿಯನ್ನು ಎಂದೂ ಪ್ರೀತಿಸಲಿಲ್ಲ. ದೊಡ್ಡ ದೇಸಾಯರ ಮಗಳು, ದೊಡ್ಡಸ್ತಿಕೆಗೆ ತಕ್ಕಂತೆ ಎಲ್ಲ ತಂದಳು; ಆದರೆ ಮುಖ್ಯ ಬೇಕಾದ ಪ್ರೀತಿಯನ್ನೇ ತರಲಿಲ್ಲ. ಮಾರಿ ಚಂದ. ಬಣ್ಣ ಚಂದ, ಮೈಕಟ್ಟ ಇತ್ತ, ಒಬ್ಬ ಮಗಳನ್ನ ಕೊಟ್ಲು. ಇಷ್ಟಕ್ಕೆ ಪ್ರೀತಿ ಹುಟ್ಟಬೇಕಂತ ನೇಮರ ಎಲ್ಲೈತಿ ? ಎಂಬ ವಕೀಲರ ಪ್ರಶ್ನೆ ಎಲ್ಲರೂ ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುವಂಥದು. ರೂಪವಿದ್ದರೆ ಪ್ರೀತಿ ಹುಟ್ಟಬೇಕೆಂಬ ನಿಯಮವಿಲ್ಲ.

ವಿದ್ಯೆ ಬುದ್ಧಿಯಲ್ಲಿ ಗಂಡನಿಗೆ ಸಮನಾಗಿ ನಿಲ್ಲುವ ಹೆಂಡತಿಯಲ್ಲದಿದ್ದರೂ ತನ್ನ ಗಂಡ ಏನಿದ್ದಾನೆಂದು ಅರ್ಥಮಾಡಿಕೊಳ್ಳುವ ಹೆಂಡತಿಯಿದ್ದರೆ ಸಾಕು, ಅದು ಸುಖಜೀವನ. ಅಂಥ ದಾಂಪತ್ಯದಲ್ಲಿ ನಿಜವಾದ ಪ್ರೀತಿ ಇರುತ್ತದೆ. ತನ್ನ ಗಂಡ ಏನು, ಎಂತು ಎಂದು ಅರ್ಥ ಮಾಡಿಕೊಳ್ಳುವ ಹೆಂಡತಿಯಾಗಲಿ, ತನ್ನ ಹೆಂಡತಿ ಏನು, ಎಂತು ಎಂದು ಅರ್ಥಮಾಡಿಕೊಳ್ಳುವ ಗಂಡನಾಗಲಿ ಎಷ್ಟು ಜನ ? ಅಂಥ ಅನ್ಯೋನ್ಯದಾಂಪತ್ಯ, ಆ ಪ್ರೀತಿ ಪ್ರೇಮಗಳೆಲ್ಲ ಸಾಹಿತ್ಯದ ವಸ್ತುಗಳೇನೊ ! ಅವನ್ನು ನಿಜಜೀವನದಲ್ಲಿ ಆಚರಣೆಗೆ ತರಲಾಗುವದಿಲ್ಲವೇನೋ ಎಂಬುದು ಸುತ್ತಲಿನ ಪರಿಸರದಲ್ಲಿ ನಿತ್ಯ ಕಾಣುವ ಸತ್ಯ.

ಧಾರವಾಡ ಜಿಲ್ಲಾದಾಗ ಹೆಸರಾದ ವಕೀಲರು. 'ನಮ್ಮಪ್ಪನ ವಾಡಾದ ಪಾಯಖಾನಿಯಷ್ಟು ದೊಡ್ಡದಿಲ್ಲ ನಿಮ್ಮ ಇಡೀ ಮನಿ' ಎಂದ ಹೆಂಡತಿ. ಈ ವಿಷಮತೆ ದೇಶಪಾಂಡೆ ವಕೀಲರ ಒಂಟಿತನಕ್ಕೆ ಕಾರಣ. ಮೊದಲಿನ ಹೆಂಡತಿ ಸತ್ತು, ವಕೀಲರು ಮತ್ತೊಂದು ಮದುವೆಯಾಗಲು ಒಪ್ಪದಿದ್ದುದು ಇದೇ ಕಾರಣಕ್ಕೆ. ಆದರೆ ಜನರ ಅನಿಸಿಕೆ ಮೊದಲಿನ ಹೆಂಡತಿಯ ಮೇಲಿನ ಪ್ರೀತಿ. ಜನರ ಕೈಯಲ್ಲಿ ಸಿಕ್ಕರೆ ವಿಷಯ ಯಾವ ರೂಪ ತಳೆಯುತ್ತದೆ. ಮುಂದಿನವಳು ಹಿಂದೆ ಬಂದವಳಂತೆ ಆದರೆ....! ಎಂಬುದೇ ಒಂಟಿಯಾಗಿ ಇರಹಚ್ಚಿದ್ದು. 'ಅರ್ಥವಾಗಬೇಕಲ್ರೀ' ಎಂಬ ವಿಶ್ವನ ಒಂದು ಮಾತು ವಕೀಲರನ್ನು ಇಷ್ಟೆಲ್ಲ ಅರ್ಥೈಸಿಕೊಳ್ಳಹಚ್ಚುತ್ತದೆ.

ಯಾರ ಮುಂದೆಯೂ ಹೇಳಲಾರದ ತಡೆದುಕೊಳ್ಳಲೂ ಆಗದ ದುರ್ಬಲ ಮನಸ್ಸನ್ನು ಅಭಿವ್ಯಕ್ತಗೊಳಿಸಲು ಒಬ್ಬ ಸ್ನೇಹಿತ ಬೇಕು. ಮನುಷ್ಯನಿಗೆ ಮನುಷ್ಯ ಬೇಕಾಗುವುದು ಇಂಥ ಸಮಯದಲ್ಲಿ. ಆತ್ಮೀಯತೆ ಎಂಥ ಅಮೌಲ್ಯ ವಸ್ತು ಎಂಬುದು ಅರಿವಿಗೆ ಬರುವದೂ ಅವಾಗ. ಅಂಥ ಸಂದರ್ಭದಲ್ಲಿ ಹತ್ತಿರ ಬರುವ ಆತ್ಮವೇ ನಿಜವಾದ ಸ್ನೇಹ. ಆ ಆತ್ಮದೆದುರು ತನ್ನ ಮನಸ್ಸನ್ನೂ ಮನಸ್ಸಿನ ದೌರ್ಬಲ್ಯ ವನ್ನೂ ಬಿಚ್ಚಿಹೇಳಬಹುದು. ಕೇಳುವವನ ಅಂತಃಕರಣವನ್ನು ಗೆದ್ದಾಗ ಮಾತ್ರ ಹೇಳುವವನ ಉದ್ದೇಶ ಸಾಧಿಸಿದ ಸಮಾಧಾನ. ಆಗ ಮನಕ್ಕೆ ತೃಪ್ತಿ. ಮನ ಕಲಕಿದಾಗ ಆ ಒತ್ತಡ ಯಾವ ರೀತಿಯಿಂದ ಬರಬೇಕು ? ನಿಸ್ಸಹಾಯಕ ಜೀವ ಅದನ್ನು ಕಣ್ಣೀರಿನ ಮೂಲಕ ಹೊರಹಾಕಬಹುದು. ಅತಿಯಾದ ಒತ್ತಡಕ್ಕೆ ಸಿಲುಕಿ ಜರ್ಝರಿತ ವಾದಾಗ ಯಾರ ಮುಂದಾದರೂ ತನ್ನ ಅಳಲನ್ನು ತೋಡಿಕೊಂಡು ಸಮಾಧಾನಪಟ್ಟು ಕೊಳ್ಳಬಹುದು. ಸಂವೇದನಶೀಲಹೃದಯ ಮಾತ್ರ ಆ ಒತ್ತಡವನ್ನು ಬರವಣಿಗೆಯ ಮಾಧ್ಯಮವಾಗಿ ಹೊರಹಾಕುತ್ತದೆ. ಸಾಹಿತ್ಯನಿರ್ಮಿತಿಗೆ ಇಂಥ ಪ್ರವೃತ್ತಿಯೇ ಮುಖ್ಯ ಕಾರಣ. ಮನುಷ್ಯನ ಈ ಮೂಲಪ್ರವೃತ್ತಿಯೇ ಸಾಹಿತ್ಯನಿರ್ಮಾಣಕ್ಕೆ ಮುಖ್ಯಪ್ರೇರಣೆಯಾಗಿ ನಿಲ್ಲುತ್ತದೆ. ಒತ್ತಡ ನಿವಾರಣೆಗಾಗಿ ಬರೆದಿಟ್ಟುದುದೇ ಮುಂದೆ ಸಾಹಿತ್ಯವಾಗುತ್ತದೆ. ತಾನೇ ತಾನಾಗಿ ಹರಿದುಬಂದಾಗ ಅದು ನಿಜಸಾಹಿತ್ಯ.

ಉದ್ದೇಶಪೂರ್ವಕದಾಗಿ ಆದರೆ, ಅದು ಆ ಮಟ್ಟಕ್ಕೆ ಏರಲಾರದು. ಜನರನ್ನು ಮೆಚ್ಚಿಸುವುದಕ್ಕೆ ಬರೆಯುವದಾಗಲೀ, ಬರೆದದ್ದನ್ನು ಜನ ಮೆಚ್ಚಲೆಂಬ ಉದ್ದೇಶಕ್ಕೆ ಬರೆಯುವದಾಗಲೀ ಬರಹಗಾರನಿಗೆ ಸಲ್ಲ. ತನ್ನ ಹೊಗಳಿಕೆಯನ್ನು ನಿಜವಾದ ಸಾಹಿತಿ ಬಯಸನು. ತನ್ನ ಜೀವನದ ಸಂಘರ್ಷಕಾಲದಲ್ಲಿಯ ಅನುಭವಗಳನ್ನೂ, ಅನಿಸಿಕೆಗಳನ್ನೂ ತಾನುಂಡ ಸಿಹಿ-ಕಹಿಗಳನ್ನೂ ಕಟುಸತ್ಯವನ್ನೂ ನಿರ್ಭಿಡೆಯಿಂದ ನಿರ್ಭಯವಾಗಿ ಬರೆಯುತ್ತಾನೆ. ಜನ ಮೆಚ್ಚಿ ಹೊಗಳಿದರೂ ಅಷ್ಟೇ, ತೆಗಳಿದರೂ ಅಷ್ಟೇ.

ದೇಶಪಾಂಡೆ ವಕೀಲರ ಒಂಟಿತನವನ್ನು ಬಹುಮಟ್ಟಿಗೆ ಹೋಗಲಾಡಿಸಿದವಳು ಹೆಣ್ಣಾಳು ಚೆನ್ನವ್ವ. ಅವಳು ಓದಿದವಳಲ್ಲದಿದ್ದರೂ ವಕೀಲರನ್ನು ಅರ್ಥಮಾಡಿಕೊಂಡಿರುತ್ತಾಳೆ. ಸರಳಾಗೆ ಸ್ವಂತ ತಾಯಿಯಂತಿರುತ್ತಾಳೆ.

ವಿಶ್ವನಾಥ ಜಾತಿಯಿಂದ ಬ್ರಾಹ್ಮಣನಾದರೂ ಬೇರೆ ಜಾತಿಯವರಲ್ಲಿ ತಿನ್ನಲು ಮುಜುಗರವಿಲ್ಲ. ಕಾರಣ ಅವನನ್ನು ಸಾಕಿದವರು ಭಿಕ್ಷಾಟನೆಯ ಮಹಾದೇವಯ್ಯನವರು. ಅದೇ ಅವನಿಗೆ ತುಮಕೂರಿನಿಂದ ರಾಣೆಬೆನ್ನೂರಿಗೆ ಬರುವಾಗಲೂ ಸಂಕೋಚ ಪರಿಹರಿಸಿದ್ದು. ದಾರಿಹೋಕನೆಂದು ಬೇಡಿ ಊಟ ಮಾಡುತ್ತಿದ್ದ. ದೇಶಪಾಂಡೆ ವಕೀಲರಿಗೆ ಇಷ್ಟು ಹತ್ತಿರದವಳಾದ ಚೆನ್ನವ್ವನ ಕೈಯಿಂದ ಏಕೆ ಅಡಿಗೆ ಮಾಡಿಸಿಕೊಳ್ಳಲಿಲ್ಲ ? ಇಷ್ಟು ನನಗೆ ಮೊದಲೇಕೆ ಹೊಳೆಯಲಿಲ್ಲ ? ಅವನಿಗೆ ವ್ಯತ್ಯಾಸ ತಿಳಿಯುವ ಮೊದಲೇ ಅಭ್ಯಾಸವಾಗಿತ್ತು. ನನಗೆ ಅಭ್ಯಾಸವಾಗುವ ಮೊದಲೇ ವ್ಯತ್ಯಾಸ ತಿಳದಿತ್ತೆ ? ಅಂದರೆ ಯಾವ ವ್ಯತ್ಯಾಸ ? ಇದು ಅವರ ಮಟ್ಟಿಗೆ ಸರಿಯಾದ ವಿವರಣೆ ಅಲ್ಲ ಎನಿಸಿತು. ಚೆನ್ನವ್ವನಿಗೆ ಇನ್ನು ಮೇಲೆ ನೀನೇ ಅಡಿಗೆ ಮಾಡು ಎನ್ನುತ್ತಾರೆ. ಚೆನ್ನವ್ವನ ಲೋಕಜ್ಞಾನ ಆ ಮಾತನ್ನು ತೆಗೆದುಹಾಕುತ್ತದೆ.

ವಿಶ್ವನಾಥ, ಈಗ ದೇಶಪಾಂಡೆ ವಕೀಲರ ಅಡಿಗೆಯವ. ವಕೀಲರದು ಉದಾರ ಮನಸ್ಸು. ಹೊಟೆಲ್‌ನವರು ಕೊಡುವ ಎಂಟು ರೂಪಾಯಿಯ ಬದಲಾಗಿ ನಲವತ್ತು ರೂಪಾಯಿ ಸಂಬಳ ಕೊಡುತ್ತಾರೆ. ವಿಶ್ವನಾಥನಿಗೆ ಹೈಸ್ಕೂಲು ಸೇರಿ ಓದಲು ಹೇಳುತ್ತಾರೆ. ವಿಶ್ವನಾಥನದೆ ಅದಕ್ಕೆ ನಕಾರ. ವಕೀಲರ ಜೊತೆ ಹೆಚ್ಚು ಮಾತಿಲ್ಲ. ಆದರೆ ವಕೀಲರಿಗೆ ತಮ್ಮ ಹತ್ತಿರ ಯಾರೋ ಇದ್ದಾರೆಂಬ ಅನಿಸಿಕೆ. ವಿಶ್ವನಾಥ ಅವರು ತರಿಸುವ ಪತ್ರಿಕೆ, ಹಳೆಯ ವೀಕ್ಲಿಗಳನ್ನು ಓದುತ್ತಾನೆ. ಅವರ ಅಪ್ಪಣೆ ಪಡೆದು ಅವರ ಕಪಾಟಿನಲ್ಲಿಯ ಪುಸ್ತಕಗಳನ್ನು ತೆಗೆದುಕೊಂಡು ಅರ್ಥವಾಗದಿದ್ದರೂ ಓದುತ್ತಿರುತ್ತಾನೆ. ಒಂದು ನೋಟಬುಕ್‌ನಲ್ಲಿ ಕಠಿಣ ಶಬ್ದಗಳಿಗೆ ಅರ್ಥ ಬರೆದುಕೊಳ್ಳುತ್ತಿರುತ್ತಾನೆ. ಈಗ ಅವನು ಶುದ್ಧ ಮೌನಿ. ಅವನ ಮಿತಭಾಷೆ, ಏಕಾಂತ ದೇಶಪಾಂಡೆ ವಕೀಲರ ಮನ ಸೆಳೆದವು. ಪರಿಸ್ಥಿತಿ ಮನುಷ್ಯನ ಆಚಾರ-ವಿಚಾರಗಳನ್ನು ರೂಪಿಸುತ್ತದೆ. ತಾನು ಶ್ರೀಮಂತ ಮನೆತನದವ. ಓದಿದ ಕಾರಣ ನನ್ನೊಳಗೆ ನಾನು ಬೇರೆಯಾದೆ. ಆದರೆ

ಈ ಹುಡುಗನ ಹುಟ್ಟು, ಊರು, ಬೆಳೆದ ರೀತಿ ನಾನು ಪುಸ್ತಕ ಓದಿ ವಿಚಾರ ಮಾಡುವದಕ್ಕಿಂತ ಹೆಚ್ಚು ತೀವ್ರವಾಗಿವೆ. ಇವೆಲ್ಲ ಅವನನ್ನು ಸಹಜವಾಗಿಯೇ ಹಾಗೆ ಬೆಳೆಸಿವೆ. ಚೆನ್ನವ್ವನ ಕೈಯಲ್ಲಿ ಅಡಿಗೆ ಮಾಡಿಸಲಿಲ್ಲ. ಈಗಲೂ ಉಣ್ಣುವಾಗ ರೇಶ್ಮೆಯ ದೋತ್ರ ಉಟ್ಟುಕೊಳ್ಳುತ್ತೇನೆ. ಏನು ಈ ಅಭ್ಯಾಸ? ಇಷ್ಟು ಸಣ್ಣ ವಿಷಯದಲ್ಲಿ ನನಗೆ ಬುದ್ಧಿಹರಿದಿಲ್ಲವೆಂದುಕೊಳ್ಳುತ್ತಾರೆ. ವಿಶ್ವನಾಥ, ವಕೀಲರ ಕೋಣೆ ಸ್ವಚ್ಛಮಾಡುವಾಗ ಅವರು ತೆರೆದಿಟ್ಟ ದಿನಚರಿ ಓದುತ್ತಿರುತ್ತಾನೆ. ಇದು ವಕೀಲರಿಗೆ ಗೊತ್ತಾಗಿಸಿಟ್ಟು ಬರುತ್ತದೆ. ಮತ್ತೊಬ್ಬರ ದಿನಚರಿ ಓದಬಾರದೆಂಬ ಕಲ್ಚರ್ ಅವನಿಗಿಲ್ಲವೆನ್ನುತ್ತಾರೆ. ಅದನ್ನು ಅವನಿಗೆ ತಿಳಿಸಿಹೇಳಬೇಕೆನಿಸಿದರೂ, ಓದಿದರೆ ಓದಿಕೊಳ್ಳಲಿ ಎಂಬ ಭಾವನೆ. ಆ ಭಾವನೆ ಯಾವುದೆಂದರೆ ಆ ದಿನಚರಿಯನ್ನು ಯಾರೋ ಓದುತ್ತಿದ್ದಾರೆ, ತಮ್ಮನ್ನು ಯಾರೋ ಅರ್ಥಮಾಡಿಕೊಳ್ಳುತ್ತಿದ್ದಾರೆ ಎಂಬ ಸಂತೃಪ್ತಿ. ತನ್ನನ್ನೊಬ್ಬರು ಅರ್ಥಮಾಡಿಕೊಂಡಿದ್ದಾರಲ್ಲ ಎಂಬ ತಿಳವಳಿಕೆ ಮನುಷ್ಯನನ್ನು ಕಷ್ಟಕಾಲದಲ್ಲೂ ಸಮಾಧಾನದಿಂದ ಇರಗೊಡುತ್ತದೆ.

ಆ ಸಮಾಧಾನ ಬಹಳದಿನ ಉಳಿಯುವುದಿಲ್ಲ. ವಿಶ್ವನಾಥ ಒಂದು ದಿನ ಕಣ್ಮರೆಯಾಗುತ್ತಾನೆ. ಹೋಟೆಲ್‌ನಲ್ಲಿ ಕೆಲಸ ಮಾಡಿದವರು ಒಂದೇ ಕಡೆ ನಿಲ್ಲುವರೇ ? ಚೆನ್ನವ್ವನ ಮಾತು. ಹಣಪಣ ಕದ್ದಿದ್ದಾನೋ ನೋಡಿರೆಂದಾಗ ವಕೀಲರು ತಿಜೋರಿ ತೆಗೆದು ನೋಡುತ್ತಾರೆ. ಏನೂ ಹೋಗಿರುವುದಿಲ್ಲ. ಅವರು ಹಾಗೆ ನೋಡಿದ್ದು ಸಹಜವಾದರೂ ತಮ್ಮ ಸಣ್ಣತನಕ್ಕೆ ತಾವೇ ನಾಚಿಕೊಳ್ಳುತ್ತಾರೆ. ನನ್ನನ್ನು ಅರ್ಥಮಾಡಿಕೊಳ್ಳುವ ವಿದ್ಯೆ, ವಯಸ್ಸು ಅವನದಲ್ಲ. ಆದರೂ ನನ್ನ ದಿನಚರಿಯನ್ನು ಅವನೊಬ್ಬನೇ ಓದಿದವನು. ಯಾವುದೋ ಅಸ್ಪಷ್ಟ ರೀತಿಯಲ್ಲಿ ನಾವಿಬ್ಬರೂ ಸ್ನೇಹಿತರಾಗಿದ್ದೆವು. ಸ್ನೇಹಿತನಿಗೆ ಕೂಡ ತಿಳಿಸದೆ ಓಡಿಹೋಗಬೇಕೆ ? ಅಥವಾ ನಮ್ಮ ಸ್ನೇಹವೇ ಅರಳಿರಲಿಲ್ಲವೆ ? ಅವನನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸಲಿಲ್ಲವೆ? ಎಂದುಕೊಳ್ಳುತ್ತಾರೆ. ಅವರು ಸ್ನೇಹಿತರಾಗಿದ್ದರೂ ಅವರಿಬ್ಬರ ಸ್ನೇಹ ಪೂರ್ಣ ಅರಳಿರಲಿಲ್ಲ. ಅದಕ್ಕೆ ವಯಸ್ಸಿನ, ಅಂತಸ್ತಿನ ಕಾರಣವಿರಬೇಕು.

ವಿಶ್ವನಾಥ, ದೇಶಪಾಂಡೆ ವಕೀಲರಿಂದ ದೂರವಾದರೂ ಅವರ ಪ್ರಭಾವದಿಂದ ದೂರವಾಗಲಿಲ್ಲ. ಅವರ ದಿನಚರಿಯಿಂದ ಪ್ರೇರಿತನಾದ ಅವನೂ ಮುಂದೆ ದಿನಚರಿ ಬರೆಯುತ್ತಾನೆ. ಅವನು ಬರೆದ ದಿನಚರಿ ಮುಂದೆ ಅವನ ನಿಗೂಢ ವ್ಯಕ್ತಿತ್ವವನ್ನು ಅರಿತುಕೊಳ್ಳಲು ಕೆಲವರಿಗೆ ಸಹಾಯವಾಗುತ್ತದೆ.

* * *

ವಿಶ್ವನಾಥನ ಜೀವನದಲ್ಲಿ ಪ್ರವೇಶಿಸಿದ ಇನ್ನೊಬ್ಬ ವ್ಯಕ್ತಿ, ಜಕ್ಕಾಜಿ ಮಾಸ್ತರ. ವಿಶ್ವನಾಥನ ಜೀವನ ಪ್ರವಾಹ ಎಷ್ಟೊಂದು ಅಂಕುಡೊಂಕು ! ಈ ಜಕ್ಕಾಜಿ ಮಾಸ್ತರರು ಒಂದು ನಾಟಕ ಕಂಪನಿಯ ಪೇಟಿ ಮಾಸ್ತರ. ರಾಣೆಬೆನ್ನೂರು ಬಿಟ್ಟು ಹುಬ್ಬಳ್ಳಿಯಲ್ಲಿ

ನೌಕರಿಗಾಗಿ ಅಲೆಯುವಾಗ ಈ ನಾಟಕ ಕಂಪನಿ ಸೇರುತ್ತಾನೆ ವಿಶ್ವ. ವಿಶ್ವನ ಸರಳತೆ ಮಾಸ್ತರರಿಗೆ ಪ್ರೀತಿ. ಮುಖ್ಯ ಪಾತ್ರಧಾರಿ ಸವಣೂರ, ಕಂಪನಿ ಮಾಲಕನ ಜತೆ ತಕರಾರು ಮಾಡಿದಾಗ, ಜಕ್ಕಾಜಿ ಮಾಸ್ತರರು ಒಂದೇ ದಿನದಲ್ಲಿ ವಿಶ್ವನನ್ನು ಚಾರುದತ್ತನ ಪಾತ್ರಕ್ಕೆ ತಾಲೀಮು ಮಾಡಿಸುತ್ತಾರೆ. ಒಂದೆ ನಾಟಕದ ಗೀಳಿದ್ದ ವಿಶ್ವ ಇಂದು ನಾಟಕದಲ್ಲಿ ಮುಖ್ಯ ಪಾತ್ರಧಾರಿ. ವಿಶ್ವನಿಗೆ ಇದು ನಾಟಕ, ಇದು ನಿಜ ಜೀವನವೆಂಬ ಭೇದವಿಲ್ಲ. ನಿಜ ಜೀವನದಲ್ಲೂ ಅವನು ಚಾರುದತ್ತ, ಮಾಲತಿಯು ವಸಂತಸೇನೆಯುರಾಗುತ್ತಾರೆ. ವಯಸ್ಸಿನಿಂದ ಹಿರಿಯಳಾದರೂ ಮಾಲತಿಯನ್ನು ಮದುವೆಯಾಗಿ ಸಂಸಾರ ಮಾಡಬಯಸುತ್ತಾನೆ. ಮಾಲತಿಗೆ ಇದು ಸಾಧ್ಯವಿಲ್ಲದುದು. ತನಗೆ ಬೇಡವೆಂದರೆ ವಿಶ್ವ ಅಲ್ಲಿ ಒಂದು ನಿಮಿಷವೂ ನಿಲ್ಲುವವನಲ್ಲ. ಮಾಲತಿ ಪ್ರಸಂಗ, ನಾಟಕ ಕಂಪನಿ ವಿಶ್ವನನ್ನೇ ಮುಂಬಯಿಗೆ ಹೋಗಹಚ್ಚುತ್ತದೆ. ಜಕ್ಕಾಜಿ ಮಾಸ್ತರರ ಪ್ರಯತ್ನ ವ್ಯರ್ಥ. ಸವಣೂರನ ಕಾರಣವಾಗಿ ಕಂಪನಿ ದಿವಾಳಿ ತೆಗೆಯುತ್ತದೆ. ಕಂಪನಿ ಜಪ್ತಮಾಡುವಾಗ ಜಕ್ಕಾಜಿಯವರು ಸವಣೂರನಿಗೆ ಒಂದೇಟು ಕೊಟ್ಟರೆ ಅವನೂ ಪ್ರತಿಯಾಗಿ ಕೈ ಎತ್ತುತ್ತಾನೆ. ಅದು ತಪ್ಪು. ಗುರುಗಳು ಕೈಮುಗಿ ಎಂದು ಯಾರೋ ಹೇಳಿದಾಗ ಜಕ್ಕಾಜಿಯವರು ಇವನೆಂಥ ಶಿಷ್ಯ ! ನನ್ನ ಶಿಷ್ಯ ಬೇರೆ ಇದ್ದಾನೆ, ವಿಶ್ವನಾಥ. ಇವನಿಗೆ ಇಪ್ಪತ್ತು ಸರಿ ಹೇಳಿದರೂ ಒಂದು ಮಾತೂ ಸರಿಯಾಗಿ ಬರುತ್ತಿರಲಿಲ್ಲ. ಒಂದೇ ದಿನದಲ್ಲಿ ಚಾರುದತ್ತ ಮಾಡಿ ತೋರಿಸಿದ, ವಿಶ್ವನಾಥ. ಗಾಡಿ ಹತ್ತುವಾಗ ಕಾಲುಮುಟ್ಟಿ ನಮಸ್ಕರಿಸಿದ. ಸವಣೂರನ ಉದ್ಧಟತನವನ್ನೂ ವಿಶ್ವನ ಶಾಂತಿ, ಗೌರವಪೂರ್ಣ ವ್ಯಕ್ತಿತ್ವವನ್ನೂ ತೂಗಿ ನೋಡಹಚ್ಚುತ್ತದೆ. ಮಾಲತಿ ಪ್ರಸಂಗ ಮಾಸ್ತರರಿಗೆ ತಮ್ಮ ಜೀವನದಲ್ಲಿ ನಡೆದ ಒಂದು ಘಟನೆಯನ್ನು ನೆನಪಿಗೆ ತರುತ್ತದೆ. ಗರುಡ ಕಂಪನಿಯಲ್ಲಿದ್ದಾಗ ತಾರಾಬಾಯಿಯನ್ನು ಮದುವೆಯಾಗುವ ಇಚ್ಛೆ ಹುಟ್ಟಿತ್ತು –ವಿಶ್ವನಂತೆ. ಸೂಳೆಯರಿಗೂ ಮನೆತನಸ್ಥ ಗಂಡುಮಕ್ಕಳಿಗೂ ಹೇಗೆ ಸಂಬಂಧ ಬೆಳೆಸುವುದು ? ಒಂದುವೇಳೆ ಮದುವೆಯಾಗಿದ್ದರೆ ಮಕ್ಕಳಾಗಿ ಒಬ್ಬರಿಗೊಬ್ಬರು ಮುಪ್ಪಿನ ಕಾಲದಲ್ಲಿ ನೆರವಾಗಬಹುದಿತ್ತು. 'ಆಗ್ತಾವೆ ರಂಡೆಮಕ್ಕಳು !' ಜಕ್ಕಾಜಿ ಮಾಸ್ತರರ ಉದ್ಗಾರ. ವಿಶ್ವನಿಗೆ ಸಂಗೀತ ಹೇಳಿಸುತ್ತಿದ್ದರು. ಅವನನ್ನು ನಟಸಾರ್ವಭೌಮನನ್ನಾಗಿ ಮಾಡಬೇಕೆಂಬ ಇಚ್ಛೆಯಿತ್ತವರಿಗೆ. ಈಗಲೂ ನಿರಾಶರಾಗಿಲ್ಲ. ಬನಹಟ್ಟಿ, ಹೊಲಮಾರಿ ಹಣ ತಂದರೆ ಮತ್ತೆ ಕಂಪನಿ ಕಟ್ಟಿ ವಿಶ್ವನನ್ನು ಹುಡುಕಿ ತರುವ ಸನ್ನಾಹ. ನಾಟಕದ ಗೀಳು ಅಂಥದು. ಮನೆಮಾರು ತೊರೆಯಹಚ್ಚುತ್ತದೆ. ಬನಹಟ್ಟಿಯಂತೆ ಆಸ್ತಿ ಮಾರಿ ನಾಟಕ ಕಂಪನಿ ಕಟ್ಟಿ, ಕೈಯಲ್ಲಿ ಪರಟಿ ಹಿಡಿದವರೂ ಸಾಕಷ್ಟು ಜನ. ಇದು ನಮ್ಮ ರಂಗಭೂಮಿಯ ವಾಸ್ತವಿಕ ಚಿತ್ರ.

ಮಾಲತಿಬಾಯಿಗೆ ಹೊಟ್ಟೆಪಾಡಿಗೆ ಸವಣೂರನ ನಾಟಕದಲ್ಲಿ ಪಾತ್ರವಹಿಸಬೇಕಾಗುತ್ತದೆ. ಕುಡಿದು ಮಾಲತಿಯನ್ನು ಪೀಡಿಸುತ್ತಿರುತ್ತಾನೆ–ಸವಣೂರ. ಅವಳನ್ನು

ಎರಡು ಮೂರು ಸಲ 'ಏಯ್' ಎಂದು ಏಕವಚನದಲ್ಲಿ ಸಂಬೋಧಿಸಿರುತ್ತಾನೆ. ಮಾಲತಿ ಅವನ ನಡತೆಗೂ ವಿಶ್ವನಾಥನಿಗೂ ಹೋಲಿಕೆ ಮಾಡುತ್ತಾಳೆ. ಒಂದು ದಿನವೂ ಒರಟಾಗಿ ಮಾತಾಡುತ್ತಿರಲಿಲ್ಲ. ಅದೆಷ್ಟು ಪ್ರೀತಿ ಅವರದು. ಬೆಳಿಗ್ಗೆ ಎಬ್ಬಿಸಿ ಕಳಿಸಬೇಕಾದರೆ ಕಷ್ಟವಾಗುತ್ತಿತ್ತು. 'ನೆನಸಿಕೊಂಡ್ರೇ' ಹಾಯ್ ಅನಿಸುತ್ತದೆ. ಮತ್ತೆ, ಮತ್ತೆ ಹಂಗಾಗ್ಲಿ, ಅದೇ ಸಿಗಲಿ ಅನ್ನಿಸ್‌ತದೆ. ಕತ್ತಲಲ್ಲೇ ಕಣ್ಣೀರು ಉಕ್ಕುವ ಹಂಗೆ ಪ್ರೇಮ. ಮತ್ತೆ ಯಾವ ಗಂಡಸಿಗೂ ಶಕ್ಯವಿಲ್ಲದ ಪ್ರೇಮ. ನಾನೇ ಕಳಕೊಂಡೆನೋ, ಯಾಕ ಹಿಂಗಾತೋ? ಮದುವೆಗೆ ಒಪ್ಪಿಬಿಟ್ಟಿದ್ರ ಏನ ತಪ್ಪಾಗತಿತ್ತು!' ಸವಣೂರ ಎದ್ದು ಸ್ವಿಚ್ ಹಾಕಿದ. 'ಏ ಮಾಲತಿ, ನಿದ್ದೆ ಬಂತೇನೆ? ಸೂಳಿಮಗ ಒಮ್ಮೆ ಜೋಡಿಲಿ ಮಕ್ಕಂಡೆ ಅಂತ ಏಯ್! ಏನೇ! ಶುರುಮಾಡಿದ. ವಿಶ್ವನಾಥ....! ಮಾಲತಿ ಅನ್ರಿ, ನೀನು ಅನ್ರಿ ಎಂದು ಹೇಳಬೇಕಾತು. ಮಾಲತಿಯ ಮನಸ್ಸಿನಲ್ಲಿ ಅಳಿಸಲಾರದ ಚಿತ್ರ ಮೂಡಿಸಿದ್ದ ವಿಶ್ವನಾಥ.

ಸವಣೂರನಿಗೆ ವಿಶ್ವನಾಥನೆಂದರೆ ಹೊಟ್ಟೆಕಿಚ್ಚಿತ್ತು. ಅವನ ಸ್ಥಾನ ಕಿತ್ತುಕೊಂಡ ಅಸಮಾಧಾನ. ಅವನಿಗೆ ತನ್ನಂತೆ ಹಾಡಲು ಬರುತ್ತಿತ್ತೆ? ಜನರೆ ಅವನು ಚಾರುದತ್ತ ನಾಗಿ ಹಾಡದಿದ್ದಾಗ ಗಲಾಟೆ ಮಾಡಿದ್ದು ಇವನಿಗೆ ಸಂತೋಷ. ಅರಸಿಕೇರಿ ಮುಖ ಹಂದಿ ಹಂಗ. 'ಇಂಥಾ ಅಗದೀ ಸುಂದರ ಮುಖ ಸಿನಿಮಾ ಹಾಕ್ಟರಿಗೂ ಇಲ್ಲ ಅಂತ ಹಾಟೆಲ್ ಗದಗೀಮಠ ಅಂದದ್ದು ಸುಳ್ಳೇನು. ಅರಸಿಕೇರಿದು ಬರೀ ಮೇಕ್‌ಅಪ್' ಅನ್ನುತ್ತಾನೆ. ವಿಶ್ವ ಮತ್ತು ಮಾಲತಿಯರ ಸಂಬಂಧವೂ ಅವನಿಗೆ ಅಸಹನೀಯ. ಅದನ್ನು ಮಾಲತಿಗೆ ಚುಚ್ಚಿ ಚುಚ್ಚಿ ಮಾತಾಡುತ್ತಿರುವಾಗ 'ನಾಯಿ ಹಂಗೆ ಜಗಳಬ್ಯಾಡ ಸುಮ್ಮಾಕಿರು', ಎಂದು ಅನ್ನಿಸಿಕೊಳ್ಳಬೇಕಾಗುತ್ತದೆ.

ಸವಣೂರನಂಥ ನಟರು, ಮಾಲತಿಯಂಥ ನಟಿಯರು, ಜಕ್ಕಾಜಿ ಮಾಸ್ತರರು, ಬನಹಟ್ಟಿ, ನಾಟಕ ಕಂಪನಿಗಳು, ಅಲ್ಲಿಯ ಒಡಕು, ಕಂಪನಿಗಳ ದಿವಾಳಿ, ಮತ್ತೆ ಕಟ್ಟು ವದು, ಹೆಣ್ಣು, ಹೆಂಡ, ತೆರೆಯಮರೆಯಲ್ಲಿ. ಇದೆಲ್ಲ ಲೇಖಕರು ಕಂಡ ಕನ್ನಡ ರಂಗಭೂಮಿಯ ನೈಜ ಚಿತ್ರಣ. ಇಲ್ಲೂ ತಂತ್ರದ ಮೊದಲನೆ ವಿಧಾನ. ವಿಶ್ವನ ಬಗ್ಗೆ ಹೇಳಿಕೆ ಅಪ್ರತ್ಯಕ್ಷ.

ವಿಶ್ವನ ಜೀವನದಲ್ಲಿ ಎಂಥೆಂಥ ಪಾತ್ರಗಳು ನಾಟ್ಯವಾಡಿವೆ! ದೇಶಪಾಂಡೆ ವಕೀಲರಂಥ ಗಣ್ಯವ್ಯಕ್ತಿಗಳು, ಸರಸಿಯಂಥ ಹೆಣ್ಣು ಜೀವ, ಶರಬಣ್ಣ, ಗಂಗಣ್ಣನಂಥ ಸ್ನೇಹಿತರು, ಜಕ್ಕಾಜಿ ಮಾಸ್ತರರಂಥ ಕಳಕಳಿಯ ಜೀವಿಗಳು, ಮಾಲತಿಯಂಥ ಪ್ರೇಮಮಯಿಗಳು. ಸ್ವಭಾವ, ಗುಣ, ಅಭ್ಯಾಸಗಳಿಂದ ಬೇರೆ ಬೇರೆಯಾದ ಜನ ರೊಂದಿಗೆ ಬೆರೆತ ವಿಶ್ವನ ವೃತ್ತಾಂತ ಪುಟ ಪುಟಗಳಲ್ಲಿ ಕ್ಲಿಷ್ಟತೆಯನ್ನು ಬೆಳೆಸಿಕೊಂಡು ಹೋಗುತ್ತದೆ. ಇಲ್ಲಿಯೂ ಬಳಸಿದ್ದು ಉತ್ತರ ಕರ್ನಾಟಕದ ಭಾಷೆ. ದೇಶಪಾಂಡೆ ವಕೀಲರ ಪ್ರಕರಣದಲ್ಲೂ ಉತ್ತರ ಕರ್ನಾಟಕದ ಭಾಷೆಯನ್ನೇ ಬಳಸಲಾಗಿದೆ.

'ಯಾರಾದರೂ ವಕೀಲ್‌ರಾದ್ರು ಚಲೋ'

'ರೊಕ್ಕ ಕೇಳ್ತಾರು ?'

'ಏ ಚನ್ನವ್ವಾ ಬಾಗಿಲಾ ತಗಿ'

'ಅವರಿಗೂ ನಿನಗೂ ಪಸಂದ ಬಿದ್ದದ ?'

'ಅವರು ಶಪಿಸಿದ್ರು ನಿನಗ್ಯಾಕ ಹೆದ್‌ರಿಕಿ ?'

'ಅಡಿಗೆಗೆ ಇದ್ದಾನಲ್ಲ ಅರಸಿಕೇರಿಯವನಿಗೆ ಬಹಳ ಸೊಕ್ಕದ ಅಲ್ಲ ?'

'ಆಗ್ತಾವೆ ರಂಡಿ ಮಕ್ಕಳು'

'ಈ ಕತ್ತಿಗೆ ಇಪ್ಪತ್ತಸರ್ತಿ ತಿದ್ದಿದರೂ ಒಂದ ಮಾತು ಸರಿಯಾಗಿ ಹ್ವರಡ್‌ತಿರಲಿಲ್ಲ.'

'ಜಪ್ತ ಆರ್ಡರ ತಂದಿದಾರ ಅಂತ ಸುದ್ದಿ ಹತ್ತೈತ್ರಿ.'

'ಭಪ್ಪರೆ ಮಗ'

'ನಾಟಕದಲ್ಲೂ ಪ್ರೀತಿ, ವಿರಹ, ಪ್ರಣಯ ಹ್ಯಾಂಗೆ ತೋರಿಸಿದ್ದ.'

'ನಸೀಬು ಕೆಟ್ಟಾಕಿ ನಾನು'

ಇವೆಲ್ಲ ಉತ್ತರ ಕರ್ನಾಟಕದ ಸತ್ವಭರಿತ ಭಾಷಾಪ್ರಯೋಗಕ್ಕೆ ಉದಾಹರಣೆಗಳು. ಆದರೂ 'ನಾಟಕದಲ್ಲೂ', 'ಹಂಗೆ', 'ಅವನಿಗೆ' ಮುಂತಾಗಿ ಕೆಲ ಶಬ್ದಗಳು ಲೇಖಕರ ಅಭ್ಯಾಸ ಬಲದಿಂದ ಅರಿವಿಲ್ಲದಂತೆ ಉಳಿದುಕೊಂಡಿವೆ.

* * *

ರಂಗಪ್ಪಸ್ವಾಮಿಯ ಪ್ರವೇಶ ಕಾದಂಬರಿಯಲ್ಲಿ ರಸಘಟ್ಟ. ಕಾದಂಬರಿಯನ್ನು ಕುತೂಹಲದಿಂದ ಓಡಿಸಿಕೊಂಡು ಹೋಗುವದು. ಪಾತ್ರಗಳು ತಮ್ಮನ್ನು ತಾವು ಸಂಪೂರ್ಣವಾಗಿ ಅರಿತುಕೊಳ್ಳುವದೂ, ಲೇಖಕರೂ ಆಳಕ್ಕಿಳಿಯುವದೂ, ಸಾಹಿತ್ಯ ಎತ್ತರಕ್ಕೆ ನಿಲ್ಲುವದೂ ಇಲ್ಲಿ, ಈ ಪ್ರಕರಣದಲ್ಲಿ. "ಕಾಮ ಕೆಟ್ಟದ್ದಲ್ಲ, ವಿಕೃತ ಕಾಮ ಕೆಟ್ಟದ್ದು". ಲೇಖಕರು ಅಂತರಂಗ ಶೋಧಿಸಿ ಹೊರತಂದ ಅನುಪಮ ಪದಪುಂಜ. ವಿಕೃತ ಕಾಮಕ್ಕೊಳಗಾದ ರಂಗಸ್ವಾಮಿಗಳಿಗೆ ಶಿಷ್ಯನಾಗಿ ಬಂದ ವಿಶ್ವ ಗುರುವಾಗಿ ಉಪದೇಶಮಾಡಿ ಅಲ್ಲಿಂದ ಕಣ್ಮರೆಯಾಗುತ್ತಾನೆ. ರಂಗಪ್ಪನವರ ವಿಷಯ ಬೇಗ ಅರ್ಥವಾಗುವದಿಲ್ಲ. ಮಾತು ಅರ್ಥಮಾಡಿಕೊಳ್ಳಬೇಕಾದರೆ ಬಹಳಷ್ಟು ವಿಚಾರಿಸಿದ ನಂತರ ಓಹೋ ಹೀಗೋ ಎಂದು ಹೊಳೆಯುತ್ತದೆ. ಆದರೆ ಮಾತಿನ ಇಂಗಿತಾರ್ಥ ಸ್ಪಷ್ಟ. ಇದು ಬರವಣಿಗೆಯಲ್ಲಿ, ಮಹತ್ತರ ಬದಲಾವಣೆ. ಶೈಲಿಯ ವಿಶೇಷತೆ ಈ ಪ್ರಕರಣದಲ್ಲಿ. ಅದನ್ನು ರಂಗಪ್ಪನವರು ಆತ್ಮಭರ್ತ್ಸನೆ ಮಾಡಿಕೊಳ್ಳುವಾಗ ನೋಡೋಣ.

ವಿಶ್ವಾಮಿತ್ರನು ವಿಶ್ವಕ್ಕೆ ಮಿತ್ರನಾಗಬಯಸಿ ತಪಸ್ಸಿಗೆ ತೊಡಗಿರುತ್ತಾನೆ. ಇಂದ್ರ ಮತ್ಸರದಿಂದ ತನ್ನ ಪಟ್ಟ ಹೋದೀತೆಂಬ ಹೆದರಿಕೆಯಿಂದ, ವಿಶ್ವಾಮಿತ್ರನ ತಪಸ್ಸು ಕೆಡಿಸಲು ರಂಭೆ, ಮೇನಕೆಯರನ್ನು ಕಳಿಸುತ್ತಾನೆ. ಪುರಾಣದಲ್ಲಿ ಯಾರೋ ಹೇಳಿದ್ದು ಮುಂದೆ ಎಲ್ಲರೂ ಅದು ನಿಜವೆನ್ನುವಂತೆ ಮಾಡಿತು. ವಿಶ್ವಕ್ಕೆ ಮಿತ್ರನಾಗಲು ತಪಸ್ಸು ಮಾಡುವವನಿಗೆ ಶತ್ರುಗಳೆಲ್ಲಿಂದ! ಇಂದ್ರ ಅವನ ಮಿತ್ರ. ಅವನ ಆಧ್ಯಾತ್ಮ ಯಾವುದೋ ಕೊರತೆಯಿಂದ ಮುದುರಲು ಆರಂಭವಾಗಿರುತ್ತದೆ. ಇಂದ್ರ ವಿಶ್ವಾಮಿತ್ರನನ್ನು ಕೆಲದಿನ ಸ್ವರ್ಗದ ಅತಿಥಿಯಾಗಲು ಆಹ್ವಾನಿಸುತ್ತಾನೆ. ಭೂಮಿಯ ಮನುಷ್ಯನಿಗೆ ಸ್ವರ್ಗದ ಭೋಗವೇಕೆಂದು ವಿಶ್ವಾಮಿತ್ರ ನಿರಾಕರಿಸುತ್ತಾನೆ. ಇಂದ್ರ ಸ್ವರ್ಗವನ್ನೇ ಮೇನಕೆಯ ರೂಪದಲ್ಲಿ ವಿಶ್ವಾಮಿತ್ರನ ಬಳಿಗೆ ಕಳಿಸುತ್ತಾನೆ. ಮೇನಕೆ ವಿಶ್ವಾಮಿತ್ರನ ಹೆಂಡತಿಯಾಗಿ, ದೇವತಾರಹಸ್ಯಗಳನ್ನು ಅರುಹಿ ಆತ್ಮಸಾಧನೆಗೆ ಸಹಾಯಕಳಾದಳು. ಮತ್ತೊಮ್ಮೆ ಘೃತಾಚಿ ವಿಶ್ವಾಮಿತ್ರನ ಸಹಾಯಕ್ಕೆ ಸತಿಯಾಗಿ ಬಂದಳು. ವಶಿಷ್ಠರ ಶೋಕ ನಿವಾರಣೆಗೆ ೫೦ ಮಕ್ಕಳನ್ನು ಬಲಿಕೊಡಲು ವಿಶ್ವಾಮಿತ್ರನೊಂದಿಗೆ ಸಹಕರಿಸಿ, ಪುತ್ರಶೋಕವನ್ನು ಸಹಿಸಿ ವಿಶ್ವಾಮಿತ್ರನನ್ನು ವಿಶ್ವಕ್ಕೆ ಮಿತ್ರನನ್ನಾಗಿ ಮಾಡಿ ಹೊರಟು ಹೋದಳು. ವಿಶ್ವಾಮಿತ್ರ ಮಾಗಿದ ಮಹರ್ಷಿಯಾದ, ಬ್ರಹ್ಮರ್ಷಿಯಾದ. 'ಒಂದು ಹೆಣ್ಣನ್ನು ಅಖಂಡವಾಗಿ ಅನುಭವಿಸಿ, ಆ ಮೇಲೆ ಅದರಲ್ಲಿ ನಿರಾಸಕ್ತಿ ಹುಟ್ಟಿದರೆ ನಿಮ್ಮಲ್ಲಿ ಆಧ್ಯಾತ್ಮ ಮಾಗುತ್ತದೆಯಂತ ಗುರುತು. ಕಾಮ ಕೆಟ್ಟದ್ದಲ್ಲ, ವಿಕೃತ ಕಾಮ ಕೆಟ್ಟದ್ದು. ವಿಶ್ವನಾಥ ಗುರುವೆಂದು ಭಾವಿಸಿದ ರಂಗಸ್ವಾಮಿಗಳಿಗೆ ಉಪದೇಶಿಸಿ ಹೊರಟುಹೋದ. ಕಾಮಪ್ರೇಮಗಳ ಹಿತಮಿತವಾದ ಬೆರಕೆ ಜೀವನವನ್ನು ಹದಗೊಳಿಸಿದರೆ, ವಿಕೃತಕಾಮ ಮನುಷ್ಯನನ್ನು ಅಧಃಪತನಕ್ಕೆಳಸುತ್ತದೆ.

ವಿಶ್ವ ತನ್ನ ಸ್ವಂತ ಅನುಭವವನ್ನು ಹೇಳುತ್ತಾನೆ. ರೈಲಿಗೆ ತಲೆಕೊಡಬಯಸಿದ ಅವನನ್ನು ಉಳಿಸಿದವಳು ಹಿಂದೆ ಅವನು ನಾಟಕದಲ್ಲಿ ಕಂಡ ದಾಸರಳ್ಳಿ ಮುನಿಯಮ್ಮ. ಆತ್ಮಹತ್ಯೆಗೆ ಬಯಸಿದ್ದ ಅವನಿಗೆ ಸುಖಕೊಟ್ಟು ಬದುಕುವ ಆಶೆ ಚಿಗುರಿಸಿದಳು. ಅವನಿಗೆ ಮೊಟ್ಟ ಮೊದಲಿನ ಅನುಭವವದು. ಅವನಿಗೆ ಮುಂದೆಂದೂ ಅಂಥ ಉದ್ವಿಗ್ನತೆ ಹೊಸ ಹುಟ್ಟು ಬರಲಿಲ್ಲ. ನರ ನರಗಳಲ್ಲಿ ಆತ್ಮವಿಶ್ವಾಸ ಚಿಗುರಿಸಿದ ಅವಳನ್ನು ವಿಶ್ವ ಲಂಪಟತನದಿಂದಲ್ಲ, ಜೀವವುಳಿಸಿದಳೆಂಬ ಕೃತಜ್ಞತೆಯಿಂದ ನೆನೆಯುತ್ತಿದ್ದ.

ರಂಗಪ್ಪನವರಿಗೆ ವಿಶ್ವನ ಮುಖವೆತ್ತಿ ನೋಡುವ ಧೈರ್ಯವಿರಲಿಲ್ಲ. ಅವಮಾನ ಆವರಿಸಿತ್ತು. ಬೈಯ್ದು ಕೆನ್ನೆಗೆ ಹೊಡೆದು ಹೋಗಿದ್ದರೆ ಅವರಿಗೆ ಅಷ್ಟು ಕೆಡುಕೆನಿಸುತ್ತಿರಲಿಲ್ಲ. ಅಷ್ಟು ಮಾಡಿದ್ದರೆ ಅವರಿಗಿಷ್ಟು ಬಾಧಿಸುತ್ತಿರಲಿಲ್ಲ. ಹೇಳದೆ ಕೇಳದೆ ಹೊರಟುಹೋದದ್ದು ಸಂಬಂಧ ಕಡಿದ ಗುರುತೇ ? ಎಂದು ಚಿಂತಿಸುವಂತಾಯಿತು. ರಂಗಪ್ಪನವರು ಮಾಡಿದ ತಪ್ಪಾವುದು ? ಅದನ್ನು ಕಾದಂಬರಿಕಾರರ ಮಾತಿನಲ್ಲೇ ಹೇಳಿಬಿಡುವುದು ಉತ್ತಮ. "ಬೇಳೆ ಇನ್ನೊಂದು ಕುದಿ ಬಂದಮೇಲೆ ಅಕ್ಕಿ ಹಾಕಬೇಕು. ತೊಳೆದು ತರಲು ಎದ್ದರು. ಬಿಂದಿಗೆಯಲ್ಲಿಯ ನೀರು ಬಗ್ಗಿಸಿ ಅಕ್ಕಿಯನ್ನು ಹಿಸುಕಿ

ಹಿಸುಕಿ ತೊಳೆದರು. ಉಪೇಕ್ಷಿಸಬೇಕು, ತುಳಿಯಬೇಕು, ಮೆಟ್ಟಬೇಕು, ಸಂಯಮದ ಕಟ್ಟಿಗೆ ಸಿಕ್ಕಿಸಿ ಹಿಸುಕಿ ಸಾಯಿಸಿ. ಒಂದೊಂದು ದಿನ ಎಂಥ ವಿಕಾರ! ಪೀಡಿಸಿ, ಪೀಡಿಸಿ, ಕೈಯನ್ನೇ ಸಾಧನವಾಗಿಸಿ ಹೊಮ್ಮಿಸಿ ತೊಳೆದೆಸೆಯುವತನಕ ಅನಂತರ ಪೀಡನೆಯಿಲ್ಲ. ಖೇದ, ವ್ಯಸನ, ಆತ್ಮಭರ್ತ್ಸನೆ; ಮತ್ತೆ ಬಲಿಯಾಗುವದಿಲ್ಲವೆಂಬ ನಿರ್ಧಾರ, ಹಗುರವಾದ ಮನಸ್ಸು, ಮೆಲುಗಾಳಿಯಲ್ಲಿ ತೇಲುವ ಬಿಳಿ ಮೋಡದಂತೆ ತೇಲಿ ತೇಲಿ ಬಯಕೆಯ ಕ್ರೌರ್ಯವಿಲ್ಲದ ಸುಖ. ಮತ್ತೊಂದು ದಿನ ಬಿಳಿ ಮೋಡವು ಕಪ್ಪು ತಿರಗುವ ಸೂಚನೆ. ಎಷ್ಟು ಎಚ್ಚರವಾದರೂ ಬಿಡದೆ ತಿರುಗಿಯೇ ತಿರುಗುತ್ತದೆ. ಹಿಂಸೆ, ಭರ್ತ್ಸನೆ, ಖೇದ, ಉನ್ಮಾದ ಹಿಂದೆ ಸುರಿದು ಮತ್ತೆ ಬಾನು ತಿಳಿಯಾಗುವ ತನಕ. ಆದರೆ ಪರಾಧಾರಿತ ಮೋಹವಲ್ಲ. ಕೆಟ್ಟದ್ದರಲ್ಲಿ ಮಧ್ಯಸ್ತ ಎಂಬ ಸಮಾಧಾನ." ಇದು ರಂಗಪ್ಪನವರ ತಪ್ಪು ಮತ್ತು ಆತ್ಮಭರ್ತ್ಸನೆಗೆ ಕಾರಣವಾದುದು.

ಮೇಲಿನ ಸಂದರ್ಭದಲ್ಲಿ ಬರವಣಿಗೆ, ಮಾತು ಸ್ಪಷ್ಟವಾಗದಿದ್ದರೂ ಅರ್ಥ ಸ್ಪಷ್ಟವಾಗುತ್ತದೆ. ಇದು ರಚನೆಯಲ್ಲಿಯ ಮಹತ್ತರವಾದ ಬದಲಾವಣೆ ಮತ್ತು ಶೈಲಿಯ ವಿಶೇಷತೆ.

ರಂಗಪ್ಪಸ್ವಾಮಿಗಳು ವಿಶ್ವನನ್ನು ಹುಡುಕಿಕೊಂಡು ಮುಂಬಯಿಗೆ ಬರುತ್ತಾರೆ. ಅವನು ಬಿಟ್ಟುಹೋದ ಹಣಕೊಟ್ಟು ಕ್ಷಮೆ ಕೇಳುವದು ಉದ್ದೇಶ. ಪಲಸೀಕರರ ಪುಸ್ತಕ ಭಂಡಾರಕ್ಕೆ ವಿಶ್ವ ಬಂದಿರಲಿಲ್ಲ. ಪಲಸೀಕರರೇ ವಿಶ್ವನಿಗೆ ಆಧ್ಯಾತ್ಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಹಚ್ಚಿದವರು. ರಂಗಪ್ಪಸ್ವಾಮಿಗಳ ಜತೆ ಹೋಗಲು ಸೂಚಿಸಿದವರೂ ಅವರೇ. ಪಲಸೀಕರರ ಜತೆಗೆ ವಿಶ್ವ ವಾಸಿಸುತ್ತಿದ್ದ ಸುಕಲಾಜಿ ಬೀದಿಯ ಕೋಣೆಗೆ ಹೋಗುತ್ತಾರೆ. ಅದೊಂದು ವೇಶ್ಯಾಬೀದಿ. ಟ್ಯಾಕ್ಸಿಗಳು, ವಿಕ್ಟೋರಿಯಾ ಗಾಡಿಗಳು. ಅಂತಸ್ತಿನ ಮೇಲೆ, ಕಿಡಕಿಯಲ್ಲಿ ನಿಂತು ಬೀದಿಯಲ್ಲಿ ಹೋಗುವವರನ್ನು ಕರೆಯುವ ಹೆಂಗಸರು. ರಂಗಪ್ಪನವರ ಮೈ ಬೆವರಿತು. ವಿಶ್ವ ವಾಸಿಸುತ್ತಿದ್ದ ಕೋಣೆ, ಮುಂಬಯಿ ನಿಜಜೀವನ ಕಾಣುವದಲ್ಲಿ. ೭–೮ ಜನ ಒಂದೇ ಕೋಣೆಯಲ್ಲಿ. ಒಬ್ಬರು ಹೋದರೆ ಮತ್ತೊಬ್ಬರು ಬರುತ್ತಿರುತ್ತಾರೆ. ಆ ಸೆಕೆ, ಕುದುರೆ ಲದ್ದಿಯ ಗಬ್ಬು ವಾಸನೆ, ಅಂಥದರಲ್ಲಿ ಕೊಂಡವಾಡೆಯಲ್ಲಿ ವಾಸಿಸುವ ದನಗಳಂತೆ ಜನ ವಾಸಿಸುವದು. ವಿಶ್ವ ಅಲ್ಲಿಲ್ಲವೆಂದು ರಂಗಸ್ವಾಮಿಗಳಿಗೆ ನಿರಾಶೆ. ಫಲಸೀಕರರು ಗಂಭೀರವಾಗಿ, "ಇಂಥ ಜಾಗದಲ್ಲಿ ವಾಸಿಸುತ್ತಿದ್ದರಿಂದ ಆಧ್ಯಾತ್ಮ ಸಹಜವಾಗಿ ಬಲಿತಿದೆ. ಯಾವತ್ತೂ ಅಷ್ಟೇ. ಅರಣ್ಯದಲ್ಲೇ ಹುಟ್ಟಿ ಬೆಳೆದೋರಲ್ಲಿ ಅದು ಬಲಿಯುವದಿಲ್ಲ. ಹ್ಯಾಗೆ ಬಲಿಬೇಕು? ಕಾರಣಬೇಕಲ್ಲ". ವಿಶ್ವ ಸೂಳೆಯರ ಸಹವಾಸ ಮಾಡಿದವ, ಸಾಕಷ್ಟು ಅನುಭವಿಸಿದವ, ಅವನೆದುರು ತಮ್ಮದೇನು ಮಹಾ ಎಂದು ಸಮಾಧಾನಪಟ್ಟುಕೊಳ್ಳುತ್ತಿದ್ದ ರಂಗಸ್ವಾಮಿಗಳ ಸಮಾಧಾನಕ್ಕೆ ಪಲಸೀಕರರು ವಿಶ್ವನ ಕುರಿತು ಆಡಿದ್ದು ಸೂಜಿ ಚುಚ್ಚಿದಂತಾಯಿತು. 'ಜೀವನವನ್ನು ತುಂಬ ಕಂಡವರಲ್ಲೇ. ಅನುಭವಿಸಿದವರಲ್ಲೇ ಆಧ್ಯಾತ್ಮ

ಜಾಗೃತವಾಗುವದು. ಏನೂ ಕಾಣದವರಲ್ಲಿ ಜಾಗೃತವಾಗುವದು ಆಧ್ಯಾತ್ಮ ವಲ್ಲ, ಅದರ ಕಲ್ಪನೆ' ಎಂದುಕೊಳ್ಳುತ್ತಾರೆ. ವಿಶ್ವನಿಗೆ ಸಾಕಷ್ಟು ಜೀವನಾನುಭವ. ಇಂಥ ವಿಷಯ ಗಳಲ್ಲಿ ಸಿಟ್ಟು, ನೈತಿಕ ಕೋಪ ಮುಂತಾದ ಘಟ್ಟವನ್ನು ಕಳೆದು ಮುಗಿಸಿದ್ದ.

ರಂಗಪ್ಪನವರು ಸಣ್ಣಪ್ಪನ ಸಲಹೆಯಂತೆ ಆ ಕೋಣೆಯಲ್ಲಿ ಉಳಿಯುತ್ತಾರೆ. ಅಲ್ಲಿ ಅವರಿಗೆ ವಿಶ್ವ ಹೇಳಿದ '....ಅಖಂಡವಾಗಿ ಅನುಭವಿಸಿ....ಆಧ್ಯಾತ್ಮ ವಾಗಿದೆ ಅಂತ ಗುರುತು' ಎಂಬುದು ನೆನಪಿಗೆ ಬರುತ್ತದೆ. ಅಖಂಡವಾಗಿ ಅನುಭವಿಸುತ್ತಾ ರಾದರೂ ಆಧ್ಯಾತ್ಮ ವಾಗುವದಿಲ್ಲ. ಇದಕ್ಕೆ ವಿಶ್ವನೇ ಕಾರಣನೆಂದು ಅವರಿಗೆ ಸಿಟ್ಟು. ಸಣ್ಣಪ್ಪನ ಸಲಹೆಯಂತೆ ವಿಶ್ವನ ಹಾಗೆ ಅವರಿಗೆ ಅಡುಗೆ ಮಾಡುವ ಕೆಲಸವನ್ನು ಒಪ್ಪಿ ಕೊಳ್ಳುತ್ತಾರೆ. ವಿಶ್ವ ಅವರಿಗೆಲ್ಲ ಎಷ್ಟು ಆತ್ಮೀಯ ! ವಿಶ್ವನ ಮೇಲೆ ಅವರಿಗೆ ಎಷ್ಟು ಪ್ರೀತಿ ! ತಾವೂ ವಿಶ್ವನಂತೆ ಅವರ ಪ್ರೀತಿಗೆ ಪಾತ್ರರಾಗಲು ಹವಣಿಸುತ್ತಾರೆ. ಅವನಂತೆ ರುಚಿಯಾಗಿ ಅಡುಗೆ ಮಾಡಿಹಾಕಿ ಅವರ ಪ್ರೀತಿಗಳಿಸಿಕೊಳ್ಳಲು ಬಯಸುತ್ತಾರೆ. ವಿಶ್ವ ಅಲ್ಲಿ ಮೊದಲು ವಿಕ್ಟೋರಿಯಾ ಗಾಡಿಚಾಲಕನಾಗಿ ಕೆಲಸ ಮಾಡುತ್ತಿದ್ದ. ಒಂದು ಅಪಘಾತ ಸಂಭವಿಸಿದಾಗ ಆದ ಅನುಭವ ಅದನ್ನು ಬಿಡಿಸಿ ಕೋಣೆಯಲ್ಲಿ ವಾಸಿಸುವ ಇತರರಿಗೆಲ್ಲ ಅಡಿಗೆಮಾಡಿ ಉಳಿದ ವೇಳೆಯಲ್ಲಿ ಪಲಸೀಕರರ ಪುಸ್ತಕ ಭಾಂಡಾರದಲ್ಲಿ ಓದಲು ಹಚ್ಚುತ್ತದೆ. ವೇಶ್ಯಾಬೀದಿಯ ಸಮೀಪದಲ್ಲಿದ್ದರೂ ಒಂದು ದಿನವೂ ಆ ಕಡೆ ಕಣ್ಣು ಹಾಯಿಸಿದವನಲ್ಲ. ವಿಶ್ವನ ನಿಜವಾದ ಪರಿಚಯವಾದುದು ಇಲ್ಲಿ ರಂಗ ಸ್ವಾಮಿಗಳಿಗೆ.

ವಿಶ್ವ ಮುಂಬಯಿಯ ಈ ಜೀವನವನ್ನು ಕಂಡು ಹೇಸಿ ಆಧ್ಯಾತ್ಮಕ್ಕೆಳಸಿದರೆ ರಂಗಸ್ವಾಮಿಗಳು ಆಧ್ಯಾತ್ಮದಿಂದ ಇಲ್ಲಿಗಿಳಿಯುತ್ತಾರೆ. ವಿಶ್ವ ಮುಂಬಯಿಯ ಈ ಜನಸಂದಣಿ, ಈ ಕೊಂಡವಾಡೆಯಂಥ ವಾಸ, ಆ ಸದ್ದು, ಅವಿರತವಾದ ಗದ್ದಲ, ಆ ಫ್ಯಾಕ್ಟರಿಗಳ ಹೊಗೆ, ದೂಷಿತ ಹವೆ, ಯಾಂತ್ರಿಕ ಜೀವನ ಎಲ್ಲವನ್ನು ತೊರೆದು, ಪ್ರಶಾಂತ, ನೀಲಾಚ್ಛಾದಿತ ಬಾಬಾಬುಡನಗಿರಿಗೆ ಬಂದು ಏಕಾಂತ ಬಯಸಿ, ನಿರ್ಜನ ಪ್ರದೇಶದಲ್ಲಿ ಆಧ್ಯಾತ್ಮದ ಅಭ್ಯಾಸ ಮಾಡಿದ ರಂಗಸ್ವಾಮಿಗಳು ಆ ನೀಲಾಚ್ಛಾದಿತ ಬೆಟ್ಟ, ಆ ಪ್ರಶಾಂತತೆ, ಆ ನಿಸರ್ಗದ ಮಡಿಲನ್ನು ಬಿಟ್ಟು ಈ ಗದ್ದಲಮಯ ಮುಂಬಯಿಯಲ್ಲಿ ಕೊಂಡವಾಡೆಯ ವಾಸದಲ್ಲಿ ತಮ್ಮನ್ನು ತಾವು ತಳ್ಳಿಕೊಳ್ಳುತ್ತಾರೆ. ಬೆಟ್ಟದ ಆಕರ್ಷಣೆ ಕಳೆದುಕೊಂಡು ಇಲ್ಲಿಯ ಆಕರ್ಷಣೆಗೆ ಒಳಗಾಗುತ್ತಾರೆ.

ವಿಕೃತ ಕಾಮಕ್ಕೆ ಇನ್ನೊಂದು ಉದಾಹರಣೆ ಮಾಗಣ್ಣ-ಬಾಣಪ್ಪರದು. ಹೋಮೋ ಸೆಕ್ಸ ಅದು. ಅದನ್ನು ಕಂಡು ಜಿಗುಪ್ಸೆ ರಂಗಸ್ವಾಮಿಗಳಿಗೆ. ಹೆಣ್ಣು ಯಾರು, ಗಂಡು ಯಾರು ಅದರಲ್ಲಿ ? ವಿಶ್ವನಾಥನೂ ಹೀಗೆ ಬಯಸಿದ್ದರೆ ತನ್ನ ಸ್ಥಿತಿ ಏನಾಗಬೇಕಿತ್ತು ಎನ್ನುತ್ತಾರೆ ಲೇಖಕರು. ಅಸಹ್ಯವಾದರೂ ವಿಕೃತ ಜೀವನದ ಸತ್ಯ ಚಿತ್ರಣವನ್ನಿತ್ತಿ

ದ್ದಾರೆ. ಸೌಂದರ್ಯದರ್ಶನ ಮಾಡಿಸುವದಷ್ಟೇ ಸಾಹಿತ್ಯದ ಉದ್ದೇಶವಲ್ಲ. ಸೌಂದರ್ಯದ ಜತೆ ಜೀವನದಲ್ಲಿ ವಿಕಾರವೂ ಇದೆ. ಕನ್ನಡ ಸಾಹಿತ್ಯದಲ್ಲಿ ಅಂಥ ವಿಕೃತ ದರ್ಶನ ಕಡಿಮೆ.

ಜನ್ನನ ಅನಂತನಾಥ ಪುರಾಣದಲ್ಲಿ ಬರುವ ಚಂಡಶಾಸನ-ಸುನಂದೆಯರ ವಿಕೃತ ಕಾಮ ಪ್ರಸಂಗ ಹಳಗನ್ನಡ ಸಾಹಿತ್ಯದಲ್ಲಿಯೇ ವಿರಳ ಪ್ರಸಂಗ. ಗೆಳೆಯ ವಸುಷೇಣನ ಚೆಲುವೆ ಹೆಂಡತಿಯನ್ನು ಚಂಡಶಾಸನ ಮೋಹಿಸುತ್ತಾನೆ. ಅದು ಸಜೀವವಾಗಿ ಕೈಗೂಡದಾಗ ಸುನಂದೆಯ ಶವವನ್ನು ಸಂಭೋಗಿಸಿ ಚಂಡಶಾಸನನೂ ಪ್ರಾಣ ತೊರೆಯುತ್ತಾನೆ. ಹದಿಮೂರನೇ ಶತಮಾನದ ಸಾಹಿತ್ಯದಲ್ಲಿ ಜನ್ನನ ಈ ವಿಕೃತ ಕಾಮದ ದುರಂತ ಚಿತ್ರಣ ಅಪರೂಪದ ನಿರೂಪಣೆ. ಆ ವಿಕೃತ ಕಾಮದ ವಿವಿಧ ಮುಖಗಳನ್ನು ನಿಸ್ಸಂಕೋಚವಾಗಿ ಚಿತ್ರಿಸಿದ 'ಅನ್ವೇಷಣ' ಹೊಸಗನ್ನಡ ಸಾಹಿತ್ಯದಲ್ಲಿ ಅಪರೂಪದ ರಚನೆ.

ಇಲ್ಲಿ ರಂಗಸ್ವಾಮಿ, ಪಲಸೀಕರರ ಭಾಷೆ, ಶಿಷ್ಟ ಭಾಷೆ. ಸಣ್ಣಪ್ಪ, ಮೂಗಣ್ಣ, ಬಾಣಪ್ಪ ಮೊದಲಾದವರದು ಗ್ರಾಮ್ಯ ಭಾಷೆ. ಈ ಪ್ರಕರಣದಲ್ಲೂ ವಿಶ್ವನ ಬಗ್ಗೆ ಪ್ರತ್ಯಕ್ಷ ಹೇಳಿಕೆ ಇದೆ.

* * *

ಕೊನೆಯ ಪ್ರಕರಣ ಓದುಗರನ್ನು ಉತ್ಸುಕತೆಯ ತುದಿಗೊಯ್ದು ನಿಲ್ಲಿಸುತ್ತದೆ. ವಿಶ್ವನಾಥನ ಜೀವನದಲ್ಲಿ ಮಹತ್ವದ ಪಾತ್ರವಾಡಿದವರೆಂದರೆ ಹೆಡ್‌ಮಾಸ್ತರರು. ಯಾರ ಮಾತಿಗೂ ಬೆಲೆಗೊಡದ ವಿಶ್ವ ಅವರ ಮಾತಿಗೆ ಬೆಲೆಕೊಟ್ಟು ತಂದೆಯ ಶ್ರಾದ್ಧ ಮಾಡುತ್ತಾನೆ. ಅವರ ಸಲಹೆಯಂತೆ ಓದು ಮುಂದುವರಿಸಿ ಕಾಲೇಜಿನಲ್ಲಿ ಓದುತ್ತಿರುತ್ತಾನೆ. ಗಂಗಣ್ಣ ಮತ್ತು ಹೆಡ್‌ಮಾಸ್ತರರು ಸೇರಿ ಮೂಗುತಿ-ಹಳ್ಳಿಯ ಓಂದೆ ವಿಶ್ವನಿಗೆ ಚಂದಾ ಮಾಡಲು ಸಹಾಯ ಮಾಡಿದ ರಾಮದಾಸಪ್ಪನವರ ಮಗಳು ಸುನಂದೆಯನ್ನು ಮದುವೆ ಮಾಡಿಸುತ್ತಾರೆ. ಹಾಸ್ಟೆಲ್ಲಿನಲ್ಲಿಟ್ಟು ಓದಿಸುವದಾಗಿ ಮಾತು ಕೊಟ್ಟು ಮಾವ ಅದಕ್ಕೆ ತಪ್ಪುತ್ತಾರೆ. ಇದರಿಂದ ವಿಶ್ವನ ಓದಿಗೆ ಅಡಚಣೆ. ಮದುವೆಯಾದವನೆಂದು ಹಾಸ್ಟೆಲ್ಲಿನಲ್ಲಿ ಸ್ಥಳವಿಲ್ಲ. ಇದು ವಿಶ್ವ ದಂಪತಿಯಿಂದ ದೂರ ಇರಲು ಕಾರಣವಾಗಿರುತ್ತದೆ. ಒಂದೆ ಅದ್ದೂರಿಯಿಂದ ಬಾಳಿದ ರಾಮದಾಸಪ್ಪನವರಿಗೆ ಆ ಅದ್ದೂರಿಯೇ ಕಾರಣವಾಗಿ ಹೆಂಡತಿಮಕ್ಕಳು ಹಿತ್ತಲಿನಲ್ಲಿ ಸೊಪ್ಪು ಬೆಳೆದು ತಿನ್ನುವಂತೆ ಮಾಡಿರುತ್ತದೆ. ಇಂದು ಅವರಿಗೆ ಉಳಿದಿರುವದು ದೊಡ್ಡಸ್ತಿಕೆಯಿಂದ ಬಾಳಿದ ಗುರುತಾಗಿ ದೊಡ್ಡ ಮನೆ.

ಮಾವನ ಮೇಲಿನ ಸಿಟ್ಟು ಹೆಂಡತಿಯ ಮೇಲಾದರೂ ಪರಿಣಾಮ ವಿಷ ನೀಡುತ್ತದೆ. ಸುನಂದೆ ರೈಲಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳ ಬಯಸಿದಾಗ ಡ್ರೈವ್ಹರನ ಚಾಣಾಕ್ಷತೆಯಿಂದ ಅವಳು ಉಳಿಯುತ್ತಾಳಾದರೂ ಹಸುಗೂಸು ಅವಳ ಕೆಳಗೆ ಸಿಕ್ಕು

ಭಾರ ತಡೆಯಲಾರದೆ ಸತ್ತು ಹೋಗುತ್ತದೆ. ಇದು ಹೆಡ್‌ಮಾಸ್ತರರಿಗೆ ನಮ್ಮ ದೇಶದಲ್ಲಿ ನಿತ್ಯ ಕೇಳುವ ನೋಡುವ ಘಟನೆಯೆನಿಸುತ್ತದೆ. ವಿಶ್ವ ಪಶ್ಚಾತಾಪಪಟ್ಟು ಸುನಂದೆಯನ್ನು ನೋಡಲು ಬರುತ್ತಾನೆ, ಮಾವ ಗದರಿಸುತ್ತಾನೆ. ಹೆಂಡತಿ ಮಾತಾಡಲು ಸಿದ್ಧವಿಲ್ಲ. ಗಂಡನ ದುಡುಕು, ಅಪ್ಪನ ಸುಳ್ಳಿನಿಂದ ನೊಂದ ಸುನಂದೆ, ಅತ್ತೆಯ ಆಶ್ರಯದಲ್ಲಿ ಎಸ್.ಎಸ್.ಎಲ್.ಸಿ. ಪಾಸುಮಾಡಿ ಸ್ವಂತ ಕಾಲಮೇಲೆ ನಿಲ್ಲಲು ನಿರ್ಧರಿಸುತ್ತಾಳೆ. ಮಧ್ಯ ಇದು ಗಂಗಣ್ಣನಿಗೂ ಹೆಡ್‌ಮಾಸ್ತರರಿಗೂ ಇಕ್ಕಟ್ಟಿನ ಪ್ರಸಂಗ. ಎದುರಿಗೆ ಮಾತಾಡುವದು ಸಾಧ್ಯವಿಲ್ಲದಾಗ ವಿಶ್ವ ಹೆಂಡತಿಗೆ ದಿನಚರಿ ಕಳಿಸಿರುತ್ತಾನೆ. ಸುನಂದೆ ಅದನ್ನು ಗಂಗಣ್ಣನ ಕೈಗೆ ಕೊಟ್ಟು ನಿಮ್ಮ ಸ್ನೇಹಿತರಿಗೆ ಕಳಿಸಿ ಎನ್ನುತ್ತಾಳೆ. ಗಂಗಣ್ಣ ಅದನ್ನು ಅರಸೀಕೆರೆಗೆ ಅದೇ ಬದಲಿಯಾಗಿ ಬಂದ ಹೆಡ್‌ಮಾಸ್ತರರಿಗೆ ಕೊಡುತ್ತಾನೆ.

(೧) ಮುನಿಯಮ್ಮನೊಡನೆ ಆದಂತೆ ಸರಳಾಬಾಯಿಯೊಡನೆ ಆಯಿತು........ ಮುನಿಯಮ್ಮ ಒಂದು ರೀತಿಯಿಂದ ಜೀವ ಉಳಿಸಿದ ತಾಯಿ...... ಹೆಂಗಸಿನ ಸಂಬಂಧ ಗಂಡಸಿನಲ್ಲಿ ಯಾವತ್ತೂ ಬದಕುವ ಇಚ್ಛೆಯನ್ನು ಹುಟ್ಟಿಸಿ ಬಲಪಡಿಸುತ್ತದೆ.

(೨) "ಸಾವನ್ನು ತಿಳಿಯುವ ತನಕ ಜೀವನ ತಿಳಿಯುವದಿಲ್ಲ, ಬರಿ ಹುಟ್ಟಿದರೆ ಸಾಲದು ಸತ್ತು ಹುಟ್ಟಬೇಕು........"

'ಸಾವಿನ ಯೋಚನೆಯನ್ನು ಹೂತು ಮುಚ್ಚಿಹಾಕಿ ಗಂಡಸುತನವನ್ನು ಚಿಗುರಿಸಿದಳು ಮುನಿಯಮ್ಮ. ನಿನ್ನೆ ಬೆಳಿಗ್ಗೆ ಬೀದಿಯ ಸೂಳೆಯರನ್ನು ಹುಡುಕಿಕೊಂಡು ವಿ.ಟಿ. ಯಿಂದ ಬಂದ ಮದ್ರಾಸಿನ ಗೆಳೆಯರಿಗೆ ಜೀವನದ ಕುಸಿತ ಗೊತ್ತಿಲ್ಲ. ಸಾವನ್ನು ಹೊಡೆದೋಡಿಸುವದಕ್ಕೆ ಮಾತ್ರ ಗಂಡು ಹೆಣ್ಣು ಜತೆಗೂಡಬೇಕು, ಜೊತೆಗೂಡಿ ಪರಸ್ಪರ ಚಿಗುರಬೇಕು,' ಇದು ವಿಶ್ವ ಬರೆದ ದಿನಚರಿ.

ಲೈಂಗಿಕ ಆಕರ್ಷಣೆಗಾಗಿ ಹೆಣ್ಣಿನ ಸಂಬಂಧ ಬೆಳೆಸುವದು ಕುಸಿತ. ಅದೇ ಸಂಬಂಧ ಜೀವನವನ್ನು ಎದುರಿಸುವದಕ್ಕಾದರೆ, ಅದು ಜೀವನದ ಏಳ್ಗೆ. ವಿಶ್ವ ಬೆಳೆಸಿದ ಸ್ತ್ರೀ ಸಂಬಂಧಗಳು ಇಂಥವು.

'ಅಮ್ಮ ಸತ್ತದಿನ ನನ್ನ ಬಾಲ್ಯ ಕಳೆಯಿತು. ಮಹಾದೇವಯ್ಯನವರು ತಾಯಿಯಂತೆ ಎಷ್ಟು ನಡೆದುಕೊಂಡರೂ, ಮಗಳು ಸತ್ತಮೇಲೆ ಮೊಮ್ಮಗನನ್ನು ಸಾಕುವ ಒಂಟಿ ಅಜ್ಜನಂತಿದ್ದರು. ನಾನು ಒಂಟಿಯಾಗಿದ್ದೆ. ಶರಬಣ್ಣ, ಗಂಗಣ್ಣರು ಸ್ನೇಹಿತರು. ಒಂಟಿತನವನ್ನು ಅವರು ಹೋಗಲಾಡಿಸುವದು ಸಾಧ್ಯವಿರಲಿಲ್ಲ. ಈಗ ಮಾಲತಿಯಿಂದ ನನ್ನ ಅರಕೆ ತುಂಬಿದೆ. ಇನ್ನು ಉಳಿದಿರುವದಷ್ಟೇ, ನಾನು ಅವಳು ಬೇರೆ ಮನೆಯಲ್ಲಿರಬೇಕು, ಬಸಪ್ಪನ ಊಟ ಬೇಡ. ಅವಳೇ ಅಡುಗೆಮಾಡಿ ಇಕ್ಕಬೇಕು, ನಾನು ಅವಳ ಜತೆಯಲ್ಲಿ ಉಣ್ಣಬೇಕು'; ವಿಶ್ವ ತನ್ನ ಕೊರತೆಯನ್ನು ನಿವೇದಿಸಿಕೊಳ್ಳುವ ರೀತಿಯಿದು.

ಅವನ ಮುನಿಯಮ್ಮನ ಸಂಬಂಧ, ಅವಳು ಗಂಡಸುತನ ಚಿಗುರಿಸಿದವಳು. ಮಾಲತಿ ಯನ್ನಂತೂ ಅವನು ಪತ್ನಿಯೆಂದು ಭಾವಿಸಿದ್ದ.

ಜತೆಗೂಡಿದವರು ಪರಸ್ಪರ ಚಿಗುರಬೇಕು, ಜೀವನವನ್ನು ಎದುರಿಸಿ, ಸಾವನ್ನು ಗೆಲ್ಲಬೇಕು. ಹರಿಹರನ 'ಮಲುಹಣನ ರಗಳೆ'ಯಲ್ಲಿ ಮಲುಹಣ ಮಲುಹಣೆಯಲ್ಲಿ ಅನುರಕ್ತನಾಗಿ ತನ್ನತನವನ್ನೇ ಮರೆಯುತ್ತಾನೆ. ಮಲುಹಣೆಯ ತಾಯಿ ಎಲ್ಲ ದೋಚಿಕೊಂಡು ಅವನನ್ನು ಹೊರಗೆ ಹಾಕುತ್ತಾಳೆ. ಮಲುಹಣ ಮಲುಹಣೆಯ ಮನೆಯೆದುರು ಅವಳ ನಾಮ ಜಪಿಸುತ್ತಿರುತ್ತಾನೆ. ಅವಳ ಮನೆಯ ಎಂಜಲು ನೀರು ತನಗೆ ಸೋಂಕಿದರೆ ಪುನೀತನೆಂಬ ಭಾವ. ಇದು ಜೀವನವ ಕುಸಿತ. ಓಮ ಮುಚ್ಚಿದ ಪರಿವೆಯಿಲ್ಲ ಅವನಿಗೆ. ಮಲುಹಣೆ ಹಿಮದಲ್ಲಿ ಏನೋ ಮಿಸುಕುವದನ್ನು ಗಮನಿಸಿ ಗೆಳತಿಯರ ಸಹಾಯದಿಂದ ಹಿಮ ತೆಗೆಯಲಾಗಿ, ಮಲುಹಣೆ ಮಲುಹಣ ನಿಗೆ ಹೊಸ ಜೀವವಿತ್ತಳು. ನನ್ನ ಸ್ಮರಣೆ ದೇವರ ಸ್ಮರಣೆಯಾಗಿದ್ದರೆ! ಮಲುಹಣೆಯ ಉದ್ಗಾರ! ಮಲುಹಣೆಯಿಂದ ಮಲುಹಣ ಚಿಗುರಿದ. ವಿಶ್ವಾಮಿತ್ರ ಮೇನಕೆ, ಘೃತಾಚಿಯರ ಸಂಬಂಧವು ಇಂಥದೇ. ಮಲುಹಣನದು ಲೌಕಿಕದಿಂದ ಅಲೌಕಿಕ ವಾದರೆ, ವಿಶ್ವ ಮುನಿಯಮ್ಮನಿಂದ ಸಾವನ್ನು ಮೆಟ್ಟಿ ಬದುಕಲು ಕಲಿತ. ಪ್ರೇಮ ಕ್ಕಾಗಿ ಹೆಣ್ಣು ಗಂಡಿನ ಸಂಬಂಧ. ಬರೀ ಪ್ರೇಮಕ್ಕಾಗಿ, ಬದುಕುವದಕ್ಕಾಗಿ ಅದು. ಇದು ಈ ಕಾದಂಬರಿಯ ಆರೋಗ್ಯಕರವಾದ ಬರವಣಿಗೆ. ಬಹುಶಃ ಇದನ್ನು ಹಿಂದೆ ಯಾರೂ ಹೇಳಿಲ್ಲವೆನಿಸುತ್ತದೆ.

ಒಂದರಮೇಲೊಂದರಂತೆ ಬರುವ ದುರ್ಧಿರ ಪ್ರಸಂಗಗಳು ವಿಶ್ವನನ್ನು ಅನಿಶ್ಚಿತ, ಅನಿರ್ದಿಷ್ಟ ದಿಕ್ಕಿನತ್ತ ಸಾಗಿಸುತ್ತವೆ. ತನ್ನ ಜೀವನವನ್ನು ಹೀಗೆ ಹೋಲಿಸಿಕೊಳ್ಳು ತ್ತಾನೆ– 'ನನ್ನ ಜೀವನ ರೈಲು ಎಂಜಿನ್ ಹಾಗೆ ಹೋಗುತ್ತಿದೆ. ನುಗ್ಗುತ್ತಿದ್ದೀನಿ, ಅದಾಗಬೇಕು, ಇದಾಗಬೇಕು ಅಂತ. ಯಾರೋ ಹಳಿಯ ಪಾಯಿಂಟ ಬದಲಿಸು ತ್ತಾರೆ. ಬದಲಿಸಿದ ಕಡೆಗೆ ಎಂಜಿನ್ ತಿರುಗುವ ಹಾಗೆ. ನಾನೂ ಯಾವ ಯಾವ ದಾರೀಲೋ ಹೋಗುತ್ತಿದ್ದೀನಿ: ಇದಕ್ಕಿಂತ ಬಸ್ಸು ವಾಸಿ, ತಿರುಗಿಸುವ ಸ್ವಾತಂತ್ರ್ಯ ಡ್ರೈವರನಿಗಿರುತ್ತದೆ'.

ಜೀವನ ರೈಲೆಂಜಿನ್‌ನಂತೆ ಹೋಗುತ್ತದೆ. ಯಾರೋ ಹಳಿಯ ಪಾಯಿಂಟ ಬದಲಿಸಿದಂತೆ ಅದು ತಿರುಗಿಕೊಂಡು ಹೋಗುತ್ತದೆ. ಸ್ವತಃ ತಿರುಗಿಸಿಕೊಳ್ಳಲು ಬರುವ ಬಸ್ಸಿನ ಹಾಗೆ ಜೀವನವಿರಬೇಕು. ಅದು ಎಷ್ಟು ಜನರಿಗೆ ಸಾಧ್ಯ ? ಬಹುಶಃ ಹಾಗೆ ಇರುವದೇ ಇಲ್ಲವೇನೊ ? ಹಾಗಿದ್ದರೆ ಮನುಷ್ಯ ತನ್ನ ಜೀವನವನ್ನು ತನಗೆ ಬೇಕಾದಂತೆ ತನ್ನಿಚ್ಛೆಗನುಸರಿಸಿ ನಿರೂಪಿಸಿಕೊಳ್ಳುತ್ತಲಿದ್ದ. ಹಳಿಯ ಪಾಯಿಂಟ ಬದಲಿಸಿ ದಂತೆ, ಯಾರೋ ಕಾಣದಂತೆ ಬದಲಿಸುತ್ತಿರುತ್ತಾರೆ. ರೈಲು ಹಳಿಯ ಮೇಲೆ ಉರುಳು ತ್ತಿರುತ್ತದೆ. ವಿಶ್ವ, ದೇಶಪಾಂಡೆ ವಕೀಲರಲ್ಲಿ ತನ್ನ ಜೀವನ ನಿರೂಪಿಸಿಕೊಳ್ಳಬಹುದಿತ್ತು.

ವಕೀಲರ ಮಗಳು ಸರಳಾ ಅದಕ್ಕೆ ಅಡ್ಡ. ಮುನಿಯಮ್ಮನೊಡನೆ ಆದಂತೆ ಸರಳಾಳೊಡನೆಯೂ ಆಗುತ್ತದೆ. ಮುನಿಯಮ್ಮನದು ಆಕಸ್ಮಿಕ. ಸರಳಾಳದು ನಿರೀಕ್ಷಿತ. ಗಂಡ ಪರದೇಶಕ್ಕೆ ಹೋದಾಗ ತಂದೆಯ ಮನೆಯಲ್ಲಿದ್ದ ಸರಳಾ, ವಿಶ್ವನ ಜೊತೆಗೆ ಸಲಿಗೆ ಬೆಳೆಸುತ್ತಾಳೆ. ಅದು ವಿಶ್ವನಿಗೂ ಆಪ್ಯಾಯಮಾನವಾಗಿತ್ತು. ಆದರೆ ದಾಂಪತ್ಯದ ಕೋಟೆ ಕೊರೆದು ಒಳಹೊಗುವದು ಹೇಸಿಕೆ ಎನಿಸಿ, ವಿಶ್ವ ವಕೀಲರ ಮನೆ ತೊರೆಯುತ್ತಾನೆ. ಯಾರೋ ಪಾಯಿಂಟ ಬದಲಿಸುವ ರೈಲೆಂಜಿನ್‌ನಂತೆ ಅವನ ಜೀವನ.

ಸುನಂದೆ ದಿನಚರಿಯಲ್ಲಿ ಒಂದುಕಡೆಗೆ ಈಚಲುಗರಿ ಇಟ್ಟಿರುತ್ತಾಳೆ. ಓದಿ ಕಣ್ಣೀರು ಸುರಿಸುತ್ತಾಳೆ. ಕುಂಕುಮದ ಗುರುತೂ ಇರುತ್ತದೆ. ಹೆಡ್‌ಮಾಸ್ತರರು ಇದನ್ನು ಓದಿ ಹುಡುಗ ಕೆಟ್ಟಿದ್ದಾನೆ, ಇಂಥವನ ಜೊತೆ ಯಾವ ಹೆಂಡತಿ ತಾನೆ ಬದುಕಿಯಾಳು ಎನ್ನುತ್ತಾರೆ. ತಕ್ಷಣ ತಮ್ಮ ಅನಿಸಿಕೆಯ ಬಗೆಗೆ ನಾಚಿಕೆಯೆನಿಸಿ ಇಷ್ಟು ವರ್ಷ ತಾವು ಸಾಹಿತ್ಯ ಓದಿ ಪ್ರಯೋಜನವೇನು ಎನ್ನುತ್ತಾರೆ. '....ಸತ್ತು ಹುಟ್ಟಬೇಕು. ಹೆಡ್‌ಮಾಸ್ತರರ ಮನ ಒಳ ಸರಿಯುತ್ತದೆ. ಆತ್ಮಹತ್ಯೆಮಾಡಿಕೊಳ್ಳುವಂಥ ಪ್ರಸಂಗ ಅವರ ಜೀವನದಲ್ಲಿ ಬಂದಿಲ್ಲ. ಅದಕ್ಕೆ ಅವರಿಗೆ ಜೀವನದ ಬೆಲೆ ತಿಳಿದಿಲ್ಲ. ವಿಶ್ವನ ದಿನಚರಿ, ಅವರಿಗೆ ಅವನನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದಲ್ಲದೆ ಇಷ್ಟು ವರ್ಷ ಸಾಹಿತ್ಯಾಭ್ಯಾಸ ಮಾಡಿ ಸಾಧಿಸಿದ್ದೇನು ! ಎಂದು ವಿಚಾರಿಸ ಹಚ್ಚುತ್ತದೆ. ಇದು ಅವರ ಗುರಿ. ಇದಕ್ಕಿಂತ ಹೆಚ್ಚಿನ ಸಮಸ್ಯೆಗಳಿರಲಿಲ್ಲ ಅವರಿಗೆ. ಅದಕ್ಕೆ ಅವರಿಗೆ ವಿಶ್ವ ಕಂಡ ಜೀವನ ಅಪರಿಚಿತ. ಬಂಗ್ಲೆಯಿಂದ ಎದ್ದು ವಾಕಿಂಗಿಗೆ ಹೋಗುತ್ತಾರೆ. ರೇಲ್ವೆ ಹಳಿ ನೋಡಿ ವಿಶ್ವ, ಇನ್ನೂರು ಮೈಲಿಗೂ ಮಿಕ್ಕಿ ಈ ಹಳಿಯ ಮೇಲೆ ನಡೆದಿದ್ದನಂತಲ್ಲ, ತಾವೂ ಹಾಗೆ ನಡೆಯಬೇಕೆಂಬ ಆಕರ್ಷಣೆ ಹುಟ್ಟುತ್ತದೆ. ಅದರಂತೆ ನಡೆಯುತ್ತಾರೆ ಸ್ವಲ್ಪದೂರ. ಎದುರಿಗೆ 'ನಮಸ್ಕಾರ ಸರ್' ಎಂದು ಹುಡುಗರು ಎದುರಿಗೆ ಬಂದಾಗ ತಮಗೆ ತಾವೇ ನಾಚಿ ಇಳಿಯುತ್ತಾರೆ. ಒಬ್ಬರ ಜೀವನ ಅನುಕರಣೆ ಮಾಡುವದು ಹೇಗೆ ಸಾಧ್ಯ ? ಸಮಸ್ಯೆಗಳು ಎದುರಾದಾಗ ಅವುಗಳನ್ನು ಎದುರಿಸಲು ಜೀವನವನ್ನೂ ಕಾಲವನ್ನೂ ಅನುಸರಿಸಿಕೊಂಡು ಹೋಗಬೇಕಾಗುತ್ತದೆ. ಆಗ ಆ ಅನುಕರಣೆ ಸಹಜವಾಗುತ್ತದೆ, ನೈಜವಾಗುತ್ತದೆ. ಅದೇ ಬೇರೊಬ್ಬರನ್ನು ಅನುಕರಣೆ ಮಾಡಹೋದರೆ ಅಸಹಜವೆನಿಸುತ್ತದೆ. ಅದು ಬೇಗ ಆಕರ್ಷಣೆಯನ್ನೂ ಕಳೆದು ಕೊಳ್ಳುತ್ತದೆ.

ವಿಶ್ವನಿಗೆ ಅಂಥ ಶ್ರದ್ಧೆಗಳಲ್ಲಿ ನಂಬಿಕೆ ಇರಲಿಲ್ಲ. ಮದುವೆಯಲ್ಲಿ ಎಳ್ಳು ಜೀರಿಗೆ ಕೂಡಾ ಹಾಕುವದಿಲ್ಲ. ತಂದೆಯ ಶ್ರಾದ್ಧ ಮಾಡಲು ಅವನು ಒಪ್ಪುವದಿಲ್ಲ. ಅವರನ್ನು ತಂದೆಯೆಂದು ಒಪ್ಪದಿದ್ದರೆ ತಾಯಿಯ ಚಾರಿತ್ರವನ್ನೇ ಅಲ್ಲಗಳೆದಂತಲ್ಲವೆ ? ಎಂದಿರುತ್ತಾರೆ ಹೆಡ್‌ಮಾಸ್ತರರು. ಹೆಡ್‌ಮಾಸ್ತರರು ಅದನ್ನೆಲ್ಲ ಜ್ಞಾಪಿಸಿಕೊಳ್ಳುತ್ತಾರೆ. 'ಅಂದರೆ ಹುಟ್ಟಿಸುವ ಜೊತೆಗೆ ಕರ್ತವ್ಯ ಮಾಡದಿದ್ದರೆ ಪಿತೃತ್ವ ಸಿದ್ಧವಾಗುವ

ದಿಲ್ಲ ಅಂತ ಈತನ ದೃಷ್ಟಿ. ಬೀಜ-ಕರ್ತವ್ಯ=ಪಿತೃತ್ವ ಸಾಲದು, ತೀರ ಸುಲಭದ ವ್ಯಾಖ್ಯೆ ಅನ್ನಿಸಿತು. ವಿಶ್ವನ ಅಭಿಪ್ರಾಯ ಇದರ ಸಲುವಾಗಿ ಏನು ಎಂಬುದು ಅವರಿಗೆ ಗೊಂದಲದ್ದೆನಿಸುತ್ತದೆ. ಹೆಡ್‌ಮಾಸ್ತರರಿಗೆ ದಿನಚರಿಯನ್ನೋದಿದರೂ ವಿಶ್ವನ ಪೂರ್ಣ ಪರಿಚಯವಾಗುದಿಲ್ಲ.

ಗಂಗಣ್ಣ ವಿಶ್ವನ ಸ್ನೇಹಿತ. ಆದರೆ ಅವನು ಮುಂದೆ ವಿಶ್ವನ ನಿಜ ಸ್ನೇಹಿತನಾಗಿ ಉಳಿಯುವದಿಲ್ಲ. ಸುನಂದೆಯ ತಾಯಿಯೆದುರು ವಿಶ್ವ-ಮುನಿಯಮ್ಮನವರ ಸಂಬಂಧ ವನ್ನು ಹೇಳುತ್ತಾನೆ. ಅದು ಸುನಂದೆಗೂ ಕೇಳಿಸುತ್ತದೆ. ಅವಳಿಗೆ ಗಂಡನ ಬಗ್ಗೆ ಎಂಥ ಭಾವನೆ ಬೆಳೆಯಬೇಕು? ಅವಳ ತಾಯಿ ಅವನನ್ನು ಮರೆತು ಬಿಡು ಎನ್ನುವ ಮಾತಾಡುತ್ತಾರೆ. ನಿಜ ಸ್ನೇಹಿತ ಸ್ನೇಹಿತನ ಗುಟ್ಟನ್ನು ಇನ್ನೊಬ್ಬರೆದುರು ಹೇಳ ಬಾರದು. ವಿಶ್ವ ಮುಂದೆ ಮಳಿನ್ನು ತುಳಿದು ಹೊಲಿದು ಓದುತ್ತಿರುತ್ತಾನೆ. ಮಾಲತಿಯಂಥವಳ ಮೇಲೆ ಗೌರವ ಇಟ್ಟುಕೊಂಡಿದ್ದ ವಿಶ್ವನಿಗೆ ಸುನಂದೆಯೊಡನೆ ಇಷ್ಟು ನಿಷ್ಠುರವೇ? ಎನ್ನುವ ಓದುಗರಿದ್ದರೆ ಅವನ ದಿನಚರಿಯೇ ಅದಕ್ಕೆ ಸಮಾಧಾನ.

"ನಿನ್ನೆ ಗಂಗಣ್ಣ ರಾಮದಾಸಪ್ಪನವರು ಬಂದಿದ್ದರು. ನೇರ ಮಾತಿಲ್ಲ. ಸುಳ್ಳು, ಡೌಲು, ವಾಪಸು ಹೋದರು. ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನಮ್ಮೂರಿನಲ್ಲಿ ನಾಟಕ ಆಡಿದ್ದರು. ನಾನು ಏಳು ವರ್ಷದ ಹುಡುಗ. ಜಲಂಧರ ಅನ್ನುವ ರಾಕ್ಷಸ. ಮಹಾಪಾಪಕೃತ್ಯ ಮಾಡುವವನು. ಅವನನ್ನು ಸಂಹರಿಸದೆ ಲೋಕಕ್ಕೆ ಉಳಿಗಾಲ ವಿಲ್ಲವೆಂದು ದೇವತೆಗಳಿಗೆ ಗೊತ್ತಿದೆ. ಆದರೆ ಅವನ ಹೆಂಡತಿ ಮಹಾ ಸಾಧ್ವಿ, ಅವನನ್ನು ಕೊಂದರೆ ಅವಳು ವಿಧವೆಯಾಗುತ್ತಾಳೆ. ದೇವತೆಗಳು ಏನೂ ಮಾಡದೆ ಕೂತರು. ಜಲಂಧರ ಬದುಕಿಯೇ ಇದ್ದ. ಧರ್ಮಾಧರ್ಮಗಳು ಒಂದರೊಳಗೊಂದು ಹೆಣೆದುಕೊಂಡಿವೆ. ಹಾಗಂತ ಖಚಿತ ನಿಶ್ಚಯ ಕ್ರಿಯೆ ಬೇಡವೆ ? ನಮ್ಮ ಜನಗಳಲ್ಲಿ ಇದು ಇಲ್ಲವೆ ಇಲ್ಲ. ಗಂಗಣ್ಣನ ಧರ್ಮಬುದ್ಧಿ ಇಂಥದೆ. ಪಾಪ ! ಮಗಳು ಒಳ್ಳೆಯವಳು. ರಾಮದಾಸಪ್ಪನ ಮೋಸವನ್ನು ಮರೆಯದಿದ್ದರೆ ಮಗಳಿಗೆ ಪೆಟ್ಟು ತಾಗುತ್ತದೆ. ಸುಮ್ಮನೆ ಒಪ್ಪಿಕೊಂಡು ಬಿಡೋಣ ಅನ್ನುವದು ಇಂಥವರ ಮನಸ್ಸು. ಹೀಗೆ ನೋಡಿದರೆ ಶಿಕ್ಷೆ, ಹೊಣೆ, ನ್ಯಾಯ, ಅನ್ಯಾಯಗಳ ನಿಖರತೆ ಸಾಧ್ಯವೇ ಇಲ್ಲ."

ತಪ್ಪಿತಸ್ಥರಿಗೆ ಅವರವರ ತಪ್ಪಿನಂತೆ ಶಿಕ್ಷೆಯಾಗಲೇಬೇಕು. ಖಚಿತವಾದ ನಿಶ್ಚಯ ಕ್ರಿಯೆ ಬೇಕೆನ್ನುವವ ವಿಶ್ವ. ಅನ್ಯಾಯ ಎಲ್ಲಿದ್ದರೂ ಪ್ರತಿಭಟಿಸುವದು ಅವನ ಹುಟ್ಟುಗುಣ. ರಾಮದಾಸಪ್ಪನವರಿಗೆ ಶಿಕ್ಷೆ ಬೇಕು ನಿಜ. ಸುನಂದೆಯೂ ಅದಕ್ಕೊಳ ಗಾಗುವದು ಇಲ್ಲಿ ಅನಿವಾರ್ಯವಾಯಿತು. ವಿಶ್ವ, ನ್ಯಾಯಾಧೀಶನಂತೆ ನಿರ್ಣಯ ಕೊಡಲು ಹೊರಡುತ್ತಾನೆ. ಆದರೆ ಆ ತರಾಜಿಗೆ ಸಮತೋಲನವುಳಿಯುವದಿಲ್ಲ.

"ಗಂಗಣ್ಣನ ಕಾಗದ ಬಂದು ಮೂರು ದಿನವಾಯಿತು. ಇದು ಹೀಗಾಗಬಹು ದೆಂದು ನನಗೇಕೆ ಹೊಳೆಯಲಿಲ್ಲ ? ಏನಾದರೂ ಅನಾಹುತವಾಗಬಹುದೆಂಬ ದಿಶೆಯಲ್ಲಿ

ನನ್ನ ಆಲೋಚನ ಏಕೆ ಹರಿಯಲಿಲ್ಲ? ಮೂರು ದಿನದಿಂದ ಸಂಕಟವಾಗುತ್ತಿದೆ. ಯಾವುದೋ ನ್ಯಾಯನಿರ್ಣಯಸ್ಥಾನದಲ್ಲಿ ಕೂತ ನಾನು, ದೊಡ್ಡ ಅನ್ಯಾಯವೊಂದರಲ್ಲಿ ಭಾಗಿಯಾಗಿರುವ ಅರಿವಿನ ನೋವಾಗುತ್ತದೆ.... ಆಪಾದಿಸುವವನೆ ಆಪಾದಿತನಾಗುವ ಹಾಗೆ ಆಗಿದೆ. ಹೋಗಿ ಸುನಂದೆಯನ್ನು ಕಂಡು ಕ್ಷಮೆ ಕೇಳಬೇಕು."

"ಯಾರ ಮೇಲೆ ನ್ಯಾಯ ತೀರಿಸಬೇಕು? ಇಂಥ ಸೂಕ್ಷ್ಮದ ತಿಳಿಯಿಲ್ಲದ ಕುಳ ರಾಮದಾಸಪ್ಪನವರು. ಇನ್ನು ನಾನು ಸುನಂದಾ ಇಬ್ಬರೇ ಯಾರ ಮೇಲೆ ನ್ಯಾಯ ತೀರಿಸಬೇಕು?.... ದೂರದಲ್ಲೇ ಇವಳನ್ನು ದೃಷ್ಟಿಸಿ ಡ್ರೈವ್ಹರ್ ಬ್ರೆಕ್ ಹಾಕದಿದ್ದರೆ ನ್ಯಾಯ ಹೇಳಿಕೊಂಡು ನಾನೊಬ್ಬನೇ ನಿಲ್ಲಬೇಕಾಗಿತ್ತು ಒಂಟಿಯಾಗಿ".

ತುಂಬಿದ ಬಸುರಿ ಸೀತೆಯನ್ನು ಅನ್ಯರ ಮಾತಿಗೆ ಅರಣ್ಯಕ್ಕಟ್ಟಿದ್ದು ಎಲ್ಲರಿಗೂ ಒಳಗೊಳಗೆ ಅಸಮಾಧಾನ. ಆ ವಿರಹ ರಾಮನನ್ನು ಒಳಗೊಳಗೆ ಸುಡುತ್ತಿದ್ದುದರ ಕಡೆಗೆ ಅವರಿಗೆ ಗಮನವಿರಲಿಲ್ಲ. ವಾಲ್ಮೀಕಿ ಆಶ್ರಮದಲ್ಲಿ ಪಶ್ಚಾತ್ತಾಪದಗ್ಧ ರಾಮನ ಮುಖ ಕಂಡಾಗ ಅಪರಾಧಿ ದೃಷ್ಟಿಯಿಂದ ನೋಡುತ್ತಿದ್ದ ಕೌಸಲ್ಯಾ ಜನಕಾದಿಗಳಿಗೂ ಕರುಣೆ ಬರುತ್ತದೆ. 'ಅನ್ವೇಷಣ'ದ ವಿಶ್ವನಾಥ "ನ್ಯಾಯ ಹೇಳಿಕೊಂಡು ನಾನೊಬ್ಬನೇ ನಿಲ್ಲಬೇಕಾಗಿತ್ತು ಒಂಟಿಯಾಗಿ" ಎಂದು ನುಡಿವಲ್ಲಿ, ಭವಭೂತಿಯ ರಾಮ.

ಸುನಂದೆ ರೈಲಿಗೆ ಬೀಳುವಾಗ ಮಾಂಗಲ್ಯ ತೆಗೆದದ್ದನ್ನು ಮತ್ತೆ ಹಾಕಿಕೊಂಡಿರುವದಿಲ್ಲ. ಇದನ್ನು ಗಂಗಣ್ಣನಿಂದ ಕೇಳಿ ವಿಶ್ವನ ಮನಸ್ಸು ಕೊರೆದಿರುತ್ತದೆ. ಪ್ರತ್ಯಕ್ಷ ಕಂಡಾಗಲೂ ಅವಳು ಧರಿಸಿರಲಿಲ್ಲ. ಅದು ವಿಶ್ವನಿಗೆ ಒಂದು ದೃಷ್ಟಿಯಿಂದ ಒಳ್ಳೆಯದೆನಿಸಿತು. ಸುನಂದೆ ಅವನ ಬಳಿಗೆ ಹೋಗುವದನ್ನು ಬಿಡುವದನ್ನು ನಿರ್ಧರಿಸಲು ಅವಳು ಸಮರ್ಥಳು, ಅದಕ್ಕೆ ಮಾಂಗಲ್ಯವೆಂಬ ಬಂಧನ ಅಡ್ಡ ಬರುವದು ಬೇಡ. ಸ್ವತಂತ್ರವಾಗಿ ವಿಚಾರಿಸಿ ತೀರ್ಮಾನಕ್ಕೆ ಬರಲು ಅವಳೀಗ ಸ್ವತಂತ್ರಳು. ಮಾಂಗಲ್ಯ ಕಳಚಿದ್ದು ಬಂಧನ ಕಳಚಿದ ಗುರುತು. ವಿಶ್ವನ ದಿನಚರಿ ಓದಿ, ಬೇಕೆನಿಸಿದರೆ ಅವನ ಬಳಿಗೆ ಹೋಗಬಹುದು. ಅದಕ್ಕಾಗಿ ಪ್ರಯಾಣದ ಖರ್ಚಿಗೆ ೧೦ ರೂಪಾಯಿಯನ್ನು ಇಟ್ಟಿರುತ್ತಾನೆ. ಇಲ್ಲದಿದ್ದರೆ ದಿನಚರಿ ಕಳಿಸು ಎಂದು ಬರೆದಿರುತ್ತಾನೆ. ಸುನಂದೆಯ ಮೇಲೆ ವಿಶ್ವನಿಗೆ ಒತ್ತಾಯವಿಲ್ಲ. ಒತ್ತಾಯದಿಂದ ಗಂಡನ ಅಧಿಕಾರ ಚಲಾಯಿಸುವ ಗಂಡನಲ್ಲ ವಿಶ್ವ. ಅಂಥ ಮನಸ್ಸಿಲ್ಲ ಅವನಿಗೆ. ಅವಳು ಬರುವ ಬಿಡುವ ತೀರ್ಮಾನವನ್ನು ಅವಳ ಮೇಲೆಯೇ ಬಿಟ್ಟಿದ್ದಾನೆ. ತನ್ನ ಜೀವನದ ಆಗು ಹೋಗುಗಳನ್ನು ತಾನೇ ನಿರ್ಧರಿಸಲು ತನ್ನಂತೆ ಅವಳೂ ಸ್ವತಂತ್ರಳು, ಎಂಬುದು ವಿಶ್ವನಾಥನ ವಿಚಾರ. ಸುನಂದೆ ಮತ್ತೆ ಮಾಂಗಲ್ಯ ಧರಿಸದಿದ್ದುದು, ದಿನಚರಿ ವಾಪಸು ಕಳಿಸಿದ್ದೂ, ಹೆಡ್ ಮಾಸ್ತರರು 'ಈ ಜೋಡಿ ಕೂಡಿಸಲಿಕ್ಕಾಗದಿದ್ದರೆ ಬೇಡ, ಅವನನ್ನು ಇನ್ನಷ್ಟು ತಿಳಿದುಕೊಳ್ಳಲು ಸಾಧ್ಯವಾದರೆ ಸಾಕು ಮೈಸೂರಿಗೆ ಹೋದದ್ದಕ್ಕೆ'.... ಅಂದುಕೊಳ್ಳುವದೂ ಅವಳು ವಿಶ್ವನ ಬಳಿಗೆ ಇನ್ನು ಹೋಗುವದಿಲ್ಲವೆಂಬುದನ್ನು ಧ್ವನಿಸುತ್ತದೆ. ವಿಶ್ವ

ಬರೆದ ದಿನಚರಿ ಮುಕ್ಕಾಲುಭಾಗ ಖಾಲಿಯಿತ್ತು. ಅಂದರೆ ವಿಶ್ವನ ಜೀವನ ಈಗ ಕಾಲುಭಾಗ ಮಾತ್ರ ಪೂರ್ತಿಯಾಗಿದೆ. ಇನ್ನೂ ಅವನ ಜೀವನವಿದೆ. ಅದು ಮುಗಿದಿಲ್ಲ. ಇನ್ನು ಸಾಗಬೇಕಾಗಿದ್ದು, ಇನ್ನೂ ಬರೆಯಬೇಕಾದ್ದು.

'ನೇರವಾಗಿ ಜೀವನವನ್ನು ನೋಡಿ ಅದರ ನಾಡಿಯ ಮಿಡಿತವನ್ನು ಸಾಹಿತ್ಯದಲ್ಲಿ ಮೂಡಿಸುವದೇ, ಬರವಣಿಗೆಯ ಗುರಿಯಾಗಬೇಕು' ಎಂಬುದು 'ಗೃಹಭಂಗ' ಮತ್ತು 'ಅನ್ವೇಷಣ'ದಲ್ಲಿ ಸಾಧಿಸಿದೆ.

'ಅನ್ವೇಷಣ'ದ ತಲೆಬರಹದ ಬಗ್ಗೆ ಕೊನೆಯ ಮಾತು– ವಿಶ್ವನಾಥ ಏನಾದ? ಎಂತಾದ ? ಅವನ ಜೀವನ ಹೇಗೆ ? ಎಂತು ? ಎಂದು ಹುಡುಕುವದೇ 'ಅನ್ವೇಷಣ'. ಒಟ್ಟಾರೆ ಜೀವನದ ಸತ್ಯದ 'ಅನ್ವೇಷಣ'.

• •

ಒರೆಗಲ್ಲು

೧. ನೀತಿಗೆರೆಯಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ :

ಗುಂಡಬ್ರಹ್ಮಯ್ಯಗಳ ಚರಿತ್ರೆಯನ್ನು ತಿಳಿಸುವಲ್ಲಿ ಗಣಸಹಸ್ರನಾಮಾವಳಿ, ಬಸವಪುರಾಣ, ಕುಮಾರರಾಮನ ಸಾಂಗತ್ಯಗಳು, ಗುಂಡಬ್ರಹ್ಮಯ್ಯಗಳ ಚರಿತ್ರೆ ಮೊದಲಾದ ಗ್ರಂಥಗಳು ಪ್ರಮುಖವಾದವುಗಳಾಗಿವೆ. ಈ ಕೃತಿಗಳಲ್ಲದೆ ಗುಂಡ ಬ್ರಹ್ಮಯ್ಯಗಳನ್ನು ಕುರಿತು ದೊರೆಯುವ ವಿಗ್ರಹ ಮತ್ತು ದೇವಾಲಯಗಳೂ (ಗುಂಡ ಬ್ರಹ್ಮಯ್ಯಗಳ ಬಗೆಗೆ ತಿಳಿದುಕೊಳ್ಳಲು) ಹೆಚ್ಚಿನ ನೆರವನ್ನು ಒದಗಿಸುತ್ತವೆಯೆಂಬುದರಲ್ಲಿ ಸಂದೇಹವಿಲ್ಲ.

ಡಾ. ಬಿ. ಎಸ್. ಗದ್ದಗಿಮಠ ಅವರು ಬನವಾಸಿಯ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿಯಲ್ಲಿರುವ (ಶಿವಶರಣರ ವಿಗ್ರಹಗಳ ಜೊತೆಯಲ್ಲಿರುವ) ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು[೧], ಡಾ. ಎಂ. ಎಂ. ಕಲಬುರ್ಗಿ ಅವರು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ (ಈ ವಿಗ್ರಹ ಮೂಲತಃ ಹಾವೇರಿಯ ವೀರಭದ್ರದೇವಾಲಯದ ಹಿಂದೆ ಮರದ ಕೆಳಗೆ ಇದ್ದಿತು) ಮತ್ತು ಚಿತ್ರದುರ್ಗದ ಸಂಪಿಗೆಸಿದ್ಧೇಶ್ವರ ದೇವಾಲಯದಲ್ಲಿರುವ ಗುಂಡಬ್ರಹ್ಮಯ್ಯಗಳ ವಿಗ್ರಹಗಳನ್ನು[೨], ಡಾ. ವಿ. ಶಿವಾನಂದರು ಗುಂಡೇನಹಳ್ಳಿಯ (ತಾಲೂಕ : ಬ್ಯಾಡಗಿ ಜಿಲ್ಲೆ : ಧಾರವಾಡ) ಗುಂಡಬ್ರಹ್ಮಯ್ಯಗಳ ದೇವಾಲಯದಲ್ಲಿರುವ ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು[೩] ಗುರುತಿಸಿ, ಬೆಳಕಿಗೆ ತಂದಿದ್ದಾರೆ.

ಹೀಗೆ ಈ ಸಂಶೋಧಕರ ಸಂಶೋಧನೆಯ ಫಲವಾಗಿ ಇಲ್ಲಿಯವರೆಗೆ ಗುಂಡ ಬ್ರಹ್ಮಯಗಳ ೪ ವಿಗ್ರಹಗಳು ಕಂಡುಹಿಡಿಯಲ್ಪಟ್ಟಿವೆ.

ಡಾ. ಎಂ. ಚಿದಾನಂದಮೂರ್ತಿ ಅವರ "ಶಿಲ್ಪದಲ್ಲಿ ಕಮಾನು ಆಕಾರದ ಸಿಂಹಲಲಾಟ, ವಿಚಿತ್ರವಿನ್ಯಾಸಗಳು; ಕೆಳಗಡೆ, ಎಡಗೈಯಲ್ಲಿ ಶಿವಲಿಂಗವನ್ನು ಹಿಡಿದು ಬಲಗೈಯಿಂದ ಅರೆಮುಚ್ಚಿ, ಭಕ್ತಿಯಿಂದ ನಿಂತಿರುವ ಇಬ್ಬರು ಭಕ್ತರ ಸೊಗಸಾದ ಉಬ್ಬುಚಿತ್ರಗಳು; ಅವರ ಮಧ್ಯ ಎರಡು ಶೂಲಗಳು, ಇವನ್ನೆಲ್ಲ ಒಳಕ್ಕೆ ಹೋಗಿ

೧ ವೀರಶೈವ ಶಿವಶರಣರು : ವಿಭೂತಿ (೧೯೬೧).

೨ ಕರ್ನಾಟಕ ಭಾರತಿ : ೬–೪, ಪುಟ ೧೫೬–೧೫೭ ಮತ್ತು ೭–೨. ಪುಟ ೧೫೮ ೧೫೯.

೩ ಗುಂಡಬ್ರಹ್ಮಯ್ಯಗಳ ಚರಿತ್ರೆ.

ಒಂದೊಂದಾಗಿ ಪರಿಶೀಲಿಸಿ ಟಿಪ್ಪಣಿ ತೆಗೆದುಕೊಂಡೆವು"[೪] ಎಂಬ ಹೇಳಿಕೆಯ ಬೆಳಕಿನಲ್ಲಿ ಕೈಕೊಂಡ ಸಂಶೋಧನೆಯಿಂದ ನೀತಿಗೆರೆ(ತಾಲೂಕು : ಚೆನ್ನಗಿರಿ, ಜಿಲ್ಲೆ : ಶಿವಮೊಗ್ಗ) ಯ ವೀರಭದ್ರದೇವಾಲಯದಲ್ಲಿರುವ ಗುಂಡಬ್ರಹ್ಮಯ್ಯಗಳ ಈ ಹೊಸ ವಿಗ್ರಹವನ್ನು ಕಂಡುಹಿಡಿಯಲಾಗಿದೆ.

ಇದು, ಗುಂಡಬ್ರಹ್ಮಯ್ಯಗಳ ಕುರಿತು ದೊರೆಯುವ ಐದನೆಯ ವಿಗ್ರಹ. ಶಿಲ್ಪ ವಿನ್ಯಾಸ ದೃಷ್ಟಿಯಿಂದ ಧಾರವಾಡದ ಕನ್ನಡ ಸಂಶೋಧನಸಂಸ್ಥೆ ಹಾಗೂ ಗುಂಡೇನಹಳ್ಳಿ ವಿಗ್ರಹಗಳು ಒಂದು ವರ್ಗಕ್ಕೆ, ಬನವಾಸಿ ವಿಗ್ರಹ ಇನ್ನೊಂದು ವರ್ಗಕ್ಕೆ ಸೇರಿದರೆ; ಚಿತ್ರದುರ್ಗ ಮತ್ತು ನೀತಿಗೆರೆ ವಿಗ್ರಹಗಳು ಮತ್ತೊಂದು ವರ್ಗಕ್ಕೆ ಒಳಪಡುತ್ತವೆ. ಇಲ್ಲಿ, ಚಿತ್ರದುರ್ಗ ಮತ್ತು ನೀತಿಗೆರೆ ವಿಗ್ರಹಗಳು ಸಾಮಾನ್ಯವಾಗಿ ಒಂದೇ ವರ್ಗದವು. ಗಳೆನಿಸಿದರೂ ಕೆಲವು ಅಂಶಗಳನ್ನು ಗಮನಿಸುವುದು ಅಗತ್ಯವೆನಿಸುತ್ತದೆ.

ಚಿತ್ರದುರ್ಗ ವಿಗ್ರಹದಲ್ಲಿ ಒಂದು ವಿಗ್ರಹ ಎಡಗೈಯಲ್ಲಿ, ಇನ್ನೊಂದು ವಿಗ್ರಹ ಬಲಗೈಯಲ್ಲಿ ಇಷ್ಟಲಿಂಗವನ್ನು ಹಿಡಿದಿದ್ದರೆ; ಮಧ್ಯದಲ್ಲಿರುವ ಶೂಲಗಳನ್ನು ಒಂದು ವಿಗ್ರಹ ಬಲಗೈಯಿಂದಲೂ ಇನ್ನೊಂದು ವಿಗ್ರಹ ಎಡಗೈಯಿಂದಲೂ ಹಿಡಿದುಕೊಂಡು ನಿಂತಿವೆ. ಅಲ್ಲದೆ ಈ ವಿಗ್ರಹಗಳು ಕೊರಳು, ರಟ್ಟೆ, ಮುಂಗೈ, ಕಿವಿಗಳಲ್ಲಿ ರುದ್ರಾಕ್ಷಿ ಮಾಲೆಯನ್ನೂ ಸೊಂಟವಲ್ಲಿ ನೇತಾಡುವ ಖಡ್ಗ, ಕಾಲಲ್ಲಿ ಆಭರಣ(ಕಾಲ್ಪೆಂಡೆ?)ವನ್ನೂ ಹೊಂದಿರುತ್ತವೆ. ಆದರೆ ನೀತಿಗೆರೆ ವಿಗ್ರಹದಲ್ಲಿ ಮೇಲೆ ಕಮಾನಿನ ಆಕಾರದ ಆಕರ್ಷಕವಾದ ಸಿಂಹಲಲಾಟವಿದ್ದು, ಕೆಳಗೆ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದುಕೊಂಡು ಬಲಗೈಯಿಂದ ಆ ಇಷ್ಟಲಿಂಗವನ್ನು ಅರೆಮುಚ್ಚಿ ಭಕ್ತಿಯಿಂದ ನಿಂತಿರುವ ವಿಗ್ರಹಗಳಿವೆ. ಮಧ್ಯದಲ್ಲಿ ಎರಡು ಶೂಲಗಳು (ಈ ವಿಗ್ರಹಗಳೂ ಕೊರಳು, ರಟ್ಟೆ, ಮುಂಗೈ, ಕಿವಿಗಳಲ್ಲಿ ರುದ್ರಾಕ್ಷಿಮಾಲೆಯನ್ನು, ಸೊಂಟದಲ್ಲಿ ನೇತಾಡುವ ಖಡ್ಗ, ಕಾಲಲ್ಲಿ ಕಾಲ್ಪೆಂಡೆ? ಧರಿಸಿರುವುದನ್ನು ಮರೆಯುವಂತಿಲ್ಲ), ವಿಗ್ರಹಗಳ ಎಡ-ಬಲದಲ್ಲಿ ಗುಂಡಬ್ರಹ್ಮಯ್ಯಗಳ ಸತಿಯರ (?) ವಿಗ್ರಹಗಳನ್ನೂ ಕಂಡರಿಸಲಾಗಿದೆ. ಹೀಗೆ ನೀತಿಗೆರೆಯ ಗುಂಡಬ್ರಹ್ಮಯ್ಯಗಳ ವಿಗ್ರಹ ಕೆಲವು ಅಂಶಗಳಿಂದ ವೈಶಿಷ್ಟ್ಯಪೂರ್ಣವಾಗಿ ನಿಲ್ಲುತ್ತದೆ.

ಹೀಗೆ ಇಲ್ಲಿಯವರೆಗೆ ಲಭಿಸಿದ ಗುಂಡಬ್ರಹ್ಮಯ್ಯಗಳ ವಿಗ್ರಹಗಳನ್ನು ೧. ಕನ್ನಡ ಸಂಶೋಧನ ಸಂಸ್ಥೆ (ಮೂಲತಃ ಹಾವೇರಿಯಲ್ಲಿದ್ದುದು)- ಗುಂಡೇನಹಳ್ಳಿ, ೨. ಚಿತ್ರದುರ್ಗ - ನೀತಿಗೆರೆ, ೩. ಬನವಾಸಿ- ಎಂಬ ಮೂರು ವರ್ಗಗಳಲ್ಲಿ ವಿಂಗಡಿಸಬಹುದು.

೪ ಬನಾಶಂಕರಿ ಪೆಟ್ಟಿಗೆ : ಕಸ್ತೂರಿ (ವಸಂತ ಸಂಚಿಕೆ), ಎಪ್ರೀಲ ೧೯೭೪, ಪುಟ : ೫೮.



ಗುಂಡಬ್ರಹ್ಮಯ್ಯಗಳ ವಿಗ್ರಹ, ನೀತಿಗೆರೆ

೨. ಏಕಾಂತರಾಮಯ್ಯನ ಅನ್ವಯದ ಮೇಲೆ ಹೊಸಬೆಳಕು :

ಕಲ್ಯಾಣಕ್ರಾಂತಿಯ ತರುವಾಯ ಕರ್ನಾಟಕದಲ್ಲಿ (ವೀರ)ಶೈವಧರ್ಮ ರಭಸದಿಂದ ಪ್ರವಹಿಸಲು ಕಾರಣರಾದವರಲ್ಲಿ "ವೀರಮಾಹೇಶ್ವರನಿಷ್ಠೆ"ಯ ಏಕಾಂತ ರಾಮಯ್ಯ ಹಾಗೂ ಆದಯ್ಯ ಪ್ರಮುಖರು. ಏಕಾಂತರಾಮಯ್ಯನು ಜೈನಧರ್ಮದ ನೆಲೆವೀಡಾದ ಅಬ್ಬಲೂರಿನಲ್ಲಿ 'ವೀರಪ್ರತಿಜ್ಞೆ'ಯಿಂದ ಶಿರಸ್ಸು ಪವಾಡ ಮೆರೆದು, ಜಿನಬಿಂಬವನ್ನು ಒಡೆದು, ಆ ಸ್ಥಳದಲ್ಲಿ ವೀರಸೋಮೇಶ್ವರಲಿಂಗ ಪ್ರತಿಷ್ಠಾಪಿಸಿದ ವಿಷಯವನ್ನು ಅಬ್ಬಲೂರಿನ ಕ್ರಿ. ಶ. ಸು. ೧೨೦೦ ರ ಶಾಸನ ತಿಳಿಸುತ್ತದೆ.[೧] ಆದರೆ ಏಕಾಂತರಾಮಯ್ಯನ ನಂತರ ಅವನ ವಂಶ (ಪರಂಪರೆ?) ಅದೇ ಎತ್ತರದಲ್ಲಿ ಮುಂದುವರಿಯಿತೆ? ಒಂದುವೇಳೆ ಮುಂದುವರಿದಿದ್ದರೆ ಅವರು ಎಲ್ಲಿ ಇದ್ದರು? ಅವರ ಹೆಸರೇನು? ಹೇಗೆ ಇದ್ದರು? ಎಂಬ ಮುಂತಾದ ಪ್ರಶ್ನೆಗಳಿಗೆ ಶಾಸನ ಹಾಗೂ ಗ್ರಂಥ ಉತ್ತರವನ್ನು ಉಸಿರದೆ ಮೌನತಾಳಿ ನಿಂತಿವೆ.

ಕೆಂಪನಪುರ ಗ್ರಾಮದ ಶಾಸನ[೨], ಏಕಾಂತರಾಮಯ್ಯನ ಅನ್ವಯೋದ್ಭೂತನಾದ 'ಏಕಾಂತ ಬಸವೇಶ್ವರ'ನು ಸುಮಾರು ೧೫ನೆಯ ಶತಮಾನದಲ್ಲಿ ಬಾಳಿ-ಬೆಳಗಿದನೆಂಬ ಹೊಸ ವಿಷಯದತ್ತ ನಮ್ಮ ಗಮನವನ್ನು ಸೆಳೆಯುತ್ತದೆ. ಆ ಶಾಸನದ ಪಾಠ ಹೀಗಿದೆ :

೧ ಓಂ ನಮಸ್ತುಂಗಶಿರಶ್ಚುಂಬಿಚಂದ್ರಚಾಮರ ಚಾರ-
೨ ವೇ। ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ॥
೩ ರಾಕಾಂತರ್ನಿಶಿ ಜೃಂಭಮಾಣಶಶಭೃಚ್ಛಾಯಾಭಕೀ-
೪ ರ್ತಿರ್ಘನಾನೇಕಾಂತಾದಿವಿರುದ್ಧವಾಗ್ವಿಘಟನಪ್ರೌಢಪ್ರತಾ-
೫ ಪೋಜ್ವಲಃ ನಾಕಾಂತಃಪುರಕಾಮಿನೀ ಪರಿಕೃತಸ್ಥಾನಃ ಸ್ವ-
೬ ಸಿದ್ಧೋಮಹಾನೇಕಾಂತಸ್ಥಿತಿಪಾಸ್ವಿಭಾಧೀವೃಷಭಾಧೀ-
೭ ಶಾಬಿಧೋ ದೇಶಿಕಃ॥ ಸ್ವಸ್ತಿ ಶ್ರೀಮದಖಿಲದೇವಕುಲಮ-
೮ ಕುಟಸಂಕಲಿತಾಗಣಿತಮಣಿಗಣಕಿರಣಾವರಣ-
೯ ಶ್ರೀಚರಣಸರೋರುಹ ಶ್ರೀಮದ್ವೀರಸೋಮೇಶ್ವರ ದ್ವಾದಶಾವತಾ-
೧೦ ರ ಶ್ರೀವೀರಭದ್ರ ನಿಜಸ್ವರೂಪ ಶ್ರೀಮದೇಕಾಂತರಾಮೇಶ್ವರಾ-
೧೧ ನ್ವಯೋದ್ಭೂತ ಸಕಲಶಾಸ್ತ್ರಪಾರಾವಾರ ಪಾರಂಗ-
೧೨ ತ ವೀರಶೈವಮತಸ್ಥಾಪನಾಚಾರ್ಯ್ಯರ್ಶೃ(ಶ್ರು)ತಿಸ್ಮೃತೀತಿ-
೧೩ ಹಾಸಪುರಾಣಾಗಮತಾತ್ಪರ್ಯಪ್ರತಿಪಾದಿತಾ.
೧೪ ವಿಪ ದೀಕ್ಷಾವಿಧಾಯೀ ಪದಭುಜಂಗನ ಊರು ಶ್ರೀಮದೇ-
೧೫ ಕಾಂತಬಸವೇಶ್ವರದೇವರು ಮೂಲಸ್ಥಾನದೇವರಿಗೆ ಕೊ-

---

೧ ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಂ. ಕಲಬುರ್ಗಿ : ಶಾಸನ ಸಂಪದ, ಪುಟ : ೮೩-೯೩.

೨ EC. IV (ಹೊಸ ಆವೃತ್ತಿ,- ಚಾಮರಾಜನಗರ ೧೪೪ ಕೆಂಪನಪುರ.

೧೬ ಟ್ಟುದು ಕೆಲ್ಲೂರ ಕೆರೆಯ ಕೆಳಗೆ ಗದ್ದೆ ಪ್ರಾಕಲ್ಲದೆ ಗದ್ದೆ ೫೩ ಪ್ರಾ–
೧೭ ಕಲ್ಲದೆ ತೋಟ ಕಂಭ ೩೦೦ ಸ್ಥಾನದಂ ಮುರ್ರುಕೋಡಿಯ ಸೀ–
೧೮ ಮೆಯಲ್ಲಿ ಹೊಲ ಕಂಭ ೩೦೦ ಕೆಲ್ಲೂರಪುರದಿಂ ಮುರ್ರು–
೧೯ ವಾಡಿದೀ ಮುರ್ರುಗ್ರಾಮದಲ್ಲಿ ದೇವರ ಸೀಮೆಗಲ್ಲ ಕ . ದ
೨೦ ಕಟ್ಟಿದ ಹಲ್ಲಿಗಲಲ್ಲಿ ವಜಪರಾಯ ನಿಮಿತ್ತವಾಗಿ ಕೊಂ–
೨೧ ಡ ದಂಡದಿಪ್ಪನು ಆವನೊಬ್ಬನು ಅಲುಪಿದವನು ಅ. ಪ
೨೨ .ಬ್ರಹ್ಮತ್ಯಾದಿ ಮಹಾಪಾತಕ.ವ ಮಾಡಿದವನ
೨೩ ದೋಷ। ಶ್ರೀಜನಮ .ತ್ಯಾ. ಸಾಯಸ್ಯಜದೇಕಾಂತರಾ–
೨೪ ಮ ಪ್ರಥಿ(ಧಿ)ತಪಪ್ಪ(ಪ)..ಸಾ. ಸನ....ಭದ್ರ। ಪದನ೦೩

ದೇವನಾಗರಿ ಲಿಪಿಯಲ್ಲಿರುವ ಈ ಶಾಸನ, ಯಾವುದೇ ಅರಸು ಅಥವಾ ಮಹಾ ಮಂಡಲೇಶ್ವರನ ಆಳಿಕೆಯನ್ನು ಉಲ್ಲೇಖಿಸುವುದಿಲ್ಲ.[3]

ಶಾಸನದ ವಿಷಯ : 'ವೀರಶೈವಮತಸ್ಥಾಪನಾಚಾರ್ಯ'ನಾದ '**ಏಕಾಂತ ಬಸವೇಶ್ವರ**'ನು ಮೂಲಸ್ಥಾನದೇವರಿಗೆ ಭೂಮಿಯನ್ನು ದಾನಮಾಡಿದ ವಿಷಯ, ಈ ಶಾಸನದ ಮುಖ್ಯ ವಸ್ತು. ಇಲ್ಲಿ ಏಕಾಂತ ಬಸವೇಶ್ವರನೇ ದಾನ ನೀಡಿದುದು ಗಮನಾರ್ಹ.[4]

ಆದಿಯಲ್ಲಿ "ನಮಸ್ತುಂಗಶಿರಶ್ಚುಂಬಿ..........." ಎಂಬ ಸಾಂಪ್ರದಾಯಿಕ ವಾದ ಶಿವಸ್ತುತಿ. ಮತ್ತೇಭವಿಕ್ರೀಡಿತ ವೃತ್ತ ಹಾಗೂ ಗದ್ಯದಲ್ಲಿ "ವೃಷಭಾಧೀ ದೇಶಿಕ" ಎಂಬ ಅಭಿಧಾನವುಳ್ಳ ಏಕಾಂತಬಸವೇಶ್ವರನ ವರ್ಣನೆಯೂ ಇಲ್ಲಿದೆ.

ಮಿತಿ : ಮಿತಿನಿರ್ದೇಶನವಿಲ್ಲದ ಈ ಶಾಸನದ ಕಾಲ ಸುಮಾರು ೧೫ನೆಯ ಶತಮಾನ ವೆಂದು ಹೇಳಬಹುದು.

ಏಕಾಂತರಾಮಯ್ಯ : ಈತನು ಅಬ್ಬಲೂರಿನಲ್ಲಿ ಶಿರಸ್ಸೊಪ್ಪಿಸಿದ ಘಟನೆಯ ಐತಿಹಾಸಿಕತೆಗೆ ಅಲ್ಲಿಯ ಶಾಸನ ಹಾಗೂ ಶಿಲ್ಪಗಳು ಸಾಕ್ಷಿಯಾಗಿ ನಿಂತಿವೆ. ಆದರೆ ಪ್ರಸ್ತುತ ಶಾಸನದಲ್ಲಿ ಬರುವ "ಶ್ರೀಮದಖಿಲದೇವಕುಲಮಕುಟಸಂಕಲಿತಾಗಣಿತ ಮಣಿಗಣಕಿರಣಾವರಣ ಶ್ರೀಚರಣಸರೋರುಹ, ಶ್ರೀಮದ್ವೀರಸೋಮೇಶ್ವರದ್ವಾದಶಾವತಾರ, ಶ್ರೀ ವಿರಭದ್ರನಿಜಸ್ವರೂಪ" ಎಂಬ ಗದ್ಯದಲ್ಲಿ ಏಕಾಂತರಾಮಯ್ಯನ ವ್ಯಕ್ತಿತ್ವವನ್ನು ವಿಶಿಷ್ಟರೀತಿಯಲ್ಲಿ ವಿರಕಪೊಯ್ಯಲಾಗಿದೆ. ಇಲ್ಲಿಯ ಒಂದೊಂದು

---

೩. ಇಲ್ಲಿಗೆ ಒಮ್ಮಿಂದೊಮ್ಮೆ ನಿಲ್ಲುವ ಈ ಶಾಸನ, ಅಪೂರ್ಣವಿದ್ದಂತೆ ತೋರುತ್ತದೆ.

೪. ಅಬ್ಬಲೂರು ಶಾಸನ, ಏಕಾಂತರಾಮಯ್ಯನು ಕಲಚುರಿ ಬಿಜ್ಜಳ, ಕಲ್ಯಾಣ ಚಾಲುಕ್ಯ ಸೋಮೇಶ್ವರ IV ಮತ್ತು ಕದಂಬ ಕಾಮದೇವರಿಂದ ದಾನ ಪಡೆದುದನ್ನೂ ಅರ್ಜುನವಾಡ ಶಾಸನ, ಯತಿರಾಯ ಹಾಲಬಸವಿದೇವನು ಯಾದವರ ಮಹಾಪ್ರಧಾನ ಚವುಡಿಸೆಟ್ಟಿ, ನಾಗರಸರಿಂದ ದಾನ ಸ್ವೀಕರಿಸಿದುದನ್ನೂ ತಿಳಿಸುತ್ತವೆಯೆಂಬುದು ಲಕ್ಷಿಸಬೇಕಾದ ಸಂಗತಿ.

ವಾಕ್ಯವೂ ರಾಮಯ್ಯನ ದಿವ್ಯವ್ಯಕ್ತಿತ್ವದ ವಿರಾಟ್‌ಸ್ವರೂಪವನ್ನು ತೆರೆದುತೋರಿಸುತ್ತಿವೆ.

ಏಕಾಂತಬಸವೇಶ್ವರ : ಏಕಾಂತರಾಮಯ್ಯನ ವಂಶ(ಪರಂಪರೆ?)ದಲ್ಲಿ ಜನಿಸಿದ ಈ ಏಕಾಂತಬಸವೇಶ್ವರನೂ ಸಾಮಾನ್ಯ ವ್ಯಕ್ತಿಯಲ್ಲ. ಶಾಸನದಲ್ಲಿ ಬರುವ "ರಾಕಾಂತರ್ನಿಶಿಜೃಂಭಮಾಣಶಶಭೃಜ್ಜ್ಯಾಯಾಭಕೀರ್ತಿ", "ಅನೇಕಾಂತಾದಿ ವಿರುದ್ಧವಾಗ್ವಿಘಟನಪ್ರೌಢಪ್ರತಾಪೋಜ್ವಲಃ". "ವೀರಶೈವಮತಸ್ಥಾಪನಾಚಾರ್ಯ." "ಶೃ(ಶ್ರು)ತಿಸ್ಮೃತೀತಿಹಾಸಪುರಾಣಾಗಮತಾತ್ಪರ್ಯಪ್ರತಿಪಾದಿತ" ಎಂಬ ವಾಕ್ಯಗಳು ಆತನ ಮೇರುಸದೃಶ ವ್ಯಕ್ತಿತ್ವವನ್ನು ಪರಿಚಯಿಸಿಕೊಡುತ್ತವೆ. ಈ ಏಕಾಂತಬಸವೇಶ್ವರನಿಗೆ "ವೃಷಭಾಧೀಶ ದೇಶಿಕ" ಎಂಬ ಪ್ರತಿನಾಮವಿದ್ದುದು ತಿಳಿದುಬರುತ್ತದೆ.[೫] 'ವದಭುಜಂಗನ ಊರು(?)' ಬಹುಶಃ ಏಕಾಂತಬಸವೇಶ್ವರನ ವಾಸಸ್ಥಳವನ್ನೋ ಅಥವಾ ಜನ್ಮಸ್ಥಳವನ್ನೋ ಸೂಚಿಸುವಂತೆ ತೋರುತ್ತದೆ. ಈಗ ದೊರೆತ ಅಲ್ಪ ಸಾಮಗ್ರಿಯ ಬಲದಿಂದ ಈ ಊರು ಯಾವುದೆಂದು ತಿಳಿಯಲು ಸಾಧ್ಯವಾಗುವುದಿಲ್ಲ.

ಏಕಾಂತರಾಮಯ್ಯನ ವಂಶ(ಪರಂಪರೆ?), ಸುಮಾರು ೩೦೦ ವರ್ಷಗಳ ತರುವಾಯವೂ ಅದೇ ನಿಷ್ಠೆ, ಘನತೆ, ವ್ಯಕ್ತಿತ್ವಗಳ ಎತ್ತರದಲ್ಲಿ ಬದುಕಿದುದು ನಿಜಕ್ಕೂ ವೈಶಿಷ್ಟ್ಯಪೂರ್ಣವಾಗಿದೆ. ಹೀಗೆ ಏಕಾಂತರಾಮಯ್ಯನ ಅನ್ವಯದ ಬಳ್ಳಿ ೧೫ನೆಯ ಶತಮಾನದ ಸುಮಾರಿಗೆ ಚಿಗುರೊಡೆದು ತುಂಗಭದ್ರೆಯ ದಕ್ಷಿಣಕ್ಕೆ ಮುಖಚಾಚಿದುದನ್ನು ಕಾಣುತ್ತೇವೆ.

ಶಾಸನೋಕ್ತ ಏಕಾಂತ ಬಸವೇಶ್ವರನು ಈ ಪ್ರದೇಶ (ತುಂಗಭದ್ರೆಯ ದಕ್ಷಿಣ)ಕ್ಕೆ ಯಾವ ಕಾರಣಕ್ಕಾಗಿ ಬಂದನು ? ಇವನ ಪಿತೃಪರಂಪರೆ, ಗುರುಪರಂಪರೆ ಏನು ? ಮೊದಲಾದ ಪ್ರಶ್ನೆಗಳು ಭವಿಷ್ಯವನ್ನು ಎದುರುನೋಡುತ್ತಿವೆ.

ಒಟ್ಟಿನಲ್ಲಿ ಏಕಾಂತರಾಮಯ್ಯನ ವಂಶ(ಪರಂಪರೆ?)ದ ಬಳ್ಳಿ ಕುಡಿಬಿಟ್ಟು ಹಬ್ಬಿದ ವಿಷಯವನ್ನು ಪ್ರಥಮಬಾರಿಗೆ ತಿಳಿಸುವ ಈ ಶಾಸನಕ್ಕೆ ವಿಶೇಷಬೆಲೆ ಸಲ್ಲುತ್ತದೆ.

— **ಬಿ. ಆರ್. ಹಿರೇಮಠ**

---

೫. ಶಾಸನಪಾಠದಲ್ಲಿಯ ಸಾಲು ೬–೭ ನೋಡಿರಿ.

* ಬರೆವಣಿಗೆಯಲ್ಲಿ ಉಪಯುಕ್ತ ಸಲಹೆ–ಸೂಚನೆಗಳನ್ನು ನೀಡಿದ ಡಾ. ಎಂ. ಎಂ. ಕಲಬುರ್ಗಿ ಅವರಿಗೂ, ಗುಂಡಬ್ರಹ್ಮಯ್ಯಗಳ ವಿಗ್ರಹದ ಫೋಟೋ ಒದಗಿಸಿದ ಶ್ರೀ ಕೆ. ಪಿ. ಎಸ್. ಆರಾಧ್ಯ ಅವರಿಗೂ ಕೃತಜ್ಞತೆಗಳು.

ಗ್ರಂಥಾವಲೋಕನ

'ಸಾಹಿತ್ಯ-ಸಂಸ್ಕೃತಿ-ಶ್ರುತಿ' : ಡಿ. ಎಸ್. ಕರ್ಕಿ. ಪ್ರ : ಐ. ಬಿ. ಎಚ್, ಪ್ರಕಾಶನ, ಬೆಂಗಳೂರು, ೧೯೭೪. ಪುಟ : iv+೧೬೦. ಬೆಲೆ ೬-೦೦.

ಡಾ॥ ಕರ್ಕಿಯವರು ಆಗಾಗ ಬರೆದ ಸಾಹಿತ್ಯ ಹಾಗೂ ಸಂಸ್ಕೃತಿ ವಿಷಯದ ೧೮ ಪ್ರಬಂಧಗಳ ಸಂಕಲನವಿದು. ಕನ್ನಡ ಛಂದೋವಿಕಾಸ, ನಾಲ್ದೆಸೆಯ ನೋಟ- ಇವು ಪ್ರಕಟವಾದ ತರುವಾಯ ಬೆಳಕು ಕಾಣುತ್ತಿದೆ ನನ್ನ ಈ ಮೂರನೆಯ ಕೃತಿ-ಎಂದು ಲೇಖಕರೆ ಮೊದಲನುಡಿಯಲ್ಲಿ ಹೇಳಿದ್ದಾರೆ.

ಮೊದಲನೆಯ ಪ್ರಬಂಧದಲ್ಲಿ ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ವಿವೇಚನೆ ಮಾಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಏನಿಲ್ಲೆಂದರೂ ಸಾವಿರದ ಐನೂರು ವರುಷಗಳ ಸುದೀರ್ಘ ಪರಂಪರೆಯುಂಟು ಎಂದು ಹೇಳಿದ್ದಾರೆ. ಎರಡನೆಯ ಪ್ರಬಂಧದಲ್ಲಿ ಕೊಪ್ಪಳನಾಡಿನ ಪೂರ್ವಚರಿತ್ರೆಯನ್ನು ಸಾಹಿತ್ಯಗ್ರಂಥ— ಹಾಗು ಶಾಸನಗಳ ಆಧಾರಗಳಿಂದ ಚರ್ಚಿಸಿದ್ದಾರೆ. ಧಾರ್ಮಿಕ ರೀತಿಯಿಂದ ಮೊದಲು ಜೈನ ಧರ್ಮದ, ಆ ತರುವಾಯ ವೀರಶೈವ ಧರ್ಮದ ಸಂಪರ್ಕವು ಕೊಪ್ಪಳಕ್ಕೆ ಬಂದಿರಬಹುದು ಎಂದು ಊಹಿಸಲಿಕ್ಕೆ ಆಧಾರಗಳಿವೆ ಎನ್ನುತ್ತಾರೆ. ಅದಲ್ಲದೆ, 'ಕೊಪ್ಪಳದಲ್ಲಿ ಈಗ ಪ್ರಸಿದ್ಧವಿರುವ ಮಠವು ಗವಿಮಠ. ಅದು ವೀರಶೈವಮಠ. ಆ ಮಠದ ಮೂಲ ಸ್ವಾಮಿಗಳು ಕೊಪ್ಪಳಕ್ಕೆ ಬಂದಾಗ ಅಲ್ಲಿಯ ಜೈನ ಸೆಟ್ಟಿಯೊಬ್ಬರು ಅವರನ್ನು ಸ್ವಾಗತಿಸಿದಂತೆ ತಿಳಿಯುತ್ತದೆ' ಎಂದು ಹೇಳಿದ್ದಾರೆ. ಡಾ॥ ಕರ್ಕಿ ಅವರು ಇವೆಲ್ಲ ಹೇಳಿಕೆಗಳಿಗೆ ಖಚಿತ ಆಧಾರಗಳನ್ನು ಕೊಟ್ಟಿದ್ದರೆ ಗ್ರಂಥಕ್ಕೆ ಇನ್ನೂ ಹೆಚ್ಚಿನ ಮಹತ್ವ ಪ್ರಾಪ್ತವಾಗುತ್ತಿತ್ತು. ಕೊಪ್ಪಳದ ಬಗ್ಗೆ ಶಾಸನ ಸಾಹಿತ್ಯ ಹಾಗು ಗ್ರಂಥಗಳ ಆಧಾರ ಅನ್ಯತ್ರ ಹೇರಳವಾಗಿ ದೊರೆಯುತ್ತದೆ. ಅದನ್ನು ಶ್ರೀಯುತರು ಉಪಯೋಗಿಸಿಕೊಂಡಿದ್ದರೆ ಒಳಿತಾಗುತ್ತಿತ್ತು. 'ಕೊಪ್ಪಳದಲ್ಲಿ ಒಂದು ಕಿಲ್ಲೆಯೂ ಉಂಟು. ಕೊಪ್ಪಳವು ಮರಾಠರ ವಶದಲ್ಲಿದ್ದಾಗ ಅದು ನಿರ್ಮಿತವಾಗಿರಬಹುದು' ಎಂದು ಕರ್ಕಿಯವರು ಯಾವ ಆಧಾರದಿಂದ ಹೇಳುತ್ತಾರೆಯೋ ಏನೊ ? ಖಚಿತ ಆಧಾರ ಹೇಳಿಲ್ಲ. ಆದ್ದರಿಂದ, ಅವರ ಹೇಳಿಕೆಯ ಬಗ್ಗೆ ಅನುಮಾನ ಉಂಟಾಗುತ್ತದೆ.

ಪಂಪನ ಮಾರ್ಗ ಮತ್ತು ದೇಸಿ ಸಮನ್ವಯದ ಸುಂದರ ಶೈಲಿಯನ್ನು ಉದಾಹರಣೆಗಳೊಂದಿಗೆ ಶ್ರೀಯುತರು ಉತ್ತಮ ರೀತಿಯಿಂದ ಚರ್ಚಿಸಿದ್ದಾರೆ. ಹರಿಹರನ ಕಾವ್ಯಗಳಲ್ಲಿ ಕಂಡುಬರುವ ಛಂದಸ್ಸನ್ನು ಕುರಿತು ವಿವೇಚನೆ ಮಾಡುತ್ತ ಮಂದಾನಿಲ

ರಗಳೆಯಲ್ಲಿ ಅವನ ಹಿರಿಯ ಅಭಿವ್ಯಕ್ತಿಯನ್ನು ಗುರುತಿಸಿ ಪ್ರಶಂಸೆ ಮಾಡಿದ್ದಾರೆ. ಅದರ ತರುವಾಯ ಉತ್ಸಾಹರಗಳೆಯಲ್ಲಿಯೂ ಅವನು ಸಾಧಿಸಿದ ಪರಿಣಾಮಕ್ಕೇನೂ ಕೊರತೆಯಿಲ್ಲ; ಆದರೆ ಚರಿತ್ರಾತ್ಮಕ ವಸ್ತುವಿಗೆ ಉತ್ಸಾಹವನ್ನು ಹರಿಹರನು ಅಷ್ಟೊಂದು ಬಳಸಿಲ್ಲ ಎನ್ನುತ್ತಾರೆ. ಅವನ ಪ್ರಾಮುಖ್ಯ ಹಾಗೂ ಪ್ರಖ್ಯಾತ ರಗಳೆಗಳಾದ ಬಸವರಾಜದೇವರರಗಳೆ, ಸಂಬಿಯಣ್ಣನರಗಳೆಗಳು ಲಲಿತರಗಳೆಗಳಾಗಿವೆ. ಈ ಛಂದೋಲಯ ಅವನ ಕಾವ್ಯಗಳಲ್ಲಿ ಹವಣಾಗಿ, ಹದುಳವಾಗಿ ಹರಿದಿದೆ. ಸವಿಯಾಗಿ ಸೂಸಿದೆ, ಎನ್ನುತ್ತಾರೆ. ಅವರ ಅಭಿಪ್ರಾಯ ಪ್ರಾಮಾಣಿಕವಾಗಿದೆ.

ನಿಜಗುಣರ ಶೈಲಿಯನ್ನು ಕುರಿತು ವಿವೇಚನೆ ಮಾಡುತ್ತ ಅದು ಹೊರಗಿನಿಂದ ಬಂದುದಲ್ಲ, ನಿಜಗುಣರ ವ್ಯಕ್ತಿತ್ವದ ಕಾಂತಿ ಅವರ ಶೈಲಿಯಲ್ಲಿ ಪ್ರತಿಬಿಂಬಿಸುತ್ತದೆ, ಎನ್ನುವುದು ಕರ್ಕಿ ಅವರ ಮತ. ಅದು ನಿಜವೂ ಹೌದು, ಅಭ್ಯಾಸದಿಂದ ಮಥಿಸಿ ಬಂದ ಮಾತೂ ಹೌದು.

ಕಾರವಾರದ ಕಡಲದಂಡೆಯನ್ನು ಕಂಡು ಸಂತಸಗೊಂಡು ಕವಿರವಿಂದ್ರರು ಹಾಡಿದುದನ್ನು ಡಾ॥ ಕರ್ಕಿಯವರು ಹಿನ್ನೆಲೆಯೊಂದಿಗೆ ಪರಿಚಯ ಮಾಡಿಕೊಟ್ಟು, ಅವರ ಕವಿತೆಯ ಸ್ವಲ್ಪ ಭಾಗವನ್ನು ಕನ್ನಡದಲ್ಲಿ ಭಾವಾನುವಾದಮಾಡಿ ಕುತೂಹಲವನ್ನು ಕೆರಳಿಸಿದ್ದಾರೆ : 'ಓ ತಾರೆಗಳೆ ಚಂದ್ರಿಕೆಯನೀಂಟುತ್ತ ಮತ್ತರಾದಿರ ?' ಮುಂ. ಸಾಲುಗಳಲ್ಲಿ. ಕನ್ನಡದಲ್ಲಿ ರವೀಂದ್ರರ ಸಾಹಿತ್ಯ, ಶಾಂತಿನಿಕೇತನ, ಅಲ್ಲಿಗೆ ಸಂದರ್ಶನವಿತ್ತ ಕನ್ನಡ ಸಾಹಿತಿಗಳು ಇತ್ಯಾದಿ ವಿವರಣೆ ಇದೆ. ರವೀಂದ್ರರ ವ್ಯಕ್ತಿತ್ವ ಮತ್ತು ಕೃತಿಗಳ ಅಭ್ಯಾಸಕ್ಕೆ ಈ ಲೇಖನ ಪ್ರಚೋದನೆಯನ್ನು ನೀಡುತ್ತದೆ. 'ಕವಿರವಿಂದ್ರರೂ ಕರ್ನಾಟಕವೂ'- ಎಂಬ ಈ ಲೇಖನ ಕರ್ಕಿ ಅವರ ಅಭ್ಯಾಸಪೂರ್ಣ ಅನುಭವಗಳನ್ನು ನೀಡುವಲ್ಲಿ ತುಂಬ ಯಶಸ್ವಿಯಾಗಿದೆಯೆಂದೇ ಹೇಳಬಹುದು.

ಜಾನಪದ ತ್ರಿಪದಿಗಳನ್ನೂ, ಹೊಸಗನ್ನಡ ಕವಿತೆಯನ್ನೂ, ಬೇಂದ್ರೆ-ಕುವೆಂಪು ಅವರ ಕಾವ್ಯದ ಮೇಲ್ಮೆಯನ್ನೂ ಡಾ॥ ಕರ್ಕಿಯವರು ಒಂದೊಂದು ಪ್ರಬಂಧದಲ್ಲಿ ವಿವರಿಸಿ ಸ್ವಾರಸ್ಯವನ್ನು ರಸಿಕರಿಗೆ ಉಣಬಡಿಸಿದ್ದಾರೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಕನ್ನಡ ಛಂದೋವಿಕಾಸದ ಸೂಕ್ಷ್ಮ ಅಭ್ಯಾಸವಿದೆ. ಕಾವ್ಯಭಿತ್ತಿಯಲ್ಲಿ ಶಬ್ದಚಿತ್ರ— ಒಂದು ಸುಂದರವಾದ ಪ್ರಬಂಧ. ಪಂಪ, ಹರಿಹರ, ನಾಗಚಂದ್ರ, ರುದ್ರಭಟ್ಟರಿಂದ ಉದಾಹರಣೆಗಳನ್ನು ಉಲ್ಲೇಖಿಸುವುದಲ್ಲದೆ, ಬೇಂದ್ರೆ, ಜಿ. ಎಸ್. ಶಿವರುದ್ರಪ್ಪ, ಕೆ. ಎಸ್. ನರಸಿಂಹಸ್ವಾಮಿ ಮೊದಲಾದವರಿಂದಲೂ ಪದ್ಯಗಳನ್ನು ಎತ್ತಿಕೊಂಡಿದ್ದಾರೆ. ಜಾನಪದ ಗೀತಗಳನ್ನೂ ಬಿಟ್ಟಿಲ್ಲ- ಉದಾ : 'ಯಾರ ಮಗಳವ್ವ ನೀ ಎರಳಿನೋಟದ ಗೊಂಬಿ ?' 'ಮಗಳು ಮಾತಿನ ಗಿಳಿಯು ಸೊಸಿಯು ಸೂತರ ಗೊಂಬಿ' 'ಅತ್ತರ ಕಂದನ ಮುತ್ತ್ಯಾಕ ಉದರ್‍ಯಾವ'- ಇತ್ಯಾದಿ.

ಪ್ರಕೃತಿಪ್ರಪಂಚ, ಕ್ಷೇತ್ರದಲ್ಲಿ ಚಿತ್ತವಿಕಾಸ, ಸಂಸ್ಕೃತಿದೀಪಧಾರಿಣೆ, ಬಾದಾಮಿ ಬೆಟ್ಟದಲ್ಲಿ ಶಿಲ್ಪದೃಷ್ಟಿ ಮುಂತಾದ ಪ್ರಬಂಧಗಳಲ್ಲಿ ಸಾಹಿತ್ಯಾಭಿರುಚಿಯ ಜೊತೆಗೆ, ಚಿತ್ರ,

ಶಿಲ್ಪ ಮುಂತಾದ ವಿಷಯಗಳನ್ನೂ ಲಲಿತವಾದ ಶೈಲಿಯಲ್ಲಿ ಪ್ರಶಂಸೆಮಾಡಿದ ವಿಷಯಗಳುಂಟು. 'ಭರತೇಶ ವೈಭವದಲ್ಲಿ ಕಲಾವೈಭವ' ಹೇಗೆ ಮೂಡಿಸುತ್ತಿದೆ, ಎಂಬುದನ್ನು ಬಿಡಿಸಿ ತೋರಿಸಿದ್ದಾರೆ. ಸದಭಿರುಚಿಯನ್ನು ಪ್ರಕಟಿಸಿದ್ದಾರೆ. ನೆಹರು ಹಾಗೂ ನಿಸರ್ಗ– ಎಂಬುದರಲ್ಲಿ ರಾಷ್ಟ್ರದ ಘನವಾದ ಕಾರ್ಯದಲ್ಲಿ ಬಿಡುವಿಲ್ಲದೆ ದುಡಿಯುತ್ತಿದ್ದಾಗಲೂ ನೆಹರೂ ಅವರು ನಿಸರ್ಗಸೌಂದರ್ಯದ ರಸಾನುಭವವನ್ನು ಪಡೆಯಬಲ್ಲ ಜಾಗೃತ ಪ್ರಜ್ಞೆಯನ್ನು ಹೇಗೆ ಇರಿಸಿಕೊಂಡಿದ್ದರು, ಎಂಬ ಅಂಶವನ್ನು ಬಹಳ ಚನ್ನಾಗಿ ಮನದಟ್ಟು ಮಾಡಿಕೊಟ್ಟಿದ್ದಾರೆ.

ಒಟ್ಟಿನ ಮೇಲೆ ಕರ್ಕಿ ಅವರು ಯಾವದೇ ವಿಷಯದ ಮೇಲೆ ಬರೆದರೂ, ಲಲಿತವಾಗಿ ಬರೆಯಬಲ್ಲರು; ಹಿತಮಿತವಾದ ಶೈಲಿಯಲ್ಲಿ ಸಹೃದಯರ ಮನಸವನ್ನು ಹಿಡಿಯುವಂತೆ ಬರೆಯಬಲ್ಲರು. ಅವರ ಕವಿತೆಯಂತೆ ಅವರ ಪ್ರಬಂಧ ಸೃಷ್ಟಿಯೂ ಆಕರ್ಷಕವಾಗಿ ಮೃದುಮಧುರವಾಗಿ ರಚಿಸಲ್ಪಟ್ಟಿದೆ. ಪ್ರಖರ ವಿಚಾರಸರಣಿ, ಸಂಶೋಧನೆಯ ತುಮುಲ ಅವರಲ್ಲಿ ಹುಡುಕಹೋದರೆ ನಿರಾಶೆ ಕಟ್ಟಿಟ್ಟದ್ದು. ಅದು ಅವರ ಪ್ರಕೃತಿಗೆ ಒಗ್ಗುವುದಿಲ್ಲ. ಅಂಥ ಸಂದರ್ಭ ಬಂದಲ್ಲೆಲ್ಲ ನಯವಾಗಿ ಹೇಳಿ ನುಣುಚಿಕೊಂಡು ಮುಂದುವರಿಯುತ್ತಾರೆ.

—ಬಿ. ಬಿ. ಮಹೀಶವಾಡಿ

ಬದುಕು ಚದುರಂಗದಾಟ (ಮಿನಿ ಕಾದಂಬರಿ) : ಗವೀಶ ಹಿರೇಮಠ. ಪ್ರ : ಎಸ್. ಬಿ. ಉಪಳಾಂವಕರ, ಗುಲಬರ್ಗಾ, ೧೯೭೬. ಪುಟ : vi+೮೨. ಬೆಲೆ : ೫–೦೦.

"ಭಾವಗಂಗೆ"ಯಲ್ಲಿ ಮಿಂದು "ಸಾಹಿತ್ಯಸೌಗಂಧ" ಬೀರಿ "ಪ್ರಣಯ ಮುಕ್ತಕಗಳಿಂದ" ಪ್ರಸಿದ್ಧರಾದ ಶ್ರೀ ಗವೀಶ ಹಿರೇಮಠರು, ಬದುಕಿನ ಚದುರಂಗದಾಟದಲ್ಲಿಯೂ ಜಯಶಾಲಿಯಾಗಿದ್ದಾರೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. "ಗವೀಶ ಪ್ರೇಮದ ವಿಷಯವನ್ನು ಚನ್ನಾಗಿ ಪ್ರಥಃಕರಿಸಬಲ್ಲರು" ಎಂದು ಈ ಕಾದಂಬರಿಯ ಮುನ್ನುಡಿಯಲ್ಲಿ ಡಾ. ವ್ಹಿ. ಶಿವಾನಂದರು ಹೇಳಿರುವ ಮಾತು ನಿಜಕ್ಕೂ ಸ್ತುತ್ಯವಾದುದು.

ಶ್ರೀ ಗವೀಶರ ಹಾಗೂ ನನ್ನ ಬರಹ ಭಿನ್ನವಾದಾಗ್ಯೂಕೂಡ ನಮ್ಮಿಬ್ಬರಲ್ಲಿಯ ಆಂತರಿಕ ಸ್ಪಂದನದ ಮೇಳಕ್ಕಾಗಿ, ವೈಯುಕ್ತಿಕತೆ ಸಾರ್ವತ್ರಿಕೆಯನ್ನು ಪಡೆಯುವ ಸಾಫಲ್ಯಕ್ಕಾಗಿ, ಅವರಲ್ಲಿ ಕಾಲ್ಪನಿಕತೆಯ ಮುಸುಕಿದ್ದರೂ ಕಣ್ಕಟ್ಟುವ ನೈಜ ಚಿತ್ರಣಕ್ಕಾಗಿ, ಸಮರ್ಥಪೂರ್ಣವಾದ ಶೈಲಿಗಾಗಿ ಶ್ರೀ ಗವೀಶ ನನಗೆ ಅರ್ಥಪೂರ್ಣರಾಗಿ ಕಾಣುತ್ತಾರೆ.

ಇಂದಿನ ಹದಗೆಟ್ಟ ಪರಿಸರದಲ್ಲಿ ಸಾಹಿತ್ಯ ಕೆಲ ಗುಂಪುಗಳ ಕೈಯಲ್ಲಿ ಸಿಕ್ಕು ನಿಜಸ್ಥಿತಿ ಅರಿವಾಗದೇ ಗೊಂದಲಮಯವಾದಾಗ ಶ್ರೀ ಗವೀಶರ ಈ ಮಿನಿಕಾದಂಬರಿ ಓದುಗನಿಗೊಂದು ಆಣೆಯನ್ನು ಹುಟ್ಟಿಸುತ್ತದೆ; ಓದಿದಾಗ ತೃಪ್ತಿಸಿಗುತ್ತದೆ. ಸರಳ ಶೈಲಿ, ನವುರಾದ ಭಾಷೆ, ಹೃದಯಂಗಮ ಭಾವುಕತೆ, ವರ್ಣನಾಕುಶಲತೆ ಇವುಗಳನ್ನೆಲ್ಲಾ ನೋಡಿದಾಗ, ಶ್ರೀ ಗವೀಶರವರು ಹೇಗೋ, ಅದರಂತೆಯೇ ಅವರ ಬರಹ ಕೂಡ ಎಂದು ಸ್ಪಷ್ಟವಾಗುತ್ತದೆ. ಅವರ ಮನಸ್ಸು ಹೇಗೆ ಮೃದುವೊ ಹಾಗೆಯೇ ಅವರು ಸೃಜಿಸಿದ ಕಥಾನಾಯಕನ ಮನಸ್ಸುಕೂಡ.

ಹತ್ತಾರು ವಿಮರ್ಶೆಗಳನ್ನು ಇಟ್ಟುಗೊಂಡು ಅರ್ಥವಾಗದ್ದಕ್ಕೆ ತಲೆಕೆರೆದುಕೊಂಡು ವಿಚಾರಿಸುತ್ತಾ, ವಿವಾದಮಾಡುತ್ತಾ, ಮಣ್ಣಿನವಾಸನೆಯೋ, ಹಣ್ಣಿನವಾಸನೆಯೋ, ಯಾವ ಸುಡುಗಾಡವಾಸನೆಯೊ ಎಂದು ತಲೆಕೆಡೆಸುವ ಕಾದಂಬರಿಗಳ ಸಂಖ್ಯೆಯೇ ಹೆಚ್ಚಾಗಿರುವ ಇಂತಹ ಪ್ರಸಂಗದಲ್ಲಿ ಜನಸಾಮಾನ್ಯನಿಗೂ ರಸಾನಂದ ಕೊಟ್ಟು ತೃಪ್ತಿ ಪಡಿಸಬಲ್ಲ ಕಾದಂಬರಿ ಈ "ಬದುಕು ಚದುರಂಗದಾಟ."

ಒಬ್ಬ ಮುಗ್ಧ ಸರಳಜೀವಿ, ಸೌಂದರ್ಯಪ್ರಿಯ, ಭಾವನಾಜೀವಿ, ಲವಲೇಶವೂ ಸ್ವಾರ್ಥವಿಲ್ಲದೆ ಒಳ್ಳೆಯ ಧ್ಯೇಯವಿಟ್ಟುಕೊಂಡು, ಬೆಳ್ಳಗಿದ್ದುದೆಲ್ಲಾ ಹಾಲೆಂದು ತಿಳಿದು ಬದುಕುವವ ಆನಂದ. ಅವನ ಬಾಳಿನಲ್ಲಿ ಬಣ್ಣ ಹಚ್ಚಿಕೊಂಡು ಬಂದು ತೋರಿಕೆಗೆ ಮೊದ ಮೊದಲು ಒಳ್ಳೇ ಹೆಂಡತಿಯಂತೆ ನಟಿಸಿ, ಬೆಡಗು ಬಿನ್ನಾಣಗಳಿಂದ ಮೋಹ ಗೊಳಿಸಿ ತನ್ನ ಕಾಮದಾಸೆಗಾಗಿ ಆನಂದನ ಗೆಳೆಯನೊಡನೆ ಅನೈತಿಕ ಸಂಬಂಧವಿಟ್ಟು ಕೊಂಡ ವ್ಯಭಿಚಾರಿಣಿ ವಸಂತಾ. ಆಸರೆ ಕೊಟ್ಟವನ ಹೆಂಡತಿಯನ್ನೇ ಅಪ್ಪುಗೆಯಲ್ಲಿರಿ ಸಿಕೊಂಡು ಉಪ್ಪುತಿಂದ ಮನೆಗೆ ದ್ರೋಹಮಾಡಿದ್ದ ಮಿತ್ರವಂಚಕ ರಮೇಶ. ಸಮ ಯದ ಸೆಳುವಿಗೆ ಸಿಕ್ಕೊ ತಾನು ಕಾಲುಜಾರಿ ಮೋಸಹೋದರೂ ಕೂಡ ಒಳ್ಳೆಯ ಗುಣಗಳನ್ನು ಹೊಂದಿದ ಸಾಕಾರಮೂರ್ತಿ ಶಾರದಾ.

ಹೀಗೆ ಈ ನಾಲ್ಕು ಪಾತ್ರಗಳ ಮಹಾಮಜಲನ್ನು ಈ ನಾಲ್ಕು ಮೂಲೆಯ ಚದು ರಂಗ ಚೌಕದಲ್ಲಿ ಒಳ್ಳೆ ಸುಂದರರಾಗಿ ಬೆಸದಿದ್ದಾರೆ, ಶ್ರೀ ಗವೀಶರು.

ಕೊಬ್ಬಿದ ಶ್ರೀಮಂತ ಹೆಂಗಸರು ಏನುಮಾಡಿದರೂ ಮೆರವಣಿಗೆಯೇ, ಎಲ್ಲಿ ಹೋಗಿಬಂದರೂ ಚಂದವೆ. ಏಕೆಂದರೆ ಅವರು ಶ್ರೀಮಂತರಲ್ಲವೆ? ಆದ್ದರಿಂದ ಎಲ್ಲವೂ ಮುಚ್ಚಿ ಹೋಗುತ್ತದೆ. ಆದರೆ ಕಾರ್ಮಿಕನ ಮಗಳೊಬ್ಬಳು ಅನಾಥಳಾಗಿ ಕುಡುಕರ ಕೈಗೆಸಿಕ್ಕೊ ಶೀಲಗೆಟ್ಟರೆ ಅವಳು ಸಮಾಜದ ಎದುರಿಗೆ ಮಹಾಪರಾಧಿ. ಸಮಾಜದಿಂದ ಬಾಹಿರಳು. ಈ ಸಮಸ್ಯೆ ಕಾದಂಬರೀ ಕಥಾನಾಯಕನ ತಲೆತಿನ್ನುವುದ ರಲ್ಲಿ ಅರ್ಥವಿದೆ, ಅನುಕಂಪವಿದೆ; ವೈಚಾರಿಕತೆಯಿದೆ. ದೈವ, ದೇವರು, ಅಸ್ತಿತ್ವ,

ಪ್ರೇಮ ಇವುಗಳ ಬಗ್ಗೆ ಸಮರ್ಥನಾಪೂರ್ಣ ವಿವರಣೆಯಿದೆ. ಆಶಾ, ರೋಜಾ, ಶಕುಂತಲಾರಂತಹ ಕಿರಿಪಾತ್ರಗಳೂ ಕೂಡ ಮನದಲ್ಲಿ ಮಿಂಚಿ ಮಾಯವಾಗುತ್ತವೆ.

ನಮ್ಮ ಸಂಸ್ಕೃತಿ ಭವ್ಯವಾಗಿದೆ ದಿವ್ಯವಾಗಿದೆ ಎಂದು ಹೇಳಿ 'ದೇಶದ ಏಳ್ಗೆಯ ಯುವಕರ ಕರ್ತವ್ಯದ' ಭಾಷಣ ಬಿಗಿಯುವ ರಾಜಕೀಯ ಪುಂಡರು 'ಛಲಬೇಕು ಶರಣಂಗೆ' ಎಂಬ ಬಸವಣ್ಣನವರ ವಚನವನ್ನು ಘಂಟಾಘೋಷವಾಗಿ ಉಪದೇಶಿಸಿ ಹಲವಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವ ಪ್ರಾಧ್ಯಾಪಕರು, ಧರ್ಮ ಸಂಸ್ಥೆಗಳ ಮಹಾಮಹಾಪೀಠಾಧೀಶರು, ಗಂಡಸರು ಕ್ಯಾಬರೆಯಿಂದ ಹಾಳಾಗುತ್ತಾರೆಂದು ಚಳುವಳಿಮಾಡುವ ಉಚ್ಚವರ್ಗದ ಹೆಂಗಸರು ಇವರೆಲ್ಲಾ ಕ್ಲಬ್‌ದಲ್ಲಿ ಮಾಡಬಾರದ್ದನ್ನೆಲ್ಲಾ ಮಾಡುತ್ತಿದ್ದುದನ್ನು ನೋಡಿ ಕಥಾನಾಯಕನಿಗೆ ದುಃಖವಾಗುತ್ತದೆ, ಹೇಸಿಗೆಯಾಗುತ್ತದೆ. ಅಂತೆಯೇ ರೊಚ್ಚಿಗೆದ್ದು ಅವರೆಲ್ಲರನ್ನೂ ಬಯಲಿಗೆಳೆಯುತ್ತಾನೆ.

ಒಳಗೆ ಮಾಡಬಾರದ ಕೆಲಸಗಳನ್ನೆಲ್ಲಾ ಮಾಡಿ ಹೊರಗೆ ಸಾಜಾಮನುಷ್ಯರಂತೆ ವರ್ತಿಸುವ ಮಹಾ-ಮಹಾ ವ್ಯಕ್ತಿಗಳಿಗೆ ಇದೊಂದು ಕೈಗನ್ನಡಿಯಾಗಿದೆ. ಸರಳ ಸಂಪನ್ನ ಭಾವನಾಜೀವಿಗಂಡಸಿಕ್ಕರೆ ಅವನನ್ನು ತನ್ನ ಸ್ವಾರ್ಥದ ಕಾಮಪಿಪಾಸೆಗೆ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದಕ್ಕೆ ಇಲ್ಲಿಯ ವಸಂತಾಳೇ ಸಾಕ್ಷಿ. ಹೀಗಾದಾಗ್ಯೂ ಬದುಕಿನಲ್ಲಿ ಜಿಗುಪ್ಸೆ ಹುಟ್ಟುತ್ತದೆ, ಕತ್ತಲು ಕವಿಯುತ್ತದೆ. ಆಗ ತ್ಯಾಗ ತುಂಬಿದ ಪ್ರೇಮವುಳ್ಳ ಗುಣಸಂಪನ್ನೆ ಶಾರದಾಳಂತಹ ಪಾತ್ರಗಳಿಂದ ಮತ್ತೆ ಬದುಕಿನಲ್ಲಿ ಬೆಳಕು ಬೀರುತ್ತೆ, ಆಶೆಚಿಗುರುತ್ತೆ. ಕಾದಂಬರಿಯ ಶಿರೋನಾಮೆಯಂತೂ ತುಂಬಾ ಅರ್ಥವತ್ತಾಗಿ ಅನ್ವಯವಾಗಿದೆ.

"ನಾವು ಒಂದೊಂದು ಸಲ ಹೇಳುತ್ತೇವೆ, ಮಾತಾಡುತ್ತೇವೆ, ಚರ್ಚಿಸುತ್ತೇವೆ" ಆದರೆ ಅವಾವೂ ವಾಸ್ತುವಿಕ ಜೀವನಕ್ಕೆ ಸಂಬಂಧವೇ ಇಲ್ಲವೆನ್ನುವಂತೆ ವರ್ತಿಸುತ್ತೇವೆ. ಯಾಕೆ ಹೀಗೆ?" ಎಂದು, ಆನಂದನ ಮುಖಾಂತರ ಹೇಳುವ ಕಾದಂಬರಿಕಾರನ ಈ ಮಾತಿನಲ್ಲಿ ವೈಚಾರಿಕತೆಯಡಗಿದೆ, ಚಿಂತನಶೀಲತೆಯಿದೆ.

ಸಿಹಿ-ಕಹಿಗಳ, ಒಳಿತು ಕೆಡಕುಗಳ ಸುಖ ದುಃಖಗಳ ಸಂಗಮ ಈ ಕಾದಂಬರಿ, ಕೊನೆಯವರೆಗೂ ಕುತೂಹಲವನ್ನು ಹುಟ್ಟಿಸುತ್ತದೆ. ಈ ಕಲ್ಪನೆ, ಭಾವುಕತೆಗಳಿಗಿಂತ ವಾಸ್ತವತೆಗೆ, ಕ್ರಿಯೆಗೆ ಹೆಚ್ಚುಗಮನವಿರಿಸಿದ್ದರೆ ಕಾದಂಬರಿ ಇನ್ನೂ ನೈಜವಾಗಬಹುದಿತ್ತೊ ಏನೋ. ಆದರೂ ಈ ಕಾದಂಬರಿಗೆ ತನ್ನದೇ ಆದ ಸೊಗಸಿದೆ, ಕಂಪಿದೆ.

—ಬಸವರಾಜ ಸಬರದ

"ನನ್ನ ಗೀತಗಳು–೧" : ಗೀತಾಪ್ರಿಯ. ಪ್ರ : ರಾಜಹಂಸ ಪ್ರಕಾಶನ, ಧಾರವಾಡ–೪. ಪುಟ : ೪೪+೧೭. ಬೆಲೆ : ರೂ.೩.೦೦.

ಗೀತಾಪ್ರಿಯರ 'ನನ್ನ ಗೀತಗಳು' ಎಂಬ ಎರಡು ಕವನ ಸಂಕಲನಗಳನ್ನೋದಿದಾಗ, ಅವುಗಳಲ್ಲಿರುವ ವಿಚಾರಗಳನ್ನು ಕುರಿತು ಚಿಂತಿಸಿದಾಗ, ಕೆಲವು ಗೀತಗಳಲ್ಲಿ ಅಂತಸ್ಥವಾದ ಭಾವನೆಯ ಉತ್ಕಟತೆಯು ಹೃದಯವನ್ನು ಆರ್ದ್ರಗೊಳಿಸಿದಾಗ, ಕನ್ನಡ ಸಾಹಿತ್ಯ. ಒಬ್ಬ ಉತ್ತಮ ತರಗತಿಯ ಕವಿಯ ಪ್ರತಿಭೆಯ ಸದುಪಯೋಗ ಪಡೆಯಲಿಲ್ಲವಲ್ಲ ಎಂಬ ನೋವು ಉಳಿಯುತ್ತದೆ. ಈ ಕವನ ಸಂಕಲನದ ಮೊದಲನೆಯ ಭಾಗವು ೧೯೪೪ರಲ್ಲಿ ಪ್ರಕಟವಾಗಿ ಈಗ ಮರುಹುಟ್ಟು ಪಡೆದಿದೆ. ಎರಡನೆ ಭಾಗವು ಪ್ರಥಮ ಮುದ್ರಣ ಕಾಣುತ್ತಿದೆ. ಕವಿ ಮೂಲತಃ ಚಿಂತನಶೀಲ ವ್ಯಕ್ತಿತ್ವವುಳ್ಳವರು. ಅವರ ಚಿಂತನೆಯ ಹಿಂದೆ ಸುವಿಚಾರದ ದೀರ್ಘ ಪರಂಪರೆ ಇದೆ. ನಾಡನ್ನು, ನಾಡಿನ ಜನದ ಜೀವನಕ್ರಮವನ್ನು, ತಾಯಿನುಡಿಯ ಗತಿ–ವಿಗತಿಗಳನ್ನು ಮಾನವ ಮನದ ಕೃತಿ–ವಿಕೃತಿಗಳನ್ನು ಕುರಿತು ಏಕಾಂತ ಚಿಂತನೆ ಮಾಡುತ್ತಿರುವ ಗೀತಾಪ್ರಿಯರ ಗೀತಗಳಲ್ಲಿ 'ಕವಿಸಹಜವಾದ ವೇದನೆ' ಸ್ಥಾಯೀಭಾವವಾಗಿದೆ. ಬದುಕಿನಲ್ಲಿ, ಭೂಮಿಯಲ್ಲಿ ನೋವು ಅನಿವಾರ್ಯ: ಆದರೆ ಆ ನೋವು ಅಪರಿಹಾರ್ಯವಲ್ಲ ಎಂಬ ತಾತ್ವಿಕ ಸಮಾಧಾನ ಕವಿಯ ವ್ಯಕ್ತಿತ್ವಕ್ಕೆ, ಗೀತಗಳಿಗೆ ಅಪೇಕ್ಷಿತ ಗಾಂಭೀರ್ಯವನ್ನು ನೀಡಿದೆ.

ಇಲ್ಲಿಯ ಗೀತಗಳು ಎರಡು ವಿಶಿಷ್ಟ ಗುಣಗಳಿಗಾಗಿ ಗಮನಾರ್ಹವಾಗಿವೆ : ೧) ಲೋಕದ ಜೀವನವನ್ನೇ ಉನ್ನತಿಗೇರಿಸಲು ಹಂಬಲಿಸುವ ಆದರ್ಶ ಒಂದುಕಡೆ; ೨) ಲೋಕದ ಬದುಕಿನಲ್ಲಿಯ ಕೃತಿಗಳನ್ನು ಅವಲೋಕಿಸಿ, ಜೀವನದ ಅಸಹನೀಯ ಅವ್ಯವಸ್ಥೆಗೆ ವ್ಯಾವಹಾರಿಕ (Practical) ಪರಿಹಾರ ಸೂಚಿಸುವ ವಾಸ್ತವ ವಿಚಾರಗಳು ಇನ್ನೊಂದು ಕಡೆಗೆ. ಸ್ವಾತಂತ್ರ್ಯಪೂರ್ವದ ರಾಷ್ಟ್ರೀಯ ಆಂದೋಲನದಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿದ ಕುಲಕರ್ಣಿಯವರು ಅಂದಿನ ಆದರ್ಶಗಳಿಂದ ಪ್ರಚೋದಿತರಾದವರು. ಹಾಗೆಯೇ ಭಾವುಕ ಕವಿಗಳಾದ ರವೀಂದ್ರನಾಥ ಠಾಕೂರರ ಸನ್ನಿಧಿಯಲ್ಲಿ ಸ್ಫೂರ್ತಿ ಪಡೆದವರು. ಹೀಗಾಗಿ ಕುಲಕರ್ಣಿಯವರ ಕವಿ ವ್ಯಕ್ತಿತ್ವವು ಆ ಕಾಲದಲ್ಲಿಯೇ ವಿಕಾಸಹೊಂದಿದೆ ಎಂಬುದನ್ನು ಗಮನದಲ್ಲಿರಿಸಿ, ಅವರ ಕವಿತೆಗಳನ್ನು ಅರಿಯಬೇಕು. ಕುಲಕರ್ಣಿಯವರಲ್ಲಿ ರಮ್ಯಕವಿಗಳಿಗೆ ಸಹಜವಾದ ಆದರ್ಶ, ಭಾವೋತ್ಕಟತೆ, ವೇದನಾಶೀಲತೆ, ಚಿಂತನಪರತೆ, ತಾತ್ವಿಕ ಸಮಾಧಾನದ ಹಂಬಲ, ರುಚಿರವಾದ ಸ್ನಿಗ್ಧ ಕವಿಕಾಮನೆಗಳ ಅಭಿವ್ಯಕ್ತಿ ಕಂಡುಬರುತ್ತದೆ. 'ರಮ್ಯಕವಿಗಳು' ಎಂಬ ಮುದ್ರೆಯನ್ನೊತ್ತಿದರೆ ಬಹುಶಃ ಇಲ್ಲಿಯ ಗೀತಗಳಿಗೆ ಅಪಚಾರ ಮಾಡಿದಂತಾಗುತ್ತದೆ.

ಮೂಲತಃ ಹಾಗೂ ಮುಖ್ಯವಾಗಿ ಶ್ರೀ ಕುಲಕರ್ಣಿಯವರು ಭಾವನಾಶೀಲರು.

ಕೋಮಲ ಭಾವನೆಗಳನ್ನು ಹೊಮ್ಮಿಸುವ ಅವರ ಗೀತಗಳಲ್ಲಿ 'ಮೃದುಹೃದಯದ ನೋವಿನ' ಅನುಭವವಿದೆ.

೧) ಮನವೆ, ಮಾನಸ ಸರವೆ
ಬಂದ ಬೆಂಕಿಯನೆಲ್ಲ
ನುಂಗು, ನಂದಿಸು ಮತ್ತೆ ಕುದಿಯಬೇಡ
(ಭಾಗ ೧, 'ಸಂಕಲ್ಪ')

೨) ಆದರೇನು ? ನೀವು ನೊಂದು
ಬಿಟ್ಟ ಬಿಸಿಯ ಉಸಿರನು
ತಾಳಿಕೊಳುವ ತ್ರಾಣವದಕೆ
ಬಾರದೆಂದು ಅನಿಸಿತು
(ಭಾಗ ೧, 'ನನ್ನ ದೀಪ')

ಹೀಗೆ ನೋವು ಇಲ್ಲಿಯ ಗೀತಗಳಿಗೆ ಮೂಲಪ್ರೇರಣೆಯಾಗಿದೆ. ಆದರೆ ಈ ನೋವಿನ ಉಪಶಮನವಾಗದಹೊರತು ಜೀವಕ್ಕೆ ಶಾಂತಿಯೆಲ್ಲಿ ? ಕವಿ ಇಂಥ ಮಾನಸಿಕ ಶಾಂತಿಯ ಹಂಬಲದಲ್ಲಿ ಅವಿರತ ತೊಳಲಾಡಿದ್ದಾನೆ. ಕೊನೆಗೆ ಸಮಸ್ತ ಪ್ರಕೃತಿಯಲ್ಲಿ ಅಂತರ್ನಿಹಿತವಾದ ದೈವೀಚೈತನ್ಯಕ್ಕೆ ತಮ್ಮನ್ನೊಪ್ಪಿಸಿಕೊಂಡು ನಿಶ್ಚಿಂತರಾಗಿದ್ದಾರೆ.

೧) ದೇವ ನಿನ್ನಪಾರ ಕರುಣೆಗಾವ ನೆಲೆಯ ಕಾಣಲಿ
(ಭಾಗ ೧, 'ಕರುಣೆ')

೨) ದೇವ ತೋರು ಕರುಣೆಬೀರು ದಿಕ್ಕುಗಾಣದಾಗಿದೆ
(ಭಾಗ ೧, 'ಮನದನ್ನೆ') ಮುಂತಾದವು.

ಹೀಗೆ ಅಂತರಂಗದ ಅನಂತದಾಹವನ್ನು ಪರಿಹರಿಸಬಲ್ಲ ದೈವೀಶಕ್ತಿಯೊಂದಿದೆ ಎಂಬ ನಂಬಿಕೆ, ಕವಿಗೆ ಅಪಾರ ಎಡರು–ತೊಡರುಗಳನ್ನೆದುರಿಸುವ ಸ್ಥೈರ್ಯ ನೀಡಿದೆ. ಭಾರತೀಯ ಔಪನಿಷಧಿಕ ಋಷಿಗಳ ಚಿಂತನವು ಬಹುಶಃ ಕವಿ ಗೀತಾಪ್ರಿಯರಿಗೆ ಪ್ರೇರಣೆ ನೀಡಿರಬಹುದು.

'ಪಯಣದ ಹಾಡು' ಭಾಗ ೧ರಲ್ಲಿ ಕವಿಯ ಚಿಂತನಶೀಲ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಇಲ್ಲಿ ಕಾಲದ ಅನಂತತೆಗೆ, ಬೃಹತ್ ಸ್ಪಂದನಗಳಿಗೆ ದಿಗ್ಭ್ರಾಂತನಾದ ಕವಿ, ಆ ವಿರಾಟಕಾಲಪುರುಷನ ಹೆಜ್ಜೆ ಸಪ್ಪಳವನ್ನು ಆಲಿಸುತ್ತಿದ್ದಾನೆ.

'ನೀಲಿಪಟ ಮೇಲೆದ್ದು ಮೆರೆವುದು ನೀಲವ್ಯೋಮದ ಮಧ್ಯದಿ
ಕಾಲದೊಂದಿಗೆ ತಾಲಹಾಕುತ ಕಾಲಮಂಡಲ ಗರ್ಭದಿ'
('ಪಯಣದ ಹಾಡು' ಭಾಗ ೧)

'ಅಗಲಿದ ಗೆಳೆಯನಿಗೆ' ಇದು ಒಂದು ಶೋಕಗೀತವಾಗಿದ್ದು ದುಃಖದ ಅಭಿವ್ಯಕ್ತಿಯು ಹೃದಯಸ್ಪರ್ಶಿಯಾದ ಕವಿತೆಯಾಗುವವರಲ್ಲಿ ಸೋತಿದೆ. 'ನಾನು' ಎಂಬುದು ಭಾಗ ೧ ಕವನ ಸಂಕಲನದ ಉತ್ತಮ ಗೀತ. ಇಲ್ಲಿ ಮಾನವನ ಆತ್ಮವು (spirit) ತನ್ನತನವನ್ನು ಗುರುತಿಸಿಕೊಂಡ ಪರಿ ಸುಂದರವಾಗಿ ಹೊರಹೊಮ್ಮಿದೆ.

ನನ್ನ ಜೀವ ವರ್ತುಲಕೊಂದೆ ನಾನೆ ಅಮೃತಬಿಂದು
ನನ್ನ ನಭೋಮಂಡಲಕೆ ನಾನೆ ಭಾನು ಇಂದು
(ಭಾಗ ೧, 'ನಾನು')

'ಜೀವ ವರ್ತುಲ', 'ಅಮೃತಬಿಂದು', 'ನನ್ನ ನಭೋಮಂಡಲ', 'ನಾನು ಭಾನು', ಬಹಳ ಧ್ವನಿಪೂರ್ಣವಾದ ಅಭಿವ್ಯಕ್ತಿಗಳಾಗಿದ್ದು ಸಾರ್ಥಕವಾಗಿವೆ.

'ಬನಸಿರಿ', 'ಮಳೆ ಬಂತು', 'ದೊರೆಯು ಕಾಣಲಳವೆ' ಮುಂತಾದ ಪ್ರಕೃತಿಗೀತಗಳಲ್ಲಿ ದಾರ್ಶನಿಕತೆಯ ಛಾಯೆ ಇದೆ. ಪ್ರಕೃತಿ ಕವಿಗೆ ನಿರ್ಜೀವವಾದ ಜಡವಲ್ಲ. ಭಗವದ್ವಿಭೂತಿಯನ್ನು ಪ್ರಕಟಪಡಿಸುವ ರಂಗಸಜ್ಜಿಕೆಯಾಗಿದೆ.

ಆಕಾಶ ತಂದೆ ಎದೆ ಕರಗಿ ಬಂದೆ ಮಳೆಯಾಗಿ ನೆಲಕೆ ನಿಂದೆ
ಬರುವಾಗ ಅಮೃತ ತಂದೆ
(ಭಾಗ ೧, 'ಮಳೆ ಬಂತು')

ನಿಜಕ್ಕೂ 'ಮಳೆ ಬಂತು' ಕವನದ ಚಿತ್ರಕಶಕ್ತಿ (Picturesqueness) ಪ್ರಶಂಸನೀಯವಾಗಿದೆ. ಪ್ರಕೃತಿತಾಯಿ ಅನಂತಕರುಣೆಯ ನಿಧಿ. ಅವಳ ಮಮತೆಯಿಂದಲ್ಲವೇ ಜೀವನ ಬದುಕಿರುವುದು. ಅಂತೆಯೆ ಬನಸಿರಿಯನ್ನು ಆಸ್ವಾದಿಸಿದಾಗ ಕವಿಗೆ—

ಮನಸಿನಲ್ಲಿ ಮೂಡಿಬಂತು ಮಮತೆಯ ಮೃದುಭಾವನೆ
ಮನವ ತುಂಬಿ ತುಳುಕುತಿತ್ತು ಜೀವ ಜರಿದು ಸಾವನೆ'

'ಜೀವದುಸಿರು' ರವೀಂದ್ರ ಸಂಪ್ರದಾಯದ ಕವಿತೆ. 'ಆತ್ಮಿಶಿಶು' ಆಧ್ಯಾತ್ಮ ಗೀತೆ (Spiritual poem). ಜಗದ್ವ್ಯಾಪಿಯಾದ ಏಕಮೇವ ಆತ್ಮದ ಅನುಭೂತಿಯಿಂದ ಹೊರಹೊಮ್ಮಿದ ಕವನ. 'ಬೆಳಕು ಕತ್ತಲೆ' (Platonic) ಆದರ್ಶದ ಕಾವ್ಯ. 'ಮನಸು ಮತ್ತು ಮಾತು' ಉತ್ತಮ ವಿಚಾರಗಳು ಕಾವ್ಯವಾಗದೆ ಸೋತ ಮತ್ತೊಂದು ಉದಾಹರಣೆ.

'ತಂಗಿ ಬಂದಳೆನ್ನ ಮನೆಗೆ' ಈ ಪುಟ್ಟಗೀತವು ಈ ಸಮಗ್ರ ಸಂಕಲನದ ಅತ್ಯಂತ ಪರಿಣಾಮಕಾರೀ ಕವನ ಎಂದು ಹೇಳಬಹುದು. ತಂಗಿಗಾಗಿ ತನ್ನಲ್ಲಿದ್ದ ಸಮಸ್ತ ಅಂತಃಕರಣವನ್ನು ಕವಿ ಕೇವಲ ನಾಲ್ಕು ಸಾಲುಗಳಲ್ಲಿ ಸಾರ್ಥಕವಾಗಿ ಹೊರಹೊಮ್ಮಿಸಿ

ದ್ದಾನೆ. ಸಾಂಸಾರಿಕ ವಾತ್ಸಲ್ಯದ ಇಷ್ಟು ಸುಂದರ ಪದ್ಯ ಕನ್ನಡ ಸಾಹಿತ್ಯದಲ್ಲೇ ವಿರಳವಾಗಿವೆ.

'ತಂಗಿ ಬಂದಳೆನ್ನ ಮನೆಗೆ
ಮಂಗಳವನು ತಂದಳು'

ಎಂಬಲ್ಲಿ ತಂಗಿಯ ಆಗಮನದಿಂದ ಕವಿಗುಂಟಾದ ಸಂತೋಷವು ಧ್ವನಿಪೂರ್ಣವಾಗಿ ಅಭಿವ್ಯಕ್ತವಾಗಿದೆ.

'ಅಕ್ಕರತೆಯ ನಗೆಯ ಬೀರಿ
ಚಕ್ಕಂದದಿ ನೆಗೆದುಹಾರಿ'

ಎಂಬ ಸಾಲುಗಳಲ್ಲಿ ಸಂಭ್ರಮವು ವ್ಯಕ್ತವಾಗಿದೆ.

ಹಡೆದ ಮನೆಯ ಹೊನ್ನದೀಪ
ಹಡೆದವ್ವನ ಸಣ್ಣರೂಪ
ನಡೆದು ಬಂದಳಪರೂಪ
ಒಡಲಕುಡಿ ಬಾ ಸಮೀಪ

ಈ ನುಡಿಯಲ್ಲಿ ಅಭಿವ್ಯಕ್ತವಾದ ಅಂತಃಕರಣದ ಆತ್ಮೀಯಭಾವನೆ ಒಮ್ಮೆಲೆ ನಮ್ಮನ್ನು ಪ್ರೀತಿಯ, ವಾತ್ಸಲ್ಯದ ಹೃದಯಂಗಮ ಅನುಭವಕ್ಕೆ ಪಕ್ಕಾಗಿಸುತ್ತದೆ. 'ಹಡೆದ ಮನೆಯ ಹೊನ್ನದೀಪ' ಧ್ವನಿಪೂರ್ಣವಾದ ಸುಂದರ ರೂಪಕವಾಗಿದೆ. ಇದು ನಿಸ್ಸಂದಿಗ್ಧವಾಗಿಯೂ ಉತ್ತಮ ಕವನ. ಕೊನೆಯ ಗೀತವಾದ 'ನನ್ನ ಕನ್ನಡ'ದಲ್ಲಿ ಪ್ರಕಟವಾದ ವಿಚಾರಗಳು ವಾಸ್ತವಿಕವಾಗಿವೆ.

'ಕೊರತೆ ಎಂಬುದೆ ಇಲ್ಲ ನಮ್ಮ ಕನ್ನಡಕೆ
ಒರತೆಯಾಗಿಹುದದುವೆ ನಮ್ಮ ಜೀವಿತಕೆ'

(ಭಾಗ ೧, 'ನನ್ನ ಕನ್ನಡ')

ಈ ಚರಣಗಳು ಕವಿ ಗೀತಾಪ್ರಿಯರಿಗೆ ಕನ್ನಡ ನುಡಿಯ ಬಗೆಗಿರುವ ಆದರಾಭಿಮಾನದ ದ್ಯೋತಕವಾಗಿವೆ.

ಹೀಗೆ ಅನೇಕ ಮುಖವಾಗಿ ಹರಿದ ಕವಿಪ್ರತಿಭೆ ವಿವಿಧ ಗೀತಗಳ ಮೂಲಕ ಅಭಿವ್ಯಕ್ತವಾಗಿದೆ. ಈ ಗೀತಗಳ ಮೊದಲ ಭಾಗವನ್ನು ಸಮಗ್ರವಾಗಿ ಪರಿಶೀಲಿಸಿದಾಗ ಇಲ್ಲಿ ಕವಿ ತನ್ನ ಭಾವನೆಗಳಲ್ಲಿ ಹಾಗೆಯೇ ವಿಚಾರಗಳಲ್ಲಿ ಸುಂದರ ಸಮನ್ವಯ ಸಾಧಿಸಿದ್ದಾನೆಂಬುದು ಗೋಚರಿಸುತ್ತದೆ. ಕವಿಗೆ ಭಾವನಾಪರವಶತೆಯಿದ್ದರೂ ಅಲ್ಲಿ ಸಂಯಮವಿದೆ.

ಭಾಗ ೧ರ ಗೀತಗಳಲ್ಲಿ ಬರುವ 'ನನ್ನ ದೀಪ' ಎಂಬ ಗೀತದ ದೀಪದ ಪ್ರತಿಮೆ ತುಂಬ ಸಾರ್ಥಕವಾಗಿದೆ. ಕವಿತೆಗೆ ಗಾಂಭೀರ್ಯವನ್ನು ತಂದುಕೊಡುವ, ಅರ್ಥವಲಯ ಗಳನ್ನು ವಿಸ್ತರಿಸುವ ಧ್ವನಿಪೂರ್ಣವಾದ ಪ್ರತಿಮೆಗಳ ಸಂಯೋಜನೆಯಿಂದ ಕಾವ್ಯಕ್ಕೆ ಹೆಚ್ಚಿನ ಸತ್ವ ಹಾಗೂ ಮಹತ್ವ ಬರುತ್ತದೆ. "ನನ್ನ ದಾರಿಯಲ್ಲಿ" ಬರುವ ಶಿಲ್ಪಿಯ ಪ್ರತಿಮೆಯು ಸುಂದರವಾಗಿದೆ. 'ಬೆಳಕಮೊಳೆ'ಯಲ್ಲಿ ಮೊಳೆಯ ಕಲ್ಪನೆ ಅಷ್ಟು ಪರಿಣಾಮಕಾರಿಯಾಗಿಲ್ಲ. ಇದರೊಂದಿಗೆ ಕೆಲವು ಮೆಲಕುಹಾಕುವ ಸಾಲುಗಳು ಗೀತಾ ಪ್ರಿಯರ ಉತ್ತಮ ಕವಿತಾಶಕ್ತಿಗೆ ಸಮರ್ಥ ಉದಾಹರಣೆಗಳಾಗಿವೆ.

೧) ತೆರೆ ತರೆದಂತೆಯೇ ತೆರೆಯುವ ಮನಸಿಗೆ ತೆರೆಗಳು ಬಹಳುಂಟು
(ಭಾಗ ೧, 'ಇನಿಯಳ ಮುನಿಸು')

೨) ಬಟ್ಟ ಬಯಲ ನೆಲದಲ್ಲಿ ಇಟ್ಟೆ ನನ್ನ ದೀಪವ
(ಭಾಗ ೧, 'ನನ್ನ ದೀಪ')

೩) ಮೊದಲ ನುಡಿಗಳಾದರೇನು ? ತೊದಲು ನುಡಿಗಳಲ್ಲವೆ?
ಹೃದಯದಲರ ನನ್ನಿಮಾತು ಜಗಕೆ ರುಚಿಸಲಾರದೇ

ಗೀತಾಪ್ರಿಯರ ಕಾವ್ಯವು ಅನೇಕ ದೋಷಗಳಿಂದೊಡಗೂಡಿದ್ದರೂ ಕವಿಯ ಪ್ರಾಮಾಣಿಕ ಚಿಂತನ, ನೇರವಾದ ಅಭಿವ್ಯಕ್ತಿ, ಹಾರ್ದಿಕ ಭಾವನೆಗಳು ಇವೆಲ್ಲಕ್ಕೂ ಮಿಗಿಲಾಗಿ ವೇದನಾಮಯ ಪ್ರಪಂಚದಲ್ಲಿ ಸುಖದ ಅನುಸಂಧಾನ ಮಾಡುವ ತಾತ್ವಿಕ ದಾಹ ಈ ಕವಿಗೆ ಗಟ್ಟಿಯಾದ ತನ್ನತನವನ್ನು ತಂದುಕೊಡಬಲ್ಲುವು.

"ನನ್ನ ಗೀತಗಳು-೨" : ಗೀತಾಪ್ರಿಯ. ಪ್ರ : ರಾಜಹಂಸ ಪ್ರಕಾಶನ, ಧಾರವಾಡ-೪. ಪುಟ : ೧೧೧+೧೨. ಬೆಲೆ : ರೂ. ೫-೦೦.

೧. ಅಧ್ಯಾತ್ಮ ಗೀತಗಳು (Spiritual poems) :

'ನನ್ನ ಗೀತಗಳು- ೨' ಇದು ೧ ರ ಕ್ಕಿಂತಲೂ ಮಹತ್ವದ್ದಾಗಿದೆ. ಇಲ್ಲಿ ಕವಿಯ ಭಾವನೆಗಳ ವ್ಯಾಪ್ತಿಯು ಹೆಚ್ಚು ವಿಶಾಲವೂ, ಪ್ರಜ್ಞೆ ಹೆಚ್ಚು ಧೀಮಂತವೂ ಆಗಿದೆ. ಇಲ್ಲಿಯ ಕವನಗಳಲ್ಲಿ ಅನೇಕ ಸಲ ಕವಿ ತನಗೆ ಸಹಜವಾದ, ತನ್ನ ಅನಿವಾರ್ಯ ಸಂವೇದನೆ ಯಾದ 'ಸ್ವಪ್ನಮಯತೆ' (dreaminess)ಗೆ ಮೊರೆಹೊಕ್ಕರೂ ಕವಿಯ ಸ್ವಪ್ನಮಯತೆ, 'ಬುದ್ಧನ ಶೂನ್ಯವಾದ'ದಂತೆ, ಪಕ್ವ ಪ್ರಜ್ಞೆಯ ಫಲವಾಗಿದೆ.

ಹೀಗೆ ಚಿಂತನದ ಚಿರಂತನ ಮಥನದಿಂದ ಉದಿಸಿಬಂದ ಆದರ್ಶದ ನವನೀತ ಇಲ್ಲಿಯ ಆಧ್ಯಾತ್ಮಪರಕಾವ್ಯಶಕ್ತಿಗೆ ಭದ್ರವಾದ ಅಸ್ತಿತ್ವವನ್ನು ನೀಡಿದೆ.

ಮನ ನೊಂದರೇನು ? ತನು ಬೆಂದರೇನು ?
ಜನ ಅಂದರೇನು ? ಧನ ಬಂದರೇನು ?

ಓಗೆ ನೋವು ಜೀವನದ ರಂಗಸಜ್ಜಿಕೆಯಲ್ಲಿ ಪ್ರಾಧಾನ್ಯವನ್ನು ಪಡೆದಮೇಲೆ ಈ ಜೀವನದ ನೋವಿನಲ್ಲೇ ಮುಳಗುವದು ಯಾವ ಪುರುಷಾರ್ಥ ? ಹಾಗಾದರೆ "ಶಾಂತಿಯ ಅಮಿತಸಾಗರ"ವಾದ ದೇವರಲ್ಲಿ ಶರಣಾಗಬೇಕು.

'ಮುಳುಗಿಸು ಮುಳುಗಿಸು ಮುಳುಗಿಸು ಮನವನು ದೇವಭಜನೆಯಲ್ಲಿ', 'ಎಲ್ಲವನ್ನು ಮರೆ— ಎಲ್ಲವನ್ನು ತೊರೆ'— ಈ ಉದ್ಗಾರಗಳು ಅವರ ನಿರ್ಲಿಪ್ತತೆಗೆ ಸಾಕ್ಷಿಯಾಗಿವೆ. 'ದೈವ' ಎಂಬ ಕವಿತೆಗೂ ಇಂಥ ಆದರ್ಶವೇ ಪ್ರೇರಕ. ಈ ಹಿನ್ನೆಲೆಯಲ್ಲಿ ಇದು ಸಾರ್ಥಕ ಕವಿತೆ. 'ಮಾನವ ಸಾಧನೆಯು ದೈವದ ನಿಶ್ಚಯುವೇ ಆಗಿದೆ' ಎಂಬ ತಾತ್ವಿಕ ನಿಲುವು ಇಲ್ಲಿ ನಿಚ್ಚಳವಾಗಿ ಮೂಡಿಬಂದಿದೆ.

'ಜೀನುಕಟ್ಟಿ ಕುದುರೆಯನ್ನು ಬಿಟ್ಟು ಕಡಿವಾಣ ಕುಣಿಸುತಿರುವೆ
ನೀನು ಎನ್ನ ಮನ ಹೊಕ್ಕು, ಮಾತಿನಲಿ ಉಕ್ಕಿ ಹೊರಗೆ ಬರುವೆ

ಧ್ವನಿಪೂರ್ಣವಾದ ಉತ್ತಮ ಕವನದ ಸಾಲುಗಳು, ಕವಿ ಅಭಿವ್ಯಕ್ತಿ ಸಾಮರ್ಥ್ಯದಲ್ಲಿ ತೋರಬಲ್ಲ ಯಶಸ್ಸಿಗೆ ಸಂಕೇತ. 'ನಂಬು' ಒಂದು ಸುಂದರ ಸಾರ್ಥಕ ಕವನ. ಶಕ್ತಿಶಾಲಿಯಾದ ಭಾವನೆಯಿಂದ ಮೂರ್ತಗೊಂಡ ಈ ಪದ್ಯವು ಕವಿಯ ಆಧ್ಯಾತ್ಮ ಚಿಂತನದ ಶ್ರೀಮಂತಿಕೆಗೆ ಒಂದು ಉಜ್ವಲ ಉದಾಹರಣೆ. ವಿಚಾರ ಮೆಲುಕುಹಾಕುವಂತಹದು. ಆಚಾರದಲ್ಲಿ ತರಲು ಸರ್ವ ರೀತಿಯಿಂದಲೂ ಅರ್ಹವಾದದ್ದು. ನಿರ್ಭೀತಿ ಜೀವನವನ್ನು ಬದುಕುವ ಬಯಕೆ ಈ ಕವನಗಳ ಪ್ರೇರಕಶಕ್ತಿ. 'ದೇವಗಾಗಿಯೇ ಜೀವಿಸು' ಎಂಬಲ್ಲಿ, 'ತೃಪ್ತಿಯೇ ದೇವರು' ಎಂದು ಹೇಳಿದ ಮಾತು ಗಮನಾರ್ಹವಾಗಿದೆ. ವಿಶ್ವಾತ್ಮನ ಸಮಷ್ಟಿ ಸಂಕಲ್ಪದಲ್ಲಿಯೇ ವ್ಯಕ್ತಿಯ, ಮಾನವನ ಸಂಕಲ್ಪವೂ ಅಂತರ್ನಿಹಿತವಾಗಿದೆ.

'ಅಲ್ಲೆ ಅದನು ಕೈಬಿಡು' ಎಂಬ ಕವನದ 'ನನ್ನ ಬಿಟ್ಟು ದೇವನಿರುವನೆಂದು ನಾನು ನಂಬೆನು' ಎಂಬಲ್ಲಿ ದೇವನ ಹಾಗೂ ಜೀವನ 'ಶಾಶ್ವತ ಬಂಧನದ ಅನಿವಾರ್ಯತೆ'ಯ ಭಾವನೆಯೂ ಸೂಫೀ ಸಂತರಿಂದ ಸ್ಫೂರ್ತವಾದ ವಿಚಾರವಾಗಿರಬಹುದು. ಅಥವಾ ಕವಿಯ ಸ್ವಂತಿಕೆಯಾದರೂ ಅದು ಸೂಫಿ ಸಂತರ ಅಂತಃಸ್ಪಂದನವನ್ನು ಧ್ವನಿಸುತ್ತದೆ.

ಕೈಯ್ಯ ಬಿಡದಿರು ಕೈಯ್ಯ ಬಿಡದಿರು ಕೈಯ್ಯ ಬಿಡದಿರು ದೇವನೆ
ಮೈಯ್ಯ ಮೇಲಿನ ಪರಿವೆ ಇಲ್ಲದೆ ಹುಡುಕುತಿರುವೆನು ನಿನ್ನನೆ

ಇಲ್ಲಿ ಭಗವಂತನ ಬರವಿಗಾಗಿ ಪರಿತಪಿಸುವ ಮುಗ್ಧ ಭಕ್ತನ ಅಭಿಲಾಷೆ, ಆರ್ತದಾಪ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ.

ಶರಣು ಬಂದೆನು ನಿನಗೆ ಹರಣವನ್ನರ್ಪಿಸಿಹೆ
ಕರುಣಿಸೆನ್ನನು ನೀನು ಕರುಣಾಕರ
ಸೋತು ಹೋದವು ಎನ್ನ ಮಾತುಗಳು ನಾನಿನ್ನು
ಮೌನದಿಂದಲೆ ನಿನ್ನ ಮೊರೆಹೊಗುವೆನು.

ಪಕ್ವಪ್ರಜ್ಞೆಯ ಮುಗ್ಧ ಕವನ. ಮಾತು ಸೋತು ಹೋಗುವಷ್ಟು ಭಾವದ ಉದ್ವೇಗವಿದೆ.

'ಲೋಕನಾಯಕ ನೀನು — ಮೂಕ ಮಾನವ ನಾನು'

ಮಾನವ ಜೀವದ ಅಸಹಾಯತೆಯ ಪ್ರಾಂಜಲ ಸ್ವೀಕೃತಿ – ಧ್ವನಿಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

'ಎನ್ನ ನೋವು' ಒಂದು ಶ್ರೇಷ್ಠ ಕವನ. ನೋವು ಮತ್ತು ದೇವ ಒಂದಕ್ಕೊಂದು ಪೂರಕ ತತ್ವಗಳು. ನೋವಿರುವದು ದೇವನ ಕಡೆಗೆ ಜೀವನನ್ನು ಹೊರಳಿಸುವುದಕ್ಕೆ, ದೇವನಿರುವುದು ನೋವಿನಿಂದ ಜೀವನನ್ನೆತ್ತುವುದಕ್ಕೆ. ಕವಿಯ ನಿರ್ಲಿಪ್ತತೆಗೆ ಈ ಕವನ ಅತ್ಯಂತ ಸಬಲ ಸಾಕ್ಷಿ.

ಎನ್ನ ನೋವು, 'ಬಂದುದನ್ನು ಭೋಗಿಸುವೆನು', 'ನಿರ್ವಿಕಾರ ಚಿತ್ತನು' ಕವಿಯ ನಿರ್ಲಿಪ್ತತೆಗೆ, ತಾತ್ವಿಕ ನಿಲುವಿಗೆ ಹಿಡಿದ ಕನ್ನಡಿ.

'ಪ್ರೇಮದ ಮಳೆ ಸುರಿಸು' ರವೀಂದ್ರ ಸಂಪ್ರದಾಯದ ಕವನ. ಮಾನವರ ಹೃದಯದಲ್ಲಿ ಪ್ರೀತಿಯ ಆವಿರ್ಭಾವವಾಗಬೇಕು. ಈ ಪ್ರೇಮದ ಅಭಿನಿವೇಶನದಲ್ಲಿಯೇ ಜೀವನಕ್ಕೆ ಸಾರ್ಥಕ್ಯ ದೊರೆಯುತ್ತದೆ.

'ಪ್ರೀತಿಯ ಮಳೆ ಕರೆ ಮೇಘಶ್ಯಾಮನೆ ಪ್ರೇಮದ ಮಳೆ ಸುರಿಸು
ಆತುಕೂತಿರುವ ದ್ವೇಷದ ಕೊಳೆಯನು ಹೊರಗೆ ಸೂಸಿ ಹರಿಸು

ಲೋಕಮಾನಸದಲ್ಲಿ ಪ್ರೇಮದ ಅವತರಣವಾಗಬೇಕು ಎಂಬ ಅಪೇಕ್ಷೆಯನ್ನು ಪ್ರಕಟಿಸುತ್ತದೆ. 'ನೀ ಕರೆದಲ್ಲಿಗೆ ಬರುವೆನು ದೇವಾ ಇಲ್ಲೆನ್ನುವದಿಲ್ಲ' ಮತ್ತೊಂದು 'ಪಕ್ವಪ್ರಜ್ಞೆಯ ಮುಗ್ಧ ಕವನ.'

'ಜೀವನದಿಗಳಿಗೆಲ್ಲ ದೇವನೇ ಮುನ್ನೀರು
ಯಾವ ಹರಿ ಇದ್ದರೂ ಕೊನೆಗಲ್ಲಿ ಸೇರು

ಆ ವಿಶ್ವಾತ್ಮನ ಸಂಕಲ್ಪವೇ ಅಂತಿಮವಾದದ್ದು. ಆ ಲೋಕನಾಯಕನಲ್ಲಿ ಸಮರ್ಪಿಸಿಕೊಂಡಾಗಲೇ 'ಜೀವನ' ಜೀವನದ ಅನಂತ ಹೋರಾಟಕ್ಕೆ ಸಾಫಲ್ಯ. ಆ 'ದೇವ'ರು 'ಜೀವ'ನ ಅನಂತತೆ ಜ್ಞಾನಧಾರೆಯ ಸಂಗಮಕ್ಷೇತ್ರ ಎಂದು ಪ್ರಕಟಪಡಿಸಿದ ಕವಿ ವಿಚಾರಗಳಿಗೆ ಔಪನಿಷದಿಕ ತಾತ್ವಿಕತೆ, ರವೀಂದ್ರರ ಸಾಕ್ಷಾತ್ಕಾರ, ಅರವಿಂದರ ಅನುಭವದ

ಹರವು ಪ್ರೇರಣೆಯೊದಗಿಸಿರಬಹುದು. 'ಅಭಯ' ಎಂಬ ಕವನದಲ್ಲಿ ಬರುವ 'ಜೀವ ಕುದುರೆಯನೊಯ್ದು ಮರಣಕ್ಕೆ ಹೂಡಿಸುವೆವು' ಎಂಬ ಚರಣದ ಧ್ವನಿಶಕ್ತಿ ಯಂತೂ ಪ್ರಶಂಸನೀಯವಾಗಿದೆ. ಈ ಪ್ರಪಂಚದ ವಿಕ್ಷಿಪ್ತ ಕೋಲಾಹಲದ ಮಧ್ಯ ದಲ್ಲಿಯೂ ಬಾಳಿಬದುಕಿ, ಭದ್ರವಾದ. ಮಂಗಲವಾದ ಜೀವನದ ಆದರ್ಶವನ್ನು ಆಲಿಂಗಿಸುವ ಸಾತ್ವಿಕ ಅಭೀಪ್ಸೆಯಿಂದ ಉದ್ದೀಪ್ತವಾದ ಈ ಕವನದ ಭಾವನೆ ನಿಜ ವಾಗಿಯೂ ಆಧ್ಯಾತ್ಮಿಕತೆಯ ಸ್ಪರ್ಶದಿಂದ, ತಾತ್ತ್ವಿಕ ಸಮಾಧಾನದ ಬೆಂಬಲದಿಂದ, ಅಮಿತ ಆತ್ಮವಿಶ್ವಾಸದ ಆಶ್ವಾಸನೆಯಿಂದ ತುಂಬಿಕೊಂಡು ಕವಿಯ ಅಂತರಂಗದ ಸಾಧನೆಯ ಉಚ್ಚತಮ ಸತ್ವಕ್ಕೆ ದ್ಯೋತಕವಾಗಿದೆ.

ಹೀಗೆ ಇಲ್ಲಿಯ 'ಆಧ್ಯಾತ್ಮಗೀತ'ಗಳಲ್ಲಿ ಒಂದು ತಾತ್ತ್ವಿಕ ಸ್ಥಿರತೆಯಿದೆ, ಪ್ರಾಮಾಣಿಕ ಅನುಭವವಿದೆ, ಅಪೇಕ್ಷಣೀಯ ನಿರ್ಲಿಪ್ತತೆ ಇದೆ, ಗಟ್ಟಿತನವಿದೆ, ಚಿಂತನದಲ್ಲಿ ಪ್ರಗಲ್ಭತೆ ಇದೆ.

೨. ಸಮಾಜ ಗೀತಗಳು (Social poems) :

ಈ ಸಂಕಲನದ ಕೆಲವು ಕವನಗಳನ್ನು 'ಸಮಾಜ ಗೀತಗಳು' ಎಂದು ವರ್ಗೀಕರಿಸ ಬಹುದು. ಕೆಲವು ವಿಚಾರಗಳು ಮಾತ್ರ ತುಂಬ original ಆಗಿದ್ದು, ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಉತ್ತರ ಹುಡುಕುವ ತಡಕಾಟದಲ್ಲಿ ಸಫಲವಾಗಿವೆ.

'ಕವಿಯಾಗಬೇಕೆಂಬ ಹಂಬಲವು ನನಗಿಲ್ಲ
ಕವಿಗಳೊಂದಿಗೆ ನಾನು ಸ್ಪರ್ಧೆ ನಡೆಸಿಲ್ಲ
ಕವಿತೆ ಬರೆಯುವ ಶಕ್ತಿ ಪಡೆದು ನಾ ಬಂದಿಲ್ಲ
ಅವರೇನು ಅಂದರೂ ನನಗೆ ನೋವಿಲ್ಲ'

'ಗೆಳೆಯರ ಗುಂಪು, ತೀರ ವೈಯ್ಯಕ್ತಿಕ ಅಭಿಪ್ರಾಯದ ಅಕವಿತೆಯಾದರೂ ಇತಿಹಾಸಕ್ಕೆ, ವರ್ತಮಾನಕ್ಕೆ ಆಹ್ವಾನ ನೀಡುವ ಕವಿತೆ. ಎಲ್ಲವನ್ನೂ ಅತಿಶಯೋಕ್ತಿ, ಅತಿರಂಜನೆ ಗಳಿಂದ ಬಣ್ಣಿಸುವ ಪ್ರಸಕ್ತ ಸಮಾಜದಲ್ಲಿ ಸತ್ಯವನ್ನು ಸಂಶೋಧಿಸಬೇಕು ಎಂದು ಹೇಳುವ ಕವನ. ಇತಿಹಾಸಕಾರರು, ಕವಿಚರಿತೆಕಾರರು ಇದನ್ನು ಅವಶ್ಯವಾಗಿ ಗಮನಿಸ ಬೇಕು ಎಂಬುದು ನಿಸ್ಸಂಶಯ.

'ಗೆಳೆಯ' ಒಂದು ಉತ್ತಮ ಕವಿತೆ. ನಿಜವಾದ ಗೆಳೆಯನಿಂದ ಜೀವನದ ಉತ್ಥಾನವಾಗುತ್ತದೆ, ಬದುಕು ಬಂಗಾರವಾಗುತ್ತದೆ ಎಂಬ ಬಯಕೆ ಪ್ರಕಟವಾಗಿದೆ.

ಬಾಳ ಬಾಳಿನಲಿ ಮೇಳಗೂಡಿ ಗೆಳೆತನವು ಗಟ್ಟಿಗೊಂಡು
ಬಾಳಿನಾಳದಲ್ಲಿ ಕುಳಿತು ತಪಿಸುತಿದೆ ಒಳಿತು ರೂಪಗೊಂಡು

ಗೆಳೆಯರೇನು ಸಿಕ್ಕಲ್ಲೆ ಬೆಳೆವ ಕಸಕರಿಕೆ ಹುಲ್ಲು ಅಲ್ಲ
ಒಳಜೀವ ಸೋಸಿ ದಿನ ದೇಹ ಸವೆಸಿದರು ಗೆಳೆಯ ಬರಲೆ ಇಲ್ಲ

ಎಂಬ ಚರಣಗಳಲ್ಲಿ ವ್ಯಕ್ತವಾದ ವಿಚಾರಗಳು ವಾಸ್ತವವಾಗಿವೆ, ಶಾಶ್ವತವಾಗಿವೆ.

'ಕೆಲಸವಾದಮೇಲೆ' ಅತ್ಯಂತ ಅಭ್ಯಾಸಯೋಗ್ಯವಾದ ಕವನ. ಇದು ಮಾನವನು ನಿರಂತರ ತನ್ನ ಅಂತರಂಗಕ್ಕು, ಬಹಿರಂಗದ ಸಮಾಜಕ್ಕು ವಂಚನೆಮಾಡುತ್ತಿರುವ ದಾರುಣ ಸತ್ಯದ ಪ್ರತಿಪಾದನೆ ಮಾಡುತ್ತದೆ. ಈ ವಂಚನೆಯ ಭೀಷಣಕ್ರಿಯೆಯು ಬಹಳ ಶಕ್ತಿಶಾಲಿಯಾಗಿ ಅಭಿವ್ಯಕ್ತವಾಗಿದೆ. ಶಬ್ದಗಳು ಕ್ರಿಯೆಯ ತೀವ್ರತೆಯನ್ನು ಸಮರ್ಥವಾಗಿ ಮಿಡಿಯುವ ಈ ಚರಣಗಳು—

ಕೆಲಸವಾದ ಮೇಲೆ ಅವನು
ಚಟ್ಟನೆದ್ದು ಬಟ್ಟೆ ತೊಟ್ಟು
ಮೈಯ್ಯ ಮುಚ್ಚಿಕೊಳ್ಳುತ್ತಿದ್ದ
ಅವಳನೊಮ್ಮೆ ನೋಡಿ ನಲಿದು
"ಥು ನಾಚಿಕಿಲ್ಲದವಳು" ಎಂದು
ಅಂದು ಮುಂದೆ ನಡೆದನು
ಅದೇ ಕ್ಷಣದಿ, ಅದೇ ಸ್ಥಳದಿ
ಹಿಂದೆ ನಡೆದುದೆಲ್ಲವನ್ನು
ಮರೆತುಬಿಟ್ಟನು.

ಈ ಚರಣಗಳು ಮಾನವ ಸ್ವಭಾವದ ನಿರ್ದಯ ವಂಚಕತೆಯನ್ನು ಅರ್ಥಪೂರ್ಣವಾಗಿ ಧ್ವನಿಸುತ್ತವೆ. ಹಾಗೆಯೇ ಸ್ವಾರ್ಥದ ಅದಮ್ಯ ಅಭಿಲಾಷೆಗಾಗಿ ಮನುಷ್ಯನು ಗೈಯ್ಯುವ ಕುಟಿಲ ತಂತ್ರಗಳನ್ನು ಸೂಕ್ಷ್ಮವಾಗಿ ನಿರ್ದೇಶಿಸುತ್ತವೆ. ಇದು ಗಮನೀಯವಾದ ಪದ್ಯ. ಇದರ ಸಾಮಾಜಿಕ ಮಹತ್ವವೂ ಅಪರಿಮಿತವಾಗಿದೆ.

'ಪ್ರೀತಿ ಮಾಡುವೆ, ಮಾಡುವೆ' ಒಂದು ಅತ್ಯಂತ ಸುಂದರ ಕವನ. ಮನುಷ್ಯನ ಅಂತರಂಗದ ಅಭ್ಯುದಯಕ್ಕೆ ಪ್ರೇರಕ-ತಾರಕ ಶಕ್ತಿಯಾದ ಸುಹೃದ ಪ್ರೀತಿಯ ಅವಲಂಬನದಿಂದ ಸುಂದರವಾಗಿ ಬದುಕುವ ಮಧುರ ಮನೀಷೆ ಈ ಕಾವ್ಯದ ಪ್ರೇರಣೆ.

'ಯಾರು ಕೇಳುವರೆನ್ನ ಕಠಿಣ ಕೂಗನ್ನು', 'ಅಲ್ಪ ಸಂತೋಷಿ', 'ತಕ್ಕ ಬಲ ಬೇಕು', 'ಅಜ್ಞಾನವೇ ನಮ್ಮ ಅವನತಿಗೆ ಕಾರಣವು', 'ಯಾರ ಶಾಪ', 'ಕನ್ನಡಿಗನು ಯಾರು', 'ಕನ್ನಡಿಗ ನೀನೆಲ್ಲಿ ಅಡಗಿ ಕುಳಿತಿರುವೆ', 'ಉಜ್ವಲ ಭವಿಷ್ಯ', 'ನವಕರ್ನಾಟಕ ದರ್ಶನ', 'ಕನ್ನಡಿಗ', ಮುಂತಾದ ಕವನಗಳು ಕನ್ನಡಿಗನ ಹೀನ ಸ್ಥಿತಿಯನ್ನು ಕನ್ನಡದ ಸದ್ಯದ ಅನಪೇಕ್ಷಣೀಯ ತೇಜೋಹೀನತೆಯನ್ನು ಕುರಿತು ಬರೆದ ಪದ್ಯಗಳು.

'ಸ್ವಯಂಜ್ಯೋತಿ ನಮಗೆ ಬೇಕು, ಬೇಕು ಸ್ವಪ್ರಕಾಶವು' ಎಂಬ ಮೂಲಭೂತ ಭಾವನೆಯಿಂದ ಪ್ರೇರಿತವಾದ ಈ ಕವನಗಳಲ್ಲಿ ಸ್ವಾತ್ಮಾವಲಂಬನದ ಉಪದೇಶವಿದೆ. ಇಲ್ಲಿಯ ವಿಚಾರಗಳು ಮೌಲಿಕವಾಗಿವೆ, ಪ್ರಾಮಾಣಿಕವಾಗಿವೆ. ಸದ್ಯೋಭವಿಷ್ಯದಲ್ಲಿ ಉಪಯುಕ್ತವಾಗಿವೆ. ಭಾರತವನ್ನು ಕುರಿತು ಕೆಲವು ಪದ್ಯಗಳೂ ಇವೆ. ಭಾರತೀಯ ಜನಾಂಗದಲ್ಲಿ ರಾಷ್ಟ್ರಪ್ರಜ್ಞೆ ಮೂಡಿಬರಲಿ ಎಂಬ ಆಕಾಂಕ್ಷೆಯೇ ಇಲ್ಲಿಯ ಕವನಗಳ ಪ್ರೇರಕ ಭಾವವಾಗಿದೆ.

'ದೈವವನ್ನು ಬದಿಗೆ ಸರಿಸಿ ಪೌರುಷವನು ತೋರಿಸು'

ರಾಷ್ಟ್ರಪ್ರಜ್ಞೆ ಎಂಬ ಚರಣದಲ್ಲಿ ಭಾರತೀಯನಲ್ಲಿ ಅಂತಸ್ಥವಾದ ಪುರುಷ ಚೈತನ್ಯವನ್ನು ಬಡಿದೆಬ್ಬಿಸುವ ವಿಚಾರ ಪ್ರಕಟವಾಗಿದೆ.

'ವಿಶ್ವಶಾಂತಿ', 'ಬಿಡು ಆ ವೈರವನು'. 'ವಿಂಗಡಿಸುವದೇಕೆ', 'ಹೊಸ ಅರಿವಿನಿಂದ', 'ವಿಶ್ವಧರ್ಮ' ಮುಂತಾದ ಕವನಗಳು ಇಡೀ ಜಗತ್ತಿನ ಮಾನವ ಜನಾಂಗದ ಮೂಲ ಭೂತ ಸಂವೇದನೆಗಳನ್ನು ಪ್ರಕಟಪಡಿಸಲು ಹವಣಿಸುತ್ತವೆ. ಸುಂದರ ಸಮಾಜವನ್ನು ನಿರ್ಮಿಸುವ ದೈವೀ ಅಭೀಪ್ಸೆಯು ಈ ಜಾತಿಯ ಕವನಗಳಿಗೆ ಮೂಲ ಪ್ರಚೋದನೆ ಯಾಗಿದೆ. ಈ ಕವನಗಳ ಸಾಹಿತ್ಯ ಸತ್ವವೂ ಅಷ್ಟಕ್ಕಷ್ಟೇ.

ಹೀಗೆ ಶ್ರೀ ಶೇ. ಗೋ. ಕುಲಕರ್ಣಿಯವರ ಕಾವ್ಯದ ಹರವು ಸಾಕಷ್ಟು ವಿಸ್ತಾರ ವಾದುದನ್ನು ನಾವಿಲ್ಲಿ ಕಾಣುತ್ತೇವೆ. ಕವಿ ಚಿಂತನಶೀಲನಾದ್ದರಿಂದಲೇ, ಅವನ ಚಿಂತನೆಯಲ್ಲಿ ವಾಸ್ತವ ಹಾಗೂ ಆದರ್ಶಗಳ ಸಮಂಜಸ ಸಮನ್ವಯವಿರುವದರಿಂದಲೇ ಈ ಕವನ ಸಂಕಲನಕ್ಕೆ ಬೆಲೆ ಬಂದಿದೆ. ಆದರೂ ಕವಿಯ ರೀತಿ- ಶೈಲಿ ಅವನ ವಿಚಾರ ಹಾಗೂ ಭಾವನೆಯಷ್ಟು ಪ್ರಬುದ್ಧವಾಗಿಲ್ಲ ಎಂಬ ತಥ್ಯವನ್ನು ನಿರಾಕರಿಸಲಾಗುವದಿಲ್ಲ. ಆದರೂ ಅನುಭೂತಿಯ ಮಾರ್ಗದ, ಚಿಂತನ ಸಂಪ್ರದಾಯದ, ಭಾವುಕ ಆದರ್ಶದ ಕಾವ್ಯಪರಂಪರೆಯೇ ಕ್ಷೀಣಿಸುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ ತಮ್ಮ ಕಾವ್ಯಗಳನ್ನು ಪ್ರಕಟಗೊಳಿಸಿದ ಗೀತಾಪ್ರಿಯರ ಸಾಹಸ–ಧೈರ್ಯ ಉಲ್ಲೇಖನೀಯ. ಇವರ ಕವನಗಳಲ್ಲಿ ಸತ್ವವಿದೆ ಎಂಬುದೂ ಅಷ್ಟೇ ಗಮನೀಯ. ರೀತಿಯ ದೋಷ, ಅಭಿವ್ಯಕ್ತಿಯ ದೌರ್ಬಲ್ಯ ದೂರವಾದರೆ ಪ್ರಾಮಾಣಿಕ ಚಿಂತಕರಾದ, ಪ್ರಜ್ಞಾವಂತ ಭಾವುಕರಾದ, ನಿಷ್ಠಾಪೂರ್ಣ ಅಭ್ಯಾಸಿಗಳಾದ ಗೀತಾಪ್ರಿಯರ ಕಾವ್ಯಗಳಿಗೆ ಹೆಚ್ಚಿನ ಗೌರವ ಸಲ್ಲಬೇಕು ಎಂಬುದು ಪ್ರಸ್ತುತ ವಿಮರ್ಶಕನ ಅಪೇಕ್ಷೆ.

—ಶೇಷ ನವರತ್ನ

• •

ಸಂಪಾದಕೀಯ

ಕಂಬನಿ

ಉಜ್ವಲ ರಾಷ್ಟ್ರಭಕ್ತರೂ ಸ್ವಾತಂತ್ರ್ಯ ಚಳವಳಿಯ ಕ್ರಿಯಾಶೀಲ ಹೋರಾಟಗಾರರೂ ಭಾರತದ ರಾಷ್ಟ್ರಾಧ್ಯಕ್ಷರೂ ಆಗಿದ್ದ ಸನ್ಮಾನ್ಯ ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದ್ ಅವರು ೧೧–೨–೧೯೭೭ ರಂದು ನಿಧನರಾದುದು ಸಮಸ್ತಭಾರತಕ್ಕೆ ದೊಡ್ಡ ಆಘಾತ ವಾಗಿ ಪರಿಣಮಿಸಿದೆ. ಅಸ್ಸಾಮರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ಪಳಗಿ, ಕೇಂದ್ರ ಸರಕಾರದ ಮಂತ್ರಿಸ್ಥಾನದಲ್ಲಿ ಮಹಾಸಾಧನೆಗೈದು, ರಾಷ್ಟ್ರಾಧ್ಯಕ್ಷ ಪದವಿಯನ್ನು ಅಲಂಕರಿಸಿದ್ದ ಶ್ರೀಯುತರದು ಅಜಾತಶತ್ರು ಬದುಕು. ಇಂದಿನ ಸಂಕ್ರಮಣ ಸಂದರ್ಭ ದಲ್ಲಿ ಅವರು ದಿಕ್ಸೂಚಿಯಾಗಿ ದೇಶವನ್ನು ಮುನ್ನಡೆಸುತ್ತಲಿದ್ದರು. ಇಂಥ ಮಹಾ ವ್ಯಕ್ತಿಯನ್ನು ಕಳೆದುಕೊಂಡು ರಾಷ್ಟ್ರ, ಶೋಕಸಾಗರದಲ್ಲಿ ಮುಳುಗಿದೆ. ದಿವಂಗತರ ಆಘಾತಕರ ನಿಧನಕ್ಕಾಗಿ 'ಕರ್ನಾಟಕ ಭಾರತಿ' ತನ್ನ ಆಳವಾದ ದುಃಖವನ್ನು ವ್ಯಕ್ತ ಪಡಿಸುತ್ತ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತದೆ.

'ಮಾನವಿಕ ಭಾರತಿಗೆ' ಸ್ವಾಗತ

ಒಂಬತ್ತು ವರ್ಷಗಳ ಹಿಂದೆ ಪ್ರಾರಂಭವಾದ 'ಕರ್ನಾಟಕ ಭಾರತಿ' ನಮ್ಮ ನಾಡಿನ ವಿದ್ವತ್ ಪ್ರಪಂಚದಿಂದ ಮುಕ್ತಪ್ರಶಂಸೆಗಳಿಸಿದೆ. ಸಾಹಿತ್ಯ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳ ತ್ರಿವೇಣಿಯಾಗಿದ್ದ ಅದು ಎರಡು ವರ್ಷಗಳ ತರುವಾಯ ವೈಜ್ಞಾನಿಕ ಲೇಖನಗಳಿಗಾಗಿ "ವಿಜ್ಞಾನ ಭಾರತಿ" ಎಂಬ, ಕಳೆದ ವರ್ಷದಿಂದ ಸಮಾಜವಿಜ್ಞಾನದ ಲೇಖನಗಳಿಗಾಗಿ 'ಮಾನವಿಕ ಭಾರತಿ' ಎಂಬ ಸ್ವತಂತ್ರ ಪತ್ರಿಕೆಗಳಿಗೆ ಅವಕಾಶ ಕಲ್ಪಿಸಿ ಕೊಟ್ಟಿದೆ. ಸಸಿಯಾಗಿ ಸುಳಿಬಿಚ್ಚಿ, ಗಿಡವಾಗಿ ಬಲಿತು, ಮರವಾಗಿ ಬೆಳೆಯುತ್ತಲಿರುವ 'ಕರ್ನಾಟಕ ಭಾರತಿ' ಹೀಗೆ ಹೊಸ ಪತ್ರಿಕೆಗಳ ಸೃಷ್ಟಿಗೆ ಕಾರಣವಾದುದು ಅದರ ಒಂದು ಸಾಧನೆಯೆಂದೇ ಹೇಳಬೇಕು.

ಸಮಾಜವಿಜ್ಞಾನಕ್ಕೆ ಸಂಬಂಧಪಟ್ಟ ಬರೆವಣಿಗೆ ಕನ್ನಡ ಮಾಧ್ಯಮದಲ್ಲಿ ಸೃಷ್ಟಿ ಯಾಗುವ ಆವಶ್ಯಕತೆಯನ್ನು ಅರಿತು 'ಮಾನವಿಕ ಭಾರತಿ' ಸ್ವತಂತ್ರ ಪತ್ರಿಕಾವೇದಿಕೆ ಯಾಗಿ ಉದಯಿಸಿದೆ. ಈ ಮಾತಿಗೆ ಅರ್ಥ ತುಂಬುವ ರೀತಿಯಲ್ಲಿ ವಿದ್ವಾಂಸರು ಲೇಖನಗಳನ್ನು ಪೂರೈಸಿ ಈ ಪತ್ರಿಕೆಯನ್ನು ಕೃತಾರ್ಥಗೊಳಿಸಬೇಕಾಗಿದೆ. ಲೇಖಕರ ಸಹಕಾರ, ಸಮರ್ಥರ ಸಂಪಾದಕತ್ವದಲ್ಲಿ 'ಮಾನವಿಕ ಭಾರತಿ' ಉತ್ತರೋತ್ತರ ಪ್ರಗತಿ ಯನ್ನು ಪಡೆಯಲೆಂದು 'ಕರ್ನಾಟಕ ಭಾರತಿ' ಹಾರೈಸುತ್ತದೆ.

ಸಾದರ ಸ್ವೀಕಾರ

೧. **ನಾಕು ನಾಲ್ವತ್ತು** (ಕವನ ಸಂಕಲನ) :

ರವಿ ಉಪಾಧ್ಯ ಹಾಗೂ ಇತರರು. ಪ್ರ : ಶೇಷಾಚಲ ಗ್ರಂಥಮಾಲೆ, ಧಾರವಾಡ, ೧೯೭೭. ಪುಟ : ೩೭. ಬೆಲೆ : ರೂ. ೪–೦೦.

೨. **ಭೋರ್ಗರೆತ** (ಕವನ ಸಂಕಲನ) :

ಮಹಾಂತೇಶ. ಪ್ರ : ಯುವಜನ ಸಾಹಿತ್ಯಾಧ್ಯಯನ ವೇದಿಕೆ, ಇಲಕಲ್ಲ, ೧೯೭೬. ಪುಟ : ೬೨. ಬೆಲೆ : ರೂ. ೩–೦೦.

೩. **ಪುಲಿಗೆರೆಯ ಶಂಖಜಿನೋದ್ಧ್ವನಕಾವ್ಯ :**

ಸಂ. ಎಸ್. ಪಿ. ಪಾಟೀಲ ಹಾಗೂ ಎಸ್. ವ್ಹಿ. ಅಯ್ಯನಗೌಡರ. ಪ್ರ : ಶ್ರೀ ವಜ್ರಕೀರ್ತಿ ಗ್ರಂಥಮಾಲೆ, ಲಕ್ಷ್ಮೇಶ್ವರ, ೧೯೭೭. ಪುಟ : xvi+೨೬. ಬೆಲೆ : ರೂ. ೨–೦೦.

೪. **ಮಾರ್ಕ್ಸ್ ಮತ್ತು ಏಂಜೆಲ್ಸ್‌ರ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ :**

ಅನು ಮತ್ತು ಸಂ. ಬಿ. ನಿಜಲಿಂಗಪ್ಪ. ಪ್ರ : ಬಿ. ನಿಜಲಿಂಗಪ್ಪ, ಎಸ್. ಜೆ. ರೇಣುಕಾ ಚಾರ್ಯ, ಸಂಜೆ ಕಾಮರ್ಸ ಕಾಲೇಜು, ಬೆಂಗಳೂರು–೯, ೧೯೭೬. ಪುಟ : ೮೮. ಬೆಲೆ : ರೂ. ೪–೦೦, ೬–೦೦.

೫. **ಲಿಂಗಪೂಜೆಯ ವೈಜ್ಞಾನಿಕತೆ :**

ಬಸವಾನಂದರು. ಪ್ರ : ಜಯಬಸವತತ್ವ ಪ್ರಕಾಶನ, ಉಣಕಲ್ಲ, ಹುಬ್ಬಳ್ಳಿ–೨೧, ೧೯೭೭. ಪುಟ : xxviii+೮೪. ಬೆಲೆ : ರೂ. ೫–೦೦.

೬. **ದ್ರಾವಿಡ ಭಾಷಾವ್ಯಾಸಂಗ :**

ಸಂಗಮೇಶ ಸವದತ್ತಿಮಠ. ಪ್ರ : ಗೌತಮ ಬುಕ್ ಹೌಸ್ ಸುಪರ ಮಾರ್ಕೆಟ ಗುಲಬರ್ಗಾ, ೧೯೭೬. ಪುಟ: xiv+೨೧೦. ಬೆಲೆ : ರೂ. ೧೦–೦೦, ೧೪–೦೦, ೧೮–೧೦.

೭. **ಷಟ್‌ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನದ ಟೀಕೆ :**

ಸಂ. ಬಿ. ವ್ಹಿ. ಶಿರೂರ. ಪ್ರ : ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ–ಗದಗ, ೧೯೭೭. ಪುಟ : ೩೧+೧೫೫. ಬೆಲೆ : ರೂ. ೬–೦೦, ೭–೨೦.

೮. **ಜ್ವಲಂತ** (ಲೇಖನ ಸಂಕಲನ) :

ಬಿ. ಮಹಾಬಲರಾವ. ಪ್ರ : ಚೇತನಾ ಪ್ರಕಟನಾಲಯ, ಗದಗ, ೧೯೭೭. ಪುಟ : ೧೬+೧೨೧. ಬೆಲೆ : ರೂ. ೪–೦೦.

೯. **ಧನೋರ್ ರಕ್ಷತಿ ಭಕ್ಷಿತಃ** (ನಾಟಕ) :

ಕೆ. ಎಚ್. ಪ್ರಭು. ಪ್ರ : ಈಗಲ್ ಪಬ್ಲಿಕೇಶನ್ಸ್ ಕುಮಟಾ (ಉ. ಕ.), ೧೯೭೭. ಪುಟ : ೪೮. ಬೆಲೆ : ರೂ. ೩-೦೦.

೧೦. **ಪರಿಸ್ಥಿತಿಯ ೨೦, ೫ ಕವಿತೆ :**

ಶಿವಶರಣ ಜಾವಳಿ. ಪ್ರ : ವಿಚಾರಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ. ೧೯೭೭. ಪುಟ : ೪೩. ಬೆಲೆ : ರೂ. ೨-೦೦.

೧೧. **ಪ್ರಣಯ ಮುಕ್ತಕಗಳು** (ದ್ವಿ. ಆ.) :

ಗವೀಶ ಹಿರೇಮಠ. ಪ್ರ : ಸಾಹಿತ್ಯ ಭಾಂಡಾರ, ಹುಬ್ಬಳ್ಳಿ, ೧೯೭೫. ಪುಟ : ೫೬. ಬೆಲೆ : ರೂ. ೪-೦೦.

೧೨. **ಮೃತ್ಯುಂಜಯ** (ಕವನ ಸಂಕಲನ) :

ಸಂ. ಎಸ್. ಎಸ್. ಭೂಸರಡ್ಡಿ. ಪ್ರ : ಮ.ನಿ.ಪ್ರ.ಸ್ವ. ಮಹಾಂತಸ್ವಾಮಿಗಳು, ಶ್ರೀಗುರು ಮೃತ್ಯುಂಜಯ ಮಹಾಸ್ವಾಮಿಗಳು ಮುರುಘಾಮಠ, ಧಾರವಾಡ, ೧೯೭೭. ಪುಟ : xxxvii+೧೭೪ ಬೆಲೆ : ರೂ. ೩-೦೦.

೧೩. **ಇಕ್ಕದನೂರ ಕಾವ್ಯ :**

ಸಂ. ಭೋಜರಾಜ ಪಾಟೀಲ. ಪ್ರ : ಶಿವಬಸವ ಪ್ರಕಾಶನ, ಹಾವೇರಿ, ೧೯೭೬. ಪುಟ : ೧೮+೧೦. ಬೆಲೆ : ರೂ. ೧-೦೦.

೧೪. **ಹಾರಕೂಡ ಶ್ರೀ ಚೆನ್ನಬಸವೇಶ್ವರ ಚರಿತ್ರೆ :**

ಶ್ರೀಮತಿ ಗೋಪಿಕಾದೇವಿ ದೇಶಮುಖ. ಪ್ರ : ವಿಚಾರಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ, ೧೯೭೬. ಪುಟ : ೩೨. ಬೆಲೆ : ರೂ. ೧-೫೦.

೧೫. **ಶ್ರೀ ಸಿದ್ಧಗಿರಿ ಕಾಡಸಿದ್ಧೇಶ್ವರ ಸುಪ್ರಭಾತ :**

ಆನಂದಕುಮಾರ. ಪ್ರ : ಆನಂದಕುಮಾರ ಪ್ರಭುಸಿಲಯ ಕುಂದರಗಿ, ಜಿ. ವಿಜಾಪುರ. ಪುಟ : ೨೪. ಬೆಲೆ : ರೂ. ೧-೦೦.

೧೬. **ಕರ್ಣ** (ಖಂಡಕಾವ್ಯ) :

ಸು. ರುದ್ರಮೂರ್ತಿಶಾಸ್ತ್ರಿ. ಪ್ರ : ಸು. ರುದ್ರಮೂರ್ತಿಶಾಸ್ತ್ರಿ, ಶ್ರೀ ಜಗದ್ಗುರು ರೇಣುಕಾಚಾರ್ಯ, ಸಂಜೆ ಕಾಲೇಜು, ಬೆಂಗಳೂರು-೯, ೧೯೭೭. ಪುಟ : viii+೪೫. ಬೆಲೆ : ರೂ. ೩-೦೦.

೧೭. **ಅವಳ ಕೃಪೆ** (ಕವನ ಸಂಕಲನ) :

ಹಿ. ಮ. ಗುರುಬಸವರಾಜ. ಪ್ರ : ಮೈತ್ರಿ ಪ್ರಕಾಶನ, ಹರಪನಹಳ್ಳಿ- ಬಳ್ಳಾರಿ ಜಿಲ್ಲೆ, ೧೯೭೭. ಪುಟ : ೨೮. ಬೆಲೆ : ರೂ. ೨-೦೦.

೧೮. **ಕದಳಿ (ಸ್ಮರಣ ಸಂಚಿಕೆ) :**

ಸಂ: ಕೆ. ಎ. ಕೊಟ್ರಪ್ಪ ಬೂಸನೂರು, ಪ್ರಕಾಶ್ ಹಾಗೂ ಇತರರು. ಪ್ರ: ಶ್ರೀ ಅಕ್ಕ ಮಹಾದೇವಿ ಸಮಾಜ, ದಾವಣಗೆರೆ, ೧೯೭೭. ಪುಟ: iv+೭೭

ಪತ್ರಿಕೆಗಳು

ಕನ್ನಡ ನುಡಿ	ಕೃಷಿವಿಜ್ಞಾನ
ಸಾಹಿತ್ಯ ಪರಿಷತ್ಪತ್ರಿಕೆ	ರಾಷ್ಟ್ರೋತ್ಥಾನ ವಾರ್ತಾ
ಜೀವನ ವಿಕಾಸ	ಮತ್ಸ್ಯಲೋಕ
ಪಂಚಾಚಾರ ಪ್ರಕಾಶ	ಹೇಮಕೂಟ
ಪರಂಜ್ಯೋತಿ	ವಿಶ್ವಕಲ್ಯಾಣ

ಈ ಸಂಚಿಕೆಯ ಲೇಖಕರು

೧ **ಡಾ. ಎಂ. ಎಂ. ಕಲಬುರ್ಗಿ :**
ರೀಡರ್, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೨ **ಶ್ರೀಮಹಾದೇವ ಕಣವಿ :**
ಕನ್ನಡ ಅಧ್ಯಾಪಕರು, ಎಸ್. ಎಂ. ಭಂಡಾರಿ ಆರ್ಟ್ಸ್‌ಕಾಲೇಜ, ಗುಳೇದಗುಡ್ಡ.

೩ **ಪಿ. ಶ್ರೀಕೃಷ್ಣ ಭಟ್ :**
ಕನ್ನಡ ಅಧ್ಯಾಪಕರು, ಸರಕಾರೀ ಕಾಲೇಜ, ಕಾಸರಗೋಡು.

೪ **ಬಿ. ಎಂ. ರಮೇಶ್ :**
ನಂ. ೭೧ C 'ಶುಭದಾ', ಎಚ್. ಬಿ. ಕಾಲನಿ, ಮಿಲ್‌ರೋಡ, ಕಲಬುರ್ಗಿ-೩.

೫ **ಎಸ್. ರಾಜಶೇಖರ :**
ಇತಿಹಾಸ ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೬ **ಅಶೋಕ ಮಠದ :**
ಕೆನರಾ ಬ್ಯಾಂಕ, ಗದಗ.

೭ **ವ್ಹಿ. ಎನ್. ಭಟ್ :**
ಅಧ್ಯಾಪಕರು, ಎ. ವ್ಹಿ. ಬಾಳಿಗಾ ಕಾಲೇಜ, ಕುಮಟಾ.

೮ **ಹ. ನಂ. ವಿಜಯಕುಮಾರ್ :**
೧೯೧, ೨ನೆಯಕ್ರಾಸ್, ದತ್ತಾತ್ರಯ ಬಡಾವಣೆ, ಗವಿಪುರಂ, ಗುಟ್ಟಹಳ್ಳಿ, ಬೆಂಗಳೂರ-೫೬೦೦೧೯.

೯ **ಶ್ರೀ ದೊಡ್ಡರಂಗೇಗೌಡ :**
ಕನ್ನಡ ಅಧ್ಯಾಪಕರು, ಎಸ್. ಎಲ್. ಎನ್. ಕಾಲೇಜ, ಕೋಟಿ, ಬೆಂಗಳೂರ-೫೬೦೦೦೨.

೧೦ **ಡಾ. ಅ. ಸುಂದರ :**
ರೀಡರ್, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೧೧ **ಡಾ. ಎಂ. ಎಸ್. ಸುಂಕಾಪುರ :**
ಪ್ರಾಧ್ಯಾಪಕರು, ಮತ್ತು ಮುಖ್ಯಸ್ಥರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೧೨ **ಡಾ. ವಿ. ಶಿವಾನಂದ :**
ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೧೩ **ಶ್ರೀ ವೀರಣ್ಣ ರಾಜೂರ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೪ **ಡಾ. ಎಂ. ಎಸ್. ಲಕ್ಷ್ಮಿ :**
ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೧೫ **ಶ್ರೀಮತಿ ಲೀಲಾವತಿ ತೋರಣಗಟ್ಟೆ :**
ಬೋಧನ, ನಿಜಾಮಬಾದ ಜಿಲ್ಲೆ (ಆಂಧ್ರಪ್ರದೇಶ).

೧೬ **ಶ್ರೀ ಬಿ. ಆರ್. ಹಿರೇಮಠ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೧೭ **ಶ್ರೀ ಬಿ. ಬಿ. ಮಹೀಶವಾಡಿ :**
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೧೮ **ಶ್ರೀ ಬಸವರಾಜ ಸಬರದ :**
ಸಂಶೋಧನ ವಿದ್ಯಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೧೯ **ಶ್ರೀ ಶೇಷ ನವರತ್ನ**
ಸಂಶೋಧನ ವಿದ್ಯಾರ್ಥಿ, ಇಂಗ್ಲೀಷ್ ವಿಭಾಗ, ಕ. ವಿ. ವಿ. ಧಾರವಾಡ.